₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಮಂಗಳವಾರ 07.04.2026 ಸಂಪುಟ: 11 ಸಂಚಿಕೆ: 81 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪಂಜಾಬ್-ಕೋಲ್ಕತಾ ಪಂದ್ಯಕ್ಕೆ ಮಳೆಯಡ್ಡಿ

ಕೆಕೆಆರ್-ಪಂಜಾಬ್ ನಡುವಿನ ಸೋಮವಾರದ ಐಪಿಎಲ್ ಪಂದ್ಯ ಮಳೆಯ ಕಾರಣ ರದ್ದಾಗಿದೆ. ಇದಕ್ಕೂ ಮುನ್ನ ಒಂದೇ ಓವರಿನಲ್ಲಿ ಎರಡು ವಿಕೆಟ್ ಕಬಳಿಸಿದ ಪಂಜಾಬ್ ತಂಡದ ವೇಗಿ ಜೇವಿಯರ್ ಬಾರ್ಟ್ಲೆಟ್ ಮಿಂಚು ಹರಿಸಿದ್ದರು.

ಸೊಂಪಾದ ಪುಟಗಳು

ಒಳಯೇಟಿನ ಆತಂಕದಲ್ಲಿದೆಯೇ ಕಾಂಗ್ರೆಸ್?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ

6

ಬದುಕಿನಲ್ಲಿ ಅಂಕಿ ಸಂಖ್ಯೆಗಳದ್ದೆ ಸಾಮ್ರಾಜ್ಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ

7

ದಾರಿದೀಪೋಕ್ತಿ

ಸೋಲನ್ನು ನೋಡಿ ಹೆದರಬಾರದು, ಯಾಕೆಂದರೆ ದೊಡ್ಡ ದೊಡ್ಡ 'ಬ್ರಾಂಡ್'ಗಳೂ ಏಕಾಏಕಿ ಪ್ರಸಿದ್ಧವಾಗಿಲ್ಲ. ಮೊದಲು ಉಚಿತವಾಗಿ ಸ್ಯಾಂಪಲ್ ಕೊಟ್ಟೇ ಜನಪ್ರಿಯವಾಗುತ್ತವೆ. ಈ ಜನಪ್ರಿಯತೆಯನ್ನು ಬಳಸಿಕೊಳ್ಳುವುದರಲ್ಲಿ ನಿಮ್ಮ ಸಾಮರ್ಥ್ಯ ಅಡಗಿದೆ.

ವಕ್ರತುಂಡೋಕ್ತಿ

ಮದುವೆ ಅನ್ನೋದು ಶಾಲೆಯ ಹಾಗೆ. ಅಲ್ಲಿ ದಿನಕ್ಕೊಂದು ಪಾಠ ಕಲಿಯುತ್ತೇವೆ, ಆದರೆ ಪರೀಕ್ಷೆ ಮಾತ್ರ ಪ್ರತಿ ನಿಮಿಷವೂ ಇರುತ್ತದೆ!

ತೆಲಂಗಾಣ: 40 ನಕ್ಸಲರು ಶರಣು

ಹೈದರಾಬಾದ್: ಮಾವೋವಾದಿ ಸಂಘಟನೆಯ ಪೀಪಲ್ಸ್ ಲಿಬರೇಶನ್ ಗೆರಿಲ್ಲಾ ಆರ್ಮಿಯ ಉನ್ನತ ಕಮಾಂಡರ್ ಸೋಡಿ ಕೇಶಲು ಸೇರಿದಂತೆ 40 ಜನ ನಕ್ಸಲರು ತೆಲಂಗಾಣ ಪೊಲೀಸರ ಮುಂದೆ ಶರಣಾಗಿದ್ದಾರೆ. ಕೇಶಲು, ಬಸ್ತಾರ್‌ನ ಪಿಜಿಎಲ್‌ಎಯ ಉನ್ನತ ನಾಯಕರಲ್ಲಿ ಒಬ್ಬನಾಗಿದ್ದ.

ಖಂಡು ವಿರುದ್ಧ ಸಿಬಿಐ ತನಿಖೆ

ದೆಹಲಿ: ಅರುಣಾಚಲ ಪ್ರದೇಶ ಮುಖ್ಯಮಂತ್ರಿ, ಬಿಜೆಪಿ ನಾಯಕ ಪೆಮಾ ಖಂಡು ಅವರ ಕುಟುಂಬದ ಸದಸ್ಯರಿಗೆ ಸಿಬಿಐ ತನಿಖೆ ಭೀತಿ ಎದುರಾಗಿದೆ. ಪೆಮಾ ಕುಟುಂಬಸ್ಥರ ಒಡೆತನಕ್ಕೆ ಸೇರಿದ ಸಂಸ್ಥೆಗಳಿಗೇ ರಾಜ್ಯ ಸರಕಾರದ ಕಾಮಗಾರಿಗಳ ಗುತ್ತಿಗೆ ನೀಡಿರುವ ಬಗ್ಗೆ 2 ವಾರಗಳಲ್ಲಿ ವರದಿ ಸಲ್ಲಿಸುವಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಬಾಸ್ ಸಿನಿಮಾ ಬಿಡುಗಡೆಗೆ ತಡೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣ ಆಧಾರಿತ ಚಲನಚಿತ್ರ ಬಾಸ್ ಬಿಡುಗಡೆ ಮಾಡದಂತೆ ಕೋರ್ಟ್ ತಡೆಯಾಜ್ಞೆ ನೀಡಿದೆ. ಬಾಸ್ ಸಿನಿಮಾದ ಟೀಸರ್‌ನಲ್ಲಿ ರೇಣುಕಾಸ್ವಾಮಿ ಕೊಲೆಯನ್ನು ಆಧರಿಸಿಯೇ ಚಲನಚಿತ್ರ ನಿರ್ಮಾಣ ಮಾಡಲಾಗಿದೆ ಎಂಬಂತೆ ಇದೆ. ನಟ ದರ್ಶನ್, ರೇಣುಕಾಸ್ವಾಮಿ ಅಪಹರಣ ಹತ್ಯೆ ಹೋಲುವ ದೃಶ್ಯ ಟೀಸರ್‌ನಲ್ಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜ್ಯದಲ್ಲಿ 40 ದಾಟಿದವರಿಗೆ ಸರ್ಕಾರದಿಂದ ಉಚಿತವಾಗಿ ಸಿಗಲಿದೆ 'ಓದುವ ಕನ್ನಡಕ' ಸುದ್ದಿ



ಟ್ರಂಪ್ ಕೊನೆ ಎಚ್ಚರಿಕೆ ಕ್ಯಾರೆ ಎನ್ನದ ಇರಾನ್

45 ದಿನಗಳ ಕದನ ವಿರಾಮ ಪ್ರಸ್ತಾಪದ ನಡುವೆ ಟೆಹರಾನ್ ಮೇಲೆ ಭೀಕರ ದಾಳಿ

34 ಜನರ ಸಾವಿಗೆ ಇರಾನ್ ಪ್ರತೀಕಾರ: ಇಸ್ರೇಲ್‌ನ ಹೈಫಾ ನಗರದಲ್ಲಿ ಸ್ಫೋಟ

ಹೊರ್ಮುಜ್ ಮತ್ತೆಂದೂ ಹಿಂದಿನ ಸ್ಥಿತಿಗೆ ಮರಳಲ್ಲ: ಇರಾನ್ ಸ್ಪಷ್ಟ ಎಚ್ಚರಿಕೆ

ದೆಹಲಿ: ಕೊಲ್ಲಿಯಲ್ಲಿ ನಡೆಯುತ್ತಿರುವ ಯುದ್ಧ 38 ದಿನಗಳನ್ನು ಪೂರೈಸಿದೆ. 45 ದಿನಗಳ ಕದನ ವಿರಾಮಕ್ಕೆ ಅಮೆರಿಕ ಮುಂದಾಗಿದೆ. ಆದರೆ ಇರಾನ್ ಇದಕ್ಕೆ ಬಿಲ್‌ಕುಲ್ ಸಿದ್ಧವಿಲ್ಲ. ತನಗೆ ತಾತ್ಕಾಲಿಕ ಕದನವಿರಾಮಕ್ಕಿಂತ ಶಾಶ್ವತ ಪರಿಹಾರ ಬೇಕು ಎಂದು ಪಟ್ಟುಹಿಡಿದಿದೆ. ಸದ್ಯಕ್ಕೆ ಹೊರ್ಮುಜ್ ತೆರೆಯುವುದಿಲ್ಲ ಎನ್ನುವುದಷ್ಟೇ ಅಲ್ಲ, ಅಮೆರಿಕ ದಾಳಿ ಮುಂದುವರಿಸಿದರೆ ಇನ್ನೊಂದು ಜಲಸಂಧಿಯನ್ನೂ ಮುಚ್ಚುತ್ತೇನೆ ಎಂದು ಬೆದರಿಕೆ ಹಾಕಿದೆ. ಈ ನಡುವೆ ದಾಳಿ ಪ್ರತಿದಾಳಿ ತೀವ್ರವಾಗಿದೆ. ಇರಾನ್‌ನ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಒಂದೇ ದಿನ 34 ಮಂದಿ ಸಾವನ್ನಪ್ಪಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಇಸ್ರೇಲ್ ಮೇಲೆ 15 ಬಾಂಬ್‌ಗಳನ್ನು ಹಾಕಿದೆ. ಕುವೈತ್, ಯುಎಇ ಮೇಲೆಯೂ ಕ್ಷಿಪಣಿ ದಾಳಿ ನಡೆಸಿದೆ. ಪರಿಸ್ಥಿತಿ ತೀವ್ರವಾಗಿ ಹದಗೆಟ್ಟಿದೆ.

ವರದಿಗಳ ಪ್ರಕಾರ, ಪಾಕಿಸ್ತಾನ, ಈಜಿಪ್ಟ್ ಮತ್ತು ಟರ್ಕಿ ದೇಶದ ಮಧ್ಯವರ್ತಿಗಳ ಮೂಲಕ ಹಾಗೂ ಟ್ರಂಪ್ ಅವರ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ನಡುವೆ ಪತ್ರ ಸಂದೇಶ ವಿನಿಮಯವಾಗುತ್ತಿದೆ. ಈ ಮೂಲಕ ಮಾತುಕತೆಗಳನ್ನು ನಡೆಸಲಾಗುತ್ತಿದೆ. ಮೊದಲ ಹಂತದಲ್ಲಿ 45 ದಿನಗಳ ಕದನ ವಿರಾಮ ಪ್ರಸ್ತಾಪ ಕೇಳಿ ಬಂದಿದ್ದು, ಈ ಅವಧಿಯಲ್ಲಿ ಎರಡೂ ಕಡೆ ಯುದ್ಧಕ್ಕೆ ಶಾಶ್ವತ ಅಂತ್ಯ ಹಾಡಲು ಮಾತುಕತೆ ನಡೆಯಲಿದೆ. → 4



ಇರಾನ್ ಗುಪ್ತಚರ ಮುಖ್ಯಸ್ಥ ಖಾದೇಮಿ ಹತ್ಯೆ

ಅಮೆರಿಕ-ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್‌ನ ಗುಪ್ತಚರ ವಿಭಾಗದ ಮುಖ್ಯಸ್ಥ ಮಜೀದ್ ಖಾದೇಮಿ ಹತ್ಯೆಯಾಗಿದ್ದಾರೆ ಎಂದು ಐಆರ್‌ಜಿಸಿ ಅಧಿಕೃತವಾಗಿ ಹೇಳಿಕೊಂಡಿದೆ. ಆದರೆ ಖಾದೇಮಿ ಸಾವನ್ನಪ್ಪಿದ್ದ ಸ್ಥಳದ ಬಗ್ಗೆ ಯಾವುದೇ ಸುಳಿವು ಬಿಟ್ಟುಕೊಟ್ಟಿಲ್ಲ. ಇರಾನ್ ದಾಳಿಗೆ ಪ್ರತೀಕಾರವಾಗಿ ಸೋಮವಾರ ಟೆಹರಾನ್ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ಅಮೆರಿಕ ಮತ್ತು ಇಸ್ರೇಲ್ ಸತತವಾಗಿ ವಾಯುದಾಳಿ ನಡೆಸಿವೆ. ಇದರಿಂದ ಘರ್ಷಣೆ ತೀವ್ರಸ್ವರೂಪ ಪಡೆದುಕೊಂಡಿರುವ ನಡುವೆ ಗುಪ್ತಚರ ಮುಖ್ಯಸ್ಥನ ಹತ್ಯೆಯಾಗಿದೆ. ಕಳೆದ ವರ್ಷ ಜೂನ್ ತಿಂಗಳಲ್ಲಿ ನಡೆದಿದ್ದ 12 ದಿನಗಳ ಯುದ್ಧದ ವೇಳೆ ಇಸ್ರೇಲ್, ಜನರಲ್ ಮೊಹಮ್ಮದ್ ಕಜೆಮಿ ಯನ್ನು ಹತ್ಯೆ ಮಾಡಿತ್ತು. ಆ ಬಳಿಕ ಖಾದೇಮಿ ಮುಖ್ಯಸ್ಥರಾಗಿದ್ದರು.

ಪರಿಹಾರ ಕೊಡದಿದ್ದರೆ ಹೊರ್ಮುಜ್ ತೆರೆಯಲ್ಲ

ಹೊರ್ಮುಜ್ ಜಲಸಂಧಿಯನ್ನು ಜಗತ್ತಿನ ಎಲ್ಲ ದೇಶಗಳಿಗೆ ತೆರವು ಮಾಡಲು ಅಮೆರಿಕ ಅಧ್ಯಕ್ಷ ಟ್ರಂಪ್ ನೀಡಿರುವ ಗಡುವಿಗೆ ಇರಾನ್ ತಲೆಕೆಡಿಸಿಕೊಂಡಿಲ್ಲ. ಯುದ್ಧದಿಂದಾಗಿರುವ ನಷ್ಟ ಪರಿಹಾರವನ್ನು ನೀಡದಿದ್ದರೆ ಹೊರ್ಮುಜ್ ಜಲಸಂಧಿಯನ್ನು ತೆರೆಯುವ ಮಾತಿಲ್ಲ ಎಂದು ಅಮೆರಿಕಕ್ಕೆ ಇರಾನ್ ಷರತ್ತು ಹಾಕಿದೆ.

ಕಚ್ಚಾತೈಲ ಬೆಲೆ ಹೆಚ್ಚಳ

ಯುದ್ಧದ ಪರಿಣಾಮ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಮತ್ತೆ ಭಾರೀ ಏರಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.1.4ರಷ್ಟು ಏರಿಕೆಯಾಗಿ 110.60 ಡಾಲರ್‌ಗೆ (10,287 ರೂಪಾಯಿ), ಅಮೆರಿಕದ ಕಚ್ಚಾ ತೈಲದ ಬೆಲೆ ಶೇ.1.8ರಷ್ಟು ಏರಿಕೆಯಾಗಿ 113.60 (10,568 ರುಪಾಯಿ) ಡಾಲರ್‌ಗೆ ತಲುಪಿದೆ.

ಬಹಿರಂಗ ಪ್ರಚಾರ: ಇಂದು ಕಡೇ ಕಸರತ್ತು

ಅಭ್ಯರ್ಥಿಗಳ ಭವಿಷ್ಯ ನಿರ್ಧಾರಕ್ಕೆ ಇನ್ನೆರಡೇ ದಿನ ಬಾಕಿ

ಸಿಎಂ ಸಿದ್ದು, ಬಿಎಸ್‌ವೈ, ಎಚ್‌ಡಿಕೆ ಎಡೆಬಿಡದೇ ಓಡಾಟ

ತಮ್ಮ ಜಾತಿಯ ಅಭ್ಯರ್ಥಿಯಾದ ಕಾರಣ ನಾನು ಬಾಗಲಕೋಟೆಯಲ್ಲಿ ಠಿಕಾಣಿ ಹೂಡಿದ್ದೇನೆ ಎಂದು ಯಡಿಯೂರಪ್ಪ ಆರೋಪಿಸಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ನಮ್ಮ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಅಲ್ಲೇ ಠಿಕಾಣಿ ಹೂಡಿ ಪ್ರಚಾರ ಮಾಡಿದ್ದೇನೆ. ಅವರು ಯಾವ ಜಾತಿ ? ನಾನು ಜಾತಿ ಕಾರಣಕ್ಕೆ ಪ್ರಚಾರ ಮಾಡುವುದಿಲ್ಲ. ಅರಳುಮರಳು ಯಡಿಯೂರಪ್ಪ ಅವರು ಆಧಾರಸಹಿತವಾಗಿ ಮಾತನಾಡಬೇಕು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರತಿಷ್ಠೆಯ ಕಣವಾಗಿರುವ ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯಲ್ಲಿ ಗೆಲುವು ಸಾಧಿಸಲು ಆಡಳಿತ-ಪ್ರತಿಪಕ್ಷಗಳ ಭರ್ಜರಿ ಬಹಿರಂಗ ಪ್ರಚಾರಕ್ಕೆ ಮಂಗಳವಾರ ತೆರೆ ಬೀಳಲಿದ್ದು, ಕೊನೆಯ ದಿನ ಎರಡೂ ಪಕ್ಷದ ನಾಯಕರು ಮತದಾರರನ್ನು ಒಲಿಸಿಕೊಳ್ಳಲು ಅಂತಿಮ ಕಸರತ್ತು ನಡೆಸಲು ಮುಂದಾಗಿವೆ.

ಸಿಎಂ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಕಾಂಗ್ರೆಸ್ ಮತ್ತು ಬಿಜೆಪಿಯ ಘಟಾನುಘಟಿ ನಾಯಕರು ಎರಡೂ ಕ್ಷೇತ್ರದಲ್ಲಿ ತಮ್ಮ ಅಭ್ಯರ್ಥಿಗಳ ಪರವಾಗಿ ಕೊನೆಯ ಹಂತದಲ್ಲಿ ಮತಯಾಚಿಸಲು ಸಿದ್ಧತೆ ನಡೆಸಿಕೊಂಡಿದ್ದಾರೆ.

ಬಹಿರಂಗ ಪ್ರಚಾರ ಮಂಗಳವಾರ ಸಂಜೆ 5 ಗಂಟೆಗೆ ಮುಕ್ತಾಯಗೊಳ್ಳಲಿದ್ದು, ಗುರುವಾರ ಮತದಾನ ನಡೆಯಲಿದೆ. ಎರಡೂ ಕ್ಷೇತ್ರಗಳಲ್ಲಿ ಗೆಲ್ಲಲೇಬೇಕೆಂದು ಜಿದ್ದಿಗೆ ಬಿದ್ದಿರುವ ಕಾಂಗ್ರೆಸ್ ತನ್ನ ಪಕ್ಷದ ಅಭ್ಯರ್ಥಿಗಳ ಪರವಾಗಿ ಕಳೆದ ಒಂದು ವಾರದಿಂದ ಭಾರಿ ಪ್ರಚಾರ ನಡೆಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡೂ ಕ್ಷೇತ್ರಗಳಲ್ಲಿ ಮೂರು ಸುತ್ತಿನಲ್ಲಿ ಮತಯಾಚಿಸಿದ್ದರೆ, ಬಿಜೆಪಿಯಿಂದಲೂ ಪಕ್ಷದ ಅಭ್ಯರ್ಥಿಗಳ ಪರವಾಗಿ ಸರಣಿ ಪ್ರಚಾರ ನಡೆಸಿದ್ದಾರೆ.

ಮನೆಯಲ್ಲಿ ತಾತ ಇದ್ದಾಗ ಅವರು ಶಾಸಕರು, ಮಂತ್ರಿಯಾಗಿದ್ದರು. ಈಗ ಮಗ ಶಾಸಕ ಹಾಗೂ ಮಂತ್ರಿಯಾಗಿದ್ದಾರೆ. ಅವರ ಪತ್ನಿ ಸಂಸದರು. ಇದರ ಜತೆಗೆ ಅವರ ಮಗನೂ ಶಾಸಕನಾಗಬೇಕು ಎಂದು ಟಿಕೆಟ್ ನೀಡಿದ್ದಾರೆ. ಹೀಗೆ ಅವರ ಕುಟುಂಬಕ್ಕೇ ಟಿಕೆಟ್ ನೀಡಿ ದಾವಣಗೆರೆ ಕಬ್ಜಾ ಮಾಡಲು ಮುಂದಾಗಿದ್ದಾರೆ. ಕಾಂಗ್ರೆಸ್ ಗೆದ್ದರೆ ಮುಂದಿನ 40 ವರ್ಷ ಬೇರೆಯವರಿಗೆ ಟಿಕೆಟ್ ಸಿಗುವುದಿಲ್ಲ.

-ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಪ್ರತಿಷ್ಠೆಯ ಚುನಾವಣೆ: ಎರಡು ಕ್ಷೇತ್ರದಲ್ಲಿ ನಡೆಯುತ್ತಿರುವ ಉಪಚುನಾವಣೆಯಿಂದ ಆಡಳಿತಾರೂಢ ಕಾಂಗ್ರೆಸ್‌ಗೆ ಬಹುಮತದ ವಿಷಯದಲ್ಲಿ ಯಾವುದೇ ಸಮಸ್ಯೆಯಿಲ್ಲ. ಆದರೆ ಎರಡರಲ್ಲಿ ಒಂದನ್ನು ಸೋತರೂ, ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಯಿದೆ ಎನ್ನುವ ಮಾತನ್ನು ಬಿಜೆಪಿ-ಜೆಡಿಎಸ್ ನಾಯಕರು ಶುರು ಮಾಡುತ್ತಾರೆ. ಇದರೊಂದಿಗೆ, ನಾಯಕತ್ವ ಬದಲಾವಣೆ ವಿಷಯಕ್ಕೆ ಮತ್ತಷ್ಟು ಪುಷ್ಟಿ ಸಿಗಲಿದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎರಡೂ ಕ್ಷೇತ್ರವನ್ನು ತಮ್ಮ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದು, ಎರಡೂ ಕ್ಷೇತ್ರದಲ್ಲಿ ಭರ್ಜರಿ ಪ್ರಚಾರ ನಡೆಸಿದ್ದಾರೆ.

ಲಾಕಪ್ ಡೆತ್: 9 ಪೊಲೀಸರಿಗೆ ಗಲ್ಲು

2020ರಲ್ಲಿ ತಮಿಳುನಾಡಿನ ತೂತ್ತುಕುಡಿಯಲ್ಲಿ ನಡೆದಿದ್ದ ಘಟನೆ

ಸಿಬಿಐ ತನಿಖಾ ವರದಿ ಆಧರಿಸಿ ಮಧುರೈ ನ್ಯಾಯಾಲಯ ತೀರ್ಪು

ಮಧುರೈ: ಆರು ವರ್ಷಗಳ ಹಿಂದೆ, ಇಡೀ ದೇಶಾದ್ಯಂತ ಸಂಚಲನ ಮೂಡಿಸಿದ್ದ ತಮಿಳುನಾಡಿನ ಸಾತನ್‌ಕುಳಂ ಪೊಲೀಸ್ ಠಾಣೆಯ ಲಾಕಪ್‌ಡೆತ್ ಕೇಸ್‌ನ ಎಲ್ಲಾ ಆರೋಪಿಗಳಿಗೆ ಮಧುರೈ ಜಿಲ್ಲಾ ನ್ಯಾಯಾಲಯ ಮರಣದಂಡನೆ ವಿಧಿಸಿದೆ. ಪಿ.ಜಯರಾಜ್ ಹಾಗೂ ಜೆ.ಬೆನಿಕ್ಸ್ ಎಂಬ ತಂದೆ-ಮಗ 2020ರ ಜೂನ್ ತಿಂಗಳಲ್ಲಿ ಠಾಣೆಯಲ್ಲಿ ಪೊಲೀಸರಿಂದ ಹಲ್ಲೆಗೊಳಗಾಗಿ ಲಾಕಪ್‌ನಲ್ಲೇ ಸಾವಿಗೀಡಾಗಿದ್ದರು. ಆ ಪ್ರಕರಣದ ತನಿಖೆ ನಡೆಸಿದ್ದ ಸಿಬಿಐ, ಆರೋಪಿಗಳಾದ 9 ಮಂದಿ ಪೊಲೀಸ್ ಸಿಬ್ಬಂದಿಯನ್ನು ದೋಷಿಗಳೆಂದು ವರದಿ ಸಲ್ಲಿಸಿತ್ತು. ಆ ಪ್ರಕರಣದ ವಿಚಾರಣೆಯ ತೀರ್ಪು ಇದೇ ಏ.6ರಂದು ಹೊರಬಿದ್ದಿದ್ದು, ಅಷ್ಟೂ ಮಂದಿಗೆ ನ್ಯಾಯಾಲಯ ಮರಣದಂಡನೆ ವಿಧಿಸಿದೆ.

ಠಾಣಾ ಸಿಬ್ಬಂದಿಯಾದ ಇನ್ಸ್‌ಪೆಕ್ಟರ್ ಶ್ರೀಧರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಬಾಲಕೃಷ್ಣನ್, ರಘು ಗಣೇಶ್, ಪೊಲೀಸ್ ಪೇದೆಗಳಾದ ಮುರುಗನ್, ಸಮದುರೈ, ಮುತ್ತುರಾಜನ್, ಚೆಲ್ಲದುರೈ, ಥಾಮಸ್ ಫ್ರಾನ್ಸಿಸ್ ಹಾಗೂ ವೇಲುಮುತ್ತು ಅವರಿಗೆ ಮರಣದಂಡನೆ ಶಿಕ್ಷೆಯನ್ನು ಜಾರಿಗೊಳಿಸಲಾಗಿದೆ. ಇದೊಂದು ಅಧಿಕಾರ ದುರ್ಬಳಕೆಯ ಪ್ರಕರಣವೆಂದು ನ್ಯಾಯಾಲಯ ಬೇಸರ ವ್ಯಕ್ತಪಡಿಸಿದೆ.

ಹಿನ್ನೆಲೆಯೇನು?: ಮೃತ ಜಯರಾಜ್ ಹಾಗೂ ಜೆನಿಕ್ಸ್ ಅವರು ತೂತ್ತುಕುಡಿ ಜಿಲ್ಲೆಯ ಸಣ್ಣ ಪಟ್ಟಣವಾದ ಸಾತನ್‌ಕುಳಂ ಎಂಬಲ್ಲಿ ಮೊಬೈಲ್ ಅಂಗಡಿಯೊಂದನ್ನು ಇಟ್ಟುಕೊಂಡಿದ್ದರು. 2020ರಲ್ಲಿ ದೇಶಾದ್ಯಂತ ಕೊರೊನಾ ಲಾಕ್‌ಡೌನ್ ಜಾರಿಯಲ್ಲಿದ್ದಾಗ, ಅಂಗಡಿ ಮುಂಗಟ್ಟುಗಳು ಇಂತಿಷ್ಟೇ ಸಮಯದವರೆಗೆ ತೆಗೆದಿರಬೇಕು ಎಂಬ ನಿಯಮವನ್ನು ದೇಶಾದ್ಯಂತ ಜಾರಿಗೊಳಿಸ ಲಾಗಿತ್ತು. 2020ರ ಜೂನ್ 19ರ ರಾತ್ರಿ ಅವಧಿ ಮೀರಿಯೂ ಮೊಬೈಲ್ ಅಂಗಡಿ ತೆರೆದಿದ್ದನ್ನು ಗಮನಿಸಿದ್ದ ಸಾತನ್‌ಕುಳಂ ಪೊಲೀಸ್ ಠಾಣೆಯ ಸಿಬ್ಬಂದಿ, ಅಪ್ಪಮಗನನ್ನು ಬಂಧಿಸಿ ಠಾಣೆಗೆ ಎಳೆದೊಯ್ದು ಹಲ್ಲೆ ನಡೆಸಿದ್ದರು. ತದನಂತರ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತಾದರೂ ತಂದೆ-ಮಗ ಇಬ್ಬರೂ ಜೈಲಿನಲ್ಲೇ ಸಾವಿಗೀಡಾಗಿದ್ದರು.

ಆದರೆ, ಲಾಕಪ್‌ನಲ್ಲಿ ಅವರಿಗೆ ಚಿತ್ರಹಿಂಸೆ ನೀಡಿದ್ದರಿಂದಲೇ ಸಾವಿಗೀಡಾಗಿದ್ದಾರೆಂದು ಅವರ ಸಂಬಂಧಿಕರು ಆರೋಪಿಸಿದ್ದರು. ಅದಕ್ಕೆ ಸಾಕ್ಷಿಯೆಂಬಂತೆ, ಮೃತರ ದೇಹದ ಮೇಲೆ ಗಾಯಗಳಿದ್ದವು. ಇದು ಮಾಧ್ಯಮಗಳಲ್ಲಿ ವರದಿಯಾಗಿ ಭಾರೀ ಸುದ್ದಿಯಾಗಿತ್ತು. ಮೊದಲಿಗೆ ಈ ಪ್ರಕರಣವನ್ನು ತಮಿಳುನಾಡು ಸರ್ಕಾರ, ರಾಜ್ಯ ಸಿಐಡಿಗೆ ನೀಡಿತ್ತು. → 4

ಏನಿದು ಪ್ರಕರಣ?

- 2020ರ ಜೂನ್‌ನಲ್ಲಿ ಸಂಭವಿಸಿದ್ದ ಸಾತನ್ ಕುಳಂ ಠಾಣೆಯಲ್ಲಿ ಲಾಕಪ್ ಡೆತ್
- ಕ್ಷುಲ್ಲಕ ಕಾರಣಕ್ಕೆ ತಂದೆ ಜಯರಾಜ್, ಮಗ ಬೆನಿಕ್ಸ್ ಬಂಧಿಸಿದ್ದ ಪೊಲೀಸರು
- ಠಾಣೆಗೆ ಎಳೆದೊಯ್ದು ರಾತ್ರಿಯಿಡೀ ಹಲ್ಲೆ, ನಂತರ ನ್ಯಾಯಾಂಗ ಬಂಧನ
- ನ್ಯಾಯಾಂಗ ವಶಕ್ಕೆ ಹೋಗುವಾಗ ಸಾಯುವ ಸ್ಥಿತಿಗೆ ತಲುಪಿದ್ದ ಅಪ್ಪ-ಮಗ
- ಜೈಲಿನಲ್ಲಿ ಅಪ್ಪ-ಮಗನ ಸಾವು, ದೇಶಾದ್ಯಂತ ಸಂಚಲನ ಮೂಡಿಸಿದ್ದ ಘಟನೆ

ಡಿಜಿಲಾಕರ್ ಆ್ಯಪ್‌ನಲ್ಲೂ ಸಿಗುತ್ತೆ ಪಿಯು ಫಲಿತಾಂಶ

ವೆಬ್‌ಸೈಟ್‌ಗಳ ಸರ್ವರ್ ಸಮಸ್ಯೆ ಭೀತಿಯಿಲ್ಲ ಇಲ್ಲಿ ಪಡೆದ ಅಂಕಪಟ್ಟಿಗೆ ಅಧಿಕೃತ ಮಾನ್ಯತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶಕ್ಕೆ ದಿನಗಣನೆ ಶುರುವಾಗಿರುವಾಗಲೇ, ವಿದ್ಯಾರ್ಥಿ ಗಳಿಗೆ ಸಮಾಧಾನಕರ ಸುದ್ದಿ ಯೊಂದು ಸಿಕ್ಕಿದೆ. ಇನ್ನು ಮುಂದೆ ಪಿಯು ಫಲಿತಾಂಶವನ್ನು ಡಿಜಿ ಲಾಕರ್ ಆ್ಯಪ್‌ನಲ್ಲಿಯೂ ನೋಡಬಹುದಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಡಿಜಿಲಾಕರ್, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ 12ನೇ ತರಗತಿಯ ಈ ವರ್ಷದ ಫಲಿತಾಂಶ ಶೀಘ್ರದಲ್ಲೇ ಡಿಜಿ ಲಾಕರ್‌ನಲ್ಲಿ ಲಭ್ಯವಾಗಲಿದೆ. ಯಾರೂ ಸಾಲು ಗಟ್ಟಿ ನಿಲ್ಲುವ ಅಗತ್ಯವಿಲ್ಲ, ಯಾವುದೇ ಕಾಗದ ಪತ್ರಗಳ ಜಂಜಾಟವಿಲ್ಲ. ನಿಮ್ಮ ಫಲಿತಾಂಶಗಳನ್ನು ಅತ್ಯಂತ ಸುರಕ್ಷಿತವಾಗಿ ನಿಮ್ಮ ಮೊಬೈಲ್‌ನಲ್ಲಿಯೇ ಪಡೆದುಕೊಳ್ಳಬಹುದು ಎಂದು ಹೇಳಿದೆ.

ಸಾಮಾನ್ಯವಾಗಿ ಫಲಿತಾಂಶ ಪ್ರಕಟವಾದ ತಕ್ಷಣ ಅಧಿಕೃತ ವೆಬ್‌ಸೈಟ್‌ಗಳಲ್ಲಿ ಸರ್ವರ್ ಸಮಸ್ಯೆಯಿಂದಾಗಿ ವಿದ್ಯಾರ್ಥಿಗಳು ಪರದಾಡುತ್ತಾರೆ. ಆದರೆ ಡಿಜಿಲಾಕರ್ ಮೂಲಕ ವಿದ್ಯಾರ್ಥಿಗಳು ಸುಲಭವಾಗಿ ಅಂಕಪಟ್ಟಿಯನ್ನು ವೀಕ್ಷಿಸಬಹುದು. ಡೌನ್‌ಲೋಡ್ ಮಾಡಿಕೊಳ್ಳಬಹುದು. → 4

ಅಂಚೆಮತ ಮರು ಎಣಿಕೆ: ಶಾಸಕ ರಾಜೇಗೌಡಗೆ ಸಂಕಷ್ಟ

ತಿರಸ್ಕೃತ 279 ಮತ ಮರುಪರಿಶೀಲನೆಗೆ ಆದೇಶ ಹೈಕೋರ್ಟ್ ಸೂಚನೆಯಿಂದ ಶಾಸಕರಿಗೆ ಆತಂಕ

ಬೆಂಗಳೂರು: ಚಿಕ್ಕಮಗಳೂರಿನ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಚಲಾವಣೆಯಾಗಿರುವ 1,811 ಅಂಚೆ ಮತಗಳ ಪೈಕಿ ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಮರು ಪರಿಶೀಲಿಸಿ, ಆನಂತರ ಎಲ್ಲಾ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಚುನಾವಣಾಧಿಕಾರಿ ಫಲಿತಾಂಶ ಪ್ರಕಟಿಸಬೇಕು ಎಂದು ಹೈಕೋರ್ಟ್ ಸೋಮವಾರ ಮಹತ್ವದ ಆದೇಶ ಮಾಡಿದೆ.

ಶೃಂಗೇರಿ ಶಾಸಕರಾದ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಚುನಾವಣೆ ಪ್ರಶ್ನಿಸಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಡಿ.ಎನ್. ಜೀವರಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಆರ್. ನಟರಾಜ್ ಅವರ ಏಕಸದಸ್ಯ ಪೀಠವು ಭಾಗಶಃ ಪುರಸ್ಕರಿಸಿದೆ. ತಿರಸ್ಕೃತಗೊಂಡಿರುವ 279 ಅಂಚೆ ಮತಗಳನ್ನು ಚುನಾವಣಾಧಿಕಾರಿ ಪರಿಶೀಲಿಸಬೇಕು. ಮರು ಪರಿಶೀಲಿಸುವಾಗ ಚುನಾವಣಾ ಅಧಿಕಾರಿಗಳ ಕೈಪಿಡಿ 2023ರ ಮಾರ್ಗಸೂಚಿಯನ್ನು ಅನುಪಾಲಿಸಬೇಕು ಮತ್ತು ಅಂಚೆ ಮತಗಳು ಸಮಸ್ಯಾತ್ಮಕವಾಗಿದೆಯೇ ಎಂಬುದನ್ನು ಪತ್ತೆ ಮಾಡಬೇಕು. → 4

ದೆಹಲಿ ವಿಧಾನಸಭೆಗೆ ನುಗ್ಗಿದ ಕಾರು: ಆಗಂತುಕನ ಸೆರೆ

ದೆಹಲಿ: ದೆಹಲಿ ವಿಧಾನಸಭೆ ಆವರಣದಲ್ಲಿ ಸೋಮವಾರ ಭದ್ರತಾ ಲೋಪವಾಗಿದೆ. ಮಾಸ್ಕ್ ಧರಿಸಿದ್ದ ಚಾಲಕ ಚಲಾಯಿಸಿಕೊಂಡ ಬಂದ ಬಿಳಿ ಬಣ್ಣದ ಕಾರು ಕೆಲವು ನಿಮಿಷ ಆತಂಕವನ್ನು ಸೃಷ್ಟಿಸಿ ಬಳಿಕ ಕಣ್ಮರೆಯಾಗಿದೆ. ಮಧ್ಯಾಹ್ನ 2ರ ವೇಳೆ ವೇಗವಾಗಿ ಬಂದು ವಿಧಾನಸಭೆ ಆವರಣದ ಗೇಟ್ ನಂ.2ಕ್ಕೆ ಗುದ್ದಿ ಜಖಂಗೊಳಿಸಿ, ಬ್ಯಾರಿಕೇಡನ್ನೂ ಲೆಕ್ಕಿಸದೇ ನೇರ ಒಳನುಗ್ಗಿದೆ. ಅಲ್ಲದೇ, ಸ್ಪೀಕರ್ ಕಚೇರಿಯಿದ್ದ ದಿಕ್ಕಿನೆಡೆಗೇ ನೇರವಾಗಿ ಕಾರು ವೇಗವಾಗಿ ಚಲಿಸಿರುವುದು ತೀವ್ರ ಆತಂಕವನ್ನು ಸೃಷ್ಟಿಸಿತ್ತು. ಉಗ್ರರ ದಾಳಿ ಭೀತಿ ಎದುರಾಗಿತ್ತು. ಆ ಬಳಿಕ ಕಾರಿನಲ್ಲಿದ್ದ ಮುಸುಕುಧಾರಿ ಚಾಲಕ ವಿಧಾನಸಭೆಯ ಸ್ಪೀಕರ್ ವಿಜೇಂದರ್ ಗುಪ್ತಾ ಅವರ ಕಾರಿನ ಮೇಲೆ ಮಸಿ ಎರಚಿದ್ದಾನೆ. ಕಚೇರಿಯ ಪೋರ್ಟಿಕೋ ಬಳಿ ಪುಷ್ಪಗುಚ್ಛವಿರಿಸಿದ್ದಾನೆ.

ಚಿನ್ನಾಭರಣಗಳಿಗೆ ದೇಶಾದ್ಯಂತ ವಿಶೇಷ ಗುರುತು ಸಂಖ್ಯೆ ಕಡ್ಡಾಯ

ಇದುವರೆಗೆ 380 ಜಿಲ್ಲೆಗಳಲ್ಲಿ ಮಾತ್ರ ಇತ್ತು ಕೋಡ್ ಹೊಸತಾಗಿ 7 ಜಿಲ್ಲೆ ಸೇರ್ಪಡೆ, ಮುಂದೆ ದೇಶಾದ್ಯಂತ

ದೆಹಲಿ: ಗ್ರಾಹಕರ ಸಂರಕ್ಷಣೆಯ ಪ್ರಮುಖ ಕ್ರಮವಾಗಿ, ಶೀಘ್ರ ದೇಶಾದ್ಯಂತ ಭಾರತ ಸರಕಾರವು ಚಿನ್ನಾಭರಣಗಳಲ್ಲಿ ವಿಶಿಷ್ಟ ಗುರುತಿನ ಸಂಖ್ಯೆ ನಮೂದಿಸುವುದನ್ನು ಕಡ್ಡಾಯಗೊಳಿಸಲಿದೆ ಎಂದು ವರದಿಗಳು ಹೇಳಿವೆ. ಪ್ರತಿಯೊಂದು ಚಿನ್ನದ ಆಭರಣದ ಅಧಿಕೃತತೆ ಮತ್ತು ಪರಿಶುದ್ಧತೆಯ ದೃಢೀಕರಣಕ್ಕಾಗಿ ಹಿಂದೆಯೇ 380 ಜಿಲ್ಲೆಗಳಲ್ಲಿ ಈ ನಿಯಮವನ್ನು ಜಾರಿ ಮಾಡಲಾಗಿತ್ತು. ಸದ್ಯ ಹೊಸತಾಗಿ 7 ಜಿಲ್ಲೆಗಳನ್ನು ಸೇರಿಸಲಾಗಿದೆ. ಶೀಘ್ರವೇ ಎಲ್ಲ ಜಿಲ್ಲೆಗಳಲ್ಲೂ ವಿಶಿಷ್ಟ ಹಾಲ್‌ಮಾರ್ಕ್ ಅನ್ನು ಆರಂಭಿಸಲಿದೆ. ಇದು ಯೂನಿಕ್ ಐಡೆಂಟಿಫಿಕೇಷನ್ (ಹೆಚ್‌ಯುಐಡಿ) ಕೋಡ್ ಅನ್ನು ಹೊಂದಿರಲಿದೆ.

ನಿಯಮಗಳ ಪ್ರಕಾರ ಪ್ರತಿಯೊಂದು ಚಿನ್ನದ ಆಭರಣವೂ 6 ಅಂಕಿಗಳ ಹೆಚ್‌ಯುಐಡಿ ಕೋಡ್ ಅನ್ನು ಹೊಂದಿರಬೇಕಾಗುತ್ತದೆ. ಇದರರ್ಥ ಪ್ರತಿಯೊಂದು ವಸ್ತುವೂ ತನ್ನದೇ ಆದ ಶಾಶ್ವತ ಗುರುತು ಹೊಂದಿರಲಿದೆ. ಕೆಲವು ಆಭರಣದಂಗಡಿಗಳಲ್ಲಿ ಹಾಲ್‌ಮಾರ್ಕ್ ನಮೂದಿಸುವಲ್ಲಿಯೂ ಗೊಂದಲವಿದೆ ಎಂದು ಹೇಳಲಾಗಿದೆ. ಇದರ ವಿರುದ್ಧ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಸುಧಾರಣಾ ಕ್ರಮ ಕೈಗೊಳ್ಳಲಾಗಿದೆ. ಈ ಪ್ರಕ್ರಿಯೆಯನ್ನು ಚಿನ್ನದ ಪರಿಶುದ್ಧತೆ ಮತ್ತು ಗುಣಮಟ್ಟ ಖಚಿತಪಡಿಸುವ ಬಿಐಎಸ್ ನಿಯಂತ್ರಿಸುತ್ತದೆ. ಗ್ರಾಹಕರು ಬಿಐಎಸ್ ಕೇರ್ ಮೊಬೈಲ್ ಆ್ಯಪ್ ಬಳಸಿ ಹೆಚ್‌ಯುಐಡಿ ಕೋಡ್ ಅನ್ನು ಪರಿಶೀಲಿಸಬಹುದಾಗಿದೆ. ಇದು ಅವರು ನಕಲಿ ಅಥವಾ ಕಳಪೆ ಗುಣಮಟ್ಟದ ಚಿನ್ನ ಖರೀದಿಸುವುದನ್ನು ತಪ್ಪಿಸುತ್ತದೆ.

ಗ್ರಾಹಕರೇ ಗಮನಿಸಿ

- ಬಿಐಎಸ್‌ನಿಂದ ಚಿನ್ನದ ಪರಿಶುದ್ಧತೆ, ಪರಿಶೀಲನೆ. ಬಿಐಎಸ್ ಮೊಬೈಲ್ ಆ್ಯಪ್ ಬಳಸಿಕೊಂಡು ಗ್ರಾಹಕರಿಗೆ ಕೋಡ್ ತಿಳಿಯಲು ಅವಕಾಶ

ಗ್ಯಾಸ್ ಕೊರತೆ: ಸಚಿವರ ನಿವಾಸಕ್ಕೆ ಮುತ್ತಿಗೆ

ಆಟೋ ಚಾಲಕರೊಂದಿಗೆ ಸಚಿವ ಮುನಿಯಪ್ಪ ಮಾತುಕತೆ | ಸಮಸ್ಯೆ ಪರಿಹಾರಕ್ಕೆ ಕೇಂದ್ರಕ್ಕೆ ಪತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಗ್ಯಾಸ್ ಸಮಸ್ಯೆ ಉಲ್ಬಣಿಸುತ್ತಿದ್ದು, ಅದರಲ್ಲಿಯೂ ಸಿಎನ್‌ಜಿ ಕೊರತೆಯಿಂದಾಗಿ ಆಟೋ ಚಾಲಕರ ಜೀವನ ಸಂಕಷ್ಟಕ್ಕೆ ಬಂದಿದೆ. ಗ್ಯಾಸ್ ಪೂರೈಸುವಂತೆ ರಾಜ್ಯ ಸರಕಾರದ ಮೇಲೆ ಆಟೋ ಚಾಲಕರು ಒತ್ತಡ ಹೇರುವುದರೊಂದಿಗೆ, ಸಚಿವ ಕೆ.ಎಚ್. ಮುನಿಯಪ್ಪ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ್ದಾರೆ. ಈ ಬೆನ್ನಲ್ಲೇ ಮುನಿಯಪ್ಪ ಅವರು ಕೇಂದ್ರ ಸಚಿವರಿಗೆ ಪತ್ರ ಬರೆದಿದ್ದಾರೆ.

ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಪತ್ರ ಬರೆದಿರುವ ಮುನಿಯಪ್ಪ, ಕರ್ನಾಟಕದಲ್ಲಿ ದಿನದಿಂದ ದಿನಕ್ಕೆ ತೀವ್ರ ಸಮಸ್ಯೆಯಾಗುತ್ತಿದೆ. ಗೃಹ ಬಳಕೆದಾರರಿಗೆ ನಿರಂತರ ಎಲ್‌ಪಿಜಿ ಪೂರೈಕೆ ಮುಂದುವರಿದಿದ್ದರೂ, ಆಟೋ ಚಾಲಕರಿಗೆ ತೀವ್ರ ಸಮಸ್ಯೆಯಾಗುತ್ತಿದೆ. ಇದರೊಂದಿಗೆ ಕೆಲ ಖಾಸಗಿ ಸಂಸ್ಥೆಗಳು ಹೆಚ್ಚುವರಿ ದರಕ್ಕೆ ಗ್ಯಾಸ್ ಮಾರಾಟ ಮಾಡುತ್ತಿರುವ ಆರೋಪ ಕೇಳಿ ಬಂದಿದೆ. ಆದ್ದರಿಂದ ಈ ಬಗ್ಗೆ ಕ್ರಮವಹಿಸುವಂತೆ ಆಗ್ರಹಿಸಿದ್ದಾರೆ.

ಮುತ್ತಿಗೆಗೆ ಪ್ರಯತ್ನ: ರಾಜಧಾನಿ ಬೆಂಗಳೂರಿನಲ್ಲಿ ಆಟೋ ಗ್ಯಾಸ್ ಸಿಗದಿರುವುದಕ್ಕೆ ರೋಸಿ ಹೋಗಿರುವ ಆಟೋ ಚಾಲಕರು ಸೋಮವಾರ ಬೆಳಗ್ಗೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರ ಮನೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಇಡೀ ದಿನ ಗ್ಯಾಸ್ ಬಂಕ್‌ಗಳ ಮುಂದೆ ಕಾದರೂ ಗ್ಯಾಸ್ ಸಿಗುತ್ತಿಲ್ಲ. ಕೆಲವು ಖಾಸಗಿ ಗ್ಯಾಸ್ ಬಂಕ್‌ಗಳು ಮಾರುಕಟ್ಟೆ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಿವೆ. ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಕೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಮಾತನಾಡಿದ ಪೀಸ್ ಆಟೋ ಚಾಲಕ ಸಂಘದ ರಾಜ್ಯಾಧ್ಯಕ್ಷ ರಘು ನಾರಾಯಣ ಗೌಡ, ಸಚಿವರ ಉತ್ತರ ತೃಪ್ತಿಕೊಟ್ಟಿಲ್ಲ. ಜನರ ಕಷ್ಟಕ್ಕೆ ಸ್ಪಂದಿಸುವ ಬದಲು ಉಪಚುನಾವಣೆಯ ವಿಷಯ ಪ್ರಸ್ತಾಪಿಸಿರುವುದು ಸರಿಯಲ್ಲ ಎಂದಿದ್ದಾರೆ.

ರಾಜ್ಯದಲ್ಲಿ ಸಿಎನ್‌ಜಿ ಕೊರತೆ, ವಾಣಿಜ್ಯ ಸಿಲಿಂಡರ್ ಕೊರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೇಂದ್ರ ಸರಕಾರ ಈ ವಿಷಯದಲ್ಲಿ ಸಮಯೋಚಿತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ. ವಿದೇಶಾಂಗ ನೀತಿ ಮತ್ತು ಇಂಧನ ನಿರ್ವಹಣೆಯ ನಡುವೆ ಸಮನ್ವಯದ ಕೊರತೆ ಕಾಣಿಸಿಕೊಂಡಿದ್ದು, ಅದರ ಹೊರೆ ಜನರ ಮೇಲೆ ಬಿದ್ದಿದೆ.

-ಕೆ.ಎಚ್.ಮುನಿಯಪ್ಪ, ಸಚಿವ

ಏನಿದು ಸಮಸ್ಯೆ?

- ಇರಾನ್ ಮೇಲಿನ ದಾಳಿಯಿಂದ ಎಲ್‌ಪಿಜಿ ಸರಬರಾಜಿನಲ್ಲಿ ಭಾರೀ ವ್ಯತ್ಯಯ
- ಸಿಎನ್‌ಜಿ ಇಂಧನಕ್ಕೆ ಕೆಲವು ಖಾಸಗಿ ಕೇಂದ್ರಗಳಲ್ಲಿ ಹೆಚ್ಚಿನ ದರ ವಸೂಲಿ ಮಾಡುತ್ತಿದ್ದಾರೆ ಎಂಬ ಆರೋಪ
- ಆಟೋ ಚಾಲಕರಿಗೆ ದಿನಗಟ್ಟಲೆ ಕಾದರೂ ಸಿಗದ ಸಿಎನ್‌ಜಿ, ಸಿಕ್ಕಿದರೂ ವಿಪರೀತ ದುಬಾರಿ ದರ
- ಸರಕಾರಿ ದರದಲ್ಲಿ ಎಲ್‌ಪಿಜಿ ಪೂರೈಸಲು ರಾಜ್ಯ ಸರಕಾರದಿಂದ ಕೇಂದ್ರ ಸರಕಾರಕ್ಕೆ ಮನವಿ

ಬಿಜೆಪಿ ಕಚೇರಿಗೂ ಗ್ಯಾಸ್ ಟ್ರಬಲ್

ಗ್ಯಾಸ್ ಸಮಸ್ಯೆ ಜನಸಾಮಾನ್ಯರಿಗೆ ಮಾತ್ರವಲ್ಲದೇ ರಾಜ್ಯ ಬಿಜೆಪಿ ಕಚೇರಿಗೂ ತಟ್ಟಿದೆ. ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಸಿಗದೆ ಸಿಬ್ಬಂದಿ ಊಟಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಬಿಜೆಪಿ ಕಚೇರಿ ಸಿಬ್ಬಂದಿ ಸೇರಿದಂತೆ ಬರುವ ನಾಯಕರು, ಮಾಧ್ಯಮದವರಿಗೂ ಮಧ್ಯಾಹ್ನದ ಊಟ ಲಭ್ಯವಿರುತ್ತಿತ್ತು. ಇನ್ನೆರಡು ದಿನದಲ್ಲಿ ಗ್ಯಾಸ್ ದೊರೆಯಲಿದೆ ಎಂದು ತಿಳಿದುಬಂದಿದೆ.

ಸಮಾಚಾರ ಸಣ್ಣದಲ್ಲ

ಕಾಳಸಂತೆಯಲ್ಲಿ ಟಿಕೆಟ್ ಮಾರಾಟ ದೂರು ದಾಖಲು

ಬೆಂಗಳೂರು: ಆರ್‌ಸಿಬಿ ಹಾಗೂ ಸಿಎಸ್‌ಕೆ ಪಂದ್ಯಕ್ಕೂ ಮುನ್ನ ಬ್ಲ್ಯಾಕ್‌ನಲ್ಲಿ ಟಿಕೆಟ್ ಮಾರಾಟ ಮಾಡುತ್ತಿದ್ದ ಏಳು ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಜಗದೀಶ್, ಸತ್ಯನಾರಾಯಣ, ಹರ್ಷ, ವಿನಯ್, ಶಾಹೀದ್, ಲಿಖಿತ್, ಪುನೀತ್ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಹೆಚ್ಚಿನ ಹಣಕ್ಕಾಗಿ ಬ್ಲ್ಯಾಕ್‌ನಲ್ಲಿ ಟಿಕೆಟ್ ಮಾರಾಟ ಮಾಡುತ್ತಿದ್ದರು. ಈ ವೇಳೆ ಸಿಸಿಬಿ ಪೊಲೀಸರು ಮಾನಿಟರಿಂಗ್ ಮಾಡಿದ್ದು, ಆರೋಪಿಗಳು ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಸದ್ಯ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದು, ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರತ್ಯೇಕ ಮೂರು ಎಫ್‌ಐಆರ್‌ಗಳು ದಾಖಲಾಗಿವೆ.

ರಾಜ್ಯದಲ್ಲಿ ಹಿಂದಿಯನ್ನು ಬಲವಂತವಾಗಿ ಹೇರಲಾಗುತ್ತಿದೆ: ಕರವೇ ಅಧ್ಯಕ್ಷ ನಾರಾಯಣಗೌಡ

ರಾಜ್ಯಪಾಲರ ನಡೆ ವಿರೋಧಿಸಿ ಕರವೇ ಪ್ರತಿಭಟನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾಡದ್ರೋಹಿ ಧೋರಣೆ ಅನುಸರಿಸುತ್ತಿರುವ ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ನಡೆ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿತು.

ಪ್ರತಿಭಟನೆಯಲ್ಲಿ ಮಾತನಾಡಿದ ಕರವೇ ಅಧ್ಯಕ್ಷ ನಾರಾಯಣಗೌಡ, ರಾಜ್ಯಪಾಲರು ಕರ್ನಾಟಕದ ಧ್ವನಿಯಾಗಿ ನಿಲ್ಲಬೇಕು. ಆದರೆ ರಾಜ್ಯದ ರಾಜ್ಯಪಾಲರು ಕನ್ನಡದ ಹಿತಾಸಕ್ತಿಯನ್ನು ಕಾಪಾಡುವ ಬದಲು ಹಿಂದಿ ಸಾಮ್ರಾಜ್ಯಶಾಹಿಗಳ ಪರವಾಗಿ ನಡೆದುಕೊಳ್ಳುತ್ತಿರುವುದು ಆತಂಕಕಾರಿ. ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುತ್ತಿರುವ ಈ ರೀತಿಯ ನಡೆ ಮುಂದುವರಿದರೆ, ಅವರು ಕರ್ನಾಟಕದಲ್ಲಿ ಉಳಿಯಲು ಅರ್ಹರಲ್ಲ ಎಂದರು.

ರಾಜ್ಯದಲ್ಲಿ ತ್ರಿಭಾಷಾ ನೀತಿಯ ಹೆಸರಿನಲ್ಲಿ ಹಿಂದಿಯನ್ನು ಬಲವಂತವಾಗಿ ಹೇರಲಾಗುತ್ತಿದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿಫಲವಾಗುತ್ತಿದ್ದಾರೆ. ಈ ಸಮಸ್ಯೆಗಳ ಬಗ್ಗೆ ರಾಜ್ಯಪಾಲರು ಯಾವುದೇ ಚಿಂತನೆ ವ್ಯಕ್ತಪಡಿಸಿಲ್ಲ. ಜತೆಗೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ದ್ವಿಭಾಷಾ ನೀತಿ ಜಾರಿಯಲ್ಲಿದೆ.

ರಾಜ್ಯಪಾಲರ ನಡೆ ವಿರುದ್ಧ ಘೋಷಣೆ ಕೂಗಿ ಫ್ರೀಡಂಪಾರ್ಕ್‌ನಲ್ಲಿ ಕರವೇ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸ್ವತಃ ತಮ್ಮ ರಾಜ್ಯವಾದ ಮಧ್ಯಪ್ರದೇಶ ರಾಜ್ಯಗಳಲ್ಲಿ ದ್ವಿಭಾಷಾ ನೀತಿ ಇದ್ದು, ಅಲ್ಲಿ ಕನ್ನಡವನ್ನು ಸೇರಿಸಲು ಹೇಳುವ ಧೈರ್ಯ ರಾಜ್ಯಪಾಲರಿಗೆ ಇಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಹಿಂದಿ ಹೇರಿಕೆ ಮಾಡಲು ಮುಂದಾಗುತ್ತಿರುವುದು ದ್ವಂದ್ವ ನೀತಿ ಎಂದರು.

ಭಾರತ ವಿವಿಧ ಭಾಷೆ, ಸಂಸ್ಕೃತಿಗಳು ಮತ್ತು ಆಚಾರ-ವಿಚಾರಗಳ ಸಮೂಹವಾಗಿದೆ. ಒಂದು ಭಾಷೆಯನ್ನು ಬಲವಂತವಾಗಿ ಹೇರಿಸುವುದು ದೇಶದ ಏಕತೆಗೆ ಧಕ್ಕೆಯುಂಟು ಮಾಡುತ್ತದೆ. ಭಾರತವು ಹಿಂದಿ ಭಾರತ ಅಲ್ಲ, ಎಲ್ಲಾ ಪ್ರಾದೇಶಿಕ ಭಾಷೆಗಳಿಗೂ ಸಮಾನ ಗೌರವ ದೊರೆಯಬೇಕು. ಈ ಹಿನ್ನಲೆಯಲ್ಲಿ, ರಾಜ್ಯಪಾಲರು ಕನ್ನಡದ ವಿರುದ್ಧದ ನಿಲುವು ತಾಳುವುದನ್ನು ತಕ್ಷಣ ನಿಲ್ಲಿಸಬೇಕು. ಇಲ್ಲದಿದ್ದರೆ ಕೇಂದ್ರ ಸರಕಾರವು ಅವರನ್ನು ವಾಪಸ್ ಕರೆಸಿಕೊಳ್ಳಬೇಕು ಕರವೇ ಆಗ್ರಹಿಸಿದೆ ಎಂದರು.

ರಾಜ್ಯಪಾಲರ ಹಸ್ತಕ್ಷೇಪಕ್ಕೆ ತೀವ್ರ ಆಕ್ಷೇಪ

ರಾಜ್ಯಪಾಲರು ತಮ್ಮ ಸಂವಿಧಾನಿಕ ಮಿತಿಯನ್ನು ಮೀರಿ ರಾಜ್ಯದ ಶಿಕ್ಷಣ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತಿರುವುದು ಸ್ವೀಕಾರಾರ್ಹವಲ್ಲ. ರಾಜ್ಯ ಸರಕಾರವನ್ನು ಜನತೆ ಆಯ್ಕೆ ಮಾಡಿದ್ದು, ಶಿಕ್ಷಣ ನೀತಿ ಸೇರಿದಂತೆ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಸರಕಾರಕ್ಕೇ ಸೇರಿದೆ. ಇಂತಹ ಸಂದರ್ಭದಲ್ಲಿ ರಾಜ್ಯಪಾಲರು ಸರಕಾರ ನಿರ್ಧಾರಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಸರಿಯಲ್ಲ ಎಂದು ಕರವೇ ಅಧ್ಯಕ್ಷ ಟಿ.ಎನ್.ನಾರಾಯಣಗೌಡ ತಿಳಿಸಿದರು.

ರಾಜ್ಯ ಸರಕಾರ ಕನ್ನಡಿಗರ ಪರವಾಗಿ ನೀಡಿದ ಹೇಳಿಕೆಗೆ ವಿರುದ್ಧವಾಗಿ ರಾಜ್ಯಪಾಲರು ಪತ್ರ ಬರೆದು ಹಿಂದಿಯನ್ನು ಕೈಬಿಡಬಾರದು ಎಂದು ಸೂಚಿಸಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ನಾಡಿನ ಹಿತಾಸಕ್ತಿಯನ್ನು ಕಾಪಾಡಬೇಕಾದ ರಾಜ್ಯಪಾಲರು ಕನ್ನಡ ಪರ ನಿಲುವು ತಾಳದೆ, ಹಿಂದಿ ಪರವಾಗಿ ನಡೆದುಕೊಳ್ಳುತ್ತಿರುವುದು ಖಂಡನೀಯ. ಈ ಕೂಡಲೇ ಅವರು ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜಭವನಕ್ಕೆ ಮುತ್ತಿಗೆ ಹಾಕುವ ಹೋರಾಟ ಕೈಗೊಳ್ಳಲಾಗುವುದು.

– ಶ್ವೇತಾ ಕರವೇ ಮಹಿಳಾ ಘಟಕ ಅಧ್ಯಕ್ಷೆ

ಕೆನರಾ ಬ್ಯಾಂಕ್ Canara Bank (ಭಾರತ ಸರ್ಕಾರದ ಒಂದು ಉದ್ಯಮ)
ಮೈಸೂರು ಬ್ಯಾಂಕ್ ಸರ್ಕಲ್ ಶಾಖೆ
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ರಸ್ತೆ,ರಾಜ್‌ದೂತ್ ಕಾಂಪ್ಲೆಕ್ಸ್, ಮೈಸೂರು ಬ್ಯಾಂಕ್ ವೃತ್ತ, ಬೆಂಗಳೂರು-560002, ಇ-ಮೇಲ್: cb10446@canarabank.com

ತಿದ್ದುಪಡಿ

ದಿನಾಂಕ : **05.04.2026** ರಂದು ಇದೇ ದಿನಪತ್ರಿಕೆಯಲ್ಲಿ ಪ್ರಕಟವಾದ ಸ್ವಾಧೀನ ಸೂಚನೆಯಲ್ಲಿ ಸಾಲಗಾರರಾದ **M/S ಮಿಲನ್ ಕ್ಲಾತಿಂಗ್, ಶ್ರೀ ಕಾಳಿದಾಸ್ ರಾಜು ಮತ್ತು ಶ್ರೀ.ಆರ್.ಹರಿದಾಸ್ (ಪಾಲುದಾರರು)** ಇವರಿಗೆ ಸಂಬಂಧಪಟ್ಟಂತೆ ಸ್ವಾಧೀನ ಸೂಚನೆಯ ದಿನಾಂಕವನ್ನು **01.04.2026** ಎಂದು ಮತ್ತು ಬಾಕಿ ಮೊತ್ತವನ್ನು **ರೂ.13,09,78,201.78** (ಹದಿಮೂರು ಕೋಟಿ ಒಂಭತ್ತು ಲಕ್ಷದ ಎಪ್ಪತ್ತೆಂಟು ಸಾವಿರದ ಇನ್ನೂರ ಒಂದು ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ) ಎಂದು ತಪ್ಪಾಗಿ ಮುದ್ರಿಸಲಾಗಿತ್ತು, ಅದರ ಬದಲಾಗಿ ಸ್ವಾಧೀನ ಸೂಚನೆಯ ದಿನಾಂಕವನ್ನು **04.04.2026** ಎಂದು ಬಾಕಿ ಮೊತ್ತವನ್ನು **ರೂ. 13,09,79,188.78** (ಹದಿಮೂರು ಕೋಟಿ ಒಂಭತ್ತು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ನೂರ ಎಂಭತ್ತೆಂಟು ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ) ಎಂದು ತಿದ್ದಿ ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆಗಳು ಇರುವುದಿಲ್ಲ.

ದಿನಾಂಕ: 06.04.2026 ಸಹಿ/- ಅಧಿಕೃತ ಅಧಿಕಾರಿಗಳು
ಸ್ಥಳ: ಬೆಂಗಳೂರು ಕೆನರಾ ಬ್ಯಾಂಕ್.,

ಸಾಕು ನಾಯಿ ದಾಳಿ; ಮಾಲೀಕರ ವಿರುದ್ಧ ಕೇಸ್

ಬೆಂಗಳೂರು: ನಗರದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಬ್ರೆಡ್ ತರಲು ಹೋಗಿದ್ದ ಬಾಲಕನೊಬ್ಬನಿಗೆ ಸಾಕು ನಾಯಿಯೊಂದು ಕಚ್ಚಿರುವ ಘಟನೆ ನಗರದ ರಾಜಾಜಿನಗರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ರಾಜಾಜಿನಗರದ 1ನೇ ಬ್ಲಾಕ್‌ನಲ್ಲಿ ವಾಸವಿರುವ 11 ವರ್ಷದ ಬಾಲಕ ಮಾರ್ಚ್ 21 ರಂದು ಬೆಳಗ್ಗೆ 8 ರಿಂದ 8.30ರ ಸುಮಾರಿಗೆ ಬ್ರೆಡ್ ತರುವುದಕ್ಕಾಗಿ ಮನೆಯಿಂದ ಹೊರಹೋಗಿದ್ದ. ಸ್ವಲ್ಪ ದೂರ ಹೋಗುತ್ತಿದ್ದಂತೆ ರಸ್ತೆಯಲ್ಲಿ ತನ್ನ ಮಾಲೀಕರೊಂದಿಗೆ ವಾಕ್ ಮಾಡುತ್ತಿದ್ದ ಶ್ವಾನವೊಂದು ದಾಳಿ ಮಾಡಿದೆ. ಬಾಲಕನ ತೊಡೆಗೆ ಕಚ್ಚಿ ಗಾಯಗೊಳಿಸಿದೆ. ನಾಯಿಯ ಕ್ರೌರ್ಯಕ್ಕೆ ಬಾಲಕ ಒಂದು ಕ್ಷಣ ಬೆಚ್ಚಿಬಿದ್ದಿದ್ದ. ಘಟನೆ ಸಂಭವಿಸಿ 15 ದಿನ ಕಳೆದಿದ್ದರೂ ಶ್ವಾನದ ಮಾಲೀಕರು ಬಾಲಕನಿಗೆ ಚಿಕಿತ್ಸೆ ಕೂಡ ಕೊಡಿಸಿರಲಿಲ್ಲ. ಹೀಗಾಗಿ, ಕುಟುಂಬಸ್ಥರೇ ಚಿಕಿತ್ಸೆ ವೆಚ್ಚ ಭರಿಸಿದ್ದರು. ಇದರಿಂದಾಗಿ ರೋಸಿಹೋಗಿದ್ದ ಬಾಲಕನ ಪೋಷಕರು ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಹೀಗಾಗಿ, ನಾಯಿಯ ಮಾಲೀಕನಿಗೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಲು ಮುಂದಾಗಿದ್ದಾರೆ.

ಇ-ಮೇಲ್ ಮೂಲಕ ಕಚೇರಿಗಳಿಗೆ ಬೆದರಿಕೆ

ಬೆಂಗಳೂರು: ರಾಜ್ಯ ರಾಜಧಾನಿಗೆ ಬಾಂಬ್ ಬೆದರಿಕೆಗಳು ಹೆಚ್ಚುತ್ತಿರುವ ಸಮಯದಲ್ಲೇ ತಮಿಳುನಾಡು ಸಿಎಂ ಪುತ್ರ ಉದಯನಿಧಿ ಮಗನ ಮೇಲಿನ ಸಿಟ್ಟಿಗೆ ಬೆಂಗಳೂರಿನ ಕಚೇರಿಗಳಿಗೆ ಬಾಂಬ್ ಬೆದರಿಕೆ ಮೇಲ್ ಬಂದಿದೆ.

13 ಸೈನಡ್ ಗ್ಯಾಸ್ ಪಾಯಿಸನ್ ಪ್ಲಾನ್ ಮಾಡಲಾಗಿದ್ದು, ಸೋಮವಾರ ಒಂದು ಗಂಟೆಯ ಹೊತ್ತಿಗೆ ಬ್ಲಾಸ್ಟ್ ಆಗಲಿದೆ ಎಂದು ಡಿಆರ್‌ಡಿಒ, ಜಿಆರ್‌ಟಿಐ ಕಚೇರಿಗಳಿಗೆ ಬಾಂಬ್ ಬೆದರಿಕೆ ಮೇಲ್ ಬಂದಿದೆ. Kiruthiha. udhayanidhihotmail ಎಂಬ ಐಡಿ ಮೂಲಕ ಕಚೇರಿಗಳಿಗೆ ಬಾಂಬ್ ಬೆದರಿಕೆ ಮೇಲ್ ಬಂದಿದೆ.

ಈ ಮೇಲ್‌ನಲ್ಲಿ ತಮಿಳುನಾಡು ಸಿಎಂ ಮೊಮ್ಮಗನನ್ನು ಅಪಹರಣ ಮಾಡುವುದಾಗಿ ಬರೆದಿದ್ದಾರೆ. ಜತೆಗೆ ಉದಯನಿಧಿ ಮಗ ಇಂಬನಿಧಿಯನ್ನು ಅಪಹರಣ ಮಾಡಿ, ಆತನಿಗೆ ಮಾರಣಾಂತಿಕ ಹಿಂಸೆ ನೀಡುವುದಾಗಿ ಉಲ್ಲೇಖ ಮಾಡಿದ್ದಾರೆ.

ಇಮೇಲ್ ಮೂಲಕ ಬಾಂಬ್ ಬೆದರಿಕೆ: ಅಪರಿಚಿತನೋರ್ವ ತಮಿಳಿನಲ್ಲಿಯೇ ಬೆಂಗಳೂರಿನ ಕಚೇರಿಗಳಿಗೆ ಬಾಂಬ್ ಬೆದರಿಕೆ ಮೇಲ್ ಕಳುಹಿಸಿದ್ದಾನೆ. ಅಧಿಕಾರಿಗಳಿಂದ ಮೇಲ್ ಪರಿಶೀಲನೆ ನಡೆದಿದ್ದು, ಬಾಂಬ್ ಬೆದರಿಕೆ ಮೇಲ್ ಕಂಡು ಕೂಡಲೇ ಸ್ಥಳೀಯ ಪೊಲೀಸರಿಗೆ ಕರೆ ಮಾಡಿ ಕಚೇರಿ ಸಿಬ್ಬಂದಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬೈಯಪ್ಪನಹಳ್ಳಿ ಪೊಲೀಸರು ಹಾಗೂ ಬಾಂಬ್ ಸ್ಕ್ವಾಡ್ ಭೇಟಿ ನೀಡಿದ್ದು ಪರಿಶೀಲನೆ ನಡೆಸಲಾಗ್ತಿದೆ. ತಮಿಳುನಾಡಿನಲ್ಲಿ ಚುನಾವಣೆ ಇರುವ ಹಿನ್ನೆಲೆ ಕೆಲ ದುಷ್ಕರ್ಮಿಗಳು ಬೆದರಿಕೆ ಮೇಲ್ ಮೂಲಕ ಕಿಡಿಗೇಡಿ ಕೃತ್ಯವೆಸಗಿರುವ ಶಂಕೆ ವ್ಯಕ್ತವಾಗಿದೆ. ಮೇಲ್ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ಅಪರಿಚಿತನಿಗಾಗಿ ಶೋಧ ನಡೆಸಿದ್ದಾರೆ.

ಮಹಿಳೆಯ ಮೇಲೆ ಹಲ್ಲೆ

ಬೆಂಗಳೂರು: ಸಿಲಿಕಾನ್ ಸಿಟಿಯ ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅತ್ಯಂತ ಭೀಕರ ಘಟನೆಯೊಂದು ನಡೆದಿದೆ. ಮನೆಯಲ್ಲಿ ಯುವಕನ ಜೊತೆಗಿದ್ದಾಳೆ ಎಂಬ ಕಾರಣಕ್ಕೆ ಪಶ್ಚಿಮ ಬಂಗಾಳ ಮೂಲದ ಮಹಿಳೆಯೊಬ್ಬರನ್ನು ಮನೆಯಿಂದ ಹೊರಗೆ ಎಳೆದು ತಂದು ಅಮಾನವೀಯವಾಗಿ ಹಲ್ಲೆ ನಡೆಸಲಾಗಿದೆ. ಏಪ್ರಿಲ್ 4ರಂದು ಶನಿವಾರ ರಾತ್ರಿ ನಡೆದ ಈ ಘಟನೆ ತಡವಾಗಿ ಬೆಳಕಿಗೆ ಬಂದಿದೆ.ಪಶ್ಚಿಮ ಬಂಗಾಳ ಮೂಲದ ಮಹಿಳೆಯು ವರ್ತೂರು ವ್ಯಾಪ್ತಿಯಲ್ಲಿ ವಾಸವಿದ್ದರು. ಏಪ್ರಿಲ್ 4ರಂದು ಆಕೆ ತನ್ನ ಮನೆಯಲ್ಲಿ ಯುವಕನೋರ್ವನ ಜೊತೆ ಇದ್ದಾಗ, ಕೆಲವು ವ್ಯಕ್ತಿಗಳು ನಮ್ಮ ಊರಿಗೆ ಬಂದು ವೇಶ್ಯಾವಾಟಿಕೆ ನಡೆಸುತ್ತೀರಾ? ಎಂದು ಕಿರುಚುತ್ತಾ ದಾಳಿ ಮಾಡಿದ್ದಾರೆ. ಯುವತಿಯನ್ನು ಮನೆಯಿಂದ ಹೊರಕ್ಕೆ ಎಳೆದು ತಂದು ಮನಬಂದಂತೆ ಥಳಿಸಿದ್ದಾರೆ. ಗಲಾಟೆ ಆರಂಭವಾಗುತ್ತಿದ್ದಂತೆಯೇ ಆಕೆಯ ಜತೆಗಿದ್ದ ಯುವಕ ಸ್ಥಳದಿಂದ ಓಡಿ ಹೋಗಿದ್ದಾನೆ. ಹಲ್ಲೆಗೊಳಗಾದ ಮಹಿಳೆ ತೀವ್ರವಾಗಿ ಗಾಯಗೊಂಡಿದ್ದು, ಘಟನೆಗೆ ಸಂಬಂಧಿಸಿದಂತೆ ವರ್ತೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಈಗಾಗಲೇ ಓರ್ವ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಮಹಿಳೆಯ ಖಾಸಗಿತನಕ್ಕೆ ಧಕ್ಕೆ ತಂದಿರುವ ಮತ್ತು ಹಲ್ಲೆ ನಡೆಸಿರುವ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕನ್ನಡ ನಾಟಕೋತ್ಸವ ಏ.6 ರಿಂದ 12 ವರಗೆ

ಬೆಂಗಳೂರು: ಉದಯಭಾನು ಕಲಾಸಂಘ ವತಿಯಿಂದ ಏ.6 ರಿಂದ 12 ವರಗೆ ಪ್ರತಿ ದಿನ ಸಂಜೆ 6.30ಕ್ಕೆ ನಗರದ ಕೆಂಪೇಗೌಡನಗರದ ಉದಯಭಾನ ಕಲಾಸಂಘದ ಸಂಸ್ಕೃತಿಕ ಭವನ ದಲ್ಲಿ ಕನ್ನಡ ನಾಟಕೋತ್ಸವ 2026 ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸದೆ. ಈ ವೇಳೆ ಏ.7ರಂದು ತಾಜ್ ಮಹಲಿನ ಟೆಂಡರ್, ಏ.8ಕ್ಕೆ ವಿಕಟವಿಲಾಸ, 9ಕ್ಕೆ ಧ್ರುವಸ್ವಾಮಿನಿ, 10ಕ್ಕೆ ಭಾಗವತರ ನಾಟಕ ಮಂಡಳಿ, 11ಕ್ಕೆ ಜಲಗಾರ, 12ಕ್ಕೆ ಹಗ್ಗದ ಕೊನೆ ನಾಟಕ ಪ್ರದರ್ಶನ ಮಾಡಲಾಗುವುದು. ಏ.12 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡಮಿ ಮಾಜಿ ಅಧ್ಯಕ್ಷ ಡಾ.ಬಿ.ವಿ. ರಾಜರಾಮ್, ಮಾಜಿ ಬಿಬಿಎಂಪಿ ಸದಸ್ಯ ಟಿ.ತಿಮ್ಮೇಗೌಡ, ಸಂಸ್ಥೆಯ ಅಧ್ಯಕ್ಷ ಶ್ರೀರಾಮೇಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಟೆಕಿ ವಿರುದ್ಧದ ಕೊಲೆ ಯತ್ನ ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ರೋಡ್ ರೇಜ್‌ಗೆ ಕ್ಷಮೆಯೇ ಇಲ್ಲ

ಬೆಂಗಳೂರು: ನಿರ್ಲಕ್ಷ್ಯದ ಚಾಲನೆಗೆ (ರೋಡ್ ರೇಜ್) ಕ್ಷಮೆಯೇ ಎಲ್ಲ ಎಂದು ಮೌಖಿಕವಾಗಿ ಹೇಳಿರುವ ಹೈಕೋರ್ಟ್ ಬೆಂಗಳೂರು ಸಂಚಾರ ದಟ್ಟಣೆ ತಾಳ್ಮೆ ಕಲಿಸಲಿದೆ. ಆದರೆ, ನಿಮಗೆ ಅದು ಇರಬೇಕು ಎಂದು ಸೋಮವಾರ ಮೌಖಿಕವಾಗಿ ಹೇಳಿತು.

ಕೊಡಿಗೆಹಳ್ಳಿಯ ಸುಕೃತ್ ಕೇಶವ್ ಗೌಡ ಅವರು ತಮ್ಮ ವಿರುದ್ಧದ ಕೊಲೆ ಯತ್ನ ಪ್ರಕರಣ ರದ್ದತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತಿರಸ್ಕರಿಸಿತು. ಅರ್ಜಿದಾರರ ಪರ ವಕೀಲ ಎಚ್.ಎಂ.ಗೋಪಾಲ್ ಇದು ರೋಡ್ ರೇಜ್ ಅಪಘಾತ. ಯಾವುದೇ ಹೇಳಿಕೆ ಇಲ್ಲದೇ ಕೊಲೆ ಯತ್ನ ಪ್ರಕರಣ ದಾಖಲಿಸಲಾಗಿದೆ. ಅರ್ಜಿದಾರರಿಗೆ ಯಾವುದೇ ದುರುದ್ದೇಶವಿರಲಿಲ್ಲ ಎಂದರು.

ಆಗ ಪೀಠವು ಮೊದಲು ಬಿಎನ್‌ಎಸ್ ಸೆಕ್ಷನ್ 109 (ಕೊಲೆ ಯತ್ನ) ಇರಲಿಲ್ಲ. ಆಮೇಲೆ ಅನುಮತಿ ಪಡೆದು ಪೊಲೀಸರು ಸರಿಯಾಗಿ ಪ್ರಕರಣ ದಾಖಲಿಸಿದ್ದಾರೆ. ಆರೋಪ ಪಟ್ಟಿ ಸಲ್ಲಿಕೆಯಾದ ಮೇಲೆ ಬನ್ನಿ, ರೋಡ್ ರೇಜ್ ಪ್ರಕರಣದಲ್ಲಿ ದುರುದ್ದೇಶವೇನು ನೋಡಬೇಕು? ಎಂದಿತು. ಅಲ್ಲದೇ, ಅರ್ಜಿದಾರರು ಸಾಫ್ಟ್‌ವೇರ್ ಎಂಜಿನಿಯರ್ ಸಾಫ್ಟ್ ಆಗಿ ಇರಬೇಕಾಗಿತ್ತು. ಅವರಿಗೆ ತಾಳ್ಮೆ ಇರಲಿಲ್ಲ ಎಂದರೆ ಏನೂ ಮಾಡೋಕೆ ಆಗಲ್ಲ. ಬೆಂಗಳೂರು ಸಂಚಾರ ದಟ್ಟಣೆ ತಾಳ್ಮೆ ಕಲಿಸಲಿದೆ. ಆದರೆ, ನಿಮಗೆ ಅದು ಇರಬೇಕು. ರೋಡ್ ರೇಜ್‌ಗೆ ಕ್ಷಮೆಯೇ ಇಲ್ಲ ಎಂದಿತು. ಅಂತಿಮವಾಗಿ ಆರೋಪ ಪಟ್ಟಿ ಸಲ್ಲಿಕೆಯಾದ ಮೇಲೆ ಅರ್ಜಿದಾರರು ಮತ್ತೊಮ್ಮೆ ಅದನ್ನು ಪ್ರಶ್ನಿಸಿ ಬರಬಹುದು. ಆ ಸ್ವಾತಂತ್ರ್ಯವನ್ನು ಅರ್ಜಿದಾರರಿಗೆ ಕಾಯ್ದಿರಿಸಿ, ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದು ಆದೇಶಿಸಿತು.

ಪ್ರಕರಣದ ಹಿನ್ನೆಲೆ: 2025ರ ಅಕ್ಟೋಬರ್ 26ರಂದು ಅಂಕಿತಾ ಪಾಟೀಲ್ ಮತ್ತು ವಿನೇಶ್ ದಂಪತಿಯು ಹೋಂಡಾ ಡಿಯೊ ಸ್ಕೂಟರ್‌ನಲ್ಲಿ ಪುತ್ರ ಕಲ್ಪ ಜೈನ್ ಕೂರಿಸಿಕೊಂಡು ತಿಂಡ್ಲುವಿನಿಂದ ಇಂದಿರಾನಗರಕ್ಕೆ ಹೊರಟಿದ್ದರು. ಎಂ.ಎಸ್. ರಾಮಯ್ಯ ಆಸ್ಪತ್ರೆಯ ಸಿಗ್ನಲ್ ಬಳಿ ಹಿಂದಿನಿಂದ ಬಂದ ಕೆಂಪು ಬಣ್ಣದ ಟಾಟಾ ಕವರ್‌ನಲ್ಲಿ ಬಂದ ಚಾಲಕ ವೇಗ ಮತ್ತು ಅಜಾಗರೂಕತೆಯಿಂದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದ. ಇದರಿಂದ ಸ್ಕೂಟರ್‌ನಲ್ಲಿದ್ದವರೆಲ್ಲರೂ ಕೆಳಗೆ ಬಿದ್ದು ಚಾಲಕ ವಿನೇಶ್‌ಗೆ ಎಡಭಾಗದ ರಿಬ್ಸ್‌ಗೆ ಪೆಟ್ಟಾಗಿತ್ತು. ಈ ಸಂಬಂಧ ಸದಾಶಿವನಗರ ಸಂಚಾರ ಠಾಣೆಯಲ್ಲಿ ಬಿಎನ್‌ಎಸ್ ಸೆಕ್ಷನ್ 281,125(ಎ) ಮತ್ತು ಮೋಟಾರು ವಾಹನ ಕಾಯಿದೆ ಸೆಕ್ಷನ್‌ಗಳಾದ 134 (ಎ ಮತ್ತು ಬಿ) ಮತ್ತು 187ರ ಅಡಿ ಪ್ರಕರಣ ದಾಖಲಿಸಲಾಗಿತ್ತು. ಕೃತ್ಯವು ಸದಾಶಿವನಗರ ಠಾಣೆಯ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಸಕ್ಷಮ ನ್ಯಾಯಾಲಯ ಮತ್ತು ಅಧಿಕಾರಿಗಳ ಅನುಮತಿ ಪಡೆದು ಪ್ರಕರಣವನ್ನು ಸದಾಶಿವನಗರ ಸಂಚಾರ ಠಾಣೆಯ ಪೊಲೀಸರು ಸದಾಶಿವನಗರ ಠಾಣೆಗೆ ಪ್ರಕರಣಗೆ ವರ್ಗಾಯಿಸಿದ್ದರು.

ಲೈಂಗಿಕ ಕಿರುಕುಳ; ಅಧಿಕಾರಿ ಅರ್ಜಿ ವಜಾ

ಬೆಂಗಳೂರು: ಕೇಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಬಿಐಎಎಲ್) ದಕ್ಷಿಣ ಕೊರಿಯಾದ ಯುವತಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬಿಐಎಎಲ್ ಸಿಬ್ಬಂದಿಯ ವಿರುದ್ಧ ದಾಖಲಾಗಿರುವ ಪ್ರಕರಣ ರದ್ದುಪಡಿಸಲು ಸೋಮವಾರ ಹೈಕೋರ್ಟ್ ನಿರಾಕರಿಸಿದೆ.

ಬಿಐಎಎಲ್ ಸಿಬ್ಬಂದಿ ಮೊಹಮ್ಮದ್ ಅಫಾನ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತಿರಸ್ಕರಿಸಿದೆ. ಸಂತ್ರಸ್ತೆಯು ಇನ್ನೊಂದು ದೇಶದ ಮಹಿಳೆ. ಅರ್ಜಿದಾರ ಏನು ಮಾಡಿದ್ದಾನೆ ಎಂಬುದನ್ನು ಆಕೆ ವಿವರಿಸಿದ್ದಾರೆ. ಆಕೆಯನ್ನು ಪುರುಷರ ಶೌಚಾಲಯಕ್ಕೆ ಕರೆದೊಯ್ದಿದ್ದೇಕೆ? ಎಂದು ಖಾರವಾಗಿ ಪ್ರಶ್ನಿಸಿತು.

ಸಂತ್ರಸ್ತೆಯನ್ನು ಪುರುಷರ ಶೌಚಾಲಯಕ್ಕೆ ಕರೆದೊಯ್ದು ಎರಡೂ ಕೈಗಳನ್ನು ಅರ್ಧ ಎತ್ತಿ (ಟಿ ಪೊಷಿಷನ್) ನಿಲ್ಲುವಂತೆ ಮಾಡಿ, ಆಕೆಯ ಅನುಮತಿ ಇಲ್ಲದೇ ಖಾಸಗಿ ಅಂಗಗಳನ್ನು ಮುಟ್ಟಿದ್ದೀರಿ. ನೀವೆಂಥಾ ಅಧಿಕಾರಿ? ನಿಮ್ಮನ್ನು ಸುಮ್ಮನೆ ಬಿಡಬೇಕೇ? ಹೇಳಿ. ಮಹಿಳಾ ಶೌಚಾಲಯದಲ್ಲಿ ಬೇರೊಬ್ಬರು ಇದ್ದರು ಎಂದು ಸಮರ್ಥನೆ ಬೇರೆ ನೀಡಿದ್ದೀರಿ? ಎಂದು ಪೀಠವು ಆಕ್ರೋಶ ವ್ಯಕ್ತಪಡಿಸಿ, ಅರ್ಜಿ ವಜಾಗೊಳಿಸಿತು.

ಪ್ರಕರಣದ ಹಿನ್ನೆಲೆ

2026ರ ಜನವರಿ 19ರಂದು ದಕ್ಷಿಣ ಕೊರಿಯಾದ 32 ವರ್ಷದ ಯುವತಿಯು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೊರಿಯಾಗೆ ತೆರಳು ಆಗಮಿಸಿದ್ದರು. ಇಮಿಗ್ರೇಷನ್ ತಪಾಸಣೆ ಮುಗಿಸಿ ತೆರಳುವ ವೇಳೆ ಬಿಐಎಎಲ್‌ನ ಸಿಬ್ಬಂದಿಯೊಬ್ಬರು ಆಕೆಯ ಬಳಿ ಬಂದು ವಿಮಾನ ಟಿಕೆಟ್ ಪರಿಶೀಲಿಸಿದ್ದರು. ಆನಂತರ ಆಕೆಯ ಚೆಕ್ ಇನ್ ಬ್ಯಾಗೇಜ್ ಕುರಿತು ಸಮಸ್ಯೆ ಇದೆ ಎಂದು ಹೇಳಿ, ಬ್ಯಾಗ್ ತಪಾಸಣೆ ಮಾಡಿ ಅದರಲ್ಲಿ ಬೀಫ್ ಶಬ್ದ ಬಂದಿದೆ ಎಂದು ತಿಳಿಸಿ, ಮತ್ತೆ ತಪಾಸಣೆಗೆ ಹೋದರೆ ಸಮಯವಾಗುತ್ತದೆ. ನಿಮ್ಮನ್ನು ವೈಯಕ್ತಿಕವಾಗಿ ತಪಾಸಣೆ ಮಾಡಬೇಕು ಎಂದು ಹೇಳಿ ಪುರುಷರ ಶೌಚಾಲಯಕ್ಕೆ ಕರೆದೊಯ್ದು, ಅಲ್ಲಿ ಸಂತ್ರಸ್ತೆಯ ಅನುಮತಿ ಪಡೆಯದೇ ಆಕೆಯ ಎದೆಯ ಭಾಗ ಮತ್ತು ಹಿಂಭಾಗ ಮುಟ್ಟಿದ್ದನು. ಆನಂತರ ಆಕೆಯ ಎದೆಯನ್ನು ಪುನಾ ಸ್ಪರ್ಶಿಸಿ, ಒತ್ತಿ ಹಿಡಿದಿದ್ದನು. ನಂತರ ತಿರುಗಿಕೊಳ್ಳಲು ಹೇಳಿ, ಮತ್ತೆ ಹಿಂದಿನಿಂದ ಎದೆಯನ್ನು ಸ್ಪರ್ಶಿಸಿದ್ದನು. ಇದಕ್ಕೆ ಒಪ್ಪದೇ ಇದ್ದಾಗ ಏಕಾಏಕಿ ಅಪ್ಪಿಕೊಂಡು ಧನ್ಯವಾದ ಹೇಳಿ, ಕಳುಹಿಸಿದ್ದನು ಎಂದು ಸಂತ್ರಸ್ತೆಯು ದೂರಿನಲ್ಲಿ ತಿಳಿಸಿದ್ದಾರೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮು 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮು)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBGM00436696 1. ಮುದಾಸಿರ್ ರೆಹಮಾನ್ ಪ್ರೊಪ್ರೈಟರ್ ಎಂ ಕ್ಯೂಬ್ ಎಂಟರ್‌ಪ್ರೈಸಸ್ 2. ಉಮ್ಮೆ ಮಿಸ್ಬಾ	ಅನೆಕಲ್ ಯೋಜನಾ ಪ್ರಾಧಿಕಾರದಿಂದ (ಬಿಎಂಆರ್‌ಡಿಎ) APA/LAO/57/2008-2009, ದಿನಾಂಕ 11.10.2010 ರಂದು ಅನುಮೋದಿಸಲ್ಪಟ್ಟ ''ಸೂರ್ಯ ರೆಸಿಡೆನ್ಸಿ'' ಎಂಬ ವಸತಿ ಲೇಔಟ್‌ನಲ್ಲಿ, ಸರ್ವೆ ನಂ. 95/2 ರಿಂದ ರೂಪುಗೊಂಡ ಸೈಟ್ ನಂ. 180 ರ ಪೂರ್ವ ಭಾಗದಲ್ಲಿರುವ ವಸತಿ ಖಾಲಿ ಜಾಗ, ಇದರ ಕೆಳಗೆ, ಮೇಲ್ಮೈ ಮೇಲೆ ಅಥವಾ ಅದರ ಅಡಿಯಲ್ಲಿ ಇರುವ ಎಲ್ಲಾ ಹಕ್ಕುಗಳು ಮತ್ತು ಸಂಬಂಧಿತ ಸೌಲಭ್ಯಗಳೊಂದಿಗೆ, ಕಿಥಗಾನಹಳ್ಳಿ ಗ್ರಾಮ, ಅತ್ತಿಬೆಲೆ ಹೋಬಳಿ, ಅನೇಕಲ್ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ - 560099, ಕರ್ನಾಟಕದಲ್ಲಿ ಸ್ಥಿತವಾಗಿದೆ ಮತ್ತು ಈ ಭೂಮಿಯ ಎಲ್ಲಾ ಭಾಗಗಳು.	05.03.2026	ದಿನಾಂಕ 20.03.2026 ರಂತೆ ರೂ. 36,33,931.88/- (ರೂಪಾಯಿ ಮೂವತ್ತ ಆರು ಲಕ್ಷ ಮೂವತ್ತ ಮೂರು ಸಾವಿರದ ಒಂಬೈನೂರ ಮೂವತ್ತ ಒಂದು ಮತ್ತು ಪೈಸೆ ಎಂಬತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮು 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮು)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBGM00458915 1. ವೆಂಕಟೇಶ್ ಮಳಲಿ ಅಲಿಯಾಸ್ ವೆಂಕಟೇಶ್ ಬಿ ಮಲಾಲಿ ಮಾಲೀಕ ಕಾರ್ಡ್ ಸೆಂಟರ್ 2. ಗಂಗಾಧರ ವಿ.ವಿ. ಅಲಿಯಾಸ್ ವಿ ವಿ ಗಂಗಾಧರ (ಖಾತರಿದಾರ)	3 ಬಿಎಚ್‌ಕೆ ಅಪಾರ್ಟ್‌ಮೆಂಟ್, ಫ್ಲಾಟ್ ನಂ. ಸಿ-1005, 10ನೇ ಮಹಡಿಯಲ್ಲಿ ಇರುವದು, ಒಟ್ಟು ಸೂಪರ್ ಬಿಲ್ಟ್-ಅಪ್ ಪ್ರದೇಶ 1660 ಚದರ ಅಡಿ (ಇದರಲ್ಲಿ ಅಪಾರ್ಟ್‌ಮೆಂಟ್‌ಗಳ ನಡುವಿನ ಸಾಮಾನ್ಯ ಗೋಡೆಗಳು ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಹಂಚಿಕೆ ಸೇರಿದೆ) ಹೊಂದಿದ್ದು ''ಪ್ರಗತಿ ಅಂಬರ್'' ಎಂಬ ಕಟ್ಟಡದಲ್ಲಿ ಇರುವದು. ಜೊತೆಗೆ, ಅವಿಭಜಿತ ಹಂಚಿಕೆ, ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿ 498 ಚದರ ಅಡಿ ವರೆಗೆ, ಸರ್ವೆ ನಂ. 13/1, 13/3, 13/12 (ಹಳೆಯ ಸರ್ವೆ ನಂ. 13/4), 13/5, 14/1ಗಳಲ್ಲಿ, ಕಮ್ಮಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಅನೇಕಲ್ ತಾಲೂಕು, ಬೆಂಗಳೂರು-560100, ಕರ್ನಾಟಕದಲ್ಲಿ ನೆಲೆಗೊಂಡಿದ್ದು, ಜೊತೆಗೆ, ನೆಲಮಹಡಿ/ಬೇಸ್ಮೆಂಟ್ ನಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳವೂ ಒಳಗೊಂಡಿದೆ ಮತ್ತು ಈ ಭೂಮಿಯ ಎಲ್ಲಾ ಭಾಗಗಳು.	04.06.2021	ದಿನಾಂಕ 12.03.2026 ರಂತೆ ರೂ. 88,01,831.44/- (ರೂಪಾಯಿ ಎಂಬತ್ತ ಎಂಟು ಲಕ್ಷ ಒಂದು ಸಾವಿರದ ಎಂಟು ನೂರ ಮೂವತ್ತ ಒಂದು ಮತ್ತು ಪೈಸೆ ನಲವತ್ತ ನಾಲ್ಕು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್‌ಗಾಗಿ
(ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)
ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ

यूनियन बैंक ऑफ इंडिया Union Bank of India
भारत सरकार का उपक्रम A Government of India Undertaking
ಜಯನಗರ ಮುಖ್ಯ ಶಾಖೆ
#429/31, ರಾಮಕೃಷ್ಣ ಬಿಲ್ಡಿಂಗ್, 30ನೇ ಕ್ರಾಸ್, 4ನೇ ಬ್ಲಾಕ್, ಜಯನಗರ ಬೆಂಗಳೂರು-560011.

Ref: RO/BLR/CRLD/002/2026-27 Dt: 06.04.2026

ಗೆ, ಶ್ರೀ. ಸಿ. ಕುಮಾರಸ್ವಾಮಿ ಬಿನ್ ಚಿಕ್ಕಮನೆ ಮತ್ತು ಶ್ರೀಮತಿ ಆಶಾ ಕುಮಾರಸ್ವಾಮಿ, # 16, ಶ್ರೀ ದ್ವಾರಕಾ ನಿವಾಸ, ಮಾಗಡಿ ಮುಖ್ಯ ರಸ್ತೆ, ಗೊಲ್ಲರಹಟ್ಟಿ, ಬೆಂಗಳೂರು ಉತ್ತರ, ವಿಶ್ವನೀಡಂ, ಬೆಂಗಳೂರು-560091.

ವಿಷಯ: 7 ದಿನಗಳಲ್ಲಿ ಆಸ್ತಿಯನ್ನು ಖಾಲಿ ಮಾಡಲು ಮತ್ತು ವಸ್ತುಗಳನ್ನು ತೆಗೆದುಹಾಕಲು ಸೂಚನೆ.

ಆತ್ಮೀಯ ಸರ್/ಮೇಡಂ

ನಾವು ಶ್ರೀ **ಕುಮಾರಸ್ವಾಮಿ ಸಿ ಮತ್ತು ಶ್ರೀಮತಿ ಆಶಾ ಕುಮಾರಸ್ವಾಮಿ** ಅವರ ಹೆಸರಿನಲ್ಲಿರುವ ಸಾಲ ಖಾತೆ ಸಂಖ್ಯೆ **159930100012251** ಅನ್ನು ಇಲ್ಲಿ ಉಲ್ಲೇಖಿಸಲಾಗಿದ್ದು, ಈ ಕೆಳಗಿನ ಸ್ಥಿರಾಸ್ತಿಯ ಆಸ್ತಿ ನಂ.42/2, ಅಸೆಸ್‌ಮೆಂಟ್ ನಂ.18/7, ಖಾತಾ ನಂ.1111, ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ಅಳತೆ: 65 ಅಡಿ (ಒಟ್ಟು ವಿಸ್ತೀರ್ಣ 1950 ಚದರ ಅಡಿ) ಬಿಬಿಎಂಪಿ ವಾರ್ಡ್ ನಂ.40, ಬೆಂಗಳೂರರ ವ್ಯಾಪ್ತಿಯಲ್ಲಿದೆ.

ಮೇಲಿನ ಆಸ್ತಿಯನ್ನು **27.03.2026** ರಂದು ಇ-ಹರಾಜಿನ ಮೂಲಕ ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಬ್ಯಾಂಕಿನ ಹಕ್ಕನ್ನು ಚಲಾಯಿಸಿ ಮಾರಾಟ ಮಾಡಲಾಗುವುದು. ಭದ್ರತಾ ಆಸ್ತಿಯ ಮಾರಾಟದ ಪರಿಣಾಮವಾಗಿ, ನೀವು ಇನ್ನು ಮುಂದೆ ಸದರಿ ಆಸ್ತಿಯನ್ನು ಆಕ್ರಮಿಸಿಕೊಳ್ಳಲು ಅಥವಾ ಅದನ್ನು ಉಳಿಸಿಕೊಳ್ಳಲು ಅರ್ಹರಾಗಿರುವುದಿಲ್ಲ. ಬ್ಯಾಂಕ್ ಈಗಾಗಲೇ **29.09.2025** ರಂದು ರಜೆ ಸೂಚನೆ ನೀಡಿದೆ ಮತ್ತು ಆಸ್ತಿಯ ಭೌತಿಕ ಸ್ವಾಧೀನವನ್ನು **14.11.2025** ರಂದು ತೆಗೆದುಕೊಳ್ಳಲಾಗಿದೆ. ಆದಾಗ್ಯೂ, ನೀವು ಇಲ್ಲಿಯವರೆಗೆ ಆವರಣವನ್ನು ಖಾಲಿ ಮಾಡಲು ಮತ್ತು ನಿಮ್ಮ ವಸ್ತುಗಳನ್ನು ತೆಗೆದುಹಾಕಲು ವಿಫಲರಾಗಿದ್ದೀರಿ.

ಆದ್ದರಿಂದ, ಈ ಸೂಚನೆ ತಲುಪಿದ 7 ದಿನಗಳ ಒಳಗೆ ನಿಮ್ಮ ಎಲ್ಲಾ ವಸ್ತುಗಳನ್ನು ಆಸ್ತಿಯಿಂದ ತೆಗೆದುಹಾಕಲು ಮತ್ತೊಮ್ಮೆ ನಿಮ್ಮನ್ನು ಕೇಳಿಕೊಳ್ಳಲಾಗಿದೆ, ಇಲ್ಲದಿದ್ದರೆ ಬ್ಯಾಂಕ್ ಯಾವುದೇ ಸೂಚನೆ ಇಲ್ಲದೆ ಅವುಗಳನ್ನು ತೆಗೆದುಹಾಕಲು ಅಗತ್ಯ ಕ್ರಮ ಕೈಗೊಳ್ಳುತ್ತದೆ. ಸೂಚನೆ ಅವಧಿ ಮುಗಿದ ನಂತರ ಆವರಣದಲ್ಲಿ ಉಳಿದಿರುವ ವಸ್ತುಗಳಿಗೆ ಯಾವುದೇ ನಷ್ಟ ಅಥವಾ ಹಾನಿ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ.

ಇದನ್ನು ಅಂತಿಮ ಸೂಚನೆ ಎಂದು ಪರಿಗಣಿಸಬಹುದು.

ನಿಮ್ಮ ವಿಶ್ವಾಸಿ
ಅಧಿಕೃತ ಅಧಿಕಾರಿ
ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಎಸ್‌ಸಿಎಲ್) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) (ಐಹೆಚ್‌ಎಫ್‌ಎಲ್))** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 (2002 ರ 54) (''ಹೇಳಿದ ಕಾಯಿದೆ'') ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 (''ಹೇಳಿದ ನಿಯಮಗಳು'') ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **19.05.2021** ರಂದು ಕರೆದು ಸಾಲಗಾರ **ವಂದನಾ ಕುಮಾರ್ ಥಾಕೂರ್ ಮತ್ತು ಬಿ.ರಾಜೇಶ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **13.05.2022** ರ ವರೆಗೆ **ರೂ. 28,57,701.48 (ಇಪ್ಪತ್ತೆಂಟು ಲಕ್ಷದ ಐವತ್ತೆಂಟು ಸಾವಿರದ ಏಳುನೂರ ಒಂದು ರೂಪಾಯಿಗಳು ಮತ್ತು ನಲವತ್ತೆಂಟು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAN00501590** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **14.05.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಮತ್ತು ತರುವಾಯ, **ಎಸ್‌ಸಿಎಲ್** ದಿನಾಂಕ **01.12.2022** ರ ನಿಯೋಜನೆ ಒಪ್ಪಂದದ ಮೂಲಕ ಸಾಲಗಾರರು/ಖಾತರಿದಾರರು/ಅಡಮಾನದಾರರು ಬಾಕಿ ಇರುವ ಮತ್ತು ಪಾವತಿಸಬೇಕಾದ ಸಾಲಗಳಿಗೆ ಸಂಬಂಧಿಸಿದಂತೆ ತನ್ನ ಎಲ್ಲಾ ಹಕ್ಕುಗಳು, ಶೀರ್ಷಿಕೆ, ಬಡ್ಡಿ ಮತ್ತು ಪ್ರಯೋಜನಗಳನ್ನು **ಎಸ್‌ಸಿಎಲ್** ನಿಂದ ಸಾಲಗಾರರು/ಖಾತರಿದಾರರು/ಅಡಮಾನದಾರರು/ಅಡಮಾನದಾರರು ನೀಡಿದ ಸೆಕ್ಯುರಿಟಿಗಳಿಂದ ಉದ್ಭವಿಸುವ ಆಧಾರವಾಗಿರುವ ಸೆಕ್ಯುರಿಟಿಗಳೊಂದಿಗೆ **ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್** ಭದ್ರತಾ ರಸೀದಿಗಳನ್ನು ಹೊಂದಿರುವವರ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-II, ಟ್ರಸ್ಟ್ ("ಆರ್ಸಿಲ್")** ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ, ಸದರಿ ನಿಯೋಜನೆಯ ದೃಷ್ಟಿಯಿಂದ, **ಆರ್ಸಿಲ್** ಈಗ **ಎಸ್‌ಸಿಎಲ್** ಬದಲಿಗೆ ಬದಲಿಯಾಗಿ ನಿಂತಿದೆ ಮತ್ತು ಸಾಲಗಾರ / ಖಾತರಿದಾರರು / ಅಡಮಾನದಾರರು/ಅಡಮಾನದಾರರು ಪಡೆದಿರುವ ಸೌಲಭ್ಯಗಳಿಗಾಗಿ ಸಾಲಗಾರ / ಖಾತರಿದಾರರು / ಅಡಮಾನದಾರರು ಕಾರ್ಯಗತಗೊಳಿಸಿದ ಮತ್ತು ರಚಿಸಿದ ಭದ್ರತಾ ಹಿತಾಸಕ್ತಿಯ ಜಾರಿ ಸೇರಿದಂತೆ ಹಣಕಾಸು ದಾಖಲೆಗಳ ಅಡಿಯಲ್ಲಿ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಪ್ರಾರಂಭಿಸಲು / ಮುಂದುವರಿಯಲು ಆರ್ಸಿಲ್‌ಗೆ ಅರ್ಹತೆ ಇರುತ್ತದೆ.

ಸಾಲಗಾರ / ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) **ಆರ್ಸಿಲ್‌ಗೆ** ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **02.04.2026** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ **ಆರ್ಸಿಲ್‌ಗೆ** ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **05.03.2026** ರ ವರೆಗೆ **ರೂ. 43,40,946.51 (ನಲವತ್ತಮೂರು ಲಕ್ಷದ ನಲವತ್ತು ಸಾವಿರದ ಒಂಬೈ ನೂರ ನಲವತ್ತಾರು ರೂಪಾಯಿಗಳು ಮತ್ತು ಐವತ್ತೊಂದು ಪೈಸೆ ಮಾತ್ರ)** ಮೊತ್ತಕ್ಕೆ , ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **06.03.2026** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

''ಆರ್ಯನ್ ಫೌಂಟೈನ್ ಸ್ಕ್ವೇರ್'' ಎಂದು ಕರೆಯಲ್ಪಡುವ ವಸತಿ ಸಂಕೀರ್ಣದ ನಾಲ್ಕನೇ ಮಹಡಿಯಲ್ಲಿರುವ ಮೂರು (3) ಮಲಗುವ ಕೋಣೆ ಅಪಾರ್ಟ್ಮೆಂಟ್ ಬೇರಿಂಗ್ ಸಂಖ್ಯೆ 536, 924 ಚದರ ಅಡಿಗಳ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ. ಹಳೆಯ ಸರ್ವೆ ಸಂಖ್ಯೆ 38 ಮತ್ತು ಹೊಸ ಸರ್ವೆ ಸಂಖ್ಯೆ 38/1 ಮತ್ತು ಹಳೆಯ ಸರ್ವೆ ಸಂಖ್ಯೆ 39, ಹೊಸ ಸರ್ವೆ ಸಂಖ್ಯೆ 39/408 ರ ಭೂ ಬೇರಿಂಗ್ನಲ್ಲಿ ನಿರ್ಮಿಸಲಾಗಿದೆ, ಇದು ಇಂಡಲೇಬಲ್ ಗ್ರಾಮ, ಅಟ್ಟಿಬೆಲೆ ಹೋಬಳಿ, ಬೆಂಗಳೂರು ನಗರ ಜಿಲ್ಲೆ ಬೆಂಗಳೂರು - 562107, ಕರ್ನಾಟಕದಲ್ಲಿದೆ, ತೆರೆದ ಕಾರ್ ಪಾರ್ಕಿಂಗ್ನೊಂದಿಗೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ : 02.04.2026 ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
ಸ್ಥಳ : ಬೆಂಗಳೂರು (ಆರ್ಸಿಲ್-ಸಿಪಿಎಸ್- II, ಟ್ರಸ್ಟ್‌ನ ಟ್ರಸ್ಟಿ)

ಸಮಾಚಾರ ಸಣ್ಣದಲ್ಲ

3 ದಿನ ತಂತ್ರಜ್ಞಾನ ಪ್ರದರ್ಶನ ಮೇಳ

ಬೆಂಗಳೂರು: ಆಟೋಮೇಷನ್, ರೋಬೋಟಿಕ್ಸ್ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಮೂಲ ಸೌಕರ್ಯ, ಸೈಬರ್ ಸುರಕ್ಷತೆ, ಸ್ಮಾರ್ಟ್ ಜೀವನ ಶೈಲಿ ಪರಿಹಾರಗಳನ್ನೊಳಗೊಂಡ ಆರು ಪ್ರಮುಖ ಉದ್ಯಮ ವಲಯಗಳ ಮೂರು ದಿನಗಳ ಅತಿ ದೊಡ್ಡ ಪ್ರದರ್ಶನ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್ ಅಧ್ಯಕ್ಷ ಡಿ.ಪಿ.ದಾನಪ್ಪ ಪ್ರದರ್ಶನ ಮೇಳಕ್ಕೆ ಚಾಲನೆ ನೀಡಿದರು. ಆಟೋ ಮೊಬೈಲ್ ಡೀಲರ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್, ಅಸೋಸಿಯೇಷನ್ ಆಫ್ ಇನ್ವರ್ಮೇಷನ್ ಟೆಕ್ನಾಲಜಿ ಸುನಿಲ್, ಮಾಹಿತಿ ತಂತ್ರಜ್ಞಾನ ಸಂಘದ ಅಧ್ಯಕ್ಷ ಕೇತನ್ ಬಿ. ಶಾ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಡಿ.ಪಿ.ದಾನಪ್ಪ, ಪ್ಯಾನ್ ಇಂಡಿಯಾ ಉತ್ಪನ್ನಗಳನ್ನು ಇಲ್ಲಿ ಪ್ರದರ್ಶಿಸುತ್ತಿದ್ದು, ಹೊಸ ತಂತ್ರಜ್ಞಾನ, ನಾವೀನ್ಯತೆಯನ್ನು ಒಳಗೊಂಡಿರುವ ಪ್ರದರ್ಶನ ಕೈಗಾರಿಕಾ ವಲಯಕ್ಕೆ ಅತ್ಯಂತ ಅಗತ್ಯವಾಗಿದೆ. ಮಧ್ಯಪ್ರಾಚ್ಯದಲ್ಲಿನ ಸಂಘರ್ಷದಿಂದಾಗಿ ಕೈಗಾರಿಕಾ ವಲಯಕ್ಕೆ ಸಾಕಷ್ಟು ಸಮಸ್ಯೆಗಳಿದ್ದು, ಈ ಸಂದರ್ಭದಲ್ಲಿ ಕೈಗಾರಿಕೆಗಳಿಗೆ ಪುಷ್ಟಿ ನೀಡುವ ಕೆಲಸ ಆಗಬೇಕಾಗಿದೆ ಎಂದರು. ಆಟೋ ಮೊಬೈಲ್ ಡೀಲರ್ ಅಸೋಸಿಯೇಷನ್ ಅಧ್ಯಕ್ಷರಾದ ವೆಂಕಟೇಶ್ ಮಾತನಾಡಿ, ಹೊಸದಾಗಿ ಉದ್ಯಮ ಪ್ರವೇಶಿಸುವವರಿಗೆ ಇಲ್ಲಿ ಅತ್ಯುತ್ತಮ ಅವಕಾಶಗಳಿದ್ದು, ಕೈಗಾರಿಕಾ ಕ್ಷೇತ್ರದಲ್ಲಿ ಹೊಸ ಆಯಾಮವೇ ಇಲ್ಲಿ ಅನಾವರಣಗೊಂಡಿದೆ ಎಂದರು.

ಜನಗಣತಿ ತರಬೇತಿ ಕಾರ್ಯ ಪರಿಶೀಲನೆ

ಬೆಂಗಳೂರು: ಭಾರತದ ಜನಗಣತಿ-2027 ಕುರಿತಂತೆ ಜನಗಣತಿ ಕಾರ್ಯಕ್ಕೆ ನೇಮಿಸಲಾದ ಸಿಬ್ಬಂದಿ ತರಬೇತಿಗೆ ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 6 ವಿಧಾನಸಭಾ ಕ್ಷೇತ್ರದ 6 ಕೇಂದ್ರಗಳಲ್ಲಿ ತರಬೇತಿ ಕಾರ್ಯ ಹಮ್ಮಿಕೊಳ್ಳಲಾಗಿದೆ. ಚಾಮರಾಜಪೇಟೆಯ ಆದರ್ಶ ಕಾಲೇಜು ಹಾಗೂ ಚಿಕ್ಕಪೇಟೆ ಕ್ಷೇತ್ರದ ಜಯನಗರದ 2ನೇ ಬ್ಲಾಕ್‌ನಲ್ಲಿರುವ ಕಮ್ಯುನಿಟಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕಾಲೇಜಿಗೆ ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ, ಚೋಳನ್ ಭೇಟಿ ನೀಡಿ ತರಬೇತಿಗೆ ಕೈಗೊಂಡ ಸಿದ್ಧತೆ ಹಾಗೂ ತರಬೇತಿ ನಡೆಯುತ್ತಿರುವ ಬಗ್ಗೆ ಪರಿಶೀಲನೆ ನಡೆಸಿ ಅಗತ್ಯ ಸೂಚನೆ ನೀಡಿದರು. ಈ ವೇಳೆ ಅಭಿವೃದ್ಧಿ ಅಪರ ಆಯುಕ್ತ ದಲ್ಜಿತ್ ಕುಮಾರ್, ಕಂದಾಯ ಅಪರ ಆಯುಕ್ತ ಕೆ.ರಂಗನಾಥ್, ಜಂಟಿ ಆಯುಕ್ತ ಹೇಮಂತ್ ಶರಣ್ ಇದ್ದರು. ಆಯಾ ವಿಭಾಗಗಳ ಕಂದಾಯ ಅಧಿಕಾರಿಗಳು, ಕಾರ್ಯಪಾಲಕ ಎಂಜಿನಿಯರ್‌ಗಳು ತರಬೇತಿ ಕೇಂದ್ರಗಳ ಉಸ್ತುವಾರಿ ನಿರ್ವಹಿಸುತ್ತಿದ್ದಾರೆ.

ಜನಗಣತಿ ಸಿಬ್ಬಂದಿಗೆ 25,000 ಗೌರವಧನ

ಬೆಂಗಳೂರು: ಜಿಬಿಎ ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜನಗಣತಿ-2027 ಮನೆಪಟ್ಟಿ ಮತ್ತು ವಸತಿ ಗಣತಿ ಕಾರ್ಯವು ಏ.16 ರಿಂದ ಮೇ 15 ರವರೆಗೆ ನಡೆಯಲಿದ್ದು, ಈ ಸಮೀಕ್ಷಾ ಕಾರ್ಯಕ್ಕೆ 4678 ಗಣತಿದಾರರು, 798 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ. ಬೆಂಗಳೂರಿನ ಗಾರ್ವೆಬಾವಿ ಪಾಳ್ಯದಲ್ಲಿ ಇರುವ ಆಕ್ಸ್ ಫರ್ಡ್ ಎಂಜಿನಿಯರಿಂಗ್ ತರಬೇತಿ ಕೇಂದ್ರದಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ನೀಡಲಾಗುತ್ತಿದ್ದ ತರಬೇತಿಯನ್ನು ಪರಿಶೀಲಿಸಿದ ಪ್ರಧಾನ ಜನಗಣತಿ ಅಧಿಕಾರಿ ಹಾಗೂ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ ಎನ್ ರಮೇಶ್ ರವರು ಪರಿಶೀಲನೆ ನಡೆಸಿ ಮಾತನಾಡಿ, ಜನಗಣತಿ ಸಿಬ್ಬಂದಿಗೆ ಏ.6 ರಿಂದ 8ರವರೆಗೆ ಒಟ್ಟು 16 ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ. ರಾಷ್ಟ್ರೀಯ ಜನಗಣತಿ 2027 ಕಾರ್ಯಕ್ಕೆ ನಿಯೋಜಿಸಲಾದ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಮನೆ ಪಟ್ಟಿ ಸಿದ್ಧತೆಗಾಗಿ 9000 ರು. ಹಾಗೂ ಜನ ಗಣತಿ ಕಾರ್ಯಕ್ಕಾಗಿ 16000 ರು. ಒಟ್ಟು 25000 ರು. ಗಳ ಗೌರವಧನ ಭಾರತ ಸರಕಾರದ ಆದೇಶದಂತೆ ನೀಡಲಾಗುತ್ತದೆ. ಅಲ್ಲದೆ ದಿನಕ್ಕೆ 400 ರು.ನಂತೆ ತರಬೇತಿ ಭತ್ಯೆ ಸಹ ನೀಡಲಾಗುತ್ತದೆ.

2 ದಿನಗಳ ವಿನೂತನ ಕಲಾ ಪ್ರದರ್ಶನ

ಬೆಂಗಳೂರು: ಭಗವಾನ್ ಶಿವನ ತತ್ವ, ದಿವ್ಯಾನುಭವ ನೀಡುವ ಆಧುನಿಕ ಅಮೂರ್ತ ಕಲಾತ್ಮಕ ಅಭಿವ್ಯಕ್ತಿಗಳ ಮೂಲಕ ಅನ್ವೇಷಿಸುವ, ಆತ್ಮೀಯತೆ, ತತ್ವಶಾಸ್ತ್ರ ಮತ್ತು ನವೀನ ಕಲಾ ದೃಷ್ಟಿಯ ಸಂಯೋಗವನ್ನು ಅನುಭವಿಸುವ ಅಮೂರ್ತ ರೂಪದಲ್ಲಿನ ಭಗವಾನ್ ಶಿವ ಎಂಬ ಎರಡು ದಿನಗಳ ವಿನೂತನ ಕಲಾ ಪ್ರದರ್ಶನ ದ್ವಿಜಾ ಆರ್ಟ್ ಗ್ಯಾಲರಿಯಲ್ಲಿ ಪ್ರಾರಂಭವಾಗಿದೆ. ಈ ಕಲಾಕೃತಿಗಳು ಭಗವಾನ್ ಶಿವನ ಅಪರೂಪದ ಅಮೂರ್ತ ಕಲಾ ನಿರೂಪಣೆ ಒಳಗೊಂಡಿದೆ. ಇದು ಕಲೆ, ಆಧ್ಯಾತ್ಮ ಮತ್ತು ದಾನಶೀಲತೆಯ ಸಂಯೋಜನೆಯಾಗಿದೆ. ಜತೆಗೆ ಸಮಾಜ ಕಲ್ಯಾಣಕ್ಕೆ ಸಮರ್ಪಿತ ವಿನೂತನ ಪ್ರದರ್ಶನ ಇದಾಗಿದೆ. ಕಲಾ ಪ್ರದರ್ಶನಕ್ಕೆ ಎಡಿಜಿಪಿ ಸವಿತಾ ಶ್ರೀನಿವಾಸ್ ಚಾಲನೆ ನೀಡಿ ಮಾತನಾಡಿ, ಶಿವನನ್ನು ವಿವಿಧ ರೂಪಗಳಲ್ಲಿ ಕಲಾವಿದರು ವಿನೂತನವಾಗಿ ಕಲಾರಚನೆಯನ್ನು ಮೂಡಿಸಿದ್ದಾರೆ. ಮೊಬೈಲ್ ಸಾಧನಗಳ ಯುಗದಲ್ಲಿ ಮಕ್ಕಳನ್ನು ಕಲಾ ಪ್ರಕಾರಗಳತ್ತ ಸೆಳೆಯಲು ಇಂತಹ ಕಲಾ ರಚನೆಗಳು ಪ್ರೇರಣೆಯಾಗಿವೆ ಎಂದರು. ಇಸ್ಕಾನ್ ಸಂಸ್ಥೆಯ ಸಾರ್ವಜನಿಕ ಸಂಪರ್ಕ ವಿಭಾಗದ ಮುಖ್ಯಸ್ಥ ಮತ್ತು ವ್ಯವಸ್ಥಾಪಕ ನಿರ್ದೇಶಕ ಮಹೋತ್ಸಹ ಚೈತನ್ಯ ದಾಸ್ ಮಾತನಾಡಿ, ಇದೊಂದು ಆಳವಾದ ಧಾರ್ಮಿಕ ಚಿಂತನೆಯನ್ನು ಒಳಗೊಂಡಿದೆ. ಕಲಾವಿ ದರು ಸದಾ ಕಾಲ ವಿಭಿನ್ನವಾಗಿ ಆಲೋಚಿಸುವ ಪ್ರವೃತ್ತಿಯವರು. ಮುಂದಿನ ಹಂತದಲ್ಲಿ ಕೃಷ್ಣನ ಲೀಲೆಗಳನ್ನು ಕುರಿತಾದ ಅನಂತ ದ ಕೃಷ್ಣ ಕಂಟಿನ್ಯೂ ಎಂಬ ಮತ್ತೊಂದು ಪ್ರದರ್ಶನವನ್ನು ನಮ್ಮ ಸಂಸ್ಥೆ ಯ ಸಹಯೋಗದಲ್ಲಿ ಏರ್ಪಡಿಸಲಾಗುವುದು ಎಂದರು.

ಪರಿಹಾರ ಸಿಗದಿದ್ದರೆ ಕೇಂದ್ರ, ರಾಜ್ಯ ಸಚಿವರು, ಸಂಸದರ ಕಾರ್ಯಕ್ರಮದ ಮುಂದೆ ಕಪ್ಪು ಬಾವುಟ ಪ್ರದರ್ಶನ

ಸಚಿವ ಮುನಿಯಪ್ಪ ಮನೆಗೆ ಚಾಲಕರ ಮುತ್ತಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಆಟೋ ಎಲ್‌ಪಿಜಿ ಗ್ಯಾಸ್ ಕೊರತೆ ದಿನೇ ದಿನೆ ಗಂಭೀರ ರೂಪ ಪಡೆದುಕೊಳ್ಳುತ್ತಿದ್ದು, ಸಾವಿರಾರು ಆಟೋ ಚಾಲಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಗ್ಯಾಸ್ ಸಮಸ್ಯೆಯಿಂದ ಬೇಸತ್ತ ಆಟೋ ಚಾಲಕರು ಸೋಮವಾರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರ ಮನೆಗೆ ಮುತ್ತಿಗೆ ಹಾಕುವ ಪ್ರಯತ್ನ ನಡೆಸಿದರು. ಮುಂಜಾನೆ 4 ಗಂಟೆಯಿಂದಲೇ ಗ್ಯಾಸ್ ಬಂಕ್‌ಗಳ ಮುಂದೆ ಕಾಯುತ್ತಿದ್ದರೂ ಗ್ಯಾಸ್ ಲಭ್ಯವಾಗುತ್ತಿಲ್ಲ. ಸಾಮಾನ್ಯವಾಗಿ 10 ಲೀಟರ್ ತುಂಬಿಸಬೇಕಾದ ಗ್ಯಾಸ್ ಬದಲು ಕೇವಲ 5 ಲೀಟರ್ ಮಾತ್ರ ಭರ್ತಿ ಮಾಡಲಾಗುತ್ತಿದೆ. ಇದಲ್ಲದೆ, ಕೆಲವು ಖಾಸಗಿ ಗ್ಯಾಸ್ ಬಂಕ್‌ಗಳು ಮಾರುಕಟ್ಟೆ ದರಕ್ಕಿಂತ ಹೆಚ್ಚು ಹಣ ವಸೂಲಿ ಮಾಡುತ್ತಿವೆ. ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಹಿಡಿಯುವಂತೆ ಒತ್ತಾಯಿಸಿ, ನೂರಾರು ಆಟೋಗಳು ಸಚಿವರ ನಿವಾಸದ ಮುಂದೆ ಸಾಲುಗಟ್ಟಿ ನಿಂತಿದ್ದವು. ಕೆಲ ಸಮಯ ಪ್ರತಿಭಟನೆ ಕೂಡ ನಡೆಸಿದ ಚಾಲಕರನ್ನು ಪೊಲೀಸರು ತಡೆದಿದ್ದು, ಸಚಿವರ ಮನೆ ಸುತ್ತಮುತ್ತ ಭಾರೀ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪ್ರತಿಭಟನೆ ವೇಳೆ ಸಚಿವ ಮುನಿಯಪ್ಪ ಚಾಲಕರನ್ನು ಭೇಟಿ ಮಾಡಿ ನಂತರ ಪ್ರತಿಕ್ರಿಯೆ ನೀಡಿದ ಅವರು, ಸಮಸ್ಯೆ ಪೆಟ್ರೋ ಲಿಯಂ ಉತ್ಪನ್ನಗಳ ಪೂರೈಕೆಯಲ್ಲಿದೆ. ಅದರ ಜವಾಬ್ದಾರಿ ಸಂಪೂರ್ಣವಾಗಿ ಕೇಂದ್ರ ಸರಕಾರದ ಅಧೀನ ದಲ್ಲಿದ್ದು, ರಾಜ್ಯ ಸರಕಾರದ ಪಾತ್ರ ಸೀಮಿತವಾಗಿದೆ. ನಾವು ಕೇವಲ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೇವೆ. ಪೂರೈಕೆಯಲ್ಲಿ ವ್ಯತ್ಯಾಸ ಉಂಟಾದರೆ ಕೇಂದ್ರದೊಂದಿಗೆ ಚರ್ಚೆ ನಡೆಸು ವುದರ ಹೊರತು ನಮ್ಮ ಕೈಯಲ್ಲಿ ಹೆಚ್ಚಿನ ಅಧಿಕಾರ ಇಲ್ಲ. ಖಾಸಗಿ ಗ್ಯಾಸ್ ಏಜೆನ್ಸಿಗಳೊಂದಿಗೆ ಚರ್ಚಿಸಿ ದರ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇನೆ ಜತೆಗೆ, ಉಪ ಚುನಾವಣೆ ಮುಗಿದ ಬಳಿಕ ಏಪ್ರಿಲ್ 10ರಂದು ಕೇಂದ್ರದ ತೈಲ ಕಂಪನಿಗಳ ಅಧಿಕಾರಿ ಗಳೊಂದಿಗೆ ಸಭೆ ನಡೆಸಿ ಪರಿಶೀಲಿಸಲಾಗುವುದು ಎಂದರು.

ವಾಣಿಜ್ಯ ಸಿಲಿಂಡರ್ ಸಮಸ್ಯೆ ಹಾಗೂ ಸಿಎನ್‌ಜಿ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿದ ವಾಟಾಳ್ ನಾಗರಾಜ್ ಅವರು ಸೋಮವಾರ ಪ್ರತಿಭಟನೆ ನಡೆಸಿದರು.

> ಪೆಟ್ರೋಲ್ ಹಾಗೂ ಗ್ಯಾಸ್ ಬಂಕ್‌ಗಳಿಗೆ ಲೈಸೆನ್ಸ್ ನೀಡುವುದು ಮತ್ತು ಪೂರೈಕೆ ವ್ಯವಸ್ಥೆ ಸಂಪೂರ್ಣವಾಗಿ ಕೇಂದ್ರದ ಅಧೀನದಲ್ಲಿದೆ. ರಾಜ್ಯ ಸರಕಾರದ ಕಡೆಯಿಲ್ಲ.
> -ಕೆ.ಎಚ್.ಮುನಿಯಪ್ಪ
> ಆಹಾರ, ನಾಗರಿಕ ಪೂರೈಕೆ ಸಚಿವ

> ನಾವು ದಿನಗೂಲಿ ಮೇಲೆ ಬದುಕೋವರು. ಬೆಳಗ್ಗೆ ಆಟೋ ತೆಗೆದುಕೊಂಡು ಹೊರಡಿದರೆ ಗ್ಯಾಸ್ ಸಿಗ್ತಿಲ್ಲ. ಸಿಕ್ಕರೂ ದರ ಜಾಸ್ತಿ, ನಮ್ಮ ಆದಾಯಕ್ಕಿಂತ ಖರ್ಚು ಹೆಚ್ಚಾಗಿದೆ. ಒಂದು ದಿನ ಕೆಲಸ ಮಾಡೋಕೆ ಹೋದ್ರೆ ಅರ್ಧ ಸಮಯ ಗ್ಯಾಸ್‌ಗಾಗಿ ಸಾಲಿನಲ್ಲಿ ನಿಲ್ಲೋ ಪರಿಸ್ಥಿತಿ ಬಂದಿದೆ. ಪ್ರಯಾಣಿಕರು ಕಡಿಮೆ ದರ ಕೇಳ್ತಾರೆ, ಆದರೆ ನಮಗೆ ಗ್ಯಾಸ್ ದುಬಾರಿ ಆಗಿದೆ. ಹೀಗಾದ್ರೆ ಮನೆ ನಡೆಸೋದು ಹೇಗೆ?
> -ಸಂಗಮೇಶ್ , ಆಟೋ ಚಾಲಕ

ಸರಕಾರಕ್ಕೆ ಏಪ್ರಿಲ್ 10ರವರೆಗೆ ಗಡುವು

ಸಚಿವರ ಉತ್ತರದಿಂದ ತೃಪ್ತಿಗೊಂಡಿಲ್ಲ. ಸಾವಿರಾರು ಜನರು ನಿತ್ಯದ ಜೀವನೋಪಾಯಕ್ಕೆ ಪರದಾಡುತ್ತಿದ್ದಾರೆ. ಜನರ ಕಷ್ಟಕ್ಕೆ ಸ್ಪಂದಿಸುವ ಬದಲು ಉಪಚುನಾವಣೆಯ ವಿಷಯ ಪ್ರಸ್ತಾಪಿಸಿರುವುದು ಸರಿಯಲ್ಲ. ಜತೆಗೆ ನಾಡು-ನುಡಿ ಪರವಾಗಿ ಮಾತನಾಡುವ ಕೇಂದ್ರ, ರಾಜ್ಯ ಸಚಿವರು, ಸಂಸದರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆಟೋ ಚಾಲಕ ಸಮಸ್ಯೆಗಳಿಗೆ ಸ್ಪಂದನೆ ಸಿಗದಿದ್ದರೆ ಏಪ್ರಿಲ್ 10 ರಿಂದ ಕೇಂದ್ರ, ರಾಜ್ಯ ಸಚಿವರು, ಸಂಸದರ ಕಾರ್ಯಕ್ರಮದ ಮುಂದೆ ಆಟೋ ತೆಗೆದು ಕೊಂಡು ಹೋಗಿ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು ಎಂದು ಪೀಸ್ ಆಟೋ ಚಾಲಕರ ರಾಜ್ಯಾಧ್ಯಕ್ಷ ರಘು ನಾರಾಯಣಗೌಡ ತಿಳಿಸಿದರು.

ಕಮಲ ಕಚೇರಿಯಲ್ಲಿ ಗ್ಯಾಸ್ ಟ್ರಬಲ್

ಬೆಂಗಳೂರು: ಮಲ್ಲೇಶ್ವರಂನಲ್ಲಿರುವ ಬಿಜೆಪಿ ರಾಜ್ಯ ಕಚೇರಿ ಜಗನ್ನಾಥ ಭವನದಲ್ಲಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಸಿಗದೆ ಸಿಬ್ಬಂದಿ ಊಟಕ್ಕೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಒಂದೆಡೆ ಗ್ಯಾಸ್ ಅಭಾವವಿಲ್ಲ ಎಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೇಳುತ್ತಿದೆ. ಇನ್ನೊಂದೆಡೆ ಬಿಜೆಪಿ ಕಚೇರಿಯಲ್ಲೇ ಗ್ಯಾಸ್ ಸಿಗದೇ ಸಿಬ್ಬಂದಿ ಪರದಾಡುತ್ತಿದ್ದು ಭಾನುವಾರದಿಂದ ಒಲೆಯಲ್ಲಿ ಅಡುಗೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಜೆಪಿ ಕಚೇರಿ ಸಿಬ್ಬಂದಿ ಸೇರಿದಂತೆ ಬರುವ ನಾಯಕರು, ಮುಖಂಡರು ಹಾಗೂ ಮಾಧ್ಯಮದವರಿಗೂ ಮಧ್ಯಾಹ್ನ ಊಟ ಸೇರಿ ತಿಂಡಿಗಳು ಸಮಯಕ್ಕೆ ಸರಿಯಾಗಿ ಸಿಗುತ್ತಿರುತ್ತದೆ. ಗ್ಯಾಸ್ ಅಭಾವದಿಂದಾಗಿ ಈಗ ಅಲ್ಲಿನ ಸಿಬ್ಬಂದಿಯೂ ಕೂಡ ಒಲೆ ಊಟ ಮಾಡುವ ಸ್ಥಿತಿಗೆ ಬಂದಿದ್ದು, ಇನ್ನು ಒಂದೆರಡು ದಿನದಲ್ಲಿ ಗ್ಯಾಸ್ ದೊರೆಯಲಿದೆ ಎಂದು ತಿಳಿದುಬಂದಿದೆ.

ವಾಣಿಜ್ಯ ಸಿಲಿಂಡರ್ ಪೂರ್ಣವಾಗಿ ಅಭಾವವಾಗಿದೆ. ಇದರಿಂದಾಗಿ ಸಿಬ್ಬಂದಿ ಒಲೆ ಮೊರೆ ಹೋಗಿ ಪರದಾಟ ನಡೆಸುತ್ತಿದ್ದಾರೆ. ಕೆಲವರು ವಿದ್ಯುತ್ ಬಯೋ ಒಲೆ ಅಥವಾ (ಮರದ ಗುಂಡಿಗಳು) ಸ್ಟೋವ್ ಬಳಸಿ ಅಡುಗೆ ಮಾಡುತ್ತಿದ್ದಾರೆ. ಇದು ಸಾಮಾನ್ಯವಾಗಿ ಕಚೇರಿಯಲ್ಲಿ ದಿನನಿತ್ಯದ ಊಟ-ತಿಂಡಿ ತಯಾರಿಕೆಗೆ ತೊಂದರೆ ಉಂಟು ಮಾಡಿದೆ. ಕೇಂದ್ರ ಸರಕಾರ ದೇಶೀಯ ಗ್ಯಾಸ್ ಸರಬರಾಜನ್ನು ಆದ್ಯತೆ ನೀಡುತ್ತಿದೆ ಎಂದು ಹೇಳುತ್ತಿದೆ. ಆದರೆ ವಾಣಿಜ್ಯ ಬಳಕೆಗೆ ತೀವ್ರ ಕೊರತೆ ಎದುರಾಗಿದೆ. ಈ ಪರಿಸ್ಥಿತಿಯು ಸಾಮಾನ್ಯ ಜನರ ಮನೆಗಳಲ್ಲಿ ಅಡುಗೆಗೂ ಸಮಸ್ಯೆ ಉಂಟುಮಾಡುತ್ತಿದೆ.

ಆಟೋ ಎಲ್‌ಪಿಜಿ ಕೊರತೆ; ಬೆಲೆ ಏರಿಕೆ ಬಿಸಿ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಎಲ್‌ಪಿಜಿಯ ತೀವ್ರ ಕೊರತೆಯುಂಟಾಗಿದ್ದು ಬೆಲೆ ಏರಿಕೆಯ ಬಿಸಿ ತಟ್ಟಿದೆ.

ನಗರದಲ್ಲಿರುವ 160ಕ್ಕೂ ಅಧಿಕ ಪೆಟ್ರೋಲ್ ಬಂಕ್‌ಗಳಲ್ಲಿ, ನಿಲ್ದಾಣಗಳಲ್ಲಿ ಕೇವಲ 30 ನಿಲ್ದಾಣಗಳಲ್ಲಿ ಮಾತ್ರ ಆಟೋ ಎಲ್‌ಪಿಜಿ ಲಭ್ಯವಿದ್ದು, ಆಟೋ ಎಲ್‌ಪಿಜಿಗಾಗಿ ಆಟೋ ಚಾಲಕರು ಕಿ.ಮೀ ವರೆಗೆ ಕ್ಯೂ ನಿಲ್ಲುವುದು ಮುಂದುವರಿದಿದೆ. ಇದರ ಪರಿಣಾಮ ಗ್ರಾಹಕರ ಮೇಲಾಗುತ್ತಿದ್ದು, ಬೆಲೆ ಏರಿಕೆಯ ಆತಂಕ ಶುರುವಾಗಿದೆ. ನಗರದಲ್ಲಿ ಸ್ಟಾಕ್‌ಗಳು ಕಡಿಮೆಯಾಗುತ್ತಿರುವುದರಿಂದ ಕಡಿಮೆ ಆಟೋ ಗಳು ಸಂಚಾರ ನಡೆಸುವುದರಿಂದ ಮೀಟರ್‌ಗಿಂತ ಹೆಚ್ಚಿನ ದರದ ಬೇಡಿಕೆಗಳನ್ನಿಡುವ ಸಾಧ್ಯತೆ ಹೆಚ್ಚಿದ್ದು, ಈಗಾಗಲೇ ಕೆಲವು ಆಟೋ ಚಾಲಕರು ದುಬಾರಿ ಬಾಡಿಗೆ ಪಡೆಯುವುದಕ್ಕೆ ಪ್ರಾರಂಭಿಸಿದ್ದಾರೆ.

ಭಾನುವಾರ ಹಲವು ಭಾಗಗಳಲ್ಲಿ ಗ್ಯಾಸ್ ಪಡೆಯಲು ಚಾಲಕರು ದಿನ ಪೂರ್ತಿ ಸರತಿ ಸಾಲಿನಲ್ಲಿ ಆಟೋ ನಿಲ್ಲಿಸಬೇಕಾದ ಪರಿಸ್ಥಿತಿ ಎದುರಾಗಿತ್ತು. ರಾಜಾಜಿ ನಗರದ ಎಲ್‌ಪಿಜಿ ನಿಲ್ದಾಣವೊಂದರಲ್ಲೇ ಕಿ.ಮೀಗಟ್ಟಲೆ ಕ್ಯೂ ನಿಂತಿದ್ದರು. ಅದರಲ್ಲೂ ಎಲ್‌ಪಿಜಿ ಬೆಲೆ ಏರಿಕೆ ಸಹ ಆಗಿರುವುದು ಆಟೋ ಚಾಲಕರನ್ನು ಹೈರಾಣಾಗಿಸಿದೆ. ಈ ಸಮಸ್ಯೆ ಎದುರಾಗುವುದಕ್ಕೂ ಮೊದಲು ಇಂಧನ ದರಗಳಲ್ಲಿ ವ್ಯತ್ಯಾಸವಿತ್ತು ಎಂದು ಚಾಲಕರು ಹೇಳಿದ್ದಾರೆ. ಆಟೋ ಎಲ್‌ಪಿಜಿ ದರವು ಲೀಟರ್‌ಗೆ 55 ರಿಂದ 60 ರು. ಇತ್ತು. ಆದರೆ, ಈಗ ಅದು ವಿವಿಧ ಖಾಸಗಿ ಬಂಕ್‌ಗಳಲ್ಲಿ ಲೀಟರ್‌ಗೆ 105 ರು., 120 ರು. ಮತ್ತು 130 ರು.ವರೆಗೆ ಇದೆ. ವಿವಿಧ ಭಾಗದಲ್ಲಿ ಆಟೋ ಎಲ್‌ಪಿಜಿಯ ಮಿತಿ ನಿಗದಿ ಮಾಡಲಾಗಿದೆ. ವಿವಿಧ ಬಂಕ್‌ಗಳಲ್ಲಿ ಕೇವಲ 10-12 ಲೀಟರ್‌ಗಳನ್ನು ಮಾತ್ರ ಕೊಡಲಾಗುತ್ತಿದೆ. ಇದರಿಂದ ಮತ್ತೆ ಆಟೋ ಎಲ್‌ಪಿಜಿಗಾಗಿ ಕ್ಯೂನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಸೃಷ್ಟಿ ಯಾಗಿದೆ ಎಂದು ಆಟೋ ಚಾಲಕರು ಅಸಹಾಯಕತೆ ತೋಡಿಕೊಂಡಿದ್ದಾರೆ.

ಆಟೋ ಎಲ್‌ಪಿಜಿ ಸರಬರಾಜು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಆಟೋ ಎಲ್‌ಪಿಜಿ ಸರಬರಾಜನ್ನು ಹೆಚ್ಚಿಸಿದೆ. ರಾಜ್ಯದಲ್ಲಿ ತೈಲ ಮಾರುಕಟ್ಟೆ ಕಂಪನಿಗಳು ಒಟ್ಟು 72 ಆಟೋ ಎಲ್ ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳನ್ನು ನಡೆಸುತ್ತಿವೆ. ಇದರಲ್ಲಿ ಇಂಡಿಯನ್ ಆಯಿಲ್ 55 ಸ್ಟೇಷನ್‌ಗಳನ್ನು ನಿರ್ವಹಿಸುತ್ತಿದೆ. 300ಕ್ಕೂ ಹೆಚ್ಚು ಖಾಸಗಿ ಎಎಲ್ ಡಿಎಸ್ ಗಳಿದ್ದರೂ, ಅವುಗಳಲ್ಲಿ ಸುಮಾರು ಶೇ.80ರಷ್ಟು ಕಾರ್ಯನಿರ್ವಹಿಸದಿರುವುದರಿಂದ ಸರಬರಾಜಿನಲ್ಲಿ ಕೊರತೆ ಉಂಟಾಗಿದೆ. ಸೀಮಿತ ಮೂಲಸೌಕರ್ಯ ಮತ್ತು ವಿತರಣೆ ಸಾಮರ್ಥ್ಯವೂ ಲಭ್ಯತೆ ಮೇಲೆ ಪರಿಣಾಮ ಬೀರುತ್ತಿವೆ ಎಂದು ಕಂಪನಿ ತಿಳಿಸಿದೆ.

ಬೆಲೆ ವ್ಯತ್ಯಾಸವೂ ಬೇಡಿಕೆ ಮೇಲೆ ಪ್ರಭಾವ ಬೀರಿದೆ. ಬೆಂಗಳೂರಿನಲ್ಲಿ ಸರಕಾರಿ ಪೆಟ್ರೋಲ್ ಬಂಕ್‌ಗಳಲ್ಲಿ ಆಟೋ ಎಲ್‌ಪಿಜಿ ಲೀಟರ್‌ಗೆ 89.52 ರು.ಗೆ ಲಭ್ಯವಿದ್ದರೆ, ಖಾಸಗಿ ಸ್ಟೇಷನ್‌ಗಳಲ್ಲಿ 99 ರು.ನಿಂದ 105 ರು.ವರೆಗೆ ಮಾರಾಟವಾಗುತ್ತಿದೆ. ಇದರಿಂದ ಸರಕಾರಿ ಬಂಕ್‌ಗಳಲ್ಲಿ ದೀರ್ಘ ಸಾಲಿನಲ್ಲಿ ಆಟೋಗಳು ನಿಂತಿರುವುದು ಕಂಡುಬರುತ್ತಿದೆ. ರಾಜ್ಯದಲ್ಲಿ ಸುಮಾರು ಶೇ.70 ಆಟೋ ರಿಕ್ಷಾಗಳು ಡ್ಯುಯಲ್ ಫ್ಯೂಯಲ್ ವ್ಯವಸ್ಥೆ ಹೊಂದಿರುವುದರಿಂದ ಅಗತ್ಯವಿದ್ದರೆ ತಾತ್ಕಾಲಿಕವಾಗಿ ಪೆಟ್ರೋಲ್ ಬಳಸುವಂತೆ ಇಂಡಿಯನ್ ಆಯಿಲ್ ಸಲಹೆ ನೀಡಿದೆ.

ಪ್ರತಿ ಪಾಲಿಕೆಗೆ ರಸ್ತೆ ಗುಂಡಿ ಮುಚ್ಚುವ ಯಂತ್ರ ಖರೀದಿಸಿ: ಮಹೇಶ್ವರ್ ರಾವ್

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿ ಪ್ರತಿನಗರ ಪಾಲಿಕೆಗೆ ಒಂದೊಂದು ರಸ್ತೆ ಗುಂಡಿ ಮುಚ್ಚುವ ಯಂತ್ರ ಖರೀದಿಸಬೇಕು ಎಂದು ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯ ವಿವಿಧ ಇಲಾಖೆಗಳೊಂದಿಗೆ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿ, ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಗೂ ವಿವಿಧ ಇಲಾಖೆಗಳು ರಸ್ತೆಗಳನ್ನು ಕತ್ತರಿಸಿ ಪುನಶ್ಚೇತನ ಮಾಡದಿರುವ ಕಡೆಗಳಲ್ಲಿ ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳುವ ಸಲುವಾಗಿ ಎಲ್ಲಾ ಐದು ನಗರ ಪಾಲಿಕೆಗಳಲ್ಲಿ ಒಂದೊಂದು ರಸ್ತೆ ಗುಂಡಿ ಮುಚ್ಚುವ ಯಂತ್ರ ಖರೀದಿಸಿ ಡಾಂಬರೀಕರಣ ಕಾರ್ಯ ನಡೆಸಬೇಕು ಎಂದು ಸೂಚಿಸಿದರು.

ನಗರದಲ್ಲಿ ವಿವಿಧ ಕಾಮಗಾರಿಗಳಿಗಾಗಿ ರಸ್ತೆ ಕತ್ತರಿಸಲು ಮಾರ್ಕ್ ಸಾಫ್ಟ್‌ವೇರ್ ತಂತ್ರಾಂಶದ ಮೂಲಕ ಅನುಮತಿ ಪಡೆದು, ಕಾಮಗಾರಿ ಪೂರ್ಣಗೊಂಡ ಬಳಿಕ ರಸ್ತೆ ದುರಸ್ತಿ ಮಾಡದಿದ್ದಲ್ಲಿ ಪಾಲಿಕೆಯಿಂದಲೇ ದುರಸ್ತಿ ಕಾರ್ಯ ಕೈಗೊಂಡು, ಅದರ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳಿಂದ ವಸೂಲಿ ಮಾಡಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ರಸ್ತೆ ಕತ್ತರಿಸಲು ಕೂಡಲೇ ಅನುಮತಿ ನೀಡಿ: ಗೇಲ್ ಗ್ಯಾಸ್ ಸಂಸ್ಥೆ ವತಿಯಿಂದ ಮಾರ್ಕ್ಸ್ ಸಾಫ್ಟ್‌ವೇರ್ ಮೂಲಕ ರಸ್ತೆ ಕತ್ತರಿಸಲು ಸಲ್ಲಿಸಿರುವ ಅರ್ಜಿಗಳಿಗೆ ತ್ವರಿತವಾಗಿ ಅನುಮತಿ ನೀಡಬೇಕು. ಅನುಮತಿ ನೀಡಿದ ನಂತರ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವುದರ ಜತೆಗೆ, ಕತ್ತರಿಸಿದ ರಸ್ತೆ ಭಾಗವನ್ನು ಸಂಸ್ಥೆಯವರಿಂದಲೇ ಪುನಶ್ವೇತನ ಮಾಡಿಸಬೇಕು ಎಂದು ಸೂಚಿಸಿದರು.

ನಗರದ ರಸ್ತೆ ಬದಿಗಳಲ್ಲಿ ಹಲವು ತಿಂಗಳುಗಳಿಂದ ನಿಲ್ಲಿಸಿರುವ ಅನಾಥ ವಾಹನಗಳನ್ನು ತೆರವುಗೊಳಿಸಲು ಕೂಡಲೇ ಟೋಯಿಂಗ್ ಕಾರ್ಯ ಪ್ರಾರಂಭಿಸಬೇಕು. ಈ ಸಂಬಂಧ ಉತ್ತರ ಕೇಂದ್ರ ನಗರ ಪಾಲಿಕೆಯಿಂದ ಈಗಾಗಲೇ ಟೋಯಿಂಗ್ ವಾಹನಗಳನ್ನು ಸಂಚಾರಿ ಪೊಲೀಸ್ ವಿಭಾಗಕ್ಕೆ ಹಸ್ತಾಂತರಿಸಲಾಗಿದೆ. ಉತ್ತರ ನಗರ ಪಾಲಿಕೆಯಿಂದ ಅನಾಥ ವಾಹನಗಳಿರುವ ರಸ್ತೆ ಪಟ್ಟಿಯನ್ನೂ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಇಂದಿನಿಂದಲೇ ಟೋಯಿಂಗ್ ಕಾರ್ಯ ಪ್ರಾರಂಭಿಸಲು ಸೂಚಿಸಿದರು.

ಮುಂಗಾರು ಪೂರ್ವ ಮಳೆ ಶೀಘ್ರದಲ್ಲೇ ಆರಂಭವಾಗಲಿರುವ ಹಿನ್ನೆಲೆಯಲ್ಲಿ, ರಾಜಕಾಲುವೆಗಳು ಹಾಗೂ ರಸ್ತೆ ಬದಿಯ ಶೋಲ್ಡರ್ ಡ್ರೈನ್‌ಗಳಲ್ಲಿ ಸಮರ್ಪಕವಾಗಿ ಹೂಳೆತ್ತುವ ಕಾರ್ಯವನ್ನು ಕೈಗೊಳ್ಳಬೇಕು. ಇದರಿಂದ ಮಳೆಗಾಲದಲ್ಲಿ ನೀರು ನಿಲ್ಲದಂತೆ ಹಾಗೂ ಸಮಸ್ಯೆಗಳು ಉಂಟಾಗದಂತೆ ನೋಡಿಕೊಳ್ಳಲು ಸೂಚಿಸಿದರು.

ಈ ವೇಳೆ ಬಿಡಿಎ ಆಯುಕ್ತ ಮಣಿವಣ್ಣನ್, ನಗರ ಪಾಲಿಕೆಗಳ ಆಯುಕ್ತರುಗಳಾದ ರಾಜೇಂದ್ರ ಚೋಳನ್, ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಡಿ.ಎಸ್., ಡಾ. ರಾಜೇಂದ್ರ ಕೆ.ವಿ., ಎಂಜಿನಿಯರಿಂಗ್ ಪ್ರಧಾನ ಅಭಿಯಂತರರಾದ ಪ್ರಹ್ಲಾದ್, ಎಲ್ಲಾ ಮುಖ್ಯ ಅಭಿಯಂತರರು ಹಾಗೂ ಮೆಟ್ರೋ, ಡಲ್ಟ್, ಬಿಡಿಎ, ಕೆ-ರೈಡ್, ರೈಲ್ವೇ, ಎನ್.ಎಚ್.ಎ.ಐ ಸೇರಿದಂತೆ ಇತರ ಇಲಾಖೆಗಳ ಅಧಿಕಾರಿಗಳು ಇದ್ದರು.

ಜಲಮಂಡಳಿಯಿಂದ ಒಟಿಎಸ್ ಯೋಜನೆ ಆರಂಭ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಒನ್ ಟೈಮ್ ಸೆಟಲ್‌ಮೆಂಟ್ ಯೋಜನೆಯ ಪ್ರಕ್ರಿಯೆಯನ್ನು ಅಧಿಕೃತವಾಗಿ ಆರಂಭಿಸಿದೆ ಎಂದು ಅಧ್ಯಕ್ಷ ಡಾ. ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ದೀರ್ಘಕಾಲದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರ ಅನುಕೂಲಕ್ಕಾಗಿ ಒಟಿಎಸ್ ಆರಂಭಿಸಲಾಗಿದೆ. ಈ ಬಾರಿಯ ನೀರಿನ ಬಿಲ್ ಜತೆಗೆ ಒಟಿಎಸ್ ಯೋಜನೆಯಡಿಯಲ್ಲಿ ಬರುವ ಗ್ರಾಹಕರಿಗೆ ಪಾವತಿ ಮಾಹಿತಿಯನ್ನೊಳಗೊಂಡಂತೆ ನೋಟಿಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ಜಲಮಂಡಳಿ ವ್ಯಾಪ್ತಿಯಲ್ಲಿ ಸುಮಾರು 11 ಲಕ್ಷ ನೀರಿನ ಸಂಪರ್ಕಗಳ ಪೈಕಿ, 5.11 ಲಕ್ಷ ಗ್ರಾಹಕರು ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ. 2026ರ ಫೆಬ್ರವರಿ ಅಂತ್ಯದಲ್ಲಿ ಒಟ್ಟು ಬಾಕಿ ಮೊತ್ತ 851.33 ಕೋಟಿಗಳಾಗಿದ್ದು, ಇದರಲ್ಲಿ ಅಸಲು ಮೊತ್ತ 539.43 ಕೋಟಿ ಹಾಗೂ ಬಡ್ಡಿ ರು. 311.90 ಕೋಟಿ ಸೇರಿದೆ. ಈ ಬೃಹತ್ ಬಾಕಿಯನ್ನು ಸುಲಭವಾಗಿ ಪಾವತಿಸಲು ಹಾಗೂ ಗ್ರಾಹಕರ ಮೇಲಿನ ಆರ್ಥಿಕ ಹೊರೆ ತಗ್ಗಿಸಲು ಏಪ್ರಿಲ್‌ನಿಂದ ಜೂನ್‌ವರೆಗೆ 3 ತಿಂಗಳುಗಳ ಕಾಲ ಒಟಿಎಸ್ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ ಎಂದರು.

ಬಿಲ್ ಜತೆ ಸಮಗ್ರ ಮಾಹಿತಿ: ಯೋಜನೆಯ ಯಶಸ್ವಿ ಜಾರಿಗೆ ಈಗಾಗಲೇ ಎಲ್ಲಾ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಒಟಿಎಸ್ ಯೋಜನೆಗೆ ಅರ್ಹರಾಗಿರುವ ಗ್ರಾಹಕರಿಗೆ ಈ ತಿಂಗಳ ನೀರಿನ ಬಿಲ್ ಜತೆಯಲ್ಲಿಯೇ ಸಮಗ್ರ ಮಾಹಿತಿಯನ್ನು ಒದಗಿಸಲಾಗುವುದು. ಬಾಕಿ ಮೊತ್ತ, ಮನ್ನಾ ಆಗುವ ಬಡ್ಡಿ, ಪಾವತಿಸಬೇಕಾದ ಅಂತಿಮ ಮೊತ್ತ, ಪಾವತಿಸುವ ವಿಧಾನ ಹಾಗೂ ಯೋಜನೆಯ ಮಾನದಂಡಗಳ ಸಂಪೂರ್ಣ ವಿವರಗಳನ್ನು ಒಳಗೊಂಡಿರುವ ಪ್ರತ್ಯೇಕ ಪತ್ರವನ್ನು ಬಿಲ್ ಜೊತೆಯಲ್ಲೇ ನೀಡಲಾಗುವುದು ವಿವರಿಸಿದ್ದು, ಬಹುದಿನಗಳಿಂದ ನೀರಿನ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರು, ಬಡ್ಡಿ ಮನ್ನಾದ ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ಅಸಲು ಹಣವನ್ನು ಪಾವತಿಸುವ ಮೂಲಕ ಮಂಡಳಿಯೊಂದಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಆರ್ಡರ್ಲಿಗೆ ಹೊರಗುತ್ತಿಗೆ ಆಧಾರದ ಸಿಬ್ಬಂದಿ ನಿಯೋಜನೆ

ಬೆಂಗಳೂರು: ಪೊಲೀಸ್ ಇಲಾಖೆಯಲ್ಲಿ ಆರ್ಡರ್ಲಿ ವ್ಯವಸ್ಥೆ ಪರಿಷ್ಕರಣೆ ಮಾಡಲಾಗಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಸಿಬ್ಬಂದಿ ನಿಯೋಜನೆ ಮಾಡಲಾಗುತ್ತಿದೆ.

ಪ್ರಸ್ತುತ ಆರ್ಡರ್ಲಿ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟಿರುವ ಪೊಲೀಸ್ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಹೊಸ ವ್ಯವಸ್ಥೆಯ ಪ್ರಕಾರ, ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ಪಡೆದು, ನಿಗದಿತ ಆರ್ಡರ್ಲಿ ಭತ್ಯೆ ಬಳಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಎಲ್ಲಾ ಘಟಕಾಧಿಕಾರಿಗಳಿಗೆ ಈ ಆದೇಶ ಪಾಲಿಸಲು ಸೂಚಿಸಲಾಗಿದ್ದು, ಅಗತ್ಯ ಕ್ರಮ ಕೈಗೊಂಡು 30.04.2026ರೊಳಗೆ ಪಾಲನಾ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ. ಈ ಆದೇಶವು ಪೊಲೀಸ್ ಇಲಾಖೆಯ ಆಡಳಿತದಲ್ಲಿ ಪ್ರಮುಖ ಬದಲಾವಣೆಯಾಗಿ ಪರಿಗಣಿಸಲ್ಪಟ್ಟಿದ್ದು, ಇಲಾಖೆಯ ಕಾರ್ಯ ಚಟುವಟಿಕೆಗಳಲ್ಲಿ ಶಿಸ್ತಿನೊಂದಿಗೆ ಕಾರ್ಯನಿರ್ವಹಿಸಲು ನೆರವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತರಬೇತಿ ಕಾರ್ಯ ಪರಿಶೀಲಿಸಿದ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ

ಜವಾಬ್ದಾರಿಯಿಂದ ಗಣತಿ ನಿರ್ವಹಿಸಿ

ಬೆಂಗಳೂರು: ಪಶ್ಚಿಮ ನಗರ ಪಾಲಿಕೆಯ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಜನಗಣತಿ 2027 ಕಾರ್ಯಕ್ರಮದ ಅಂಗವಾಗಿ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಆಯೋಜಿಸಲಾದ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ತರಬೇತಿ ಕಾರ್ಯದಲ್ಲಿ ಪಾಲ್ಗೊಂಡು ಅಗತ್ಯ ಮಾರ್ಗದರ್ಶನ ನೀಡಿದರು.

ಮೊದಲು ಮಲ್ಲೇಶ್ವರ ವಿಭಾಗದ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ತರಬೇತಿ ನಡೆಯುತ್ತಿದ್ದ ತರಗತಿಯಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರೊಂದಿಗೆ ಕುಳಿತುಕೊಂಡು ತರಬೇತಿ ಕ್ರಮಗಳನ್ನು ಸಮಗ್ರವಾಗಿ ವೀಕ್ಷಿಸಿದರು. ತರಬೇತಿಯ ಗುಣಮಟ್ಟ, ವಿಷಯ ವಸ್ತುಗಳ ಅರ್ಥೈಸುವಿಕೆ ಹಾಗೂ ಕಾರ್ಯಪದ್ಧತಿಯ ಅನುಷ್ಠಾನ ಕುರಿತು ಮಾಹಿತಿ ಪಡೆದುಕೊಂಡರು. ಈ ವೇಳೆ ಮಾತನಾಡಿದ ಅವರು, ಜನಗಣತಿ ದೇಶದ ಅತ್ಯಂತ ಮಹತ್ವದ ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಪ್ರತಿಯೊಬ್ಬ ಗಣತಿದಾರರು ತಮ್ಮ ಕರ್ತವ್ಯಗಳನ್ನು ಅತ್ಯಂತ ಜವಾಬ್ದಾರಿಯಿಂದ, ನಿಷ್ಠೆಯಿಂದ ಮತ್ತು ನಿಖರತೆಯಿಂದ ನಿರ್ವಹಿಸಬೇಕು ಎಂದರು.

ತರಬೇತಿ ಕೇಂದ್ರದಲ್ಲಿ ಗಣತಿದಾರರೊಂದಿಗೆ ಸಂವಾದ ನಡೆಸಿ, ಅವರ ಅನುಭವಗಳು ಹಾಗೂ ಅಭಿಪ್ರಾಯಗಳನ್ನು ಆಲಿಸಿದರು. ಟೀ ಸೇವನೆಯ ವೇಳೆ ಎಲ್ಲರೂ ತಪ್ಪದೇ ಸ್ವಯಂ ಗಣತಿ ಪ್ರಕ್ರಿಯೆಯನ್ನು ಸರಿಯಾಗಿ ಅನುಸರಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸೂಚಿಸಿದರು. ಡಿಜಿಟಲ್ ವಿಧಾನಗಳ ಬಳಕೆ, ಮಾಹಿತಿಯ ನಿಖರತೆ ಹಾಗೂ ಸಮಯ ಪಾಲನೆಯ ಮಹತ್ವವನ್ನು ವಿಶೇಷವಾಗಿ ಒತ್ತಿ ಹೇಳಿದರು.

ರಾಜಾಜಿನಗರದ ಕೆ.ಎಲ್.ಇ. ನಿಜಲಿಂಗಪ್ಪ ಕಾಲೇಜಿಗೆ ಭೇಟಿ ನೀಡಿ, ಅಲ್ಲಿನ ತರಬೇತಿ ಕಾರ್ಯವನ್ನು ಪರಿಶೀಲಿಸಿ ಅಗತ್ಯ ಸೂಚನೆಗಳನ್ನು ನೀಡಿದರು. ಗೋವಿಂದರಾಜನಗರ ವಿಭಾಗದ ಗಣತಿದಾರರು ಹಾಗೂ ಮೇಲ್ವಿಚಾರಕರೊಂದಿಗೆ ಭೋಜನ ಮಾಡಿ, ಅವರೊಂದಿಗೆ ಸ್ನೇಹ ಪೂರ್ಣವಾಗಿ ಮಾತುಕತೆ ನಡೆಸಿ, ಕಾರ್ಯನಿರ್ವಹಣೆಯಲ್ಲಿ ಎದುರಾಗುವ ಸವಾಲುಗಳು ಹಾಗೂ ಅವುಗಳಿಗೆ ಪರಿಹಾರಗಳ ಬಗ್ಗೆ ಚರ್ಚಿಸಿದರು. ಜನಗಣತಿ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಎಲ್ಲರೂ ಸಮನ್ವಯದಿಂದ ಮತ್ತು ಸಕ್ರಿಯವಾಗಿ ಭಾಗವಹಿಸುವಂತೆ ಸಿಬ್ಬಂದಿಗೆ ನಿರ್ದೇಶನ ನೀಡಿದರು.

ವಿಶ್ವಗುರು ಬಸವೇಶ್ವರರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಸಚಿವ ಈಶ್ವರ ಖಂಡ್ರೆ

ಬಸವತತ್ವ ಪ್ರಸಾರ, ಪ್ರಚಾರ ಇಂದಿನ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಮಸಮಾಜದ ನಿರ್ಮಾಣಕ್ಕೆ ಕ್ರಾಂತಿಯನ್ನೇ ಮಾಡಿದ ಬಸವಣ್ಣನವರ ತತ್ವಾದರ್ಶಗಳು ಸಾರ್ವಕಾಲಿಕವಾಗಿದ್ದು, ಬಸವ ತತ್ವಗಳ ಪ್ರಚಾರ, ಪ್ರಸಾರ ಇಂದಿನ ಅಗತ್ಯವಾಗಿದೆ ಎಂದು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ವಿಶ್ವಗುರು ಬಸವೇಶ್ವರರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣಿಗಾಗಿ, ಹೊನ್ನಿಗಾಗಿ, ಮಣ್ಣಿಗಾಗಿ ಜಗತ್ತಿನಲ್ಲಿ ಕ್ರಾಂತಿಯಾಗಿದೆ. ಆದರೆ ಸರ್ವರ ಸಮಾನತೆಗಾಗಿ ಯಾವುದಾದರೂ ಕ್ರಾಂತಿ ನಡೆದಿದ್ದರೆ ಅದು ಕಲ್ಯಾಣದ ಕ್ರಾಂತಿ ಮಾತ್ರ. 12ನೇ ಶತಮಾನದಲ್ಲಿ ಮನುಷ್ಯರನ್ನು ಮನುಷ್ಯರಂತೆ ಕಾಣುತ್ತಿರಲಿಲ್ಲ. ಮೌಢ್ಯತೆ ಇತ್ತು, ಅನಕ್ಷರತೆ ಇತ್ತು, ಹೆಣ್ಣಿಗೆ ಸಮಾನತೆ ಇರಲಿಲ್ಲ. ಅಂತಹ ಕಾಲಘಟ್ಟದಲ್ಲಿ ಸ್ವಾತಂತ್ರ್ಯ, ಸಮಾನತೆ, ಕಾಯಕ, ದಾಸೋಹ, ಸಹೋದರತ್ವ, ಸಹಬಾಳ್ವೆಯ ತಳಹದಿಯ ಮೇಲೆ ಬಲಿಷ್ಠ ಸುಂದರ ಸಮಾಜದ ನಿರ್ಮಾಣಕ್ಕೆ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ವೈಚಾರಿಕ ಮತ್ತು ವೈಜ್ಞಾನಿಕತೆಯ ತಳಹದಿಯ ಮೇಲೆ ಕ್ರಾಂತಿ ನಡೆಯಿತು. ಶ್ರೇಣಿರಹಿತ, ವರ್ಗರಹಿತ, ಲಿಂಗಭೇದ ರಹಿತ ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನವರು ಶ್ರಮಿಸಿದವರು ಎಂದರು.

> ವಚನಗಳಲ್ಲಿ ಜೀವಾಮೃತ ಅಡಕವಾಗಿದ್ದು, ಅವುಗಳ ಸಾರವನ್ನು ಅರಿತು ಜೀವನದಲ್ಲಿ ಅನುಸರಿಸಿದರೆ ಬದುಕು ಹಸನಾಗುತ್ತದೆ. ಬಸವಾದಿ ಶರಣರ ಆದರ್ಶಗಳನ್ನು ಪಾಲಿಸುವುದಕ್ಕೆ ಇಂತಹ ಪ್ರತಿಮೆಗಳು ಪ್ರೇರಣೆಯಾಗುತ್ತವೆ.
> -ಈಶ್ವರ್ ಖಂಡ್ರೆ, ಅರಣ್ಯ ಸಚಿವ

ಇಡೀ ಜಗತ್ತಿಗೆ ಪ್ರಪ್ರಥಮವಾಗಿ ಸಾಮಾಜಿಕ ನ್ಯಾಯಕೊಟ್ಟ ಸಮುದಾಯ ಯಾವುದಾದರೂ ಇದ್ದರೆ ಅದು ಸರ್ವರಿಗೂ ಒಳ್ಳೆಯದನ್ನೇ ಬಯಸಿದ ಸಮುದಾಯ ವೀರಶೈವ ಲಿಂಗಾಯತ ಸಮುದಾಯ. ಸಮಾಜದಲ್ಲಿ ಸರ್ವರಿಗೂ ಸಮಪಾಲು ಮತ್ತು ಸಮಬಾಳಿನ ಕಲ್ಪನೆಯನ್ನು ನೀಡಿದ ಬಸವಣ್ಣನವರು ವಿಶ್ವದ ಪ್ರಥಮ ಸಂಸತ್ತೆಂದು ಪರಿಗಣಿಸಲ್ಪಡುವ ಅನುಭವ ಮಂಟಪವನ್ನು ಸ್ಥಾಪಿಸಿದರು. ವಿವಿಧ ವೃತ್ತಿ ಮತ್ತು ಸಮುದಾಯಗಳಿಂದ ಬಂದ ಸುಮಾರು 770 ಶರಣರು ಅಲ್ಲಿ ಪಾಲ್ಗೊಂಡು ವಚನ ಸಾಹಿತ್ಯವನ್ನು ರಚಿಸಿದರು. ಯುವಕರು ದುಶ್ಚಟಗಳಿಂದ ದೂರವಿದ್ದು ಸಮಾಜದ ಆಸ್ತಿಯಾಗಬೇಕು. ಮಾತೆಯರು ಮಕ್ಕಳಿಗೆ ವಚನಗಳ ಮೂಲಕ ಸಂಸ್ಕಾರ ಕಲಿಸಬೇಕು. ಹರ ಮತ್ತು ಚರ ಗುರುಮೂರ್ತಿಗಳು ವ್ಯಸನಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಹಾ ಸಂಸ್ಥಾನದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಸಂಸದ ಸುಧಾಕರ್, ಶಾಸಕರಾದ ಧೀರಜ್ ಮುನಿರಾಜ್, ಶರತ್ ಬಚ್ಚೇಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಬಸವೇಶ್ವರರ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಉದ್ಘಾಟಿಸಿದರು. ಈ ವೇಳೆ ಸುತ್ತೂರು ಮಹಾ ಸಂಸ್ಥಾನದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಸಂಸದ ಸುಧಾಕರ್, ಶಾಸಕರಾದ ಧೀರಜ್ ಮುನಿರಾಜ್, ಶರತ್ ಬಚ್ಚೇಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಆಧುನಿಕ ಅನುಭವ ಮಂಟಪ ಮುಂದಿನ ವರ್ಷ ಲೋಕಾರ್ಪಣೆ

ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಆಧುನಿಕ ಅನುಭವ ಮಂಟಪ, 2015ರಲ್ಲಿ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯೋಜನೆಗೆ ಅನುಮೋದನೆ ನೀಡಿದರು. ಈವರೆಗೆ ಒಟ್ಟು 280 ಕೋಟಿ ರು. ಬಿಡುಗಡೆಯಾಗಿದ್ದು, ಕಾಮಗಾರಿ ಭರದಿಂದ ಸಾಗುತ್ತಿದ್ದು, ಮುಂದಿನ ವರ್ಷದೊಳಗೆ ಲೋಕಾರ್ಪಣೆಗೊಳ್ಳಲಿದೆ ಎಂದರು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನೆಫ್ರೋ-ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂದಣಿ ಸಂ-1052/03-04)
ವಿಕ್ಟೋರಿಯ ಆಸ್ಪತ್ರೆ ಆವರಣ, ಬೆಂಗಳೂರು-560 002.
ಇ-ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.karnataka.gov.in
ಸಂಖ್ಯೆ:ನೆಯುಸಂ/ಟೆಂಡರ್/ಎಲ್‌ಎನ್‌ಡಿ/15/2025-26 ದಿನಾಂಕ: 06.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ನೆಫ್ರೋ-ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು-560 002 ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) Providing Outsourced Laundry Services at INU (Call-II). Last Date For Online Submission of Tender is **15.04.2026 at 5.30 P.M.** ಟೆಂಡರ್‌ಗೆ ಸಂಬಂಧಪಟ್ಟಂತೆ, ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ:-ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ **(further information and announcements)** ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **https://nephrourology.karnataka.gov.in/** ದಲ್ಲಿ ವೀಕ್ಷಿಸಬಹುದು.

ಸಹಿ/-ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ. ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್,
ಬಳ್ಳಾರಿ-583105,
ಸಂಖ್ಯೆ:ವಿಶ್ರೀಕೃವಿಬ/ಆಡಳಿತ/ಟೆಂ.ಪ್ರ/ಆ.ಮಾ.ಹೊ/ಕರೆ-03/2026-27/ 18/19
ದಿನಾಂಕ: 04.04.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (3ನೇ ಕರೆ)
(ಇ-ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕ್ರ.ಸಂ: 01) ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಜ್ಞಾನಸಾಗರ ಆವರಣ, ಬಳ್ಳಾರಿ ಹಾಗೂ ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯಲ್ಲಿ ಆಡಳಿತ ಕೆಲಸಗಳಿಗೆ ಅಗತ್ಯವಿರುವ ಮಾನವ ಶಕ್ತಿಗಳನ್ನು **(Clerk/Computer Operator/ Data Entry Operator/ Lab technician)** ಒದಗಿಸುವ ಕೆಲಸ : ರೂ.2,85,83,832/-, ಮತ್ತು ಕ್ರ.ಸಂ: 02) ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಜ್ಞಾನಸಾಗರ ಆವರಣ, ಬಳ್ಳಾರಿ ಹಾಗೂ ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯಲ್ಲಿ ಆಡಳಿತ & ಗೃಹಕೃತ್ಯ ಕೆಲಸಗಳಿಗೆ ಅಗತ್ಯವಿರುವ ಮಾನವ ಶಕ್ತಿಗಳನ್ನು **(Attender/Peon/Cleaning of office- Sweeper/other unskilled & Driver, & Scavenger)** ಒದಗಿಸುವ ಕೆಲಸ : ರೂ.3,23,67,600/- ಆಡಳಿತ ಕೆಲಸಗಳನ್ನು ನಿರ್ವಹಿಸಲು ಅಗತ್ಯ ಮಾನವ ಶಕ್ತಿಗಳನ್ನು ಹೊರಗುತ್ತಿಗೆ ಮೂಲಕ ಒದಗಿಸಲು ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಟೆಂಡರುಗಳನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ-ಪ್ರೋಕ್ಯೂರ್ ಮೆಂಟ್ ವೆಬ್‌ಸೈಟ್ **kppp.karnataka.gov.in** ಮುಖಾಂತರ ದಿನಾಂಕ: 21.04.2026 ಮಧ್ಯಾಹ್ನ 5:00 ಘಂಟೆಯವರೆಗೆ ಪಡೆದು ಟೆಂಡರುಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/-ಕುಲಸಚಿವರು,
ವಿಜಯನಗರಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/21

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ:01/2026-27, ದಿನಾಂಕ: 04.04.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು ಕೆ.ಡಬ್ಲ್ಯು-4ರ ರೀತ್ಯ ಒಟ್ಟು 2 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಕನಿಷ್ಠ ಮೊತ್ತ ರೂ 300.00 ಲಕ್ಷಗಳು, ಮತ್ತು ಗರಿಷ್ಟ ಮೊತ್ತ ರೂ 310.00 ಲಕ್ಷಗಳು, ಇ,ಎಂ.ಡಿ ಕನಿಷ್ಠ ರೂ 3.59 ಲಕ್ಷಗಳು ಮತ್ತ ಗರಿಷ್ಟ ರೂ 3.69 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳಿಗೆ ಐಟಂವಾರು ಅಲ್ಪಾವದಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ. **: 17.04.2026 ಸಂಜೆ 5.30 ಗಂಟೆ** ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ **ದಿನಾಂಕ :18.04.2026 ಸಂಜೆ 5.30 ಗಂಟೆ** ಬಿಡ್ ತೆರೆಯುವ **ದಿನಾಂಕ :21.04.2026 ರ ಬೆಳಿಗ್ಗೆ 11.00 ಗಂಟೆ ನಂತರ** ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ **"https://kppp.karnataka.gov.in"** ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ : ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.
DIPR/DDMYS/008/KSMCA/007/2025-26

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ-2271200, 2272200, ಸಹಾಯವಾಣಿ-9449872599
ಇ-ಮೇಲ್: ka.tumakuru.cc@gmail.com
ವೆಬ್‌ಸೈಟ್: www.tumakurucity.mrc.gov.in
ನಂ:ತುಮಪಾ:ತಾಂಶಾ/ವಿ&ನೀ.ಟೆಂಡರ್:01/2026-27 ದಿನಾಂಕ: 04.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27ನೇ ಸಾಲಿನ ಪಾಲಿಕೆ ನಿಧಿಯಡಿ ವಿದ್ಯುತ್ ಸಂಬಂಧಿತ (Installation of Digital Display Board) 01 ಸಂಖ್ಯೆ ಕಾಮಗಾರಿಯನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಕೊಟೇಷನ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜು ದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 9449872511 ರಿಂದ ಮಾಹಿತಿ ಪಡೆಯಬಹುದು.
ಸೂಚನೆ: 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಪ್ರೀಬಿಡ್ ಮೀಟಿಂಗ್ ದಿನಾಂಕ ಮತ್ತು ವೇಳೆ : 09-04-2026 ಬೆಳಗ್ಗೆ : 11.00. ಅಲ್ಪಾವಧಿ ಟೆಂಡರ್ ಆಕ್ಷೇಪಣೆ ಸಲ್ಲಿಸುವ ದಿನಾಂಕ ಮತ್ತು ವೇಳೆ : 10-04-2026 ಸಮಯ : 17.00. ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 13-04-2026 ಸಮಯ : 17.00. ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 15-04-2026 ಸಮಯ : 11.00 ನಂತರ.

ಸಹಿ/-ಕಾರ್ಯಪಾಲಕ ಅಭಿಯಂತರರು(ವಿ),
ತುಮಕೂರು ಮಹಾನಗರ ಪಾಲಿಕೆ, ತುಮಕೂರು.
DIPR/TUM/10/KSMCA/2026-27

ಸರಕಾರಿ ಭೂಮಾಪಕರ ಮಾದರಿಯಲ್ಲಿ ಎಲ್ಲ ಸೌಲಭ್ಯ ಒದಗಿಸಲು ಆಗ್ರಹ | ಮಾನವ ಸರಮಳಿ ನಿರ್ಮಿಸಿ ಸರಕಾರದ ವಿರುದ್ಧ ಘೋಷಣೆ, ಆಕ್ರೋಶ

ಸೇವೆ ಕಾಯಂಗೆ ಆಗ್ರಹಿಸಿ ಭೂಮಾಪಕರ ಪ್ರತಿಭಟನೆ

ಬೆಳಗಾವಿ: ಭೂದಾಖಲೆಗಳ ಇಲಾಖೆಯಲ್ಲಿ ಕಳೆದೆರಡು ದಶಕದಿಂದ ಕಾರ್ಯನಿರ್ವಹಿಸುತ್ತಿರುವ ಪರವಾನಗಿ ಭೂಮಾಪಕರ ಸೇವೆಯನ್ನು ಒಂದು ಬಾರಿ ವಿಶೇಷ ನೇಮಕಾತಿ ಅಡಿ ಕಾಯಂಗೊಳಿಸಬೇಕು ಎಂದು ಒತ್ತಾಯಿಸಿ ಅಖಿಲ ಕರ್ನಾಟಕ ಸರಕಾರಿ ಪರವಾನಗಿ ಭೂಮಾಪಕರ ಸಂಘದವರು ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಕ್ರಮಬದ್ಧವಾದ ವಿಧಾನ ಅನುಸರಿಸಿಯೇ ಪರವಾನಗಿ ಭೂಮಾಪಕರನ್ನು ನೇಮಕ ಮಾಡಲಾಗಿದೆ. ಅವರು ಖಾಸಗಿ ವ್ಯಕ್ತಿಗಳು ಹೊಂದಿರುವ ಜಮೀನಿನ ಗಡಿ ಗುರುತಿಸುದುವು, ಪೋಡಿ, ಮ್ಯೂಟೇಷನ್ ಪೂರ್ವ ನಕ್ಷೆ ತಯಾರಿಸುವ ಕೆಲಸ ನಿರ್ವಹಿಸುತ್ತಿದ್ದಾರೆ. ಸರಕಾರಿ ಭೂಮಾಪಕರು ಮಾಡುವ ಎಲ್ಲ ರೀತಿಯ ಕೆಲಸ ಮಾಡುತ್ತಿದ್ದಾರೆ. ಈಗ ಇಲಾಖೆಯಲ್ಲಿ ಕಾಯಂ ಭೂಮಾಪಕರ ಅವಶ್ಯಕತೆ ಹೆಚ್ಚಿದೆ. ಹಾಗಾಗಿ ಒಂದು ಬಾರಿ ವಿಶೇಷ ನೇಮಕಾತಿ ಅಡಿ ಪರವಾನಗಿ ಭೂಮಾಪಕರ ಸೇವೆ ಕಾಯಂಗೊಳಿಸಬೇಕು.

-ಗುರುರಾಜ್ ಚೌಗಲಾ, ಭೂಮಾಪಕರು

ಭೂಮಾಪಕರ ಸಂಘದವರು ಬೆಳಗಾವಿಯ ರಾಣಿ ಚನ್ನಮ್ಮನ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಅಪಾರ ಸಂಖ್ಯೆಯಲ್ಲಿ ಸೇರಿದ್ದ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳ ಭೂಮಾಪಕರು, ಇಲ್ಲಿನ ರಾಣಿ ಚನ್ನಮ್ಮನ ವೃತ್ತದಲ್ಲಿ ಮಾನವ ಸರಮಳಿ ನಿರ್ಮಿಸಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ತಮ್ಮ ಸೇವೆ ಕಾಯಂಮಾತಿಗೆ ಹಿಂದೇಟು ಹಾಕುತ್ತಿರುವ ಸರಕಾರದ ವಿರುದ್ಧ ಘೋಷಣೆ ಕೂಗಿದರು. ತಮ್ಮ ಬೇಡಿಕೆ ಈಡೇರಿಸುವಂತೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಸರಕಾರಿ ಭೂಮಾಪಕರಷ್ಟೇ ಕೆಲಸವನ್ನು ಪರವಾನಗಿ ಭೂಮಾಪಕರು ಮಾಡುತ್ತಿದ್ದಾರೆ. ಆದರೆ, ಸರಕಾರಿ ಭೂಮಾಪಕರಿಗೆ ಮಾಸಿಕ 52 ಸಾವಿರ ರು. ವೇತನವಿದ್ದರೆ, ಪರವಾನಗಿ ಭೂಮಾಪಕರಿಗೆ ಮಾಸಿಕ 12 ಸಾವಿರ ರು. ಸಂಭಾವನೆ ನೀಡಿ ಅನ್ಯಾಯ ಮಾಡಲಾಗುತ್ತಿದೆ. ಜೀತದಾಳುಗಳಂತೆ ನಡೆಸಿಕೊಳ್ಳುತ್ತಿದೆ. ಇಂದಿನ ದುಬಾರಿ ಕಾಲದಲ್ಲಿ ಅತ್ಯಲ್ಪ ಸಂಬಳದಲ್ಲಿ ಜೀವನ ಸಾಗಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಮುಖಂಡರಾದ ರವೀಂದ್ರ ಕೋರೆ, ಪ್ರವೀಣ ಹೆಗಡೆ, ಶಿಲ್ಪಾ ಟಿ.ಎಸ್., ಕೆ.ಪಿ.ಭಾರ್ಗವ, ಮಂಜುನಾಥ ಅಗಸಿಮನಿ, ಶಿವಾನಂದ ಮುಗಳಿಹಾಳ ಇತರರಿದ್ದರು.

ಶೀಘ್ರವೇ ಬೆಂಗಳೂರು ಬಂದ್

ಹೋರಾಟಕ್ಕೆ ಬೆಂಬಲ ಸೂಚಿಸಿದ ರೈತ ಮುಖಂಡರಾದ ಚೂನಪ್ಪ ಪೂಜೇರಿ ಮತ್ತು ಶಶಿಕಾಂತ ಗುರೂಜಿ, ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಅಧೋಗತಿಗೆ ತಲುಪುತ್ತಿದೆ. ಮೊದಲು ಆ ಯೋಜನೆಗಳನ್ನು ರದ್ದುಪಡಿಸಿ, ಪರವಾನಗಿ ಭೂಮಾಪಕರ ಬೇಡಿಕೆ ಈಡೇರಿಸುವತ್ತ ಸರಕಾರ ಗಮನಹರಿಸಬೇಕು. ಇಲ್ಲದಿದ್ದರೆ ಶೀಘ್ರವೇ ಬೆಂಗಳೂರು ಬಂದ್ ಮಾಡಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಟ್ರಾಫಿಕ್ ಸಮಸ್ಯೆಯಿಂದ ಜನರು ಹೈರಾಣ

ಪ್ರತಿಭಟನೆ ಹಿನ್ನೆಲೆಯಲ್ಲಿ ರಾಣಿ ಚನ್ನಮ್ಮನ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ನಾಲ್ಕು ದಿಕ್ಕುಗಳ ರಸ್ತೆಗಳಲ್ಲೂ ಒಂದು ತಾಸಿಗೂ ಹೆಚ್ಚು ಸಮಯ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಇದರಿಂದಾಗಿ ಸಾರ್ವಜನಿಕರು ಅದರಲ್ಲೂ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳು ಪರದಾಡಿದರು. ಎರಡು ಕಿ.ಮೀ ದೂರದವರೆಗೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಿಸಿಲಿನ ಝಳದಿಂದ ಬಸವಳಿದಿದ್ದ ಸವಾರರು, ಟ್ರಾಫಿಕ್ ಸಮಸ್ಯೆಯಿಂದ ಹೈರಾಣಾದರು. ಸಂಚಾರ ಪೊಲೀಸರು ಕೈಗೊಂಡ ಅವೈಜ್ಞಾನಿಕ ಕ್ರಮಕ್ಕೆ ತಮ್ಮ ಆಕ್ರೋಶ ಹೊರಹಾಕಿದರು.

ಶಿಕ್ಷಕಿಯ ಹತ್ಯೆ ಮಾಡಿ ಶವ ಸುಟ್ಟು ಹಾಕಿದ ದುಷ್ಕರ್ಮಿಗಳು

ಕಲಬುರಗಿ: ಕಮಲಾಪುರ ತಾಲೂಕಿನ ಕಲ್ಮೂಡ ಗ್ರಾಮದ ಬಳಿ ಸರಕಾರಿ ಶಾಲಾ ಶಿಕ್ಷಕಿಯೊಬ್ಬರನ್ನು ಮಾರಕಾಸ್ತ್ರಗಳಿಂದ ಬರ್ಬರ ಹತ್ಯೆ ಮಾಡಿ, ಸಾಕ್ಷ್ಯ ನಾಶಪಡಿಸಲು ಶವವನ್ನು ಸುಟ್ಟು ಹಾಕಿರುವ ಘಟನೆ ಬೆಳಕಿಗೆ ಬಂದಿದೆ.

ಕೊಲೆಯಾದ ದುರ್ದೈವಿಯನ್ನು ಕಲಬುರಗಿ ನಗರದ ಆನಂದ್ ಕಾಲೋನಿ ನಿವಾಸಿ ಜ್ಯೋತಿ ಕಪಾಳೆ ಎಂದು ಗುರುತಿಸಲಾಗಿದೆ. ಇವರು ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ವಂದರ ಖೇಡ ಗ್ರಾಮದ ಸರಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಕರ್ತವ್ಯದ ನಿಮಿತ್ತ ಬೀದರ್‌ನಲ್ಲೇ ವಾಸ್ತವ್ಯ ಹೂಡಿದ್ದ ಜ್ಯೋತಿ, ವಾರಕ್ಕೊಮ್ಮೆ ಕಲಬುರಗಿಯ ತಮ್ಮ ಮನೆಗೆ ಬಂದು ಹೋಗುತ್ತಿದ್ದರು.

ಘಟನೆಯ ಹಿನ್ನೆಲೆ: ಕಲಬುರಗಿಯಿಂದ ವಾಪಸ್ ಬೀದರ್‌ಗೆ ತೆರಳುತ್ತಿದ್ದ ಸಂದರ್ಭದಲ್ಲಿ ಮಾರ್ಗಮಧ್ಯೆ ಕಮಲಾಪುರ ತಾಲೂಕಿನ ಕಲ್ಮೂಡ ಎಂಬಲ್ಲಿ ದುಷ್ಕರ್ಮಿಗಳು ಶಿಕ್ಷಕಿಯನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಇರಿದು ಕೊಲೆ ಮಾಡಿದ್ದಲ್ಲದೆ, ಗುರುತು ಪತ್ತೆಯಾಗಬಾರದೆಂಬ ಉದ್ದೇಶದಿಂದ ಮೃತದೇಹಕ್ಕೆ ಬೆಂಕಿ ಹಚ್ಚಿ ವಿಕೃತ ಮೆರೆದಿದ್ದಾರೆ. ಆರಂಭದಲ್ಲಿ ಸುಟ್ಟ ಸ್ಥಿತಿಯಲ್ಲಿದ್ದ ಮೃತದೇಹ ಪತ್ತೆಯಾದಾಗ ಕಮಲಾಪುರ ಪೊಲೀಸರು 'ಅಪರಿಚಿತ ಶವ' ಎಂದು ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ, ತಾಂತ್ರಿಕ ತನಿಖೆ ಮತ್ತು ನಾಪತ್ತೆ ಪ್ರಕರಣಗಳ ಆಧಾರದ ಮೇಲೆ ತನಿಖೆ ನಡೆಸಿದಾಗ ಇದು ಶಿಕ್ಷಕಿ ಜ್ಯೋತಿ ಅವರದ್ದೇ ಶವ ಎಂಬ ಆಘಾತಕಾರಿ ಸತ್ಯ ಬಯಲಾಗಿದೆ.

ಸದ್ಯ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಹಂತಕರ ಪತ್ತೆಗಾಗಿ ಪೊಲೀಸರು ವಿಶೇಷ ತಂಡ ರಚಿಸಿ ಜಾಲ ಬೀಸಿದ್ದಾರೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸೋಮವಾರ ಬಾದಾಮಿ ಬನಶಂಕರಿ ದೇವಿ ದರ್ಶನ ಪಡೆದರು.

ಡಿಜಿಲಾಕರ್ ಆ್ಯಪ್‌ನಲ್ಲೂ ಸಿಗುತ್ತೆ ಪಿಯು ಫಲಿತಾಂಶ

← ಮೊದಲಪುಟದಿಂದ

ಇಲ್ಲಿ ಲಭ್ಯವಾಗುವ ಡಿಜಿಟಲ್ ಅಂಕಪಟ್ಟಿಗಳು ಭೌತಿಕ ಅಂಕಪಟ್ಟಿಗಳಿಗೆ ಸಮನಾದ ಅಧಿಕೃತ ಮಾನ್ಯತೆಯನ್ನು ಹೊಂದಿರುತ್ತವೆ. ಮುಂದಿನ ವ್ಯಾಸಂಗಕ್ಕೆ ಪ್ರವೇಶ ಪಡೆಯಲು ಅಥವಾ ಇತರ ಯಾವುದೇ ಅಧಿಕೃತ ಕೆಲಸಗಳಿಗೆ ಈ ಡಿಜಿಟಲ್ ಅಂಕಪಟ್ಟಿಯನ್ನು ನೇರವಾಗಿ ಬಳಸಿಕೊಳ್ಳಬಹುದು. ಶಾಲೆಯಿಂದ ಅಥವಾ ಕಾಲೇಜಿನಿಂದ ಮೂಲ ಅಂಕಪಟ್ಟಿ ಕೈಸೇರುವವರೆಗೂ ಕಾಯುವ ಅಗತ್ಯವಿರುವುದಿಲ್ಲ.

ಫಲಿತಾಂಶ ಮುಂದಕ್ಕೆ?: ಈ ಹಿಂದೆ ಮಂಗಳವಾರವೇ ದ್ವಿತೀಯ ಪಿಯುಸಿ ಫಲಿತಾಂಶ ಘೋಷಿಸಲು ಶಿಕ್ಷಣ ಇಲಾಖೆ ತೀರ್ಮಾನಿಸಿತ್ತು. ಆದರೆ ದಾವಣಗೆರೆ, ಬಾಗಲ ಕೋಟೆಯಲ್ಲಿ ನೀತಿಸಂಹಿತೆ ಜಾರಿಯಲ್ಲಿರುವುದರಿಂದ ಫಲಿತಾಂಶ ಘೋಷಿಸಲು ಚುನಾವಣಾ ಆಯೋಗದ ಅನುಮತಿ ಪಡೆಯುವುದು ಕಡ್ಡಾಯ. ಆಯೋಗದಿಂದ ಅನುಮತಿ ನೀಡದೇ ಇರುವುದರಿಂದ ಫಲಿತಾಂಶ ಪ್ರಕಟವನ್ನು ಮುಂದೂಡಲಾಗಿದೆ. ಫಲಿತಾಂಶವನ್ನು ಏ.8 (ಬುಧವಾರ)ವೇ ಘೋಷಿಸಲಾಗುವುದೋ ಅಥವಾ ಉಪಚುನಾವಣಾ ಮತದಾನ ಮುಗಿದ ಬಳಿಕ ಪ್ರಕಟಿಸಲಾಗುವುದೋ ಎನ್ನುವ ಬಗ್ಗೆ ಶಿಕ್ಷಣ ಇಲಾಖೆ ಸ್ಪಷ್ಟನೆ ನೀಡಿಲ್ಲ.

ಅಂಚೆಮತ ಮರು ಎಣಿಕೆ: ಶಾಸಕ ರಾಜೇಗೌಡಗೆ ಸಂಕಷ್ಟ

← ಮೊದಲಪುಟದಿಂದ

ಅಂಚೆ ಮತಗಳನ್ನು ಪರಿಶೀಲಿಸಿದ ಬಳಿಕ ಎಲ್ಲಾ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಅರ್ಜಿದಾರರು ಅಥವಾ ಪ್ರತಿವಾದಿಗಳು ಪಡೆದಿರುವ ಮತಗಳ ಫಲಿತಾಂಶ ಪ್ರಕಟಿಸಬೇಕು. ಇದನ್ನು ಎರಡು ವಾರಗಳಲ್ಲಿ ಮಾಡಬೇಕು ಎಂದು ನ್ಯಾಯಾಲಯ ನಿರ್ದೇಶಿಸಿದೆ. ಆದೇಶದ ಪ್ರತಿಯನ್ನು ಭಾರತೀಯ ಚುನಾವಣಾ ಆಯೋಗ, ಜಿಲ್ಲಾ ಚುನಾವಣಾಧಿಕಾರಿ ಮತ್ತು ಶೃಂಗೇರಿಯ ಚುನಾವಣಾಧಿಕಾರಿಗೆ ರಿಜಿಸ್ಟ್ರಿ ಸ್ಪೀಡ್ ಪೋಸ್ಟ್ ಅಥವಾ ಈ-ಮೇಲ್ ಮೂಲಕ ಕಳುಹಿಸಿಕೊಡಬೇಕು ಎಂದು ನ್ಯಾಯಾಲಯ ಆದೇಶಿಸಿತು.

ಇದರ ಬೆನ್ನಿಗೇ, ರಾಜೇಗೌಡ ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಅವರು ಆದೇಶಕ್ಕೆ ಎರಡು-ಮೂರು ವಾರಗಳ ತಡೆ ನೀಡ ಬೇಕು. ಇದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾ ಗುವುದು ಎಂದರು. ಇದಕ್ಕೆ ಒಪ್ಪಿದ ನ್ಯಾಯಾಲಯವು ಆದೇಶಕ್ಕೆ ಎರಡು ವಾರಗಳಿಗೆ ತಡೆ ನೀಡಿತು. ಆದೇಶಕ್ಕೆ ತಡೆ ನೀಡುವುದಕ್ಕೆ ಜೀವರಾಜ್ ಪರ ವಕೀಲೆ ಪಿ.ಎಲ್. ವಂದನಾ ಅವರು ವಿರೋಧಿಸಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ 1,811 ಅಂಚೆ ಮತಗಳು ಚಲಾವಣೆಯಾಗಿದ್ದು, ಕಾಂಗ್ರೆಸ್‌ನ ರಾಜೇಗೌಡ ಅವರು 201 ಮತಗಳಿಂದ ವಿಜೇತರಾಗಿದ್ದರು.

ಲಾಕಪ್ ಡೆತ್: 9 ಪೊಲೀಸರಿಗೆ ಗಲ್ಲು

← ಮೊದಲಪುಟದಿಂದ

ಆನಂತರ, ಮದ್ರಾಸ್ ಹೈಕೋರ್ಟ್ ಸೂಚನೆಯಂತೆ ಈ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲಾಯಿತು. ಸಿಬಿಐ ತನಿಖೆ ನಡೆಸಿದ ನಂತರ ಸುಮಾರು 10 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿತ್ತು. ಐದು ವರ್ಷಗಳ ತನಿಖೆಯಲ್ಲಿ ಸುಮಾರು 100ಕ್ಕೂ ಹೆಚ್ಚು ಸಾಕ್ಷಿಗಳನ್ನು ಸಿಬಿಐ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ತನಿಖೆಯಲ್ಲಿ ಜಯರಾಜ್ ಹಾಗೂ ಬೆನಿಕ್ಸ್ ಅವರನ್ನು ಠಾಣೆಗೆ ಕರೆದೊಯ್ದು ಅವರ ಬಟ್ಟೆಬಿಚ್ಚಿಸಿ, ಲಾಠಿಗಳಿಂದ ಮಾರಕಾಸ್ತ್ರಗಳಿಂದ ಹೊಡೆದಿದ್ದಾಗಿ ಅದೇ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದ ಮಹಿಳಾ ಪೇದೆಯೊಬ್ಬರು ಸಾಕ್ಷಿ ನುಡಿದಿದ್ದರು. ಆ ದಾಳಿ ಎಷ್ಟು ಭೀಕರವಾಗಿತ್ತೆಂದರೆ ಇಬ್ಬರ ಗುದದ್ವಾರದಿಂದ ರಕ್ತ ಬರುತ್ತಿದ್ದುದನ್ನು ತಾವು ಕಂಡಿದ್ದಾಗಿ ವಿಚಾರಣೆ ವೇಳೆ ಹೇಳಿದ್ದರು. ಇಂಥ ಅನೇಕ ಸಾಕ್ಷಿಗಳನ್ನು ಆಧರಿಸಿ, ಹಲ್ಲೆಯ ವೇಳೆ ಬಳಸಿದ್ದ ಲಾಠಿ ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದ ಸಿಬಿಐ ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿತ್ತು.

ಟ್ರಂಪ್ ಕೊನೆ ಎಚ್ಚರಿಕೆಗೆ ಇರಾನ್ ತೀವ್ರ ನಿರ್ಲಕ್ಷ್ಯ

← ಮೊದಲಪುಟದಿಂದ

2ನೇ ಹಂತದಲ್ಲಿ ಯುದ್ಧವನ್ನು ಕೊನೆಗೊಳಿಸುವ ಪ್ರಸ್ತಾಪ ಇದೆ. ಸಂಭಾವ್ಯ ಕದನ ವಿರಾಮ ಷರತ್ತುಗಳ ಕುರಿತು ಅಮೆರಿಕ - ಇರಾನ್ ಮತ್ತು ಮಧ್ಯಸ್ಥಿಕೆ ಗುಂಪುಗಳು ಚರ್ಚೆಯಲ್ಲಿ ತೊಡಗಿವೆ. ಮಾತುಕತೆಯಲ್ಲಿ ಪ್ರಗತಿ ಕಂಡುಬಂದರೆ, ಅಂತಿಮ ಒಪ್ಪಂದಕ್ಕೆ ಹೆಚ್ಚಿನ ಸಮಯವನ್ನು ನೀಡಲು ಕದನ ವಿರಾಮವನ್ನು ವಿಸ್ತರಿಸಬಹುದು ಎನ್ನಲಾಗಿದೆ. ಅಂದಹಾಗೆ ಈ ಮಾತುಕತೆಯಲ್ಲಿ ಹೊರ್ಮುಜ್ ಜಲಸಂಧಿಯನ್ನು ಪುನಃ ತೆರೆಯು ವುದು, ಇರಾನ್‌ನ ಹೆಚ್ಚು ಸಮೃದ್ಧವಾದ ಯುರೇನಿಯಂ ಅನ್ನು ನಾಶಪಡಿಸುವುದು, ಪರೋಕ್ಷ ಯುದ್ಧಗಳನ್ನು ನಿಲ್ಲಿಸುವುದು ಸೇರಿರಲಿದೆ.

ಇರಾನ್‌ನಲ್ಲಿ ಒಂದೇ ದಿನ 34 ಬಲಿ, ಇಸ್ರೇಲ್‌ನ 15 ಕಡೆ ಇರಾನ್ ಬಾಂಬ್

ಇರಾನ್‌ನ ಹಲವಾರು ಪ್ರಾಂತ್ಯಗಳನ್ನು ಗುರಿಯಾಗಿಸಿ ಸೋಮವಾರ ಅಮೆರಿಕ - ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಒಂದೇ ದಿನ 34 ಮಂದಿ ಸಾವನ್ನಪ್ಪಿದ್ದಾರೆ. ವರದಿಗಳ ಪ್ರಕಾರ, ರಾಜಧಾನಿ ಟೆಹರಾನ್‌ನಲ್ಲಿ 23 ಜನರು, ಕೋಮ್ ನಗರದಲ್ಲಿ 5 ಜನರು ಮತ್ತು ದಕ್ಷಿಣ ನಗರವಾದ ಬಂದರ್-ಎ ಲೆಂಗೆಯಲ್ಲಿ 6 ಜನರು ಸಾವನ್ನಪ್ಪಿದ್ದಾರೆ. ಇದರಲ್ಲಿ 6 ಮಕ್ಕಳು ಸೇರಿವೆ. ಇದಕ್ಕೆ ಪ್ರತಿಯಾಗಿ ಇರಾನ್, ಉತ್ತರ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಇಸ್ರೇಲ್‌ನ ಹೈಫಾ ನಗರ ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ಕಡೆಗಳಲ್ಲಿ ದಾಳಿ ನಡೆಸಿದ್ದು, ಭಾರೀ ಸ್ಫೋಟ ಸಂಭವಿಸಿದೆ. ಹೈಫಾದಲ್ಲಿ ಬಹುಮಹಡಿ ಕಟ್ಟಡಗಳಿಗೆ ಹಾನಿಯಾಗಿದೆ. ದಕ್ಷಿಣ ಇಸ್ರೇಲ್‌ನ ಡಿಮೋನಾ ಪ್ರದೇಶದ ಬಳಿಯ ಪೆಟ್ರೋಕೆಮಿಕಲ್ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸಿದೆ. ಇದರ ಜೊತೆಗೆ ಕುವೈತ್‌ನ ಬುಬಿಯಾನ್ ದ್ವೀಪದಲ್ಲಿರುವ ಅಮೆರಿಕ ಸೇನಾ ನೆಲೆಗಳನ್ನು ಡ್ರೋನ್‌ಗಳ ಮೂಲಕ ಗುರಿಯಾಗಿಸಿಕೊಂಡಿರುವುದಾಗಿ ಇರಾನ್ ಹೇಳಿದೆ. ಯುಎಇಯ ಪೆಟ್ರೋಕೆಮಿಕಲ್ ಸ್ಥಾವರದ ಮೇಲೆ ದಾಳಿ ನಡೆದ ನಂತರ ಬೆಂಕಿ ಕಾಣಿಸಿಕೊಂಡಿದೆ. ಅಬುಧಾಬಿ ಮಾಧ್ಯಮ ಕಚೇರಿಯ ಪ್ರಕಾರ, ಹಾನಿಯನ್ನು ನಿರ್ಣಯಿಸುವವರೆಗೆ ಸ್ಥಾವರದಲ್ಲಿನ ಕಾರ್ಯಾಚರಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲಾಗಿದೆ.

ಮೈಸೂರಲ್ಲಿ ಅಗ್ನಿವೀರ್ ರ‍್ಯಾಲಿ ಏಪ್ರಿಲ್ 19ರಿಂದ 27ರ ವರೆಗೆ

ಮೈಸೂರು: ಇಲ್ಲಿನ ನಜರ್‌ಬಾದ್‌ನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಏ.19ರಿಂದ ಏ.27ರವರೆಗೆ ಅಗ್ನಿವೀರ್ ರ‍್ಯಾಲಿ ಹಮ್ಮಿಕೊಳ್ಳಲಾಗಿದ್ದು, 6,235 ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ ಎಂದು ಬೆಂಗಳೂರಿನ ಭಾರತೀಯ ಸೇನೆ ನೇಮಕಾತಿ ಅಧಿಕಾರಿ ಕರ್ನಲ್ ವಿವೇಕ್ ಜಮಾದಾರ್ ತಿಳಿಸಿದರು. ಇಲ್ಲಿನ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಕಚೇರಿಯಲ್ಲಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ಹೋದ ವರ್ಷ ಜೂನ್‌ನಲ್ಲಿ ಲಿಖಿತ ಪರೀಕ್ಷೆ ಮುಗಿದಿದ್ದು, 2ನೇ ಹಂತದ ಪರೀಕ್ಷೆಯನ್ನು (ಸ್ಕ್ರೀನಿಂಗ್) ಇಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ರ‍್ಯಾಲಿಯಲ್ಲಿ 6,043 ಪುರುಷರು ಹಾಗೂ 192 ಮಹಿಳಾ ಅಭ್ಯರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಪ್ರತಿ ದಿನ 800 ಅಭ್ಯರ್ಥಿಗಳ ದೈಹಿಕ ಸದೃಢತೆ ಸೇರಿದಂತೆ ಇತರ ಪರೀಕ್ಷೆ ನಡೆಯಲಿದೆ. ಅದರಲ್ಲಿ ಉತ್ತೀರ್ಣರಾದವರು ಮಾತ್ರ ವೈದ್ಯಕೀಯ ಪರೀಕ್ಷೆಗೆ ಆಯ್ಕೆಯಾಗುತ್ತಾರೆ. ಏ.27ರಂದು ಮಹಿಳಾ ಅಭ್ಯರ್ಥಿಗಳಿಗೆ ರ‍್ಯಾಲಿ ನಡೆಯಲಿದೆ ಎಂದು ತಿಳಿಸಿದರು.

ಹಾವೇರಿ ನಗರದ ಜಿ.ಎಚ್.ಕಾಲೇಜು ಸಭಾಂಗಣದಲ್ಲಿ ನಡೆದ ಹಾವೇರಿ ವಿಶ್ವ ವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಹುಕ್ಕೇರಿ ಮಠದ ಸದಾಶಿವ ಶ್ರೀ, ಸಾಹಿತಿ ಸತೀಶ ಕುಲ್ಕರ್ಣಿ ಅವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಕೆಎಸ್‌ಆರ್‌ಟಿಸಿ ನೌಕರರ ಒಕ್ಕೂಟದ ಪ್ರತಿಭಟನೆ 21ಕ್ಕೆ

ಬೆಂಗಳೂರು: ಚುನಾವಣೆಗೆ ಪೂರ್ವ ಸರಕಾರ ನೀಡಿದ್ದ ಭರವಸೆಗಳನ್ನು ಈಡೇರಿಸದೆ ವಿಳಂಬ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ಏ. 21ರಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷ ಆರ್.ಚಂದ್ರಶೇಖರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಪ್ರತಿದಿನ ಒಂದು ಕೋಟಿಗೂ ಅಧಿಕ ಪ್ರಯಾಣಿಕರಿಗೆ ಸೇವೆ ನೀಡುತ್ತಿದ್ದಾರೆ. ಸುಮಾರು 1.15 ಲಕ್ಷ ನೌಕರರು ಹಗಲಿರುಳು ದುಡಿಯುತ್ತಿದ್ದು, ಹಬ್ಬ-ಹರಿದಿನಗಳಲ್ಲಿಯೂ ಕುಟುಂಬದ ಜತೆ ಸಮಯ ಕಳೆಯದೇ, ಮಳೆ, ಗಾಳಿ, ಬಿಸಿಲನ್ನು ಲೆಕ್ಕಿಸದೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ . ಆದರೆ ಇಷ್ಟೊಂದು ಶ್ರಮದ ನಡುವೆಯೂ, ಸರಕಾರಿ ಮತ್ತು ಇತರೆ ನಿಗಮ-ಮಂಡಳಿಗಳ ನೌಕರರ ವೇತನಕ್ಕೆ ಹೋಲಿಸಿದರೆ ಸಾರಿಗೆ ನೌಕರರಿಗೆ ಸಿಗುತ್ತಿರುವ ವೇತನ ಅತ್ಯಲ್ಪವಾಗಿದೆ. ಚುನಾವಣೆಗೆ ಮುನ್ನ ನೀಡಿದ್ದ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಭರವಸೆಗಳನ್ನು ಸರಕಾರ ಈಡೇರಿಸಿಲ್ಲ ಎಂದರು.

ಕೇಂದ್ರ ಸಚಿವ ಕುಮಾರಸ್ವಾಮಿ ಕಾಲಿಗೆ ಬಿದ್ದು ಗೋಳಾಡಿದ ನೊಂದ ಪತಿ

ಮಾಜಿ ಶಾಸಕ ಅನ್ನದಾನಿ ವಿರುದ್ಧ ಅಕ್ರಮ ಸಂಬಂಧದ ಆರೋಪ

ಮಂಡ್ಯ: ಮಳವಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಡಾ.ಕೆ. ಅನ್ನದಾನಿ ವಿರುದ್ಧ ಅಕ್ರಮ ಸಂಬಂಧದ ಆರೋಪ ಕೇಳಿ ಬಂದಿದ್ದು, ಈ ಹಿನ್ನೆಲೆಯಲ್ಲಿ ವ್ಯಕ್ತಿ ಯೊಬ್ಬರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ದೂರು ಸಲ್ಲಿಸಿದ್ದಾರೆ.



ಸೋಮವಾರ ದಿಶಾ ಸಭೆ ಹಿನ್ನೆಲೆಯಲ್ಲಿ ಮಂಡ್ಯ ನಗರಕ್ಕೆ ಆಗಮಿಸಿದ್ದ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಮಳವಳ್ಳಿ ತಾಲೂಕಿನ ಪ್ರಸನ್ನಕುಮಾರ್ ಎಂಬ ವ್ಯಕ್ತಿಯು, ಅನ್ನದಾನಿ ಅವರು ತಮ್ಮ ಪತ್ನಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು, ನನಗೆ ನ್ಯಾಯ ಒದಗಿಸುವಂತೆ ಎಚ್‌ಡಿಕೆ ಕಾಲಿಗೆ ಬಿದ್ದು ಗೋಳಾಡಿದ್ದಾರೆ. ದಿಶಾ ಸಭೆ ಮುಗಿದ ಬಳಿಕ ನಿನ್ನೊಂದಿಗೆ ಮಾತನಾಡುವುದಾಗಿ ಹೇಳಿದ ಕುಮಾರಸ್ವಾಮಿಯವರು ನಂತರ ವ್ಯಕ್ತಿಯ ಅಹವಾಲು ಆಲಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಸನ್ನಕುಮಾರ್, ತಮ್ಮ ಪತ್ನಿಯೊಂದಿಗೆ ಅನ್ನದಾನಿ ಅಕ್ರಮ ಸಂಬಂಧವಿಟ್ಟುಕೊಂಡಿದ್ದು, ಈ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ಅವರೊಂದಿಗೆ ಮಾಜಿ ಶಾಸಕರು ಗಂಟೆಗಟ್ಟಲೇ ದೂರವಾಣಿ ಮೂಲಕ ಮಾತನಾಡಿದ್ದಾರೆ. ಮೈಸೂರಿನಲ್ಲಿ ಒಂದೂವರೆ ಕೋಟಿ ವೆಚ್ಚದ ಅಪಾರ್ಟ್‌ಮೆಂಟ್ ಸಹ ಕೊಡಿಸಿದ್ದಾರೆ. ನನ್ನ ಪತ್ನಿಗೆ ಯಾವುದೇ ಆದಾಯವಿಲ್ಲ, ಆದರೂ ಅಷ್ಟು ಬೆಲೆಬಾಳುವ ಅಪಾರ್ಟ್‌ಮೆಂಟ್ ಹೇಗೆ ಸಿಕ್ಕಿತು? ಇದನ್ನು ಪ್ರಶ್ನಿಸಿದ್ದಕ್ಕೆ ಮಳವಳ್ಳಿ, ಹಲಗೂರು ಮತ್ತು ಬೆಂಗಳೂರಿನಲ್ಲಿ ನನ್ನ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ನನಗೆ ನ್ಯಾಯ ಕೊಡಿಸಿ ಎಂದು ಮನವಿ ಮಾಡಿದ್ದಾರೆ.

ಉಚಿತ ಪ್ರಯಾಣ ಸತ್ಯಕ್ಕೆ ದೂರ: ಇಲಾಖೆ ಸ್ಪಷ್ಟನೆ

ಬೆಂಗಳೂರು: ಪಿಯುಸಿವರೆಗಿನ ಗಂಡು ಮಕ್ಕಳಿಗೂ ಸರಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ನೀಡಲಾಗುವುದು ಎಂದು ಸಾಮಾಜಿಕ ಜಾಲತಾಣ ಹಾಗೂ ಕೆಲವು ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸುದ್ದಿ ಸತ್ಯಕ್ಕೆ ದೂರವಾದುದು ಎಂದು ಸಾರಿಗೆ ಇಲಾಖೆ ಸ್ಪಷ್ಟಪಡಿಸಿದೆ.

ಇತ್ತೀಚೆಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು, ಶಾಲಾ-ಕಾಲೇಜಿಗೆ ಹೋಗುವ ಪಿಯುಸಿವರೆಗಿನ ಗಂಡು ಮಕ್ಕಳಿಗೂ ಉಚಿತ ಬಸ್ ಪ್ರಯಾಣದ ಸೌಲಭ್ಯ ನೀಡುವಂತೆ ರಸ್ತೆ ಸಾರಿಗೆ ನಿಗಮಗಳಿಗೆ ಶಿಫಾರಸ್ಸು ಮಾಡಿದೆ ಎಂಬುದು ನಿಜ.

ಆದರೆ, ಈ ಶಿಫಾರಸ್ಸಿನ ಕುರಿತು ಸರಕಾರವಾಗಲಿ ಅಥವಾ ಸಾರಿಗೆ ನಿಗಮಗಳಾಗಲಿ ಇದುವರೆಗೆ ಯಾವುದೇ ಅಂತಿಮ ತೀರ್ಮಾನ ಕೈಗೊಂಡಿಲ್ಲ ಎಂದು ಇಲಾಖೆ ಹೇಳಿದೆ.

ದಂಡದಿಂದಲೇ ₹38 ಕೋಟಿ ಆದಾಯ

ಬೆಂಗಳೂರು: ರೈಲಿನಲ್ಲಿ ಟಿಕೆಟ್ ಇಲ್ಲದೇ ಪ್ರಯಾಣಿಸುವವರ ವಿರುದ್ಧ ಸಮರ ಸಾರಿರುವ ನೈರುತ್ಯ ರೈಲ್ವೇ ಇಲಾಖೆ ಒಂದು ವರ್ಷದ ಅವಧಿಯಲ್ಲಿ ಟಿಕೆಟ್ ರಹಿತ ಪ್ರಯಾಣದ ದಂಡದಲ್ಲಿಯೇ 38 ಕೋಟಿ ರು. ಸಂಗ್ರಹಿಸಿದೆ.

2025-26 ಸಾಲಿನಲ್ಲಿ ನೈರುತ್ಯ ರೈಲ್ವೆ ಮತ್ತು ಬೆಂಗಳೂರು ರೈಲ್ವೆ ವಲಯ ಭರ್ಜರಿ ಆದಾಯ ಗಳಿಸಿದೆ. ಈ ಆರ್ಥಿಕ ವರ್ಷದಲ್ಲಿ ನೈರುತ್ಯ ರೈಲ್ವೆ ವಿಭಾಗವು ಬರೋಬ್ಬರಿ 9,488 ಕೋಟಿ ರು ಆದಾಯ ಗಳಿಸಿದರೆ, ಬೆಂಗಳೂರು ರೈಲ್ವೆ ವಿಭಾಗವು 2,951 ಕೋಟಿ ರು. ಆದಾಯ ಗಳಿಸಿದೆ. ಬೆಂಗ ಳೂರು ವಿಭಾಗವು 2025-26ನೇ ಸಾಲಿನಲ್ಲಿ ಟಿಕೆಟ್ ತಪಾಸಣೆಯಿಂದ 39.68 ಕೋಟಿ ರು ಆದಾಯ ಗಳಿಸಿದರೆ, ಪಾರ್ಸೆಲ್‌ನಿಂದ 140.31 ಕೋಟಿ ರು ಗಳಿಸಿದ್ದು, ಸರಕು ಸಾಗಣೆ ಆದಾಯವು 351.07 ಕೋಟಿ ರು. ಗಳಿಸಲಾಗಿದೆ.

2024-25ರಲ್ಲಿ ಇದು 327.74 ಕೋಟಿ ರು. ಗಳಾಗಿತ್ತು. ಪ್ರಯಾಣಿಕ ಆದಾಯವು ಸಹಾ ಏರಿಕೆಯನ್ನು ದಾಖಲಿಸಿದ್ದು 2025-26ರಲ್ಲಿ 2420.55 ಕೋಟಿ ರು.ಗಳ ಆದಾಯವನ್ನು ಗಳಿಸಿದೆ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಾಣೇಶ್ ಮಾಹಿತಿ ನೀಡಿದ್ದಾರೆ.

ನೈಋತ್ಯ ರೈಲ್ವೆ ಕೋಟಿ ಕೋಟಿ ಆದಾಯ: 2025-26ನೇ ಆರ್ಥಿಕ ವರ್ಷ ದಲ್ಲಿ ನೈಋತ್ಯ ರೈಲ್ವೆ ಸರಕು ಟಿಕೆಟ್ ಚೆಕ್ಕಿಂಗ್, ಪಾರ್ಸೆಲ್ ವಿಭಾಗದಲ್ಲಿ 9,488 ಕೋಟಿ ರು ಆದಾಯ ಗಳಿಸಿದೆ. ಈ ಬಾರಿ ನೈರುತ್ಯ ರೈಲ್ವೆ ವಲಯವು ಸರಕು-ಸಾಗಣೆ ಯಿಂದ 5,347.40 ಕೋಟಿ ರು, ಆದಾಯ ಗಳಿಸಿದ್ದರೆ 2024-25ರಲ್ಲಿ 4,672 ಕೋಟಿ ರು ಗಳಿಸಿತ್ತು. ಕಳೆದ ವರ್ಷದ ದಾಖಲೆಯನ್ನು ಈ ವರ್ಷ ಮೀರಿಸಿದ್ದು, ಪ್ರಯಾಣಿಕರ ವಿಭಾಗದಲ್ಲಿ ಆದಾಯವು 3,468 ಕೋಟಿಗೆ ಏರಿಕೆಯಾಗಿದೆ. ಪ್ರಯಾಣಿಕರ ಸಂಖ್ಯೆ 165.53 ಮಿಲಿಯನ್‌ನಿಂದ 176.93 ಮಿಲಿಯನ್‌ಗೆ ಹೆಚ್ಚಳವಾಗಿದ್ದು, ಕೋಚಿಂಗ್ ಆದಾಯ 329.5 ಕೋಟಿಗೆ ಏರಿದ್ದು, ಪಾರ್ಸೆಲ್ ಆದಾಯ 170.4 ಕೋಟಿಗೆ ಹೆಚ್ಚಾಗಿದೆ.

ಸಮಾಚಾರ ಸಣ್ಣದಲ್ಲ

ಜಾತಿ, ಧರ್ಮ ಹೆಸರಲ್ಲಿ ಬಿಜೆಪಿ ರಾಜಕಾರಣ

ಬಾಗಲಕೋಟೆ: ಜಾತಿ, ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿ ದೇಶವನ್ನು ಒಡೆಯುತ್ತಿರುವ ಬಿಜೆಪಿ ಬಗ್ಗೆ ಜಾಗೃತಿಯಿಂದ ಇರಬೇಕು ಶಾಸಕ ವಿಜಯಾನಂದ ಕಾಶಪ್ಪನವರ ಮನವಿ ಮಾಡಿದರು. ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ಪ್ರಚಾರ ನಡೆಸಿ ಮತಯಾಚಿಸಿದ ಅವರು, ಬಿಜೆಪಿಯವರು ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಭ್ರಷ್ಟಾಚಾರದಲ್ಲಿ ಮುಳುಗಿ ಜನರಿಂದ ತಿರಸ್ಕರಿಸಲ್ಪಟ್ಟರು. ಹೀಗಾಗಿ ಈಗ ಯಾವ ಮಾನದಂಡದ ಆಧಾರದ ಮೇಲೆ ಬಿಜೆಪಿಗೆ ಮತ ಕೇಳುತ್ತಿದ್ದಾರೆ? ಅವರಿಗೆ ಮತ ಕೇಳುವ ನೈತಿಕತೆ ಇಲ್ಲ ಎಂದರು. ಬರೀ ಮುಸ್ಲಿಮರನ್ನು ಬೈದಾಡಿ ಕೇಕೆ ಹಾಕಿಸಿಕೊಳ್ಳುವ ಯತ್ನಾಳರನ್ನು ಬಿಜೆಪಿಯವರು ಪ್ರಚಾರಕ್ಕೆ ಕರೆತಂದಿದ್ದು, ಆ ವ್ಯಕ್ತಿ ಚರಂತಿಮಠರನ್ನು ಗೆಲ್ಲಿಸುವ ಬದಲಿಗೆ ಸೋಲಿಸಲು ಬಂದಿದ್ದಾನೆ. ನನ್ನ ಹಣೆಯ ಮೇಲಿನ ವಿಭೂತಿಯ ಬಗ್ಗೆ ಲೇವಡಿ ಮಾಡುವ ಯತ್ನಾಳಗೆ ವಿಭೂತಿಯ ಮಹತ್ವದ ಬಗ್ಗೆ ಏನು ಗೊತ್ತು? ಎಂದು ಪ್ರಶ್ನಿಸಿದರು.

ಹಿಂದುತ್ವದ ಸರಕಾರಕ್ಕೆ ಮುನ್ನುಡಿ ಬರೆಯಿರಿ

ಬಾಗಲಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ಯಾವುದೇ ಅಭಿವೃದ್ಧಿ ಕೆಲಸ ನಡೆದಿಲ್ಲ. ಬರೀ ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ದುಡ್ಡು ಹೊಡೆಯುವ ಕೆಲಸ ನಡೆದಿದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ನಡೆಸಿ ಮಾತನಾಡಿದ ಅವರು, ವೀರಣ್ಣ ಚರಂತಿಮಠ ಶಾಸಕರಾಗಿದ್ದಾಗ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ನಡೆದಿದ್ದು, ಕ್ಷೇತ್ರದ ಜನ ಈಗಲೂ ಅವರ ಕಾರ್ಯವೈಖರಿಯನ್ನು ಹೊಗಳುತ್ತಾರೆ. ಪ್ರಾಮಾಣಿಕ ರಾಜಕಾರಣಿಯಾಗಿರುವ ಚರಂತಿಮಠ, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದಾರೆ. ಅವರನ್ನು ಬಹುಮತದಿಂದ ಆಯ್ಕೆ ಮಾಡಿ 2028ರಲ್ಲಿ ರಾಜ್ಯದಲ್ಲಿ ಹಿಂದುತ್ವದ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಮುನ್ನುಡಿ ಬರೆಯಬೇಕು ಎಂದು ಹೇಳಿದರು.

ಮೂರು ರಾಜ್ಯಗಳಲ್ಲಿ ಬಿಜೆಪಿ ಗೆಲುವು ಖಚಿತ

ಚಿಕ್ಕಬಳ್ಳಾಪುರ: ಅಸ್ಸಾಂನಲ್ಲಿ ಬಿಜೆಪಿಯ ಗೆಲುವು ಖಚಿತವಾಗಿದ್ದು, ತಮಿಳುನಾಡಿನಲ್ಲಿ ಎನ್‌ಡಿಎ ಮೈತ್ರಿ ಅಧಿಕಾರಕ್ಕೆ ಬರುವ ವಿಶ್ವಾಸವಿದೆ. ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ಅಧಿಕಾರಕ್ಕೆ ಬರುವುದು ಖಚಿತ ಎಂದು ಸಂಸದ ಡಾ.ಕೆ.ಸುಧಾಕರ್ ಭವಿಷ್ಯ ನುಡಿದರು. ಸುದ್ದಿಗಾರೊಂದಿಗೆ ಮಾತನಾಡಿ, ಬಾಗಲಕೋಟೆಯಲ್ಲಿ ಬಿಜೆಪಿಯ ಪರವಾದ ವಾತಾವರಣ ಇದ್ದು, ಗೆಲುವು ಖಚಿತವಾಗಿದೆ. ದಾವಣಗೆರೆ ಕ್ಷೇತ್ರದಲ್ಲಿ ಸಮಾನ ಸೆಣಸಾಟವಿದ್ದು, ಪ್ರಸ್ತುತ ನಮ್ಮ ಪರ ಶೇ.51 ಹಾಗೂ ಕಾಂಗ್ರೆಸ್ ಪರ ಶೇ.49ರಷ್ಟು ಒಲವು ಇದೆ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷದ ಸಾಮಾಜಿಕ ನ್ಯಾಯ ಎಂಬುದು ಕೇವಲ ಬಾಯಿ ಮಾತಾಗಿದ್ದು, ಅಲ್ಪಸಂಖ್ಯಾತರು ಇದನ್ನು ಅರಿತು ಮತ ಚಲಾಯಿಸುವ ಮೊದಲು ತಮ್ಮ ಮನಸಾಕ್ಷಿಗೆ ಅನುಗುಣವಾಗಿ ನಿರ್ಧಾರ ಕೈಗೊಳ್ಳಬೇಕು ಎಂದು ಕರೆ ನೀಡಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

ದಾವಣಗೆರೆಯಲ್ಲಿ ಚುನಾವಣಾ ಪ್ರಚಾರದ ನಡುವೆ 'ಬೆಣ್ಣೆ ದೋಸೆ' ಸವಿದ ರಾಜಕೀಯ ನೇತಾರರು



VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
07.04.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಶ್ರೀ ಗಣೇಶ ಭಟ್ ವಾರಣಾಸಿ
ವಿಷಯ
ವಿಶ್ವ ಆಟಿಸಂ ದಿನಾಚರಣೆ
vishwavani.news

ಈ ಬಾರಿಯೂ ಕಾಂಗ್ರೆಸ್ ಗೆದ್ದರೆ ಮುಂದಿನ 40 ವರ್ಷ ಬೇರೆ ಯಾರಿಗೂ ಟಿಕೆಟ್ ಕೊಡಲ್ಲ: ಜೋಶಿ

ಕುಟುಂಬ ರಾಜಕಾರಣದಿಂದ ಪ್ರಜಾಪ್ರಭುತ್ವ ನಿರ್ನಾಮ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕುಟುಂಬ ರಾಜಕಾರಣವೇ ಮುಖ್ಯವಾಗಿದೆ. ಇದರಿಂದ ಪ್ರಜಾಪ್ರಭುತ್ವ ನಿರ್ನಾಮವಾಗಲಿದೆ. ಒಂದೇ ಕುಟುಂಬಕ್ಕೆ ಯಾಕೆ ಮನ್ನಣೆ ಕೊಡಬೇಕು ಎಂದು ಈ ಬಾರಿ ಚಿಂತಿಸಿರುವ ಮತದಾರರು ಬಿಜೆಪಿಗೆ ಮತ ಹಾಕುತ್ತಾರೆ ಎಂಬ ವಿಶ್ವಾಸವಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮನೆಯಲ್ಲಿ ತಾತ ಇದ್ದಾಗ ಅವರು ಶಾಸಕರು ಹಾಗೂ ಮಂತ್ರಿಯಾಗಿದ್ದರು. ಈಗ ಮಗ ಶಾಸಕರು ಹಾಗೂ ಮಂತ್ರಿಯಾಗಿದ್ದಾರೆ. ಅವರ ಪತ್ನಿ ಸಂಸದರು. ಇದರ ಜತೆಗೆ ಅವರ ಮಗನೂ ಶಾಸಕನಾಗಬೇಕು ಎಂದು ಟಿಕೆಟ್ ನೀಡಿದ್ದಾರೆ. ಹೀಗೆ ಅವರ ಕುಟುಂಬಕ್ಕೇ ಟಿಕೆಟ್ ನೀಡಿ ದಾವಣಗೆರೆ ಕಬ್ಜಾ ಮಾಡಲು ಮುಂದಾಗಿದ್ದಾರೆ. ಒಂದು ವೇಳೆ ಕಾಂಗ್ರೆಸ್ ಈ ಬಾರಿಯೂ ಗೆದ್ದರೆ ಮುಂದಿನ 40 ವರ್ಷ ಬೇರೆ ಯಾರಿಗೂ ಟಿಕೆಟ್ ಕೊಡಲ್ಲ ಎಂಬುದನ್ನು ಎಚ್ಚರಿಸುತ್ತಿದ್ದೇನೆ ಎಂದರು.

ಬಾಗಲಕೋಟೆಯಲ್ಲಿ ಅಹಿಂದ ಮಂತ್ರ. ದಾವಣಗೆರೆಯಲ್ಲಿ ಗೋವಿಂದ. ಇಲ್ಲಿ ಬೇರೆ ಯಾರೂ ಸಮರ್ಥರು ಇಲ್ಲ ಎನ್ನುವಂತೆ ಅವರದೇ ಕುಟುಂಬಕ್ಕೆ ಟಿಕೆಟ್ ನೀಡಿದರು. ಸೋನಿಯಾ ಗಾಂಧಿ ಕುಟುಂಬದಂತೆ ಶಾಮನೂರು ಕುಟುಂಬವೂ ಎಲ್ಲರೂ ಅಧಿಕಾರದಲ್ಲಿ ಇರಬೇಕು ಎಂದು ಬಯಸಿದ್ದಾರೆ. ಈ ಬಾರಿ

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿದರು.

- ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರ, ದುರಾಡಳಿತ ಸರ್ವೇ ಸಾಮಾನ್ಯವಾಗಿದೆ. ಕುಟುಂಬ ರಾಜಕಾರಣ, ಓಲೈಕೆ ರಾಜಕಾರಣ ಪರಾಕಾಷ್ಠೆಗೆ ತಲುಪಿದೆ
- ದಾವಣಗೆರೆ ಅಭಿವೃದ್ಧಿ ಯಾಗಿಲ್ಲ. ಜಿ.ಎಂ. ಸಿದ್ದೇಶ್ವರ ಅವರು ಸಂಸದರಾಗಿದ್ದಾಗ ಸ್ಮಾರ್ಟ್ ಸಿಟಿ ಯೋಜನೆ ಜಾರಿಯಾಗಿದ್ದು ಬಿಟ್ಟರೆ ಬೇರೇನೂ ಆಗಿಲ್ಲ
- ಒಂದೇ ಕುಟುಂಬದವರು ಉದ್ಯೋಗ ಬೆಳೆಸಲು, ಅಧಿಕಾರ ಕೇಂದ್ರೀಕರಣ ಮಾಡಲು ಮುಂದಾಗಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕ
- ದೇಶದಲ್ಲಿ ಎಲ್ಲ ಕಡೆ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಹೀನಾಯ ಸ್ಥಿತಿಯಲ್ಲಿದೆ. ದೇಶ ಸದ್ಯದಲ್ಲೇ ಕಾಂಗ್ರೆಸ್ ಮುಕ್ತವಾಗಲಿದೆ.

ಮತದಾರರು ತಕ್ಕ ಬುದ್ಧಿ ಕಲಿಸಲಿದ್ದಾರೆ. ಈ ಕುಟುಂಬದಲ್ಲಿ ಹಣ ಇದೆ. ಭ್ರಷ್ಟಾಚಾರದಿಂದ ಮಾಡಿದ ಹಣವೂ ಇದೆ. ದುಡ್ಡಿನ ಬಲದಿಂದ ಪ್ರಜಾಪ್ರಭುತ್ವವನ್ನು ನಿರ್ನಾಮ ಮಾಡಲು ಹೊರಟಿದ್ದಾರೆ. ಇದಕ್ಕೆ ಜನ ಬಿಡಲ್ಲ. ಅವರು ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು.

'ತ್ರ ವಿಂಗಡಣೆ ಬಗ್ಗೆ ಮುಖ್ಯಮಂತ್ರಿಗಳು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ದಕ್ಷಿಣ ಮತ್ತು ಉತ್ತರ ಎನ್ನುವ ರೀತಿ ಮಾತಾಡುತ್ತಿದ್ದಾರೆ. ದೇಶವನ್ನು ಆಳಿದವರು ಈಗ ದೇಶವನ್ನೇ ಒಡೆಯಲು ಪ್ರಯತ್ನಿಸುತ್ತಿದ್ದಾರೆ. ಜನರನ್ನು ನೀತಿಗಳ ಮೂಲಕ, ಅಭಿವೃದ್ಧಿ ಕಾರ್ಯದ ಮೂಲಕ ಬದಲಾಯಿಸಬೇಕು. ಅದು ಬಿಟ್ಟು ಹೀಗೆ ದೇಶ ಒಡೆಯುವ ಮೂಲಕ ಅಲ್ಲ ಎಂದರು. ಕಾಂಗ್ರೆಸ್‌ಗೆ ಕರ್ನಾಟಕದಲ್ಲಿ ಅವಕಾಶ ನೀಡಿದರು. ಆದರೆ ಏನು ಮಾಡಿದ್ರಿ? ಗ್ಯಾರಂಟಿಗಳನ್ನೂ ಸರಿಯಾಗಿ ಜಾರಿ ಮಾಡಲಿಲ್ಲ. ಒಂದು ಕಾಳು ಅಕ್ಕಿಯನ್ನು ಅನ್ನಭಾಗ್ಯದಲ್ಲಿ ನೀಡಲಿಲ್ಲ. ಅಕ್ಕಿ ಕೇಂದ್ರ ಕೊಟ್ಟಿದ್ದು ಎಂದು ಹೇಳಿದರು.

ಆಟೋ ಚಾಲಕರಿಗೆ ಪ್ರಲ್ಹಾದ್ ಜೋಶಿ ಸಲಹೆ

ಎಲ್‌ಪಿಜಿ ಬದಲು ಪೆಟ್ರೋಲ್ ಬಳಸಿ

ದಾವಣಗೆರೆ: ಪೆಟ್ರೋಲ್ ಸದಾಕಾಲ ಲಭ್ಯವಿರುವ ಇಂಧನ. ಸದ್ಯದ ಮಟ್ಟಿಗೆ ಆಟೋ ಚಾಲಕರು ಎಲ್‌ಪಿಜಿ ಬದಲಿಗೆ ಪೆಟ್ರೋಲ್ ಬಳಸುವುದು ಸೂಕ್ತ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಸುಮಾರು 70 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲದ ಸಂಗ್ರಹವಿದೆ. ನಿರಂತರವಾಗಿ ತೈಲ ಪೂರೈಕೆ ಆಗುತ್ತಿದ್ದು, ಜನರು ಆತಂಕಪಡುವ ಅಗತ್ಯವಿಲ್ಲ. ವಾಣಿಜ್ಯ ಸಿಲಿಂಡರ್‌ಗಳ ವಿತರಣೆಯನ್ನು ಶೇ.70ಕ್ಕೆ ಹೆಚ್ಚಿಸಲಾಗಿದೆ. ಶೇ.60ರಷ್ಟು ಎಲ್‌ಪಿಜಿಯನ್ನು ದೇಶದಲ್ಲೇ ಉತ್ಪಾದಿಸಲಾಗುತ್ತಿದೆ. ಶೇ.40ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ಜಾಗತಿಕ ಮಟ್ಟದಲ್ಲಿ ಆಟೊ ಎಲ್‌ಪಿಜಿ ಸಂಪನ್ಮೂಲಗಳು ಸೀಮಿತವಾಗಿವೆ. ವಿಶ್ವದ ಕೆಲವೇ ದೇಶಗಳಲ್ಲಿ ಆಟೋ ಎಲ್‌ಪಿಜಿ ಲಭ್ಯವಿದೆ ಎಂದರು.

ಸರಕಾರಿ ಒಡೆತನದ 72 ಸೇರಿದಂತೆ ರಾಜ್ಯದಲ್ಲಿ 372 ಆಟೋ ಎಲ್‌ಪಿಜಿ ವಿತರಣಾ ಕೇಂದ್ರಗಳಿವೆ. ಜಾಗತಿಕ ಮಟ್ಟದಲ್ಲಿ ಬೆಲೆ ಏರಿಕೆಯಾದ ಹಿನ್ನೆಲೆಯಲ್ಲಿ ಖಾಸಗಿ ಕಂಪನಿಗಳು ಪ್ರತಿ ಕೆಜಿ ಎಲ್‌ಪಿಜಿ ದರವನ್ನು 110 ರು.ಗೆ ಏರಿಸಿವೆ. ಸರಕಾರಿ ಒಡೆತನದ ಕೇಂದ್ರಗಳಲ್ಲಿ ಆಟೋ ಎಲ್‌ಪಿಜಿ ದರ ಪ್ರತಿ ಕೆಜಿಗೆ 89 ರು. ಇದೆ. ಹೀಗಾಗಿ, ಈ ಕೇಂದ್ರಗಳಲ್ಲಿ ಎಲ್‌ಪಿಜಿಗೆ ಆಟೋಗಳ ಉದ್ದನೆಯ ಸರತಿ ಸಾಲು ಕಂಡುಬರುತ್ತಿದೆ ಎಂದು ಪ್ರತಿಕ್ರಿಯೆ ನೀಡಿದರು. ಗ್ಯಾಸ್ ಸಮಸ್ಯೆಯನ್ನು ಕೇಂದ್ರ ಸರಕಾರ ಸಮರ್ಥವಾಗಿ ನಿಭಾಯಿಸಿದೆ. ಗೃಹ ಬಳಕೆ ಗ್ಯಾಸ್‌ಗೆ ಸಮಸ್ಯೆಯಾಗಿಲ್ಲ. ನಾವು ಮೊದಲೇ ಯೋಜನೆ ಮಾಡಿದ್ದರಿಂದ ಸಮಸ್ಯೆ ಆಗಿಲ್ಲ ಎಂದು ಹೇಳಿದರು.

ಬಿಜೆಪಿಯನ್ನು ಜನ ಎಂದಿಗೂ ಬೆಂಬಲಿಸಲ್ಲ

ದಾವಣಗೆರೆ: ಜನ ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳನ್ನು ಮೆಚ್ಚಿಕೊಂಡಿದ್ದಾರೆ. ಬಿಜೆಪಿ ಬಡವರ ಈ ಗ್ಯಾರಂಟಿಗಳನ್ನು ವಿರೋಧಿಸುತ್ತಿದೆ. ಹೀಗೆ ಬಡವರ ವಿರೋಧಿ, ಸಂವಿಧಾನ ವಿರೋಧಿಯಾಗಿರುವ ಬಿಜೆಪಿಯನ್ನು ಬೆಂಬಲಿಸಲು ರಾಜ್ಯದ ಜನರಿಗೆ ಕಾರಣವೇ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

2004ರಲ್ಲಿ ನಾನು ಅಧ್ಯಕ್ಷನಾಗಿದ್ದಾಗ ಜೆಡಿಎಸ್ ರಾಜ್ಯದ 59 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಅಲ್ಲಿಂದ ಈಚೆಗೆ ಎಂದಿಗೂ ಇಷ್ಟು ಸ್ಥಾನಗಳನ್ನು ಗೆಲ್ಲಲು ಜೆಡಿಎಸ್‌ಗೆ ಸಾಧ್ಯವಾಗಿಲ್ಲ. 2023ರಲ್ಲಿ ಈ ಪಕ್ಷದ ಸಾಮರ್ಥ್ಯ 19ಕ್ಕೆ ಕುಸಿದಿದೆ. ಅಸ್ತಿತ್ವ ಉಳಿಸಿಕೊಳ್ಳಲು ಅಪ್ಪ-ಮಕ್ಕಳು ಬಿಜೆಪಿ ಜತೆ ಕೈಜೋಡಿಸಿದ್ದಾರೆ. ನನ್ನನ್ನು ಟೀಕಿಸುವ ನೈತಿಕತೆಯನ್ನು ಅವರು ಉಳಿಸಿಕೊಂಡಿಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸುದ್ದಿಗಾರರೊಂದಿಗೆ ಮಾತನಾಡಿ, ದೇವೇಗೌಡರು, ಎಚ್.ಡಿ.ಕುಮಾರಸ್ವಾಮಿ ಮತ್ತು ಛಲುವಾದಿ ನಾರಾಯಣಸ್ವಾಮಿ ಅವರು ಈ ಹಿಂದೆ ಬಿಜೆಪಿ, ಆರ್‌ಎಸ್‌ಎಸ್, ಮೋದಿಯವರ ಬಗ್ಗೆ ಎಂತೆಂಥಾ ಮಾತಾಡಿದ್ದಾರೆ ಗೊತ್ತಾ? ಈಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಬಿಜೆಪಿ ಸೇರಿರುವ ಇವರೆಲ್ಲಾ ಮೊದಲೆಲ್ಲಾ ಬಿಜೆಪಿ, ಆರ್‌ಎಸ್‌ಎಸ್ ಮೋದಿಯವರ ಬಗ್ಗೆ ಏನೇನು ಮಾತಾಡಿದ್ದಾರೆ ಎನ್ನುವುದು ನಿಮಗೆ ಗೊತ್ತಿಲ್ಲವಾ? ಇವರಿಗೆಲ್ಲಾ ನಮ್ಮನ್ನು ಟೀಕಿಸುವ ಯಾವ ನೈತಿಕತೆ ಇದೆಯೇ? ಎಂದು ಪ್ರಶ್ನಿಸಿದರು.

ನಾವು ಕುಟುಂಬ ರಾಜಕಾರಣ ಮಾಡಲ್ಲ.

ದಾವಣಗೆರೆಯಲ್ಲಿ ಬಹಿರಂಗ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜನರತ್ತ ಕೈ ಬೀಸಿದರು. ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಡೋಲು ಬಾರಿಸಿದರು.

ಜನರೇ ನಮ್ಮನ್ನು ಕರೆ ತಂದು ಚುನಾವಣೆಗೆ ನಿಲ್ಲಿಸಿದ್ದಾರೆ ಎನ್ನುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಉತ್ತರಿಸಿದ ಸಿಎಂ, ಹಾಗಾದರೆ ಚನ್ನಪಟ್ಟಣದಲ್ಲಿ ಅವರ ಮಗ ಸೋತಿದ್ದು ಏಕೆ? ಜನ ಬಯಸಿದಾಗ ಚುನಾವಣೆಗೆ ಸ್ಪರ್ಧಿಸುವುದು ತಪ್ಪಲ್ಲ. ಜನ ತಿರಸ್ಕರಿಸಿದಾಗಲೂ ಆ ರೀತಿ ಮಾತಾಡುತ್ತಾರಲ್ಲಾ ಯಾಕೆ? ಎಂದು ಮರು ಪ್ರಶ್ನಿಸಿದರು.

ಸಚಿವ ಜಮೀರ್ ಅವರು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಹೆಚ್ಚು ಪ್ರಚಾರ ಮಾಡಲಿಲ್ಲ ಎನ್ನುವ ಪ್ರಶ್ನೆಗೆ ಉತ್ತರಿಸಿದ ಸಿಎಂ, ಜಮೀರ್ ಅವರು ಕೇರಳ, ಬಾಗಲಕೋಟೆ ಸೇರಿ ಎಲ್ಲ ಕಡೆ ಕೆಲಸ ಮಾಡಿದ್ದಾರೆ. ಹಾಗೆಯೇ ದಾವಣಗೆರೆಯಲ್ಲೂ ಬಂದು ಪ್ರಚಾರ ಮಾಡಿ ಹೋಗಿದ್ದಾರೆ. ಜಮೀರ್ ಅವರು ಪಕ್ಷದ ಸಿಪಾಯಿ. ಅವರು ಕಾಂಗ್ರೆಸ್ ಪಕ್ಷದ ಪರವಾಗಿ ಮತದಾರರಿಗೆ, ಕಾರ್ಯಕರ್ತರಿಗೆ ಸ್ಪಷ್ಟ ಸಂದೇಶ ನೀಡಿದ್ದಾರೆ ಎಂದರು. ಛಲುವಾದಿ ನಾರಾಯಣಸ್ವಾಮಿ ಮೊದಲು ಕಾಂಗ್ರೆಸ್‌ನಲ್ಲಿದ್ದು ಇಲ್ಲಿ ಲಾಭ ಪಡೆದು ಈಗ ಬಿಜೆಪಿಗೆ ಹೋಗಿ ಅಲ್ಲೂ ಲಾಭ ಮಾಡಿಕೊಂಡಿದ್ದಾರೆ. ಚಲುವಾದಿ ನಾರಾಯಸ್ವಾಮಿ ಅವರು ಬಿಜೆಪಿ ಬಗ್ಗೆ ಏನೇನು ಮಾತಾಡಿದ್ದಾರೆ ಗೊತ್ತಾ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಕಾಂಗ್ರೆಸ್ ಸಹಕರಿಸುತ್ತಿಲ್ಲ ಎನ್ನುವ ಕುಮಾರಸ್ವಾಮಿ ಅವರ ಮಾತಿಗೆ ಪ್ರತಿಕ್ರಿಯಿಸಿ, ಕೊಟ್ಟ ಕುದುರೆಯನ್ನು ಏರದವನು ವೀರನೂ ಅಲ್ಲ, ಶೂರನೂ ಅಲ್ಲ ಎಂದು ಸಿಎಂ ವ್ಯಂಗ್ಯವಾಡಿದರು.

ಬಿಜೆಪಿ ಅಭ್ಯರ್ಥಿಗಳನ್ನು ಸೋಲಿಸಿ

ಬೆಂಗಳೂರು: ಬೆಲೆ ಏರಿಕೆಯಿಂದ ಜನರು ತತ್ತರಿಸುತ್ತಿದ್ದಾರೆ. ಗ್ಯಾಸ್ ಸಿಗದೇ ಹೋಟೆಲ್‌ಗಳು ಬಂದ್ ಆಗುತ್ತಿವೆ. ಆಟೋದವರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಬಿಜೆಪಿ ಕಾರ್ಯಕರ್ತರು ಸಹ ಬೆಲೆ ಏರಿಕೆಗೆ ಬಸವಳಿದಿರುವುದರಿಂದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಮನವಿ ಮಾಡಿದ್ದಾರೆ.

2014ರಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬರುವ ಮುನ್ನ ಗ್ಯಾಸ್ ಬೆಲೆ 400 ರು. ಆಸುಪಾಸಿನಲ್ಲಿತ್ತು. ಈಗ ಎಲ್‌ಪಿಜಿ ಸಿಲಿಂಡರ್ ಬೆಲೆ 950 ದಾಟಿದೆ. ಲೀಟರ್‌ಗೆ 70 ರೂಪಾಯಿಯಿದ್ದ ಪೆಟ್ರೋಲ್ ಈಗ 102ರ ಗಡಿ ದಾಟಿದೆ. ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಅವರು ಮಾಧ್ಯಮದ ಮುಂದೆ ಹೇಳಿಕೆ ನೀಡುವ ಬದಲು ಪ್ರಧಾನಿ ಮೋದಿ ಅವರ ಬಳಿ ಮಾತನಾಡಿ ಕರ್ನಾಟಕಕ್ಕೆ ಬರಬೇಕಿದ್ದ ತೆರಿಗೆ ಪಾಲು ಕೊಡಿಸುವ ಕೆಲಸವನ್ನು ಮೊದಲು ಮಾಡಲಿ. 5 ವರ್ಷಗಳಲ್ಲಿ 1.25 ಲಕ್ಷ ಕೋಟಿತೆರಿಗೆ ಹಣ ಕರ್ನಾಟಕಕ್ಕೆ ಬರಬೇಕಿತ್ತು. 15ನೇ ಹಣಕಾಸು ಆಯೋಗದ ಅನುದಾನ ಬಾಕಿಯಿದೆ. ಜಲ ಜೀವನ್ ಮಿಷನ್ ಅನುದಾನ, ಮಹದಾಯಿ ಯೋಜನೆಗೆಂದು ಘೋಷಣೆ ಮಾಡಿದ್ದ ಅನುದಾನ ಕೊಡಿಸುವ ಕೆಲಸವನ್ನು ಮಾಡಲಿ ಎಂದು ಆಗ್ರಹಿಸಿದ್ದಾರೆ.

ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ಶಾಮನೂರು ಶಿವಶಂಕರಪ್ಪ ಅವರ ಕೊಡುಗೆ ಅಪಾರ. ದಾವಣಗೆರೆ ನಗರವನ್ನು ವಿದ್ಯಾ ನಗರಿಯನ್ನಾಗಿ ಮಾಡಿದ ಗರಿಮೆ ಶಾಮನೂರು ಶಿವಶಂಕರಪ್ಪ ಅವರಿಗೆ ಸಲ್ಲುತ್ತದೆ. ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಅವರ ಗೆಲುವಿಗೆ ಶ್ರಮಿಸಬೇಕು ಎಂದು ಹೇಳಿದ್ದಾರೆ.

ಬರಿಗಾಲಲ್ಲಿ ಸಮರ್ಥ್ ಶಾಮನೂರು ಪ್ರಚಾರ

ದಾವಣಗೆರೆ: ಚುನಾವಣಾ ರಾಜಕೀಯದಲ್ಲಿ ಮೊದಲ ಹೆಜ್ಜೆ ಇಡುತ್ತಿರುವ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರು ತಮ್ಮ ವಿಭಿನ್ನ ಪ್ರಚಾರ ಶೈಲಿಯಿಂದ ಗಮನ ಸೆಳೆಯುತ್ತಿದ್ದಾರೆ. ಸಮರ್ಥ್ ಅವರು, ಸುಡುಬಿಸಿಲಿನಲ್ಲೂ ಬರಿಗಾಲಲ್ಲಿ ಪ್ರಚಾರ ನಡೆಸುತ್ತಿದ್ದಾರೆ. ನನ್ನ ಕಾಲುಗಳನ್ನು ನೋಡಬೇಡಿ, ದಾವಣಗೆರೆ ದಕ್ಷಿಣವನ್ನು ರಾಜ್ಯದ ಅತ್ಯುತ್ತಮ ಕ್ಷೇತ್ರವನ್ನಾಗಿಸುವ ನನ್ನ ಗುರಿಯನ್ನು ನೋಡಿ ಎಂದು ಅವರು ಹೇಳಿದ್ದಾರೆ. ಸಮರ್ಥ್ ಅವರ ಈ ವಿಭಿನ್ನ ಪ್ರಚಾರದ ಹಿಂದೆ ಆಧ್ಯಾತ್ಮಿಕ ನಂಬಿಕೆ ಇದೆ. ವೀರಭದ್ರಸ್ವಾಮಿ ಕೊಂಡೋತ್ಸವದ ಪ್ರೇರಣೆಯಿಂದ ಅವರು ಚುನಾವಣಾ ಅವಧಿಯಲ್ಲಿ ಬರಿ ಗಾಲಲ್ಲಿ ನಡೆಯುವ ಪ್ರತಿಜ್ಞೆ ತೆಗೆದು ಕೊಂಡಿದ್ದಾರೆ. 2023ರ ವಿಧಾನಸಭೆ ಚುನಾವಣೆಯ ವೇಳೆ ಸಮರ್ಥ್ ಅಗ್ನಿಕುಂಡದ ಮೇಲೆ ನಡೆದಿದ್ದರು. ನಂತರ ಈ ಆಧ್ಯಾತ್ಮಿಕ ನಂಬಿಕೆಯನ್ನು ಪಾಲಿಸುತ್ತಿದ್ದಾರೆ ಎಂದು ಅವರ ತಾಯಿ ಡಾ.ಪ್ರಭಾ ಮಲ್ಲಿಕಾರ್ಜುನ ವಿವರಿಸಿದ್ದಾರೆ.

ಕಾಂಗ್ರೆಸ್ ಗೆಲುವು ನಿಶ್ಚಿತ

ಬಾಗಲಕೋಟೆ: ಕಾಂಗ್ರೆಸ್ ಸರಕಾರ ನೀಡಿದ ಗ್ಯಾರಂಟಿ ಪರಿಣಾಮ ಬಹಳ ಇದೆ. ಅದು ಫಲಿತಾಂಶದ ಮೇಲೆ ದೊಡ್ಡ ಪರಿಣಾಮ ಬೀರಲಿದ್ದು, ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿಯವರು ಗ್ಯಾರಂಟಿ ಯೋಜನೆ ಗಳನ್ನು ಬಿಟ್ಟಿ ಭಾಗ್ಯ ಎಂದು ಟೀಕಿಸುತ್ತಾರೆ. ಪಕ್ಷದಿಂದ ಉಚ್ಚಾಟನೆ ಮಾಡಿರುವ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಕರೆದುಕೊಂಡು ಬಂದು ಪ್ರಚಾರ ಮಾಡುತ್ತಾರೆ. ಬಿಜೆಪಿ ಅಭ್ಯರ್ಥಿಗೆ ಅವರ ಬಗ್ಗೆ ಅಷ್ಟು ಕಾಳಜಿ ಇದ್ದಿದ್ದರೆ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಡಿ ಎಂದು ಹೇಳಬೇಕಿತ್ತಲ್ಲವೆ? ಎಂದು ಪ್ರಶ್ನಿಸಿದರು. ಬಿಜೆಪಿ ಮುಖಂಡರು ತತ್ವ, ಸಿದ್ಧಾಂತ ಮಾತನಾಡುತ್ತಾರೆ.

ಕಳೆದ ಚುನಾವಣೆಯಲ್ಲಿ ಮುಖ್ಯಮಂತ್ರಿಯಾಗಿದ್ದ ಜಗದೀಶ ಶೆಟ್ಟರ ಅವರಿಗೆ ಟಿಕೆಟ್ ಕೊಡಲಿಲ್ಲ. ಉಪಮುಖ್ಯಮಂತ್ರಿಯಾಗಿದ್ದ ಲಕ್ಷ್ಮಣ ಸವದಿಗೆ ಟಿಕೆಟ್ ಕೊಡದಿದ್ದರಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆಲ್ಲಬೇಕಾಯಿತು ಎಂದರು.

ಅಹಿಂದ ಮರೆತಿದ್ದಕ್ಕೆ ಸಿಎಂ ವಿರುದ್ಧ ದಂಗೆ: ವಿಜಯೇಂದ್ರ ಕಿಡಿ

ದಾವಣಗೆರೆ: ಅಹಿಂದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಸಿಎಂ ಸಿದ್ದರಾಮಯ್ಯ ಅವರು ಹಿಂದುಳಿದ ಸಮುದಾಯಗಳನ್ನು ಯಾವತ್ತೋ ಮರೆತಿದ್ದಾರೆ. ಹಾಗಾಗಿ, ಮುನಿಸಿಕೊಂಡ ಅಲ್ಪಸಂಖ್ಯಾತರು ಕಾಂಗ್ರೆಸ್ ಸರಕಾರದ ವಿರುದ್ಧ ದಂಗೆ ಎದ್ದಿರುವುದೇ ಇದಕ್ಕೆ ಸಾಕ್ಷಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರಕಾರ ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಮಾಡದೇ ಹೋದರೂ ತನ್ನ ಗ್ಯಾರಂಟಿ ಯೋಜನೆಗಳೇ ಅಭಿವೃದ್ಧಿ ಎಂದು ಬಿಂಬಿಸುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿದೆ. ತಮ್ಮ ಸರಕಾರದ ವೈಫಲ್ಯಗಳನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಆದಿಯಾಗಿ ಸಚಿವ ಸಂಪುಟದ ಎಲ್ಲ ಸದಸ್ಯರು, ಶಾಸಕರು ಇಲ್ಲೇ ಬಂದು ಠಿಕಾಣಿ ಹೂಡಿರುವುದೇ ಸರಕಾರದ ಅಭಿವೃದ್ಧಿ ವೈಫಲ್ಯಕ್ಕೆ ಸಾಕ್ಷಿ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು. ಈ ವೇಳೆ ಛಲುವಾದಿ ನಾರಾಯಣಸ್ವಾಮಿ, ಎಂ.ಪಿ.ರೇಣುಕಾಚಾರ್ಯ, ಜಿ.ಎಂ.ಸಿದ್ದೇಶ್ವರ್ ಮತ್ತಿತರರು ಇದ್ದರು.

ಕಾಂಗ್ರೆಸ್ ಸರಕಾರದ ತಪ್ಪು ಮರೆಮಾಚುವುದಕ್ಕಾಗಿ ಸಿಎಂ ಸಿದ್ದರಾಮಯ್ಯ ಮತ್ತು ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ಕೇಂದ್ರ ಸರಕಾರದ ವಿರುದ್ಧ ಆರೋಪ ಮಾಡಿಕೊಂಡು ಬಂದಿದ್ದಾರೆಯೇ ವಿನಾ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ತುಂಬಾ ಅನುಭವಿ ಮುಖ್ಯಮಂತ್ರಿಗಳಿಗೆ ಒಳ್ಳೆಯ ಅವಕಾಶ ಸಿಕ್ಕಿತ್ತು. ಅವರ ಅನುಭವ ಈ ರಾಜ್ಯದ ಅಭಿವೃದ್ಧಿಗೆ ಬಳಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು.

ನಾನೂ ಕೂಡ ಬಾಗಲಕೋಟೆ ಕ್ಷೇತ್ರದಲ್ಲಿ ನಾಲ್ಕೈದು ದಿನಗಳ ಕಾಲ ಸಂಚರಿಸಿ ಮತದಾರರ ನಡುವೆ ಮಾತನಾಡಿದ್ದೇನೆ. ದಾವಣಗೆರೆಯಲ್ಲೂ ಸಂಚರಿಸಿದ್ದೇನೆ. ನಮ್ಮ ಮುಖಂಡರು, ಕಾರ್ಯಕರ್ತರೊಂದಿಗೆ ಕೆಲಸ ಮಾಡುತ್ತಿದ್ದೇನೆ.

ಗ್ಯಾರಂಟಿ ಮುಖವಾಡ ಹಾಕಿಕೊಂಡು ಬಂದಿರುವ ಕಾಂಗ್ರೆಸ್ ಸರಕಾರ ಮತ್ತು ಸಿಎಂಗೆ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪಚುನಾವಣೆ ಒಂದು ರೀತಿ ಕಬ್ಬಿಣದ ಕಡಲೆಯಾಗಿ ಪರಿವರ್ತನೆಯಾಗಿದೆ. ಹೀಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾವಣಗೆರೆ ದಕ್ಷಿಣ, ಬಾಗಲಕೋಟೆ ಉಳಿಸಿಕೊಳ್ಳಲು ತನ್ನ ಸಚಿವ ಸಂಪುಟದ ಸದಸ್ಯರಿಗೆ ಟಾಸ್ಕ್ ಕೊಟ್ಟಿದ್ದರಿಂದ ಎಲ್ಲರೂ ಇಲ್ಲಿಯೇ ಠಿಕಾಣಿ ಹೂಡಿದ್ದಾರೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ನಮ್ಮ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಾಮಾನ್ಯ ವ್ಯಕ್ತಿಯಾಗಿರುವ ಹಾಗೂ ನಮ್ಮ ಪಕ್ಷದ ಅಭ್ಯರ್ಥಿ ಶ್ರೀನಿವಾಸ ಟಿ.ದಾಸಕರಿಯಪ್ಪ 50 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಾಗಲಕೋಟೆ, ದಾವಣಗೆರೆ ಉಪಚುನಾವಣೆ ಹೊಸ್ತಿಲಲ್ಲೇ ಪೂರ್ಣಾವಧಿ ಸಿಎಂ ಜಪ

ಸಿದ್ದರಾಮಯ್ಯ ಪೂರ್ಣಾವಧಿ ಸಿಎಂ: ಪರಂ

ವಿಶ್ವವಾಣಿ ಸುದ್ದಿಮನೆ ಮೈಸೂರು

ರಾಜ್ಯ ರಾಜಕೀಯದಲ್ಲಿ ತಾತ್ಕಾಲಿಕವಾಗಿ ಶಾಂತವಾಗಿದ್ದ ಮುಖ್ಯಮಂತ್ರಿ ಬದಲಾವಣೆ ಹಾಗೂ ಪೂರ್ಣಾವಧಿ ಮುಖ್ಯಮಂತ್ರಿ ಚರ್ಚೆ, ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ಕೊನೆಗೊಳ್ಳುವ ಮೊದಲೇ ಶುರುವಾಗಿದೆ.

ಉಪಚುನಾವಣೆ ಮತದಾನದ ಬಳಿಕ ಸಚಿವ ಸಂಪುಟ ಪುನಾರಚನೆ, ನಾಯಕತ್ವ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಹಾಗೂ ಡಿಕೆ.ಶಿವಕುಮಾರ್ ದೆಹಲಿ ಪ್ರವಾಸ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು. ಆದರೀಗ ಅದಕ್ಕೂ ಮೊದಲೇ ಗೃಹ ಸಚಿವ ಪರಮೇಶ್ವರ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಬ್ಯಾಟ್ ಬೀಸಿದ್ದು, ಸಿದ್ದ ರಾಮಯ್ಯ ಅವರೇ ಇನ್ನೂ ಎರಡು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಉಪಚುನಾವಣೆ ರಾಜ್ಯ ರಾಜಕೀಯದ ದಿಕ್ಸೂಚಿಯಲ್ಲ

ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶ ರಾಜ್ಯ ರಾಜಕೀಯದ ದಿಕ್ಸೂಚಿಯಲ್ಲ. ಅದು ನಮ್ಮ ಸರಕಾರಕ್ಕೆ ನೀಡುವ ಅಂಕವೂ ಅಲ್ಲ. ಅದರ ಫಲಿತಾಂಶದಿಂದ ಯಾವ ಬದಲಾವಣೆಯೂ ಆಗುವುದಿಲ್ಲ. ಎರಡೂ ಕ್ಷೇತ್ರಗಳಲ್ಲೂ ನಾವು ಗೆಲ್ಲುತ್ತೇವೆ. ಅಲ್ಲಿನ ಮತದಾರರು ನಮ್ಮ ಪರ ತೀರ್ಪು ಕೊಡುತ್ತಾರೆ. ಗ್ಯಾರಂಟಿ ಯೋಜನೆಗಳನ್ನು ಮೀರಿಯೂ ಈ ಸರಕಾರದ ಆಡಳಿತ ದಕ್ಷತೆಗೆ ಜನ ಮತ ಹಾಕುತ್ತಾರೆ. ಬಿಜೆಪಿಯವರು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಆದರೆ, ಜನ ನಮ್ಮ ಪರ ಇದ್ದಾರೆ ಎಂದು ಸಚಿವ ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 2013ರಲ್ಲಿ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಎಂದು ಹೈಕಮಾಂಡ್ ಘೋಷಿಸಿರಲಿಲ್ಲ. ಆದರೂ ಅವರು ಅವಧಿ ಪೂರ್ಣಗೊಳಿಸಿದ್ದರು. 2023ರಲ್ಲೂ ಸಿದ್ದರಾಮಯ್ಯ ಮುಖ್ಯಮಂತ್ರಿ ಎಂದು ಹೈಕಮಾಂಡ್ ಹೇಳಿತ್ತು. ಅಧಿಕಾರದ ಅವಧಿ 2028ರವರೆಗೆ ಇದೆ. ಅದನ್ನು ಪೂರ್ಣಗೊಳಿಸಬೇಕು ತಾನೆ? ನೀವೇ 5 ವರ್ಷವೂ ಸಿಎಂ ಎಂದು ಹೈಕಮಾಂಡ್ ಪ್ರತ್ಯೇಕವಾಗಿ ಸ್ಪಷ್ಟೀಕರಣ ನೀಡುವ ಅಗತ್ಯವಿಲ್ಲ ಪ್ರತಿಪಾದಿಸಿದರು.

ಹೈಕಮಾಂಡ್ ಯಾವ ಗೊಂದಲವನ್ನೂ ಸೃಷ್ಟಿಸಿಲ್ಲ. ಸಿದ್ದರಾಮಯ್ಯ ಅವರ ಅಧಿಕಾರದ ಅವಧಿ ಇಂತಿಷ್ಟೆಂದು ಎಂದಾದರೂ ಹೇಳಿದೆಯೇ? ಬದಲಾವಣೆ ಬಗ್ಗೆ ಮಾತನಾಡಿದೆಯೇ? ಅದರರ್ಥ ಆ ರೀತಿಯ ಯಾವ ಬೆಳವಣಿಗೆಯೂ ಇಲ್ಲ ಎಂದೇ. ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡಬೇಕಾಗಿರುವುದು ಹೈಕಮಾಂಡ್. ಆ ಬಗ್ಗೆ ಎಂದಾದರೂ ಮಾತನಾಡಿದ್ದರೆ ಅದಕ್ಕೊಂದು ಅರ್ಥ ಬರುತ್ತಿತ್ತು. ಅಲ್ಲಿಯವರೆಗೆ ಯಾರಾದರೂ ಹೇಳಿಕೆ ನೀಡಿದರೆ ಅದು ವೈಯಕ್ತಿಕ ಅಭಿಪ್ರಾಯವಷ್ಟೆ ಎಂದು ಹೇಳಿದರು.

ಅಡುಗೆ ಅನಿಲ ಸಿಲಿಂಡರ್ ಕಾಳಸಂತೆಯಲ್ಲಿ ಮಾರಾಟ ಆಗುತ್ತಿದ್ದರೆ, ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಲು ಬರುವುದಿಲ್ಲ. ಆಹಾರ ಇಲಾಖೆಯಿಂದ ಮಾಹಿತಿ ಕೊಟ್ಟರೆ ಪೊಲೀಸರು ದಾಳಿ ನಡೆಸಿ ಕ್ರಮ ಕೈಗೊಳ್ಳುತ್ತಾರೆ.

- ಡಾ.ಜಿ.ಪರಮೇಶ್ವರ, ಗೃಹ ಸಚಿವ

ಡಿಕೆಶಿಗೆ ಯಾವ ಸಮಸ್ಯೆಯೂ ಇಲ್ಲ: ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ದ್ದಾರೆ. ಡಿಸಿಎಂ ಕೂಡ ಹೌದು. ಅವರು ನಮ್ಮ ನಾಯಕ. ಅವರಿಗೆ ಯಾವ ಸಮಸ್ಯೆಯೂ ಆಗಿಲ್ಲ. ನಮ್ಮೆಲ್ಲ ಶಾಸಕರೂ ಮುಖ್ಯಮಂತ್ರಿ ಆಗಲು ಅರ್ಹರು ಎಂದು ಮುಖ್ಯಮಂತ್ರಿಯವರು ವಿಧಾನಮಂಡಲ ಅಧಿವೇಶನದಲ್ಲೇ ಹೇಳಿದ್ದಾರಲ್ಲವೇ? ಅದರಲ್ಲಿ ನಾನೋ, ಇನ್ನೊಬ್ಬರೂ ಅರ್ಹರು ಎಂಬ ಪ್ರಶ್ನೆಯೇ ಬರುವುದಿಲ್ಲ ಎಂದು ಪ್ರತಿಕ್ರಿಯಿಸಿದರು.

ಬಿಜೆಪಿ ಮೊಸಳೆ ಕಣ್ಣೀರಿಗೆ ಜನ ಬಲಿಯಾಗುವುದಿಲ್ಲ



ದಾವಣಗೆರೆ : ಬಿಜೆಪಿ ಅಲ್ಪಸಂಖ್ಯಾತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವುದು ಸೋಜಿಗ. ಇವರ ಅಧಿಕಾರಾವಧಿಯಲ್ಲಿ ಅಲ್ಪಸಂಖ್ಯಾತರನ್ನು ಹೇಗೆ ನಡೆಸಿಕೊಂಡಿದ್ದಾರೆ ಎನ್ನುವುದು ಯಾರಾದರೂ ಮರೆಯಲು ಸಾಧ್ಯವೇ? ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಜೆಪಿ ಆಡಳಿತಾವಧಿಯಲ್ಲಿ ಹಲಾಲ್ ಕಟ್, ಹಿಜಾಬ್ ಸೇರಿದಂತೆ ಅಲ್ಪಸಂಖ್ಯಾತರಿಗೆ ಅನೇಕ ತೊಂದರೆಗಳನ್ನು ನೀಡಿದ್ದಾರೆ. ಈಗ ದಕ್ಷಿಣ ವಿಧಾನಸಭಾ ಚುನಾವಣೆಯಲ್ಲಿ ಪ್ರೀತಿ ಬಂದಿದೆ ಎಂದು ವ್ಯಂಗ್ಯವಾಡಿದರು.

ಶಾಂತಿ ಸೌಹಾರ್ದತೆಗೆ ಹೆಸರಾದ ಜಿಲ್ಲೆ. ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಇಲ್ಲಿ ಕಾಂಗ್ರೆಸ್ ಅನ್ನು ಬೆಳೆಸಿವೆ. ಇಲ್ಲಿರುವ ಕಾಂಕ್ರೀಟ್ ರಸ್ತೆಗಳು ಬೆಂಗಳೂರಿನಲ್ಲೂ ಇಲ್ಲ. ಆದರೆ, ಬಿಜೆಪಿಯವರು ಜನರನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆಯಾಗಿದ್ದು, ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಅವರು ನೂರಕ್ಕೆ ನೂರರಷ್ಟು ಗೆಲುವು ಸಾಧಿಸಲಿದ್ದಾರೆ ಎಂದರು.

ದೇಶದಲ್ಲಿರುವ ಇಂಧನ ಸಮಸ್ಯೆ, ವಾಣಿಜ್ಯ ಅನಿಲ ಸಮಸ್ಯೆಗಳು, ಬೆಲೆ ಏರಿಕೆಯ ಬಗ್ಗೆ ಮಾತನಾಡುವುದು ಬಿಟ್ಟು ನಮ್ಮ ಪ್ರಧಾನಿಯವರು ಚಲನಚಿತ್ರಗಳ ಬಗ್ಗೆ ವಿಮರ್ಶೆ ಮಾಡುತ್ತಿದ್ದಾರೆ. ಇಂತಹ ದುರ್ಗತಿ ಪ್ರಧಾನಿಯವರಿಗೆ ಬರಬಾರದಿತ್ತು. ಜನರ ಕಷ್ಟಗಳಿಗೆ ಪರಿಹಾರವೇನು ಎಂಬ ಬಗ್ಗೆ ಬಿಜೆಪಿಯವರಿಗೆ ಕಿಂಚಿತ್ತೂ ಕಾಳಜಿ ಇಲ್ಲ.

- ಬಿ.ಕೆ.ಹರಿಪ್ರಸಾದ, ವಿಧಾನ ಪರಿಷತ್ ಸದಸ್ಯ

ವಿಶ್ವವಾಣಿ

ಸಂಪಾದಕೀಯ

ಉತ್ತರಮುಖಿ ರಾಜಕಾರಣದ ಆತಂಕ

ಕೇರಳ ಚುನಾವಣೆ ಪ್ರಚಾರದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಸ್ತಾವಿತ ಲೋಕಸಭೆ ಕ್ಷೇತ್ರ ಪುನರ್‌ವಿಂಗಡಣೆ ಬಗ್ಗೆ ಮಾತನಾಡುತ್ತಾ ಇದರಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗದು. ಎಲ್ಲ ರಾಜ್ಯಗಳಲ್ಲೂ ಶೇ.50ರಷ್ಟು ಸೀಟುಗಳನ್ನು ಹೆಚ್ಚಿಸಲಾಗುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ ಅವರು ಕ್ಷೇತ್ರ ಪುನರ್ ವಿಂಗಡಣೆಯನ್ನು ಕರ್ನಾಟಕದಂತಹ ರಾಜ್ಯಗಳ ಧ್ವನಿ ದುರ್ಬಲಗೊಳಿಸಲೆಂದೇ ವಿನ್ಯಾಸಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಸಿದ್ದರಾಮಯ್ಯನವರ ಈ ಆತಂಕ ಅಸಹಜವೇನಲ್ಲ. ಸದ್ಯದ ಅಂದಾಜು ಪ್ರಕಾರ, ಪುನರ್‌ವಿಂಗಡಣೆಯ ನಂತರ ಲೋಕಸಭೆಯ ಒಟ್ಟು ಸ್ಥಾನಗಳ ಸಂಖ್ಯೆ 800 ದಾಟಬಹುದು. ಸದ್ಯ 80 ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶ ಭವಿಷ್ಯದಲ್ಲಿ 140 ಸೀಟುಗಳನ್ನು ಪಡೆಯುವ ನಿರೀಕ್ಷೆ ಇದೆ. ಆದರೆ ಪ್ರಸ್ತುತ 28 ಸೀಟುಗಳನ್ನು ಹೊಂದಿರುವ ಕರ್ನಾಟಕ ಕೇವಲ 40 ಸ್ಥಾನಗಳನ್ನು ಪಡೆಯುವ ಸಾಧ್ಯತೆ ಇದೆ. ಇದರಿಂದ ದೇಶದ ಚುಕ್ಕಾಣಿ ಹಿಡಿಯುವ ಶಕ್ತಿ ಕೇವಲ ಹಿಂದಿ ಭಾಷಿಕ ರಾಜ್ಯಗಳ ಪಾಲಾಗಲಿದೆ. ದಕ್ಷಿಣದ ರಾಜ್ಯಗಳ ಸಮಸ್ಯೆಗಳು, ಭಾಷಾ ಹಿತಾಸಕ್ತಿಗಳು ಮತ್ತು ಸಾಂಸ್ಕೃತಿಕ ಬೇಡಿಕೆಗಳು ದೆಹಲಿಯ ಅಧಿಕಾರದ ಅಬ್ಬರದಲ್ಲಿ ಕೇವಲ 'ಧ್ವನಿಗಳಾಗಿ' ಉಳಿಯುತ್ತವೆಯೇ ಹೊರತು 'ನಿರ್ಧಾರಗಳಾಗಿ' ಬದಲಾಗುವುದಿಲ್ಲ ಎಂಬ ಆತಂಕ ಸಾರ್ವತ್ರಿಕವಾಗಿದೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣಗಳು ಕಳೆದ 5 ದಶಕಗಳಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸುವ ಮೂಲಕ ತಲಾವಾರು ಆದಾಯ, ಶಿಕ್ಷಣ ಮತ್ತು ಆರೋಗ್ಯ ಸೂಚ್ಯಂಕಗಳಲ್ಲಿ ರಾಷ್ಟ್ರಮಟ್ಟದಲ್ಲಿ ಗಮನಾರ್ಹ ಸಾಧನೆ ಮಾಡಿವೆ. ಜನಸಂಖ್ಯೆಯನ್ನು ಮಾನದಂಡವಾಗಿಟ್ಟುಕೊಂಡು ಕ್ಷೇತ್ರಗಳನ್ನು ಮರುಹಂಚಿಕೆ ಮಾಡಿದರೆ, ಜನಸಂಖ್ಯೆ ಸ್ಫೋಟಗೊಂಡಿರುವ ಉತ್ತರ ಭಾರತದ ರಾಜ್ಯಗಳು ಹೆಚ್ಚಿನ ಸೀಟುಗಳನ್ನು ಪಡೆಯುತ್ತವೆ. ಪುನರ್‌ವಿಂಗಡಣೆಯು ಪ್ರಾದೇಶಿಕ ಅಸಮಾನತೆಯನ್ನು ಹೆಚ್ಚಿಸಿದರೆ ಅದು ಅಂತಿಮವಾಗಿ ಪ್ರತ್ಯೇಕತೆಯ ಕೂಗಿಗೆ ಕಾರಣವಾಗಬಹುದು. ದೇಶದ ಭಾವನಾತ್ಮಕ ಏಕತೆಗೆ ಧಕ್ಕೆ ತರಬಹುದು. ರಾಜ್ಯಗಳ ಗಾತ್ರ ಏನೇ ಇರಲಿ, ಅಮೆರಿಕದಂತೆ ಮೇಲ್ಮನೆಯಲ್ಲಿ (ರಾಜ್ಯಸಭೆ) ಎಲ್ಲಾ ರಾಜ್ಯಗಳಿಗೆ ಸಮಾನ ಪ್ರಾತಿನಿಧ್ಯ ನೀಡುವ ಬಗ್ಗೆ ಚಿಂತಿಸಬೇಕಿದೆ.

ಸೊಂಪಾದಕೀಯ

ಬೌನ್ಸ್‌ಗೆ 'ಕೈ' ಹಾಕಿದ ನಾಯಕ !

ಚುನಾವಣೆ ಬಂತೆಂದರೆ ಸಾಕು ಅಭ್ಯರ್ಥಿಗಳು ರಸ್ತೆ ಮಾಡಿಸುತ್ತೇವೆ, ಕೆರೆ ತುಂಬಿಸುತ್ತೇವೆ ಎಂದು ಭರವಸೆ ನೀಡುತ್ತಾರೆ. ಆದರೆ ಕೇರಳದ ಇಡುಕ್ಕಿ ಕಾಂಗ್ರೆಸ್ ಅಧ್ಯಕ್ಷ ಸಿ.ಪಿ. ಮ್ಯಾಥ್ಯೂ ಅವರ ಸ್ಟೈಲೇ ಬೇರೆ! ಮ್ಯಾಥ್ಯೂ ಅವರ ಹೊಸ ಸಂಶೋಧನೆಯ ಪ್ರಕಾರ, ಎದುರಾಳಿಗಳನ್ನು ಜೈಲಿಗೆ ಅಟ್ಟಲು ದೊಡ್ಡ ಪುರಾವೆಗಳ ಅಗತ್ಯವಿಲ್ಲ. ಕೇವಲ ಒಂದು 'ಹರಿದ ಬೌಸ್' ಇದ್ದರೆ ಸಾಕು, ಎಂತಹ ಬಲಿಷ್ಠ ವಿರೋಧಿಯನ್ನೂ ಸ್ಟೇಷನ್ ಮೆಟ್ಟಿಲು ಹತ್ತಿಸಬಹುದು! ಭಾಷಣದಲ್ಲಿ ಅವರು ಮಹಿಳಾ ಕಾರ್ಯಕರ್ತೆಯರಿಗೆ ಕೊಟ್ಟ ಐಡಿಯಾ ಕೇಳಿದರೆ ಆಸ್ಕರ್ ಪ್ರಶಸ್ತಿ ವಿಜೇತ ನಟರೂ ಒಮ್ಮೆ ಮಂಕಾಗಬಹುದು. ಜಗಳ ಆದ ತಕ್ಷಣ ಬಟ್ಟೆ ಹರಿದುಕೊಳ್ಳಿ, ಆಮೇಲೆ ನೋಡಿ ಪೊಲೀಸ್ ಸ್ಟೇಷನ್‌ನಲ್ಲಿ ನಿಮ್ಮ ಕೇಸ್ ಹೇಗೆ ಮಿಂಚುತ್ತದೆ! ಎಂಬ ಅವರ ಮಾತುಗಳು, ರಾಜ್ಯದಲ್ಲಿ 'ಬಟ್ಟೆ ಹರಿಯುವ ತರಬೇತಿ ಕೇಂದ್ರ'ಗಳು ತೆರೆಯುವ ಮುನ್ಸೂಚನೆ ನೀಡುತ್ತಿವೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯನ್ನು ಮ್ಯಾಥ್ಯೂ ಅವರು ಬಳಸಿಕೊಂಡ ರೀತಿ ಇದೆಯಲ್ಲ, ಅದು ನಿಜಕ್ಕೂ ಅದ್ಭುತ! ಈ ಕಾನೂನು ಸಂತ್ರಸ್ತರ ರಕ್ಷಣೆಗಾಗಿ ಇದೆ ಎಂದು ನಾವೆಲ್ಲಾ ಅಂದುಕೊಂಡಿದ್ದರೆ, ಮ್ಯಾಥ್ಯೂ ಸಾಹೇಬರು ಇದನ್ನು ಜಾಮೀನು ಸಿಗದಂತೆ ಮಾಡುವ ಮದ್ದು ಎಂದು ಬ್ರ್ಯಾಂಡ್ ಮಾಡಿದ್ದಾರೆ. ಈ ಐತಿಹಾಸಿಕ ಭಾಷಣ ನಡೆಯುವಾಗ ವೇದಿಕೆಯ ಮೇಲೆ ಹಿರಿಯ ನಾಯಕರು ಸಾಲಾಗಿ ಕುಳಿತಿದ್ದರು. ಆದರೆ ಎಲ್ಲರೂ 'ಮೌನ ಮುನಿ'ಗಳಾಗಿದ್ದರು. ಅಂದ ಹಾಗೆ, ಈ ಮ್ಯಾಥ್ಯೂ ಅವರಿಗೆ ಕೈ ಕೆಲಸ ಮಾಡುವ ಹವ್ಯಾಸ ಮೊದಲಿನಿಂದಲೂ ಇದೆ. ಮೊನ್ನೆ ತಾನೇ ಸ್ವಂತ ಪಕ್ಷದ ಕಾರ್ಯಕರ್ತನ ಮೇಲೆ ಕೈ ಚಲಾಯಿಸಿ ಸುದ್ದಿಯಾಗಿದ್ದರು. ಆದರೆ ಪೊಲೀಸರಿಗೆ ಮಾತ್ರ ಒಂದು ಕಿವಿಮಾತು, ಯಾರಾದರೂ ಬಟ್ಟೆ ಹರಿದುಕೊಂಡು ಬಂದರೆ, ಮೊದಲು ಅವರ ಕೈಯಲ್ಲಿ ಕಾಂಗ್ರೆಸ್ ಕರಪತ್ರ ಇದೆಯೇ ಎಂದು ಚೆಕ್ ಮಾಡಿ!

ಸಂಪಾದಕರ ಸದ್ಯಶೋಧನೆ

ಅಂಬಾಸಿಡರ್ ಕಾರಿನ ಮೂಲಕ ಭಾರತ

ಇತ್ತೀಚೆಗೆ ನನಗೆ ಬೆಂಗಳೂರಿನ ತರಗುಪೇಟೆಯಲ್ಲಿರುವ ರದ್ದಿ ಅಂಗಡಿಯಲ್ಲಿ ಖ್ಯಾತ ಫೋಟೋಗ್ರಾಫರ್ ರಘುಬೀರ್ ಸಿಂಗ್ ಅವರ 'A Way into India' ಪುಸ್ತಕ ಸಿಕ್ಕಿತು. ಅದ್ಯಾವ ಪುಣ್ಯಾತ್ಮ ಈ ಪುಸ್ತಕವನ್ನು ತೂಕಕ್ಕೆ ಹಾಕಿದ್ದನೋ ಏನೋ? ಇಲ್ಲದಿದ್ದರೆ ಈ ಕೃತಿ ನನಗೆ ಸಿಗುತ್ತಿರಲಿಲ್ಲ. ಇದು ಭಾರತದ ಆತ್ಮವನ್ನು ಅದರ ರಸ್ತೆಗಳ ಮೂಲಕ ತೋರಿಸುವ ಒಂದು ಅದ್ಭುತ ಕಲಾಕೃತಿ. ಭಾರತದ ಹತ್ತು ಅಗ್ರಗಣ್ಯ ಛಾಯಾಚಿತ್ರಗ್ರಾಹಕರಲ್ಲಿ ರಘುಬೀರ್ ಸಿಂಗ್ ನಿಸ್ಸಂದೇಹವಾಗಿ ಒಬ್ಬರು. ಅವರು ಭಾರತದ ಭೂದೃಶ್ಯಗಳು ಮತ್ತು ಜನರ ಬದುಕನ್ನು ದಾಖಲಿಸುವ ಡಾಕ್ಯುಮೆಂಟರಿ ಶೈಲಿಯ ಛಾಯಾಚಿತ್ರಗಳಿಗೆ ಜಗತ್ಪ್ರಸಿದ್ಧರಾಗಿದ್ದಾರೆ. ಸ್ವಯಂ-ಕಲಿತ ಛಾಯಾಚಿತ್ರಗ್ರಾಹಕರಾದ ಇವರು ಭಾರತದಲ್ಲಿ ಕೆಲಸ ಮಾಡುತ್ತಾ ಪ್ಯಾರಿಸ್, ಲಂಡನ್ ಮತ್ತು ನ್ಯೂಯಾರ್ಕ್ ನಗರಗಳಲ್ಲಿ ವಾಸವಾಗಿದ್ದರು. ತಮ್ಮ ವೃತ್ತಿಜೀವನದಲ್ಲಿ ಇವರು ನ್ಯಾಷನಲ್ ಜಿಯೋಗ್ರಾಫಿಕ್ ಮ್ಯಾಗಜಿನ್, ದ ನ್ಯೂಯಾರ್ಕ್ ಟೈಮ್ಸ್, ದ ನ್ಯೂಯಾರ್ಕರ್ ಮತ್ತು ಟೈಮ್ ನಿಯತಕಾಲಿಕೆಗಳಿಗಾಗಿ ಕೆಲಸ ಮಾಡಿದ್ದರು. 1970ರ ದಶಕದ ಆರಂಭದಲ್ಲಿ, ಬಣ್ಣದ ಛಾಯಾಗ್ರಹಣವು ಇನ್ನೂ ಅಷ್ಟಾಗಿ ಪ್ರಚಲಿತದಲ್ಲಿಲ್ಲದ ಕಾಲದಲ್ಲೇ ಅದನ್ನು ಮರುಶೋಧಿಸಿದ ಮೊದಲ ಛಾಯಾಚಿತ್ರಗ್ರಾಹಕರಲ್ಲಿ ಇವರೂ ಒಬ್ಬರು. 'A Way into India' ಅವರ ಕೊನೆಯ ಮತ್ತು ಅತ್ಯಂತ ಪ್ರಭಾವಶಾಲಿ ಕೃತಿಗಳಲ್ಲಿ ಒಂದು. ಈ ಪುಸ್ತಕದ ಕೇಂದ್ರಬಿಂದು ಭಾರತದ ಐಕಾನಿಕ್ ಕಾರು 'ಅಂಬಾಸಿಡರ್'. ಈ ಪುಸ್ತಕದಲ್ಲಿ ಅವರು ಅಂಬಾಸಿಡರ್ ಕಾರನ್ನು ಕೇವಲ ಒಂದು ವಾಹನವಾಗಿ ನೋಡಿಲ್ಲ. ಬದಲಿಗೆ ಅದನ್ನು ಭಾರತವನ್ನು ನೋಡುವ ಒಂದು ಚೌಕಟ್ಟನ್ನಾಗಿ (Frame) ಬಳಸಿಕೊಂಡಿದ್ದಾರೆ. ಸಿಂಗ್ ಅವರು ಕಾರಿನ ಒಳಗೆ ಕುಳಿತು, ಅದರ ಕಿಟಕಿಗಳ ಮೂಲಕ ಹೊರಗಿನ ಜಗತ್ತನ್ನು ಸೆರೆಹಿಡಿದಿದ್ದಾರೆ. ಇದು ನೋಡುಗರಿಗೆ ಕಾರಿನ ಒಳಗಿನಿಂದ ಭಾರತದ ಗದ್ದಲ, ಸೌಂದರ್ಯ ಮತ್ತು ಜನಜೀವನವನ್ನು ನೋಡುತ್ತಿರುವ ಅನುಭವ ನೀಡುತ್ತದೆ. ಭಾರತದ ಬ್ರಿಟಿಷ್ ಪರಂಪರೆ ಮತ್ತು ಸ್ವತಂತ್ರ ಭಾರತದ ಆಧುನಿಕತೆಯ ನಡುವಿನ ಕೊಂಡಿಯಾಗಿ ಅಂಬಾಸಿಡರ್ ಇಲ್ಲಿ ಕಾಣಿಸಿಕೊಳ್ಳುತ್ತದೆ. ಪಾಶ್ಚಿಮಾತ್ಯ ಛಾಯಾಚಿತ್ರ ಗ್ರಾಹಕರು ಭಾರತವನ್ನು ಕೇವಲ ಬಡತನದ ಅಥವಾ ಕಪ್ಪು-ಬಿಳುಪಿನ ದೃಷ್ಟಿಕೋನದಲ್ಲಿ ನೋಡುವುದನ್ನು ಸಿಂಗ್ ವಿರೋಧಿಸಿದ್ದರು. ಕಾರಿನ ಹೊಳೆಯುವ ಮೈಮೇಲೆ ಬೀಳುವ ಪ್ರತಿಬಿಂಬಗಳು ಮತ್ತು ಹೊರಗಿನ ದೃಶ್ಯಗಳ ಸಮ್ಮಿಲನವು ಒಂದು ರೀತಿಯ 'ಮಲ್ಟಿ-ಲೇಯರ್' ಚಿತ್ರಗಳನ್ನು ಸೃಷ್ಟಿಸುತ್ತದೆ. ಕಲ್ಕತ್ತಾದ ಮಳೆಬಿಲ್ಲು ಹಾದಿಗಳಿಂದ ಹಿಡಿದು, ರಾಜಸ್ಥಾನದ ಮರಳುಗಾಡುಗಳವರೆಗೆ, ಗಂಗಾ ನದಿಯ ದಡದಿಂದ ಮುಂಬೈನ ಗಿಜಿಗುಡುವ ರಸ್ತೆಗಳವರೆಗೆ, ಈ ಪುಸ್ತಕವು ಭಾರತದಾದ್ಯಂತದ ಪಯಣವನ್ನು ಒಳಗೊಂಡಿದೆ. ಸಿಂಗ್ ಅವರು 'ನಿರ್ಣಾಯಕ ಕ್ಷಣ' (Decisive Moment) ತತ್ವವನ್ನು ಭಾರತೀಯ ಸಂದರ್ಭಕ್ಕೆ ತಕ್ಕಂತೆ ರೂಪಾಂತರಿಸಿದರು. ಕಾರಿನ ಕಿಟಕಿ, ಅದರ ಬಾಗಿಲಿನ ಹಿಡಿಕೆ ಅಥವಾ ವಿಂಡ್-ಶೀಲ್ಡ್ ಅನ್ನು ಅವರು ಫ್ರೇಮ್‌ಗಳಾಗಿ ಬಳಸುವ ರೀತಿ ಅದ್ಭುತವಾಗಿದೆ. ಇದು ಚಿತ್ರಕ್ಕೆ ಒಂದು ಆಳವನ್ನು ನೀಡುತ್ತದೆ. ಇದು ನೋಡುಗರಿಗೆ 'ನಾನೂ ಆ ಕಾರಿನಲ್ಲಿ ಕುಳಿತು ಪ್ರಯಾಣಿಸುತ್ತಿದ್ದೇನೆ' ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಈ ಪುಸ್ತಕದ ಶ್ರೇಷ್ಠತೆ ಇರುವುದು ಸಿಂಗ್ ಅವರು ಆರಿಸಿಕೊಂಡ ದೃಷ್ಟಿಕೋನದಲ್ಲಿ. ಅವರು ರಸ್ತೆಯ ಮೇಲೆ ನಿಂತು ಚಿತ್ರಗಳನ್ನು ತೆಗೆಯುವ ಬದಲು, ಹೆಚ್ಚಾಗಿ ಕಾರಿನ ಹಿಂದಿನ ಸೀಟಿನಲ್ಲಿ ಕುಳಿತು ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಈ ಪುಸ್ತಕವು 1990ರ ದಶಕದ ಭಾರತದ ಬದಲಾವಣೆಯನ್ನು ದಾಖಲಿಸುತ್ತದೆ. ಇದು ಭಾರತೀಯ ಮಧ್ಯಮ ವರ್ಗದ ಕನಸುಗಳು ಮತ್ತು ರಸ್ತೆ ಬದಿಯ ಸಾಮಾನ್ಯ ಜನರ ವಾಸ್ತವದ ನಡುವಿನ ಸಂಘರ್ಷ ಮತ್ತು ಸಾಮರಸ್ಯವನ್ನು ಎತ್ತಿ ತೋರಿಸುತ್ತದೆ. ಅಂಬಾಸಿಡರ್ ಕಾರನ್ನು ಕನ್ನಡಿಯಂತೆ ಬಳಸಿಕೊಂಡು ಅವರು ದೇಶದ ವೈವಿಧ್ಯತೆ, ಗೊಂದಲ ಮತ್ತು ಅದಮ್ಯ ಚೇತನವನ್ನು ಸೆರೆಹಿಡಿದಿದ್ದಾರೆ. ಇದು ಕೇವಲ ಫೋಟೋಗ್ರಫಿ ಆಸಕ್ತರಿಗಷ್ಟೇ ಅಲ್ಲ, ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಬಯಸುವವರಿಗೂ ಒಂದು ಪಠ್ಯಪುಸ್ತಕದಂತಿದೆ. 'ಭಾರತವನ್ನು ಅರ್ಥಮಾಡಿಕೊಳ್ಳಲು ಅದರ ರಸ್ತೆಗಳೇ ದಾರಿ' ಎಂಬ ಸತ್ಯವನ್ನು ಈ ಪುಸ್ತಕವು ನಮಗೆ ಮನದಟ್ಟು ಮಾಡಿಕೊಡುತ್ತದೆ. ರಘುಬೀರ್ ಸಿಂಗ್ ಈ ಮೊದಲು 'ಗಂಗಾ' ನದಿಯ ಮೇಲೆ ಪುಸ್ತಕ ಮಾಡಿದ್ದರು. ಅವರು ನದಿಯನ್ನು ಭಾರತದ ಸಂಸ್ಕೃತಿಯ ವಾಹಕ ಎಂದು ಕರೆದಿದ್ದರು. ಆದರೆ ಈ ಪುಸ್ತಕದಲ್ಲಿ ಅವರು 'ಅಂಬಾಸಿಡರ್ ಕಾರನ್ನೇ ಆಧುನಿಕ ಭಾರತದ ಗಂಗೆ' ಎಂದು ಪರಿಭಾವಿಸುತ್ತಾರೆ.

ಒಳಯೇಟಿನ ಆತಂಕದಲ್ಲಿದೆಯೇ ಕಾಂಗ್ರೆಸ್?



ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ
vveditoped@gmail.com

ರಾಜ್ಯದಲ್ಲಿ ಮತ್ತೊಂದು ಉಪಚುನಾವಣೆ ಎದುರಾಗಿದೆ. ಭರ್ಜರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿದಿರುವ ಕಾಂಗ್ರೆಸ್ ಪಕ್ಷಕ್ಕೆ ಈ ಉಪಚುನಾವಣೆಯ ಸೋಲು-ಗೆಲುವಿನಿಂದ ಸರಕಾರ ನಡೆಸುವ ವಿಷಯದಲ್ಲಿ, ಬಹುಮತದ ವಿಷಯದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲವಾದ್ದರಿಂದ ಒಂದರ್ಥದಲ್ಲಿ 'ಆಟಕ್ಕುಂಟು-ಲೆಕ್ಕಕ್ಕಿಲ್ಲ' ಆದರೂ ಚುನಾವಣೆ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಲು ಮ್ಯಾಜಿಕ್ ನಂಬರ್ ಲೆಕ್ಕಾಚಾರ ಮೀರಿದ ರಾಜಕೀಯ ಅಡಗಿದೆ.

ಇದರೊಂದಿಗೆ ತಮ್ಮದೇ ಪಕ್ಷದ ಶಾಸಕರ ನಿಧನದಿಂದ ತೆರವಾಗಿರುವ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರಗಳಲ್ಲಿ ನಡೆಯಲಿರುವ ಉಪಚುನಾವಣೆ ವಿಷಯದಲ್ಲಿ ಕಾಂಗ್ರೆಸ್ ಆರಂಭದಲ್ಲಿ ಸುಲಭ ಗೆಲುವಿನ ಲೆಕ್ಕಾಚಾರವನ್ನು ಇಟ್ಟುಕೊಂಡಿತ್ತು. ಉಪಚುನಾವಣೆಯಲ್ಲಿ ಆಡಳಿತ ಪಕ್ಷ ಹಾಗೂ ಅನುಕಂಪದ ಅಲೆ ಎರಡೂ ಸೇರಿದರೆ ಗೆಲ್ಲುವುದು ಬಹುದೊಡ್ಡ ಸವಾಲೇನಲ್ಲ ಎನ್ನುವುದು ರಾಜಕೀಯದ ಮೊದಲ ಮೆಟ್ಟಿಲು ಇಡುತ್ತಿರುವವರಿಗೂ ಗೊತ್ತಿರುವ ವಿಷಯ. ಆದರೆ ಎರಡೂ ಕ್ಷೇತ್ರಕ್ಕೆ ಚುನಾವಣೆ ಘೋಷಣೆಯಾದ ಬಳಿಕ ನಡೆದ ಆಂತರಿಕ ಸಂಘರ್ಷ, ಮತದಾನ ಹತ್ತಿರವಾಗುತ್ತಿದ್ದಂತೆ ಬರುತ್ತಿರುವ 'ಗುಪ್ತ' ಮಾಹಿತಿಗಳು ಪಕ್ಷದ ನಾಯಕರನ್ನು ಗೊಂದಲ ಹಾಗೂ ಆತಂಕಕ್ಕೆ ಸಿಲುಕಿಸಿವೆ ಎಂದರೆ ತಪ್ಪಾಗುವುದಿಲ್ಲ.

ಹಾಗೇ ನೋಡಿದರೆ, ಶಾಸಕರು ನಿಧನ ಹೊಂದಿದಾಗ ನಡೆಯುವ ಯಾವುದೇ ಉಪಚುನಾವಣೆಗಳಾದರೂ, ಅವುಗಳಲ್ಲಿ ಆ ಪಕ್ಷದ ಅಥವಾ ಕುಟುಂಬದ ಅಭ್ಯರ್ಥಿಗಳು ಅನುಕಂಪದ ಆಧಾರದಲ್ಲಿ ಸುಲಭ ಗೆಲುವು ದಾಖಲಿಸುತ್ತಾರೆ. ಇಲ್ಲದಿದ್ದರೆ ಆಡಳಿತಾರೂಢ ಪಕ್ಷದ ಅಭ್ಯರ್ಥಿಗಳಿಗೆ ಗೆಲುವು ನಿಶ್ಚಿತ ಎನ್ನುವುದು ರಾಜಕೀಯ ಗಣಿತ. ಆದರೆ ಈ ಬಾರಿ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಹಾಕುತ್ತಿರುವ ಶ್ರಮ ನೋಡಿದರೆ, ಈ ರಾಜಕೀಯ ಲೆಕ್ಕಾಚಾರಗಳು ತಲೆಕೆಳಗಾಗುವ ಆತಂಕವಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ, ಈ ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಪ್ರದಾಯದಂತೆ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಲು ಮುಂದಾಗುತ್ತಿದ್ದಂತೆ, ಭಿನ್ನ ರೀತಿಯ ಸಮಸ್ಯೆಗಳು ಉದಯಿಸಿದವು. ಬಾಗಲಕೋಟೆಯಲ್ಲಿ ಮೇಟಿ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎನ್ನುವುದಕ್ಕೆ ಯಾರದ್ದೇ ತಕರಾರು ಇಲ್ಲದಿದ್ದರೂ, ನಾಲ್ವರಲ್ಲಿ ಯಾರಿಗೆ ಕೊಡಬೇಕು ಎನ್ನುವ ವಿಷಯಕ್ಕೆ ಹೈಡ್ರಾಮಾ ನಡೆಯಿತು. ಕೊನೆಗೆ ಸ್ವತಃ ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ ನಾಲ್ವರು ಮಕ್ಕಳನ್ನು ಕೂರಿಸಿಕೊಂಡು ಸಂಧಾನ ಮಾಡಿ, ಟಿಕೆಟ್‌ಗಾಗಿ ಹೋರಾಡುತ್ತಿದ್ದ ಇಬ್ಬರ ಬದಲಿಗೆ ಮೂರನೇ ಮಗನಿಗೆ ಟಿಕೆಟ್ ನೀಡುವ ಸೂತ್ರವನ್ನು ಸಿದ್ಧಪಡಿಸಿ ಅದಕ್ಕೆ ಇಡೀ ಕುಟುಂಬದ ಒಪ್ಪಿಗೆ ಪಡೆಯಬೇಕಾಯಿತು.

ಇನ್ನು ದಾವಣಗೆರೆ ದಕ್ಷಿಣದಲ್ಲಿ ಶಾಮನೂರು ಶಿವಶಂಕರಪ್ಪ ನಿಧನದ ಬಳಿಕ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಬೇಡಿಕೆ ಒಂದೆಡೆಯಾಗಿದ್ದರೆ, ಇನ್ನೊಂದೆಡೆ ಮಲ್ಲಿಕಾರ್ಜುನ ಪುತ್ರ ಸಮರ್ಥ ಬದಲಿಗೆ ಶಾಮನೂರು ಶಿವಶಂಕರಪ್ಪನವರ ಇನ್ನಿಬ್ಬರು ಪುತ್ರರಲ್ಲಿ ಒಬ್ಬರಿಗೆ ಟಿಕೆಟ್ ನೀಡಬೇಕು ಎನ್ನುವ ವಾದ ಶುರುವಾಗಿತ್ತು. ಶಾಮನೂರು ಕುಟುಂಬದ ಸಮಸ್ಯೆಯನ್ನು ಎಸ್‌ಎಸ್ ಶೀಘ್ರವೇ ಪರಿಹರಿಸಿಕೊಂಡರು. ಆದರೆ ಮುಸ್ಲಿಂ ಸಮುದಾಯದ ತೀವ್ರ ವಿರೋಧಕ್ಕೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಲಿಲ್ಲ, ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದ ಸಾದಿಕ್ ಪೈಲ್ವಾನ್ ಅವರ ನಾಮಪತ್ರ ತೆಗೆಸುವಲ್ಲಿ ಕಾಂಗ್ರೆಸ್ ಸಫಲವಾಗದಿದ್ದರೂ, ಕಣದಲ್ಲಿ 'ತಟಸ್ಥ'ರಾಗುವಂತೆ ಮಾಡುವಲ್ಲಿ ರಾಜ್ಯ ನಾಯಕರ ಸರಣಿ ಸಂಧಾನ ಸಭೆಯ ಮೂಲಕ ಸಾಧ್ಯವಾಯಿತು. ಆದರೂ, ದಾವಣಗೆರೆ ವಿಷಯದಲ್ಲಿ ನಾಯಕರಲ್ಲಿ ಕೊಂಚ ಅಳುಕು ಇರಲು ಪ್ರಮುಖ ಕಾರಣವೆಂದರೆ, ಅಲ್ಲಿ ಸ್ಪರ್ಧಿಸಿರುವ ಪಕ್ಷೇತರ ಅಭ್ಯರ್ಥಿಗಳು ಹಾಗೂ ಎಸ್‌ಡಿಪಿಐ ಅಭ್ಯರ್ಥಿ. ಸದ್ಯ ಕಣದಲ್ಲಿ ಬರೋಬ್ಬರಿ 10 ಪಕ್ಷೇತರ ಅಭ್ಯರ್ಥಿಗಳಿದ್ದು, ಈ ಎಲ್ಲರೂ ಮುಸ್ಲಿಮರಾಗಿದ್ದಾರೆ. ಇದರೊಂದಿಗೆ ಎಸ್‌ಡಿಪಿಐ ಅಭ್ಯರ್ಥಿಯೂ ಮುಸ್ಲಿಂ ಆಗಿರುವುದರಿಂದ, ಸಮುದಾಯದ ಮತಗಳು ವಿಭಜನೆಯಾಗುತ್ತಾ ಹೋದರೆ, ಭಾರಿ ಹೊಡೆತ ಬೀಳುತ್ತದೆ ಎನ್ನುವುದು ಕಾಂಗ್ರೆಸ್ ನಾಯಕರ ಆತಂಕವಾಗಿದೆ. 10 ಪಕ್ಷೇತರ ಅಭ್ಯರ್ಥಿಗಳು ಹಾಗೂ ಎಸ್‌ಡಿಪಿಐ ಅಭ್ಯರ್ಥಿ 10ರಿಂದ 12 ಸಾವಿರ ಮತಗಳನ್ನು ಕಾಂಗ್ರೆಸ್‌ನಿಂದ ಕಿತ್ತುಕೊಂಡರೂ ಇಡೀ ಚುನಾವಣೆಯ ಲೆಕ್ಕಾಚಾರವೇ ಬದಲಾಗುವ ಆತಂಕ ನಾಯಕರಲ್ಲಿದೆ. ಮುಸ್ಲಿಂ ಸಮುದಾಯದ ಶೇ.60ರಿಂದ 70ರಷ್ಟು ಮತಗಳಿರುವುದರಿಂದ, ಈ ಮತಗಳು ಕಾಂಗ್ರೆಸ್ ಬಾರದಿದ್ದರೂ ಪರವಾಗಿಲ್ಲ ಪಕ್ಷೇತರ ಅಭ್ಯರ್ಥಿಗಳಿಗೆ ಹರಿದು ಹಂಚದಂತೆ ನೋಡಿಕೊಳ್ಳುವ ಪ್ಲಾನ್ ಬಿ ಅನ್ನು ನಾಯಕರು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಮುಸ್ಲಿಂ ಜನಪ್ರತಿನಿಧಿಗಳೆಲ್ಲ ದಾವಣಗೆರೆಯಲ್ಲಿಯೇ ಬೀಡುಬಿಟ್ಟು, ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡುತ್ತಿದ್ದಾರೆ.

ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಮತಗಳ ಚಿಂತೆಯಾದರೆ, ಬಾಗಲಕೋಟೆಯಲ್ಲಿ ಹಿಂದೂಗಳ ಚಿಂತೆಯಾಗಿದೆ. ಬಾಗಲಕೋಟೆಯಲ್ಲಿ ಲಿಂಗಾಯತ ಸಮುದಾಯವೇ ನಿರ್ಣಾಯಕವಾಗಿದೆ. 80 ಸಾವಿರ ಲಿಂಗಾಯತರು, 40 ಸಾವಿರ ಕುರುಬರು, 58 ಸಾವಿರ ದಲಿತರು ಸೇರಿದಂತೆ 45 ಸಾವಿರ ಇತರರಿದ್ದಾರೆ. ಇದರೊಂದಿಗೆ 25 ಸಾವಿರ ಮುಸ್ಲಿಂ ಮತದಾರರಿದ್ದಾರೆ. ಕಳೆದ ತಿಂಗಳು ಶಿವಾಜಿ ಜಯಂತಿ ಮೆರವಣಿಗೆ ವೇಳೆ ಮುಸ್ಲಿಂ ಸಮುದಾಯದ ಯುವಕರು ನಡೆಸಿದ್ದ ಕಲ್ಲು ತೂರಾಟ ಪ್ರಕರಣ ರಾಜ್ಯಾದ್ಯಂತ ಸಾಕಷ್ಟು ಚರ್ಚೆಯಾಗಿದ್ದಷ್ಟೇ ಅಲ್ಲದೇ, ತುಷ್ಟೀಕರಣದ ರಾಜಕಾರಣ ಎನ್ನುವ ಆರೋಪ ಕಾಂಗ್ರೆಸ್ ವಿರುದ್ಧ ಕೇಳಿಬಂದಿತ್ತು. ಇದರ ಲಾಭವನ್ನು ತಕ್ಕಮಟ್ಟಿಗೆ ಸ್ಥಳೀಯ ಬಿಜೆಪಿ ನಾಯಕರು ಪಡೆದಿದ್ದಾರೆ. ಆ ಘಟನೆಯಿಂದಾಗಿ ಹಿಂದೂ ಮತಗಳು ಒಂದಾದರೆ ಆಗ ಕಾಂಗ್ರೆಸ್‌ಗೆ ಸಂಕಷ್ಟ ನಿಶ್ಚಿತ. ಇನ್ನು 2023ರ ಚುನಾವಣೆಯ ಫಲಿತಾಂಶ ಗಮನಿಸಿದರೆ, ಎಚ್.ವೈ. ಮೇಟಿ ಅವರು ಕೇವಲ ಐದಾರು ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಆದರೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ, ವೀರಣ್ಣ ಚರಂತಿಮಠ ಅವರ ಸಹೋದರ ಮಲ್ಲಿಕಾರ್ಜುನ ಚರಂತಿಮಠ 10 ಸಾವಿರ ಚಿಲ್ಲರೆ ಮತಗಳನ್ನು ಪಡೆದಿದ್ದರು. ಇದೀಗ ಸಹೋದರನಿಗೆ ಮಲ್ಲಿಕಾರ್ಜುನ ಬೆಂಬಲಿಸಿರುವುದರಿಂದ, ವೀರಣ್ಣ ಅವರ ಮತಗಳು ಹಿಗ್ಗುವ ಸಾಧ್ಯತೆಯಿದೆ. ಒಂದು ವೇಳೆ ಅನುಕಂಪದ ಅಲೆಯನ್ನು ಕಳೆದ ತಿಂಗಳ ಕೋಮು ಸಂಘರ್ಷ ಹಿಂದೆ ಹಾಕಿದರೆ ಆಗ ಬಾಗಲಕೋಟೆಯಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗೆ ಸಂಕಷ್ಟ ಎದುರಾಗುವ ಆತಂಕವಿದೆ.

ಇದರೊಂದಿಗೆ ಈ ಉಪಚುನಾವಣೆಯಲ್ಲಿ ಬಿಜೆಪಿ ಪಾಳಯದಲ್ಲಿ ಕಾಣಿಸಿಕೊಂಡಿರುವ ಬಹುದೊಡ್ಡ ಪ್ಲಸ್ ಪಾಯಿಂಟ್ ಎಂದರೆ, ಪಕ್ಷದಲ್ಲಿ ಇಷ್ಟು ದಿನಗಳ ಕಾಲವಿದ್ದ ಭಿನ್ನಾಭಿಪ್ರಾಯಗಳನ್ನು ಮರೆತು ವಿಜಯೇಂದ್ರ ವಿರೋಧಿ ಬಣದಲ್ಲಿದ್ದ ಪ್ರಮುಖ ನಾಯಕರು ಚುನಾವಣಾ ಪ್ರಚಾರದಲ್ಲಿ ಕಾಣಿಸಿಕೊಂಡಿರುವುದು. ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಘೋಷಣೆಯಾದ ದಿನದಿಂದಲೂ, ಅಂತರ ಕಾಯ್ದುಕೊಂಡಿದ್ದ, ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ವಿಜಯೇಂದ್ರ ವಿರುದ್ಧ ನೇರ-ಪರೋಕ್ಷವಾಗ್ದಾಳಿ ನಡೆಸುತ್ತಿದ್ದ ಹಲವು ನಾಯಕರು ಇದೀಗ ಪ್ರಚಾರದಲ್ಲಿ ಕಾಣಿಸಿಕೊಂಡಿದ್ದಾರೆ. ಅದರಲ್ಲಿಯೂ ಕಳೆದ ಎರಡುವರೆ ವರ್ಷದಿಂದ ರಾಜ್ಯ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ತಮ್ಮದೇಯಾದ ಕಾರಣಗಳಿಗೆ ವಿಜಯೇಂದ್ರ ಅವರೊಂದಿಗೆ ಬಾಗಲಕೋಟೆಯಲ್ಲಿ ಪ್ರಚಾರದಲ್ಲಿ ಭಾಗವಹಿಸಿದ್ದಾರೆ.

ಆರಂಭದಲ್ಲಿ ಅರವಿಂದ ಲಿಂಬಾವಳಿ ಹಾಗೂ ವಿಜಯೇಂದ್ರ, ಒಂದೇ ಪ್ರಚಾರ ವಾಹನದಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆ ಇಬ್ಬರ ನಡುವಿನ ಭಿನ್ನಾಭಿಪ್ರಾಯಗಳು ತಣಿದಿವೆ ಎನ್ನುವ ವಿಷಯ ಹರಿದಾಡಲು ಶುರುವಾಗಿತ್ತು. ಆದರೆ ವಾಸ್ತವದಲ್ಲಿ, ಅರವಿಂದ ಲಿಂಬಾವಳಿ ಅವರು ಪಕ್ಷಕ್ಕಿಂತ ಅಭ್ಯರ್ಥಿಗಳಿಗಾಗಿ ಪ್ರಚಾರದಲ್ಲಿ ಕಾಣಿಸಿಕೊಂಡಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ. ಮೂಲತಃ ಬಾಗಲಕೋಟೆ ಜಿಲ್ಲೆಯವರಾದ ಅರವಿಂದ ಲಿಂಬಾವಳಿ ಅವರ ಜಿಲ್ಲೆಯಲ್ಲಿಯೇ ಉಪಚುನಾವಣೆ ನಡೆಯುತ್ತಿದ್ದರೂ ಭಾಗವಹಿಸದೇ ಹೋದರೆ ಕೆಟ್ಟ ಸಂದೇಶ ರವಾನೆಯಾಗಲಿದೆ ಎನ್ನುವ ಕಾರಣಕ್ಕೆ ಮತ್ತು ಬಿಜೆಪಿ ಅಭ್ಯರ್ಥಿಯಾಗಿರುವ ವೀರಣ್ಣ ಚರಂತಿಮಠ ಅವರೊಂದಿಗೆ ಪಕ್ಷ ಮೀರಿದ ಸ್ನೇಹಕ್ಕೆ ಕಟ್ಟುಬಿದ್ದು ಪ್ರಚಾದಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನು ದಾವಣಗೆರೆ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ತಮ್ಮ ಬೆಂಬಲಿತ ಅಭ್ಯರ್ಥಿ ಶ್ರೀನಿವಾಸ್ ದಾಸ ಕರಿಯಪ್ಪ ಅವರನ್ನು ಕಣಕ್ಕೆ ಇಳಿಸಿದ್ದಾರೆ. ಆ ಕಾರಣಕ್ಕೆ ಅರವಿಂದ ಲಿಂಬಾವಳಿ, ಪ್ರತಾಪ್ ಸಿಂಹ ಸೇರಿದಂತೆ ಬಂಡಾಯ ಗುಂಪಿನಲ್ಲಿ ಕಾಣಿಸಿಕೊಂಡಿರುವ ಅನೇಕರನ್ನು ಕರೆತರುತ್ತಿದ್ದಾರೆ. ಸಿದ್ದೇಶ್ವರ ಅವರೊಂದಿಗಿನ ಸ್ನೇಹಕ್ಕಾಗಿ ವಿರೋಧಿ ಗುಂಪಿನಲ್ಲಿದ್ದರೂ ನಾಯಕರು ಎರಡೂ ಕ್ಷೇತ್ರದಲ್ಲಿ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ವಿಜಯೇಂದ್ರ, ವಿರೋಧಿ ಗುಂಪಿನಲ್ಲಿರುವ ಅರವಿಂದ ಲಿಂಬಾವಳಿ, ಪ್ರತಾಪ್ ಸಿಂಹ ಸೇರಿ ಹಲವರು ಪ್ರಚಾರಕ್ಕೆ ಬಂದಿದ್ದರೂ, ಈ ವಿಷಯದಲ್ಲಿ ವಿಜಯೇಂದ್ರ ಮೌನವಾಗಿರುವ ಮೂಲಕ ಜಾಣ ನಡೆ ತೋರಿದ್ದಾರೆ. ಯಾರಾದರೂ ಬರಲಿ, ಬಿಜೆಪಿ ಅಭ್ಯರ್ಥಿ ಗೆದ್ದರೆ ಅದರ ಸಣ್ಣ ಪ್ರಮಾಣದ ಲಾಭವಾದರೂ ತಮಗೆ ಬರುತ್ತದೆ ಎನ್ನುವ ಲೆಕ್ಕಾಚಾರ ವಿಜಯೇಂದ್ರ ಅವರದ್ದಾಗಿದೆ ಎಂದರೆ ತಪ್ಪಾಗುವುದಿಲ್ಲ.

ಕರ್ನಾಟಕದಲ್ಲಿ ಎದುರಾಗಿರುವ ಈ ಎರಡು ಕ್ಷೇತ್ರದ ಉಪಚುನಾವಣೆಯ ಸೋಲು-ಗೆಲುವಿನಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಕಳೆದುಕೊಳ್ಳುವುದು ಏನು ಇಲ್ಲ. ಆದರೆ ಈ ಚುನಾವಣಾ ಫಲಿತಾಂಶದ ಮೇಲೆ ನಾಯಕರ ವಿವಿಧ ರೀತಿಯ ಪರಿಣಾಮ ಬೀರುವುದಂತೂ ಸತ್ಯ. ಕೇವಲ ಪಕ್ಷ ಪಕ್ಷಗಳ ನಡುವಿನ ಪ್ರತಿಷ್ಠೆಯಾಗಿ ಮಾತ್ರ ಈ ಚುನಾವಣೆ ಕಾಣಿಸಿಕೊಳ್ಳದೇ, ಪಕ್ಷದೊಳಗಿನ ಆಂತರಿಕ ರಾಜಕೀಯ ಶಕ್ತಿ ಪ್ರದರ್ಶನ ಮಾಡುವುದಕ್ಕೂ ಈ ಫಲಿತಾಂಶ ಪರಿಣಾಮ ಬೀರಲಿದೆ ಸ್ಪಷ್ಟ. ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಆಂತರಿಕ ಕಿತ್ತಾಟಕ್ಕೆ ಬ್ರೇಕ್ ಹಾಕಿದ್ದು ಉಪಚುನಾವಣೆ ಎನ್ನುವುದು ಎಷ್ಟು ಸತ್ಯವೋ, ಚುನಾವಣಾ ಫಲಿತಾಂಶದ ಆಧಾರದ ಮೇಲೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ತಮ್ಮ ತಮ್ಮ ಬೇಡಿಕೆಗಳನ್ನು ಹೈಕಮಾಂಡ್ ಮುಂದಿಡಲಿದ್ದಾರೆ ಎನ್ನುವುದು ಅಷ್ಟೇ ಸತ್ಯ. ಈ ಚುನಾವಣಾ ಫಲಿತಾಂಶದ ಆಧಾರದಲ್ಲಿ, ಬದಲಾವಣೆಗಳಾಗುತ್ತವೆ ಎನ್ನುವುದಕ್ಕಿಂತ, ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರು ತಮ್ಮ ತಮ್ಮ ಜವಾಬ್ದಾರಿಯನ್ನು ಯಾವ ರೀತಿಯಲ್ಲಿ ನಿಭಾಯಿಸಿದ್ದಾರೆ ಎನ್ನುವುದನ್ನು ಒರೆಗಲ್ಲಿಗೆ ಹಚ್ಚಬಹುದು. ಎರಡೂ ಕ್ಷೇತ್ರದಲ್ಲಿ ಗೆಲುವು ಸಾಧಿಸಿದರೆ, ಸರಕಾರದ ವಿರುದ್ಧ ಆಡಳಿತ ವಿರೋಧಿ ಅಲೆಯಿಲ್ಲ. ಆದ್ದರಿಂದ ನಾಯಕತ್ವ ಬದಲಾವಣೆ ವಿಷಯ ಅಪ್ರಸ್ತುತ ಎನ್ನುವ ವಿಷಯವನ್ನು ಹೈಕಮಾಂಡ್ ಮುಂದೆ ಸಿದ್ದರಾಮಯ್ಯ ಅವರು ಮಂಡಿಸಬಹುದು. ಇನ್ನೊಂದೆಡೆ ಪಕ್ಷ ಕೊಟ್ಟಿರುವ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿರುವೆ. ಈಗಲಾದರೂ ಕೂಲಿ ಕೊಡಿ ಎಂದು ಡಿ.ಕೆ.ಶಿವಕುಮಾರ್ ಅವರು ದೆಹಲಿ ನಾಯಕರ ಮುಂದೆ ತಮ್ಮ ಬೇಡಿಕೆಯನ್ನು ಇಡಬಹುದು(ಅಸ್ಸಾಂ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಡಿಕೆಗೆ ಮತ್ತೊಂದು ಲಾಡು ಬಾಯಿಗೆ ಬಿದ್ದ ಹಾಗಾಗುತ್ತದೆ).

ಈ ಎರಡು ಕ್ಷೇತ್ರಗಳ ಉಪಚುನಾವಣೆಯಿಂದ ರಾಜ್ಯ ರಾಜಕೀಯದಲ್ಲಿ ಬಹುದೊಡ್ಡ ಬದಲಾವಣೆಯಾಗದಿದ್ದರೂ, ವೈಯಕ್ತಿಕ ಪ್ರತಿಷ್ಠೆ, ಬೇಡಿಕೆಗಳ ಕಾರಣಕ್ಕೆ ಪ್ರಮುಖ ಎನಿಸಿದೆ. ಆಡಳಿತಾರೂಢ ಕಾಂಗ್ರೆಸ್‌ಗೆ ಪಕ್ಷದೊಳಗಿದ್ದ ಬೇಗುದಿಗಳನ್ನು ಸರಿಪಡಿಸಿಕೊಂಡಿ ಫೀನಿಕ್ಸ್ ಹಕ್ಕಿಯಂತೆ ಎದ್ದುಬಂದು, ಈಗಲೂ ಕರ್ನಾಟಕದಲ್ಲಿ ನಾನೇ ಬಲಿಷ್ಠ ಎಂದು ಪಕ್ಷದ ಹೈಕಮಾಂಡ್‌ಗೆ ಹಾಗೂ ರಾಜ್ಯದ ಜನರಿಗೆ ತೋರಿಸುವ ಉತ್ಸಾಹವಿದ್ದರೆ, ಪ್ರತಿಪಕ್ಷ ಬಿಜೆಪಿಗೆ ಮೈತ್ರಿ ಪಕ್ಷ ಜೆಡಿಎಸ್ ನೊಂದಿಗಿನ ಭಿನ್ನಭಿಪ್ರಾಯ, ಪಕ್ಷದೊಳಗಿನ ಹತ್ತಾರು ಗುಂಪುಗಾರಿಕೆ, ರಾಜ್ಯ ನಾಯಕತ್ವದ ವಿಷಯದಲ್ಲಿ ಒಡಕಿನ ಮಾತುಗಳನ್ನು ಮೀರಿ ಗೆಲುವು ಸಾಧಿಸುವ ಮೂಲಕ ಸೊರಗಿರುವ ಸಂಘಟನೆಗೆ ಜೀವ ತುಂಬಬಹುದು ಎನ್ನುವ ಲೆಕ್ಕಾಚಾರವಿದೆ. ಈ ಎಲ್ಲ ರಾಜಕೀಯ ಲೆಕ್ಕಾಚಾರಗಳನ್ನು ಮೀರಿ, ಮತನೀಡುವ ಪ್ರಭುವಿನ ಮನಸ್ಸಿನಲ್ಲಿ ಏನಿದೆ ಎನ್ನುವ ಪ್ರಶ್ನೆಗೆ ಏ.9ರಂದು ನಡೆಯವ ಮತದಾನದಲ್ಲಿ ಉತ್ತರ ಸಿಗಲಿದ್ದು, ಮುಂದಿನ ತಿಂಗಳು ಮತಎಣಿಕೆ ವೇಳೆ ಫಲಿತಾಂಶ ಸಿಗಲಿದೆ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚುನಾವಣಾ ಆಯೋಗ ಕಣ್ಮುಚ್ಚಿ ಕುಳಿತಿದೆಯೇ...?

ಸದಾ ಕಾಲವೂ ಬಿಜೆಪಿಯ ಹಿಂದಿನ ಸರಕಾರ ಮತ್ತು ಕೇಂದ್ರ ಸರಕಾರದ ಆಡಳಿತ ವೈಖರಿಯನ್ನೇ ಟೀಕಿಸುವ ನಿತ್ಯದ ಕಾಯಕ ಮಾಡಿಕೊಂಡಿರುವ ಸಿದ್ದರಾಮಯ್ಯರವರ ನೇತೃತ್ವದ ಕಾಂಗ್ರೆಸ್ ಸರಕಾರದ ಸಚಿವ ಸಂಪುಟದ ಸಮಸ್ತ ಸಚಿವರೂ ಕೇವಲ ಈ ಒಂದು ಉಪಚುನಾವಣೆಯನ್ನು ಗೆಲ್ಲಲೇಬೇಕೆಂಬ ಹಠ ಮತ್ತು ಅನಿವಾರ್ಯತೆಗೆ ಬಿದ್ದಿದ್ದಾರೆ. ವಿಧಾನಸೌಧವೇ ಸಂಪೂರ್ಣ ಖಾಲಿಯಾಗಿದೆ. ಜನಸಾಮಾನ್ಯರ ಹಿತಕಾಯುವ ಕೆಲಸ ಮಾಡದೇ, ತೆರಿಗೆದಾರರ ಹಣದಿಂದ ಕೋಟ್ಯಂತರ ಸಂಬಳ ಸೌಲಭ್ಯ ಪಡೆದು, ಇವರ ಪಕ್ಷದ ಪರವಾಗಿ ಉಪಚುನಾವಣೆಯ ಪ್ರಚಾರದಲ್ಲಿ ನಿರತರಾಗಿರುವ ಇವರ ಚುನಾವಣೆಯ ಪ್ರಚಾರದ ಅವಧಿಗೆ ಇವರೆಲ್ಲರ ಸಂಬಳದಲ್ಲಿ ಕಡಿತ ಮಾಡಲಿ. ಚುನಾವಣಾ ಆಯೋಗ ಕಣ್ಮುಚ್ಚಿ ಕುಳಿತಿದೆಯೇ...?

- ಎಸ್.ಎನ್.ರಮೇಶ್ ಸಾತನೂರು, ಮಂಡ್ಯ.

ಲಾಭ ತಕ್ಕ ರಿಯಾಯಿತಿ ಇಲ್ಲ !

ಕಳೆದ ಆರ್ಥಿಕ ವರ್ಷದಲ್ಲಿ (2025-26), ನೈರುತ್ಯ ರೈಲ್ವೇಯ ಮೈಸೂರು ವಿಭಾಗವು 449.13 ಕೋಟಿ ರುಪಾಯಿಗೂ ಹೆಚ್ಚು ಆದಾಯ ಗಳಿಸಿರುವುದಾಗಿ ಮೈಸೂರು ರೈಲ್ವೇ ಇಲಾಖೆಯ, ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇದು ಮೈಸೂರು ವಿಭಾಗದ ಇತಿಹಾಸದಲ್ಲೇ ಅತಿ ಹೆಚ್ಚು ಆದಾಯ ಗಳಿಸಿರುವುದಾಗಿ ಹೇಳಿದ್ದಾರೆ. ಇದು ಇಲಾಖೆಗೆ ಸಂತೋಷಕರ ವಿಚಾರವಾಗಿರಬಹುದು. ಇದೇ ರೀತಿ ಎಲ್ಲ ರೈಲ್ವೇ ವಿಭಾಗಗಳು ಕಳೆದ ಆರ್ಥಿಕ ಸಾಲಿನಲ್ಲಿ ಲಾಭ ಗಳಿಸಿರಬಹುದು, ಇಷ್ಟಾದರೂ ರೈಲ್ವೇ ಇಲಾಖೆಯು ಕಳೆದ ಹದಿನೈದು ವರ್ಷಗಳಿಂದ ಹಿರಿಯ ನಾಗರಿಕರಿಗೆ ರೈಲ್ವೇ ಪ್ರಮಾಣದಲ್ಲಿ ನೀಡುತ್ತಿದ್ದ ಶೇ.30ರಷ್ಟು ರಿಯಾಯಿತಿಯನ್ನು ಕಳೆದ ಐದು ವರ್ಷಗಳಿಂದ ಅಂದರೆ ದೇಶದಲ್ಲಿ ಕರೋನಾ ಸಾಂಕ್ರಾಮಿಕ ರೋಗ ದೇಶದಲ್ಲಿ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಹಿರಿಯ ನಾಗರಿಕರ ಈ ರಿಯಾಯಿತಿ ದರ ರದ್ದುಪಡಿಸಿತು, ಈಗ ದೇಶದಲ್ಲಿ ಕರೋನಾ ಮಾಯವಾಗಿ ಐದು ವರ್ಷಗಳೇ ಕಳೆದಿವೆ, ರೈಲ್ವೇ ಇಲಾಖೆಯ ಎಲ್ಲ ವಿಭಾಗಗಳು ನೂರಾರು ಕೋಟಿ ಲಾಭದಲ್ಲಿವೆ. ಆದರೂ, ಹಿರಿಯ ನಾಗರಿಕರಿಗೆ ರೈಲ್ವೇ ಇಲಾಖೆಯು ಹಿಂದೆ ಇದ್ದ ರಿಯಾಯಿತಿ ನೀಡುತ್ತಿಲ್ಲ, ಮಾನ್ಯ ರೈಲ್ವೇ ಸಚಿವರು ಈ ಬಗ್ಗೆ ತುರ್ತು ಗಮನಹರಿಸಿ ಹಿರಿಯ ನಾಗರಿಕರಿಗೆ ರೈಲ್ವೇ ಪ್ರಮಾಣದಲ್ಲಿ ರಿಯಾಯಿತಿ ನೀಡಬೇಕು.

- ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

ಜಲಕ್ಷಾಮಕ್ಕೆ ಬೇಕಿದೆ ಪರಿಹಾರ

ಬೇಸಿಗೆಯ ಆರಂಭದಲ್ಲೇ ರಾಜ್ಯದ 400ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಹಾಹಾಕಾರವಿರುವುದು ಆತಂಕಕಾರಿ. ಸರಕಾರ 60 ಕೋಟಿ ರು. ಬಿಡುಗಡೆ ಮಾಡಿ ಟ್ಯಾಂಕರ್ ಮೂಲಕ ನೀರುಣಿಸುತ್ತಿರುವುದು ಕೇವಲ 'ಬೆಂಕಿ ಬಿದ್ದಾಗ ಬಾವಿ ತೋಡುವ' ರೀತಿ ತಾತ್ಕಾಲಿಕ ಕ್ರಮವಾಗಿದೆ. ರಾಜ್ಯದ 26,676 ಗ್ರಾಮಗಳಲ್ಲಿ ಪ್ರತಿ ವರ್ಷವೂ ಇದೇ ಕಥೆ ಮರುಕಳಿಸುತ್ತಿದೆ. ನಮಗೆ ಬೇಕಿರುವುದು ತುರ್ತು ನಿರ್ವಹಣೆಯಲ್ಲ ಬದಲಿಗೆ ಶಾಶ್ವತ ಜಲ ಭದ್ರತೆ. ಪ್ರತಿ ಹಳ್ಳಿಯಲ್ಲೂ ಅಂತರ್ಜಲ ಮರುಪೂರಣ ಘಟಕಗಳನ್ನು ಕಡ್ಡಾಯಗೊಳಿಸಬೇಕು ಮತ್ತು ಸರಕಾರಿ ಅನುದಾನವು ಕೇವಲ ಬೋರ್‌ವೆಲ್ ಕೊರೆಯಲು ಸೀಮಿತವಾಗದೆ ಕೆರೆಗಳ ಹೂಳೆತ್ತುವಿಕೆಗೆ ಬಳಕೆಯಾಗಬೇಕು. ಅಂಕಿ ಅಂಶಗಳ ಪ್ರಕಾರ ಶೇ.80ರಷ್ಟು ಗ್ರಾಮೀಣ ನೀರು ಸರಬರಾಜು ಅಂತರ್ಜಲವನ್ನೇ ಅವಲಂಬಿಸಿದ್ದು ಕೃತಕ ಪುನರ್ಭರ್ತಿ ವ್ಯವಸ್ಥೆ ಇಲ್ಲದಿದ್ದರೆ ಈ ಮೂಲಗಳು ಶಾಶ್ವತವಾಗಿ ಬತ್ತಿ ಹೋಗುವ ಅಪಾಯವಿದೆ. 'ಡಿಜಿಟಲ್ ವಾಟರ್ ಮ್ಯಾಪಿಂಗ್' ತಂತ್ರಜ್ಞಾನದ ಮೂಲಕ ಪ್ರತಿ ಹಳ್ಳಿಯ ಜಲಮೂಲಗಳ ಲಭ್ಯತೆಯನ್ನು ಮೊದಲೇ ಅಂದಾಜಿಸಿ ಬರಗಾಲ ಬರುವ ಮುನ್ನವೇ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವ ದೂರದೃಷ್ಟಿ ಆಡಳಿತಕ್ಕೆ ಅತ್ಯಗತ್ಯವಾಗಿದೆ.

- ಡಾ. ವಿಜಯಕುಮಾರ ಎಚ್.ಕೆ. ರಾಯಚೂರು

ರಾಘವ್ ಛಡ್ಡಾ: 'ಆಪ್'ಗೆ ಅಪಥ್ಯವಾದ ಆಪತ್ಬಾಂಧವ!

ಯುದ್ಧಕಾಂಡ

ರವೀ ಸಜಂಗದ್ದೆ
vveditoped@gmail.com

ರಾಜಕೀಯವು ನಿಂತ ನೀರಲ್ಲ, ಅದು ಸದಾ ಹರಿಯುವ ನದಿ, ಆಗೀಗ ಧುಮ್ಮಿಕ್ಕಿ ಭೋರ್ಗರೆಯುವ ಜಲಪಾತ-ಪ್ರಪಾತ! ರಾಜಕಾರಣ ಎಂಬುದು ಕೇವಲ ಅಧಿಕಾರ ಮತ್ತು ಸ್ಥಾನಮಾನ ಮಾತ್ರ ಅಲ್ಲ, ಅದು ನಿರಂತರ ಬದಲಾಗುವ, ಸಂಚಲನ ಮೂಡಿಸುವ, ಏರಿಳಿತದ ಹಾವು ಏಣಿಯಾಟ. ರಾಜ್ಯಸಭೆಯಲ್ಲಿ ತಮ್ಮದೇ ಆದ ವಿಶಿಷ್ಟ, ಸ್ಪಷ್ಟ ಮತ್ತು ತೀಕ್ಷ್ಣ ವಾಗ್ಝರಿಯಿಂದ ಗಮನ ಸೆಳೆಯುತ್ತಿದ್ದ ಆಪ್‌ನ ಯುವ ನಾಯಕ, ಉತ್ತಮ ಸಂಸದೀಯ ಪಟು, ರಾಜ್ಯಸಭಾ ಸದಸ್ಯ ರಾಘವ್ ಛಡ್ಡಾ ಅವರ ರಾಜಕೀಯ ಪಯಣದಲ್ಲಿ ಅನಿರೀಕ್ಷಿತ ತಿರುವು, ಆಘಾತ, ಹಿಂಬಡ್ತಿ ಎದುರಾಗಿದೆ. ರಾಜ್ಯಸಭೆಯಲ್ಲಿ ಆಪ್‌ನ ಉಪನಾಯಕ ಸ್ಥಾನದಿಂದ ಕೆಳಗಿಳಿಸಿ ಸಂಸತ್ತಿನಲ್ಲಿ ಛಡ್ಡಾಗೆ ಮಾತನಾಡಲು ಪಕ್ಷದ ಕೋಟಾದಡಿ ಅವಕಾಶ ನೀಡಬಾರದೆಂದು ಆಪ್ ರಾಜ್ಯಸಭಾ ಸಚಿವಾಲಯಕ್ಕೆ ಪತ್ರ ಬರೆದು ಮನವಿ ಮಾಡಿರುವುದು ದೆಹಲಿಯ ರಾಜಕೀಯ ಪಡಸಾಲೆಯಲ್ಲಿ ಸಂಚಲನ ಮೂಡಿಸಿದ 'ಬ್ರೇಕಿಂಗ್ ನ್ಯೂಸ್'!

ರಾಘವ್ ಛಡ್ಡಾರನ್ನು ಈಗಿರುವ ಹುದ್ದೆಯಿಂದ ಕೆಳಗಿಳಿಸಿದ್ದು ಯಾಕೆ? ಆತುರಾತುರವಾಗಿ ಈ ನಿರ್ಧಾರ ಕೈಗೊಳ್ಳಲಾಯಿತೇ ಅಥವಾ ಖೆಡ್ಡಾ ಮೊದಲೇ ರೆಡಿಯಾಗಿತ್ತೇ? ಪಕ್ಷದ ಆಸ್ತಿಯಾಗಬಲ್ಲ ಯುವ ನಾಯಕನನ್ನು ಆಪ್ ಈ ರೀತಿ ನಡೆಸಿಕೊಳ್ಳುತ್ತಿರುವುದು ಯಾಕೆ? ಇತ್ತೀಚಿನ ದಿನಗಳಲ್ಲಿ ರಾಘವ್ ಛಡ್ಡಾ ಆಪ್‌ನ ಹೇಳಿಕೆ-ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡದ್ದಕ್ಕೆ ಸಿಕ್ಕ ಉಡುಗೊರೆಯೇ ಇದು? ಸಣ್ಣ ವಯಸ್ಸಿನಲ್ಲಿ ರಾಜಕಾರಣದಲ್ಲಿ ಪ್ರಸಿದ್ಧಿ ಮತ್ತು ಒಂದಷ್ಟು ವಿವಾದಗಳನ್ನು ಮೈಮೇಲೆ ಎಳೆದುಕೊಂಡು ಸಾಗುತ್ತಿರುವ ಛಡ್ಡಾ ಯಾರು, ಏನು, ಹೇಗೆ ಎಂಬುದನ್ನು ಅರಿಯುವ ಪ್ರಯತ್ನವಿದು.

ಈಗ ಎದ್ದಿರುವ ಕಿಚ್ಚು ಇಂತಿದೆ. ರಾಜ್ಯಸಭೆಯಲ್ಲಿ ಕಿರಿಯ ವಯಸ್ಸಿಗೇ ಪ್ರಭಾವಿ ನಾಯಕರಾಗಿ ಬೆಳೆದಿದ್ದ ರಾಘವ್ ಛಡ್ಡಾ (37 ವರ್ಷ) ಜಾಗಕ್ಕೆ ಇದೀಗ ಮತ್ತೋರ್ವ ಸದಸ್ಯ ಅಶೋಕ್ ಮಿತ್ತಲ್‌ರನ್ನು ಆಪ್ ನೇಮಿಸಿದೆ. ಈ ಹಠಾತ್ ಬದಲಾವಣೆ ಮತ್ತು ಮಾತನಾಡಲು ಅವಕಾಶ ನಿರಾಕರಿಸಿರುವ ನಡೆಯ ಹಿಂದೆ ಪಕ್ಷದೊಳಗಿನ ಹಲವು ಬೆಳವಣಿಗೆಗಳು ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಇತ್ತೀಚಿನ ತಿಂಗಳುಗಳಲ್ಲಿ ಪಕ್ಷದ ಪ್ರಮುಖ ಚಟುವಟಿಕೆಗಳಿಂದ, ಸಂಘಟನಾತ್ಮಕ ವಿಷಯಗಳಿಂದ ಮತ್ತು ಪಕ್ಷದ ನಾಯಕರಿಂದ ಛಡ್ಡಾ ಅಂತರ ಕಾಯ್ದುಕೊಂಡಿದ್ದರು. ಜತೆಗೆ ಬಿಜೆಪಿ-ಮೋದಿ ಕುರಿತು ಮೌನವಾಗಿದ್ದು ಯಾವುದೇ ರಾಜಕೀಯ ವಿರೋಧಿ ಹೇಳಿಕೆ ನೀಡದೇ ಇದ್ದುದರ ಒಟ್ಟಾರೆ ಫಲಿತಾಂಶ ಈಗಿನ ಮೂಲೆಗುಂಪು. ಈ ಬಗ್ಗೆ ಅಧಿಕೃತವಾಗಿ ಪ್ರತಿಕ್ರಿಯಿಸಿರುವ ನೂತನ ಉಪನಾಯಕ ಅಶೋಕ್ ಮಿತ್ತಲ್, 'ಇದೊಂದು ಸಾಮಾನ್ಯ ಪ್ರಕ್ರಿಯೆ ಮತ್ತು ಪಕ್ಷದ ಆಂತರಿಕ ವಿಚಾರ. ಪಕ್ಷದ ಎಲ್ಲ ಸದಸ್ಯರಿಗೂ ಆಡಳಿತಾತ್ಮಕ ಕೌಶಲ್ಯ ಕಲಿಯಲು ಹಾಗೂ ಸದನದ ಪ್ರಕ್ರಿಯೆಗಳನ್ನು ಅರಿಯಲು ಅವಕಾಶ ನೀಡುವ ಉದ್ದೇಶದಿಂದ ಜವಾಬ್ದಾರಿಗಳನ್ನು ಬದಲಾಯಿಸಲಾಗಿದೆ' ಎಂಬ ಹೇಳಿ ಪಕ್ಷದ ನಡೆಯನ್ನು ಸಮರ್ಥಿಸಿದ್ದಾರೆ. ಇದಕ್ಕೆ ಪ್ರತಿಯಾಗಿ 'ನಾನೀಗ ಪ್ರಶಾಂತ ನದಿಯಾಗಿದ್ದೇನೆ. ಪ್ರವಾಹದ ವಿರುದ್ಧ ಹೇಗೆ ಈಜಬೇಕು ಎಂದು ನನಗೆ ಗೊತ್ತು. ನಾನು ಮೌನವಾಗಿದ್ದೇನೆ, ಆದರೆ ಯಾರಿಗೂ ಶರಣಾಗಿಲ್ಲ' ಎಂದು ಛಡ್ಡಾ ತಿರುಗೇಟು ನೀಡಿದ್ದಾರೆ. ಒಟ್ಟಿನಲ್ಲಿ ಆಪ್ ಮತ್ತು ರಾಘವ್ ಛಡ್ಡಾ ನಡುವೆ ಎಲ್ಲವೂ ಸರಿಯಿಲ್ಲ, ಸರಿಪಡಿಸಲಾಗದಷ್ಟು ದೊಡ್ಡ ಕಂದಕ ಸೃಷ್ಟಿಯಾಗಿದೆ, ಶೀತಲ ಸಮರ, 'ನಾನೊಂದು ತೀರಾ; ನೀನೊಂದು ತೀರ' ಎನ್ನುವುದಂತೂ ಸ್ಪಷ್ಟ!

ಛಡ್ಡಾ ಮತ್ತು ವಿವಾದಗಳು ಒಂದೇ ನಾಣ್ಯದ ಎರಡು ಮುಖಗಳು! 2024ರ ಅಬಕಾರಿ ಹಗರಣದಂತಹ ಆಪ್‌ನ ಬಿಕ್ಕಟ್ಟಿನ ಸಮಯದಲ್ಲಿನ ಛಡ್ಡಾ (ಕಣ್ಣಿನ ಚಿಕಿತ್ಸೆಗಾಗಿ) ತಿಂಗಳುಗಳ ಕಾಲ ವಿದೇಶದಲ್ಲಿ ಇದ್ದದ್ದು ಸ್ವಪಕ್ಷೀಯರ ಟೀಕೆಗೆ ಗುರಿಯಾಯಿತು. ಅವರು ಉದ್ದೇಶಪೂರ್ವಕವಾಗಿಯೇ ಅಂತರ ಕಾಯ್ದುಕೊಂಡಿದ್ದಾರೆ ಎಂಬ ವದಂತಿಗಳೆದ್ದವು. 2023ರಲ್ಲಿ 'ದೆಹಲಿ ಸೇವೆಗಳ ಮಸೂದೆ'ಯನ್ನು ಪರಿಶೀಲಿಸಲು ಆಯ್ಕೆ ಸಮಿತಿಯನ್ನು ರಚಿಸುವ ನಿರ್ಣಯವನ್ನು ಮಂಡಿಸುವಾಗ, ಒಪ್ಪಿಗೆ ಪಡೆಯದೇ ಐದು ರಾಜ್ಯಸಭಾ ಸದಸ್ಯರ ಹೆಸರನ್ನು ಪ್ರಸ್ತಾಪಿಸಿ, ನಕಲಿ ಸಹಿ ಮಾಡಲಾಗಿದೆ ಎಂಬ ಗಂಭೀರ ಆರೋಪ ಅವರ ಮೇಲೆ ಕೇಳಿಬಂದಿತ್ತು. ನಿಯಮಗಳ ಉಲ್ಲಂಘನೆಗಾಗಿ 2023ರ ಆಗಸ್ಟ್‌ನಲ್ಲಿ ಛಡ್ಡಾರನ್ನು ರಾಜ್ಯಸಭೆಯಿಂದ ಅಮಾನತುಗೊಳಿಸಲಾಯಿತು. ನಂತರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಅಂತಿಮವಾಗಿ ವಿಶೇಷಾಧಿಕಾರ ಸಮಿತಿಯ ಮುಂದೆ ಕ್ಷಮೆಯಾಚಿಸಿದ ನಂತರ ಡಿಸೆಂಬರ್ 2023ರಲ್ಲಿ ಅಮಾನತು ರದ್ದಾಯಿತು.

2023ರಲ್ಲಿ ಸಂಸದರಾದ ಅವರಿಗೆ ದೆಹಲಿಯಲ್ಲಿ ದೊಡ್ಡದಾದ 'ಟೈಪ್ 7' ಸರಕಾರಿ ಬಂಗಲೆಯನ್ನು ನೀಡಲಾಗಿತ್ತು. ಮೊದಲ ಬಾರಿಗೆ ಆಯ್ಕೆಯಾದ ಸಂಸದರು 'ಟೈಪ್ 5' ಬಂಗಲೆಗೆ ಮಾತ್ರ ಅರ್ಹರಾಗಿದ್ದಾರೆ ಎಂದು ತಿಳಿಸಿ, ರಾಜ್ಯಸಭಾ ಸಚಿವಾಲಯವು ಹಂಚಿಕೆಯನ್ನು ರದ್ದುಪಡಿಸಿ ಮನೆ ತೆರವುಗೊಳಿಸುವಂತೆ ನೋಟಿಸ್ ನೀಡಿತ್ತು. ನಿರ್ಧಾರವನ್ನು ವಿರೋಧಿಸಿ ಛಡ್ಡಾ ನ್ಯಾಯಾಲಯದ ಮೊರೆ ಹೋದರು. ಏಪ್ರಿಲ್ 2023ರಲ್ಲಿ ನ್ಯಾಯಾಲಯವು ಅವರನ್ನು ಮನೆಯಿಂದ ಹೊರಹಾಕದಂತೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು. ನಂತರ ಅಕ್ಟೋಬರ್ 2023ರಲ್ಲಿ ಇದೇ ನ್ಯಾಯಾಲಯವು ತನ್ನ ಹಳೆಯ ಆದೇಶವನ್ನು ಹಿಂಪಡೆದು ತಡೆಯಾಜ್ಞೆ ತೆರವುಗೊಳಿಸಿತ್ತು. ಇದರ ಬೆನ್ನಲ್ಲೇ ಛಡ್ಡಾ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದರು. ಹೈಕೋರ್ಟ್ ವಿಚಾರಣೆ ನಡೆಸಿ, ಕೆಳ ನ್ಯಾಯಾಲಯವು ಅರ್ಜಿಯನ್ನು ಸರಿಯಾಗಿ ಪರಿಶೀಲಿಸುವವರೆಗೆ ಬಂಗಲೆಯಿಂದ ಹೊರಹಾಕಬಾರದು ಎಂದು ಸೂಚಿಸಿ ಅವರಿಗೆ ರಿಲೀಫ್ ನೀಡಿತ್ತು. ಪ್ರಸ್ತುತ ಈ ವಿಷಯದಲ್ಲಿ ಛಡ್ಡಾ ನ್ಯಾಯಾಲಯದಿಂದ ಪಡೆದ ರಕ್ಷಣೆಯಲ್ಲಿದ್ದಾರೆ. ಈ ವಿವಾದವು ರಾಜಕೀಯ ವಲಯದಲ್ಲಿ ಸಾಕಷ್ಟು ಪರ-ವಿರೋಧ ಚರ್ಚೆಗೆ ಗ್ರಾಸವಾಗಿತ್ತು.

ಇದೆಲ್ಲದರ ಹೊರತಾಗಿಯೂ ಅತ್ಯುತ್ತಮ ವಾಗ್ಮಿಯಾಗಿರುವ ರಾಘವ್ ಛಡ್ಡಾ, ತಮ್ಮ ಕರಾರುವಾಕ್ಕಾದ ಅಂಕಿ-ಅಂಶಗಳು, ತಾರ್ಕಿಕ ಚಿಂತನೆ, ಜನಪರ ವಿಚಾರಗಳ ಮೇಲೆ ಬೆಳಕು ಚೆಲ್ಲುವ ಮತ್ತು ಸ್ಪಷ್ಟವಾದ ವಿಷಯ ಮಂಡನೆಯಿಂದಾಗಿ ಸಂಸತ್ತಿನಲ್ಲಿ ಹಲವು ಬಾರಿ ಸರ್ಕಾರ ಮತ್ತು ದೇಶದ ಗಮನ ಸೆಳೆದಿದ್ದಾರೆ. ಅವುಗಳಲ್ಲಿ ಕೆಲವು:

- ಇತ್ತೀಚೆಗಷ್ಟೇ ಪಶ್ಚಿಮ ಏಷ್ಯಾ ಯುದ್ಧದ ಪರಿಣಾಮವಾಗಿ ಭಾರತೀಯ ಷೇರುಪೇಟೆಯಲ್ಲಿ ಬರೋಬ್ಬರಿ 48 ಲಕ್ಷ ಕೋಟಿ ರು. ಸಂಪತ್ತು ಕರಗಿರುವ ಬಗ್ಗೆ ಅವರು ಧ್ವನಿಯೆತ್ತಿದ್ದರು. ಇದು ಭಾರತದ ಆರ್ಥಿಕತೆಯ ಮೂಲಭೂತ ಸಮಸ್ಯೆ ಅಲ್ಲದಿದ್ದರೂ, ಈ ಅನಿರೀಕ್ಷಿತ ಘಟನೆಯಿಂದ ನಷ್ಟ ಅನುಭವಿಸಿದ ಸಾಮಾನ್ಯ, ಸಣ್ಣ ಷೇರು ಮಾರುಕಟ್ಟೆ ಹೂಡಿಕೆದಾರರಿಗೆ ಸರ್ಕಾರ ಸೂಕ್ತ ರಕ್ಷಣೆ ನೀಡಬೇಕು ಮತ್ತು ಈ ಕುರಿತು ನೀತಿ ರೂಪಿಸುವ ಅಗತ್ಯವಿದೆ ಎಂದು ಆಗ್ರಹಿಸಿದ್ದರು.
- ಟೆಲಿಕಾಂ ಕಂಪನಿಗಳು ತಿಂಗಳಿಗೆ 30 ದಿನಗಳ ಬದಲಾಗಿ ಕೇವಲ 28 ದಿನಗಳ ವ್ಯಾಲಿಡಿಟಿ ನೀಡುವ ಮೂಲಕ, ಗ್ರಾಹಕರು ವರ್ಷಕ್ಕೆ 12ರ ಬದಲಾಗಿ 13 ಬಾರಿ ರಿಚಾರ್ಜ್ ಮಾಡುವಂತೆ ಈಗಿರುವ ತಂತ್ರವನ್ನು ರಾಜ್ಯಸಭೆಯಲ್ಲಿ ಎಳೆಎಳೆಯಾಗಿ ಬಿಚ್ಚಿಟ್ಟು, ಇದು ಸಾಮಾನ್ಯ ಜನರ ಮೇಲೆ ಅನಗತ್ಯ ಆರ್ಥಿಕ ಹೊರೆ ಎಂದು ಆರೋಪಿಸಿದರು. ಅನಂತರದ ದಿನಗಳಲ್ಲಿ ಇದೆಲ್ಲ ಟ್ರಾಯ್ ನಿಯಮಗಳ ಅಡಿಯಲ್ಲಿ ಬರುವ ವಿಚಾರ ಎಂದು ಹೇಳಿ ಟೆಲಿಕಾಂ ಕಂಪನಿಗಳು ಕೈ ತೊಳೆದುಕೊಂಡವು ಎನ್ನುವುದು ಬೇರೆ ವಿಚಾರ.
- ಸ್ವಿಗ್ಗಿ, ಝೊಮ್ಯಾಟೊ ಮುಂತಾದ ಆನ್‌ಲೈನ್ ಪ್ಲಾಟ್ ಫಾರ್ಮ್‌ಗಳಲ್ಲಿ ಹಗಲಿರುಳು ದುಡಿಯುವ ಗಿಗ್ ಕಾರ್ಮಿಕರ ಶೋಚನೀಯ ಸ್ಥಿತಿ, ಶೋಷಣೆ ಹಾಗೂ ಅವರಿಗೆ ಕನಿಷ್ಠ ಸಾಮಾಜಿಕ-ಆರ್ಥಿಕ ಭದ್ರತೆ ಒದಗಿಸುವ ಅಗತ್ಯತೆಯ ಬಗ್ಗೆ ಸಂಸತ್ತಿನಲ್ಲಿ ಗಂಭೀರ ಚರ್ಚೆ ಹುಟ್ಟುಹಾಕಿದ್ದರು. ಈ ವಿಚಾರದ ಕುರಿತು ಪಕ್ಷಾತೀತವಾಗಿ ಹಲವರು ಸಹಮತ ವ್ಯಕ್ತಪಡಿಸಿ, ಈ ಸೇವೆ ಒದಗಿಸುವ ಸಂಸ್ಥೆಗಳು 'ಹತ್ತು ನಿಮಿಷಗಳೊಳಗೆ ಡೆಲಿವರಿ' ವಾಗ್ದಾನ ಹಿಂಪಡೆಯುವಂತೆ ಆದೇಶಿಸಿತು.
- ಮಗು ಜನಿಸಿದಾಗ ಅದರ ಲಾಲನೆ-ಪಾಲನೆ ತಾಯಿ ಮತ್ತು ತಂದೆ ಇಬ್ಬರದೂ ಕರ್ತವ್ಯ. ಹಾಗಾಗಿ ತಾಯಿಗೆ ಮಾತ್ರ ರಜೆ ನೀಡದೇ ತಂದೆಗೂ ಪಿತೃತ್ವ ರಜೆ ನೀಡುವ ಶಾಸನ ಜಾರಿಗೆ ತರಲು ಆಗ್ರಹಿಸಿದರು.
- ಹಬ್ಬದ ಮತ್ತು ತುರ್ತು ಸಂದರ್ಭಗಳಲ್ಲಿ ವಿಮಾನಯಾನ ಸಂಸ್ಥೆಗಳು ವಿಧಿಸುವ ದುಬಾರಿ ದರಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸರಕಾರವನ್ನು ಒತ್ತಾಯಿಸಿದ್ದರು. ಜತೆಗೆ ಯುವಜನರ ಉದ್ಯೋಗ, ಮೂಲಸೌಕರ್ಯ ಮತ್ತು ನಗರಾಭಿವೃದ್ಧಿ ಕುರಿತಾದ ನೀತಿಗಳ ಬಗ್ಗೆ ಸರ್ಕಾರವನ್ನು ನಿರಂತರವಾಗಿ ಎಚ್ಚರಿಸುತ್ತಲೇ ಇದ್ದಾರೆ. ಈ ಎಲ್ಲಾ ಅಂಶಗಳನ್ನು ಸರ್ಕಾರ ಬಹುತೇಕ ಸಕಾರಾತ್ಮಕವಾಗಿ ತೆಗೆದುಕೊಂಡು ಕೆಲವು ವಿಚಾರಗಳಲ್ಲಿ ಸೂಕ್ತ, ಜನೋಪಯೋಗಿ ನಿರ್ಣಯ ಕೈಗೊಂಡಿರುವುದು ಸಂತಸದ ಸಂಗತಿ.
- 'ಕನಿಷ್ಠ ಬ್ಯಾಂಕ್ ಬ್ಯಾಲೆನ್ಸ್ ಇಲ್ಲದಿದ್ದರೆ ಬ್ಯಾಂಕುಗಳು ಶುಲ್ಕ ವಿಧಿಸುವಂತಿಲ್ಲ', 'ತೆರಿಗೆ ಕಟ್ಟುವ ತೆರಿಗೆದಾರರಿಗೆ ಸೂಕ್ತ-ಕನಿಷ್ಠ ಸವಲತ್ತು ಸಿಗಬೇಕು', 'ಶಾಲಾ ಶುಲ್ಕಗಳ ಹೆಸರಿನಲ್ಲಿ ನಡೆಯುತ್ತಿರುವ ಲೂಟಿ ನಿಲ್ಲಿಸಲು ಕಠಿಣ ಕಾನೂನು ತಂದು ಅದನ್ನು ಜಾರಿ ಮಾಡಬೇಕು' ಮುಂತಾದ ಜನಪರ ವಿಚಾರಗಳನ್ನು ರಾಜ್ಯಸಭೆಯಲ್ಲಿ ಮಂಡಿಸಿ 'ಜನರ ಧ್ವನಿ' ಎನಿಸಿಕೊಂಡರು.

ಜನಪ್ರತಿನಿಧಿಯ ನೈಜ ಶಕ್ತಿ ಇರುವುದು ಅವರು ಜನರ ಧ್ವನಿಯಾಗಿ ಸದನದಲ್ಲಿ ಕೇಳುವ ಪ್ರಶ್ನೆಗಳು ಹಾಗೂ ಮಂಡಿಸುವ ವಿಚಾರಗಳಲ್ಲಿ, ರಾಘವ್ ಛಡ್ಡಾ ರಾಜ್ಯಸಭೆಯಲ್ಲಿ ಸಾರ್ವಜನಿಕರ ಪರವಾಗಿ ಅತ್ಯಂತ ಪ್ರಭಾವಶಾಲಿಯಾಗಿ, ಜ್ವಲಂತ ಸಮಸ್ಯೆಗಳ ಕುರಿತು ಮಾತನಾಡಿ, ಸರಕಾರದ ಕಿವಿ ಹಿಂಡುವ ಕೆಲಸವನ್ನು ಮಾಡಿಕೊಂಡು ಬಂದು, ಒಂದಷ್ಟು ಪ್ರಚಾರ-ಪ್ರಸಿದ್ಧಿ ಪಡೆದಿದ್ದಾರೆ. ಆಪ್‌ನ ಆಂತರಿಕ ರಾಜಕೀಯ ಸಮೀಕರಣಗಳು ಬದಲಾಗಿ ಅವರನ್ನು ಪಕ್ಷದ ಉಪನಾಯಕ ಸ್ಥಾನದಿಂದ ಕೆಳಗಿಳಿಸಿದ ಪರಿಣಾಮ ಛಡ್ಡಾರಿಗೆ ರಾಜ್ಯಸಭೆಯಲ್ಲಿ ಮಾತನಾಡಲು ಸದ್ಯಕ್ಕೆ ಅವಕಾಶ ಮೊಟಕುಗೊಂಡಿದೆ. ಈ ತಾತ್ಕಾಲಿಕ ಹಿನ್ನಡೆಯಿಂದಾಗಿ ಅವರ ರಾಜಕೀಯ ನಡೆ ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದು ಸದ್ಯದ ಕದನ ಕುತೂಹಲ!

ರಾಘವ್ ಛಡ್ಡಾ ಇನ್ನಷ್ಟು ಮತ್ತಷ್ಟು ಪಕ್ವತೆ ಮೈಗೂಡಿಸಿಕೊಳ್ಳಬೇಕು ಎನ್ನುವುದು ಹೌದಾದರೂ ಅವರಂತಹ ಸಂಸದೀಯ ಪಟುಗಳು ಯಾವುದೇ ಪಕ್ಷಕ್ಕೆ ಮತ್ತು ಸಂಸತ್ತಿಗೆ ನಿಜಾರ್ಥದಲ್ಲಿ ಆಸ್ತಿ! ಆಪ್ ಇದನ್ನು ಶೀಘ್ರದಲ್ಲೇ ಮನಗಂಡು, ಆಗಿರುವ ದೋಷ ಸರಿಪಡಿಸಿದರೆ ಒಳಿತು; ಇಲ್ಲವಾದಲ್ಲಿ ಅವರು ಬೇರೆ ಪಕ್ಷಗಳ ಕದ ತಟ್ಟುವುದು ಖಂಡಿತ! ಡಜನ್‌ಗಟ್ಟಲೆ ಪಕ್ಷಗಳು ಛಡ್ಡಾರನ್ನು ಸ್ವಾಗತಿಸಲು, ಕೆಂಪು ಹಾಸು ಹಾಸಿ ತುದಿಗಾಲಲ್ಲಿ ನಿಂತಿವೆ! ಸದ್ಯದ ಮಾಹಿತಿಗಳ ಪ್ರಕಾರ ಅವರು ಬಿಜೆಪಿ ಸೇರುವ ನಿರೀಕ್ಷೆಯಿದೆ.

ಛಡ್ಡಾ ಅವರೇ, ನಿಮ್ಮತನವನ್ನು ಮತ್ತು ಜನರ ಧ್ವನಿಯಾಗುವ ನಿಮ್ಮ ಸಿದ್ಧಾಂತವನ್ನು ಯಾವುದೇ ಪಕ್ಷದಲ್ಲಿ ಇದ್ದರೂ, ಯಾವುದೇ ಕಾರಣಕ್ಕೂ ತ್ಯಜಿಸದಿರಿ. ಯಾಕೆಂದರೆ ಅದು ನಿಮ್ಮ ವ್ಯಕ್ತಿತ್ವ ಮತ್ತು ಅಸ್ಮಿತೆ. ಮಾಡಿದ ತಪ್ಪು ತಿದ್ದಿಕೊಂಡು, ಮತ್ತಷ್ಟು ಪಕ್ವವಾಗಲು ಇಂಥಾ ಹಿನ್ನಡೆಗಳು ಸುವರ್ಣಾವಕಾಶ. ಸ್ವಯಂ ಪ್ರಕಾಶವಾಗಿ ಮಿನುಗಿದವರೇ ರಾಜಕಾರಣದಲ್ಲಿ ಗಟ್ಟಿ ಕಾಳು ಎನಿಸಿಕೊಳ್ಳುತ್ತಾರೆ, ನೆನಪಿರಲಿ. ರಾಜಕೀಯ ಭವಿಷ್ಯ ಮತ್ತಷ್ಟು ಉಜ್ವಲವಾಗಲಿ.

ಬೆಸ್ಟ್ ವಿಷಸ್ ಛಡ್ಡಾಜಿ; ಗೆಟ್ ವೆಲ್ ಸೂನ್ 'ಆಪ್'!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ವಿವೇಕ್, ಡಾಲರ್ಸ್ ಕಾಲೋನಿ**
  ಭಟ್ರೇ, ನಿಮ್ಮ ಪಾಲಿನ ಪರಮಾವಧಿ ನಿಂದನೆ ಬೈಗುಳ ಯಾವುದು?
  – **ಯಾವ ಮರದ ತೊಪ್ಪಲು!**
- **ಶಾಲು, ಕಾಮನಕೊಪ್ಪಲು**
  ಭಟ್ರೇ, ಕಾಲರ್ ಹಿಡಿದು ಒಬ್ಬರಿಗೊಬ್ಬರು ಜಗ್ಗಾಡಿದರೆ ಅದು ಜಟಾಪಟಿ, ದಡ್ಡನೊಬ್ಬ ತಡವರಿಸಿದರೆ ಪಿಟಿಪಿಟಿ, ಬಂಧುಗಳು ಮುನಿಸಿಕೊಂಡರೆ?
  – **ಅದು ಕಿಟಿಕಿಟಿ!**
- **ರಮೇಶ ಗೌಡ, ಮಳವಳ್ಳಿ**
  ಭಟ್ರೇ, ಮನುಷ್ಯನಿಗೆ ಅತೀ ಹೆಚ್ಚು ಜ್ಞಾನೋದಯವಾಗುವುದು ಎಲ್ಲಿ?
  - **ಪರೀಕ್ಷಾ ಹಾಲ್‌ನಲ್ಲಿ... ಪ್ರತಿಯೊಂದು ಪ್ರಶ್ನೆಯನ್ನು ಓದಿದಾಗಲೂ 'ಇದು ನನಗೆ ಗೊತ್ತಿಲ್ಲ' ಎನ್ನುವ ಸತ್ಯದ ಜ್ಞಾನೋದಯವಾಗುತ್ತದೆ!**
- **ಪಿ.ಶಿವಶಂಕರ, (ಇಮೇಲ್ ಮೂಲಕ)**
  ಭಟ್ರೇ, ಯಾವ ಕೆಲಸವನ್ನು ಮಾಡಿದರೆ ನಮಗೆ ಮುಂದಿನ ಜನ್ಮದಲ್ಲಿ ಒಳ್ಳೆಯದಾಗುತ್ತದೆ?
  – **ಈ ಜನ್ಮದಲ್ಲಿ ಸಾಲ ಮಾಡಿ ಅದನ್ನು ತೀರಿಸದೇ ಇರುವುದು... ಸಾಲಗಾರರು ನಮ್ಮನ್ನು ಹುಡುಕಿಕೊಂಡು ಮುಂದಿನ ಜನ್ಮಕ್ಕೂ ಬರುತ್ತಾರೆ!**
- **ರೂಪಾ, (ಇಮೇಲ್ ಮೂಲಕ)**
  ಭಟ್ರೇ, ಡಾಕ್ಟರ್ ಹತ್ತಿರ ಹೋಗದೆಯೇ ಆರೋಗ್ಯವಾಗಿರಲು ಸುಲಭವಾದ ದಾರಿಯಿದೆಯೇ?
  – **ಖಂಡಿತ ಇದೆ, ಡಾಕ್ಟರ್ ನಿಮ್ಮ ಮನೆ ಕಡೆ ಬರುವಾಗ ನೀವು ಮನೆಯಲ್ಲಿ ಇಲ್ಲದಿದ್ದರೆ ಸಾಕು!**
- **ಕೇಶವ ಶೆಟ್ಟಿ, ಹುಬ್ಬಳ್ಳಿ**
  ಭಟ್ರೇ, ಆಫೀಸಿನಲ್ಲಿ ಕುಳಿತು ಕೆಲಸ ಮಾಡುವವರಿಗೂ, ಜಿಮ್‌ನಲ್ಲಿ ಕಸರತ್ತು ಮಾಡುವವರಿಗೂ ವ್ಯತ್ಯಾಸವೇನು?
  – **ಜಿಮ್‌ನಲ್ಲಿ ತೂಕ ಇಳಿಸಲು ಬೆವರು ಸುರಿಸುತ್ತಾರೆ, ಆಫೀಸಿನಲ್ಲಿ ಸ್ಯಾಲರಿ ಸ್ಲಿಪ್ ನೋಡಿ ಬೆವರುತ್ತಾರೆ!**
- **ಜಿ.ಆರ್.ರಾವ್, ಮೈಸೂರು**
  ಭಟ್ರೇ, ಮದುವೆಯಾದ ಪುರುಷರು ಯಾವಾಗಲೂ ಸಂತೋಷವಾಗಿರಲು ಸಾಧ್ಯವೇ?
  – **ಖಂಡಿತ ಸಾಧ್ಯ... ಆದರೆ ಅದಕ್ಕೆ ಹೆಂಡತಿಯ ಅನುಮತಿ ಬೇಕಾಗುತ್ತದೆ!**
- **ಕಲ್ಪನಾ, (ಇಮೇಲ್ ಮೂಲಕ)**
  ಭಟ್ರೇ, ಬೆಂಗಳೂರಿನ ಹವಾಮಾನಕ್ಕೂ, ನಮ್ಮ ಮನಸ್ಥಿತಿಗೂ ಏನು ಸಾಮ್ಯತೆ?
  – **ಎರಡು ಕೂಡ ಯಾವಾಗ 'ಚೇಂಜ್' ಆಗುತ್ತವೆ ಅಂತ ಯಾರಿಗೂ ಗೊತ್ತಾಗುವುದಿಲ್ಲ!**

ಬದುಕಿನಲ್ಲಿ ಅಂಕಿ ಸಂಖ್ಯೆಗಳದ್ದೇ ಸಾಮ್ರಾಜ್ಯ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಒಮ್ಮೆ ಹಾಗೆ ಗಮನಿಸಿ ನೋಡಿ ಬದುಕಿನಲ್ಲಿ ಸಂಖ್ಯೆಗಳದ್ದೇ ಸಾಮ್ರಾಜ್ಯ. ವ್ಯಕ್ತಿ ಎಷ್ಟೇ ಶ್ರೀಮಂತನಿರಲಿ ಅಥವಾ ಬಡವನಿರಲಿ ಎಲ್ಲರ ಬದುಕಿನಲ್ಲೂ ಸಂಖ್ಯೆ ಮಾತ್ರ ಇದ್ದೇ ಇರುತ್ತದೆ. ಸಂಖ್ಯೆಗಳಿಲ್ಲದ ಬದುಕನ್ನು ಇಂದಿಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ. ವ್ಯಕ್ತಿ ಹುಟ್ಟಿದ ದಿನಾಂಕದಿಂದ ಶುರುವಾಗುವ ಈ ಸಂಖ್ಯೆಗಳ ಆಟ ನಿಲ್ಲುವುದು ಕೂಡ ಸಂಖ್ಯೆಯೊಂದಿಗೆ. ಸಂಖ್ಯೆ ಅಥವಾ ನಂಬರ್‌ಗಳು ಬದುಕಿನ ಅತಿ ಮುಖ್ಯ ಭಾಗವಾಗಿದೆ. ಕೆಲವೊಮ್ಮೆ ನಾವು ಅದರ ಬಗ್ಗೆ ಮಾತನಾಡದೆ ಇದ್ದರೂ ಅದು ನಮ್ಮ ಜೀವನದಲ್ಲಿ ಮಾತ್ರ ಇದ್ದೇ ಇರುತ್ತದೆ. ಮಕ್ಕಳಿದಾಗ ಶಾಲೆಯಲ್ಲಿ ತೆಗೆಯುವ ಅಂಕ ಮುಖ್ಯವಾದರೆ, ಯವ್ವನದಲ್ಲಿ ಗಳಿಸುವ ಆದಾಯ, ಮಧ್ಯ ವಯಸ್ಸಿನಲ್ಲಿ ಬಿಪಿ ಶುಗರ್ ಸಂಖ್ಯೆ, ಮುಪ್ಪು ಆವರಿಸುತ್ತಾ ತಿನ್ನುವ ಗುಳಿಗೆಗಳ ಲೆಕ್ಕ ಒಟ್ಟಿನಲ್ಲಿ ಬದುಕೆಂದರೆ ಅದೊಂದು ಗಣಿತ. ಎಲ್ಲವೂ ಸಂಖ್ಯಾಶಾಸ್ತ್ರ! ನಿತ್ಯವೂ ನಡೆಯುವ ಅಭ್ಯಾಸ ಇರುವ ಕಾರಣ ನಡಿಗೆಯಲ್ಲಿ ಹಲವಾರು ರೀತಿಯ ಮಾತುಗಳು ಬೇಡವೆಂದರೂ ಕಿವಿಗೆ ಬೀಳುತ್ತವೆ. ಅಲ್ಲಿ ಬಹಳ ಮುಖ್ಯವಾಗಿ ಕೇಳಿಸುವುದು ಸಂಖ್ಯೆಗಳು. ಇವತ್ತಿನ ದಿನದಲ್ಲಿ ಎಲ್ಲರ ಬಾಯಲ್ಲೂ ಕೋಟಿಗಳು ಸರಾಗವಾಗಿ ಉದುರುತ್ತವೆ. ಒಂದು ಪುಟಾಣಿ ಮನೆಯನ್ನು ಹೊಂದಬೇಕು ಎಂದರೆ ಕೋಟಿಗಿಂತ ಕಡಿಮೆ ಹಣವಿದ್ದಲ್ಲಿ ಹೇಗೆ ಸಾಧ್ಯ? ಇನ್ನು ಜಮೀನು ಮಾರಿದೆ ಅಷ್ಟು ಬಂತು ಇಷ್ಟು ಬಂತು ಎನ್ನುವ ಮಾತುಗಳು, ಮಗ ಹೊಸದಾಗಿ ವ್ಯಾಪಾರ ಶುರು ಮಾಡಲು ನೀಡಿದ ಹಣ, ಹೀಗೆ ಎಲ್ಲವೂ ದುಡ್ಡಿನಮಯ. ಸಂಖ್ಯೆ, ಸಂಖ್ಯೆ, ಸಂಖ್ಯೆ!

ನನ್ನ ಬಾಲ್ಯದಲ್ಲಿ ಹಿರಿಯರು ಅಂದರೆ ಅಜ್ಜ-ತಾತಂದಿರು ಈ ಮಟ್ಟಕ್ಕೆ ಸಂಖ್ಯೆಗಳ ವ್ಯಾಮೋಹಕ್ಕೆ ಬಿದ್ದಿರಲಿಲ್ಲ. ನಿವೃತ್ತಿ ನಂತರ ದೇವರ ಸ್ಮರಣೆಯಲ್ಲಿ ದಿನವನ್ನು ದೂಡುತ್ತಿದ್ದರು. ಯಾವಾಗ ಭೂಮಿಗೆ ಚಿನ್ನವನ್ನೂ ಮೀರಿಸಿದ ಬೆಲೆ ಬಂತು ನೋಡಿ, ಅಂದಿನಿಂದ ಮನೆ ಮನೆಯಲ್ಲಿ ಸಂಖ್ಯೆಗಳ ಗುದ್ದಾಟ ಶುರುವಾಯ್ತು. ಅದು ಸಂಖ್ಯೆಗೆ ಮಾತ್ರ ಸೀಮಿತವಾಗದೆ ಸಂಬಂಧಗಳಲ್ಲಿಗೂ ವಿಸ್ತರಿಸಿತು. ಸಂಖ್ಯೆಗಳು ಮನುಷ್ಯನ ಸಂಬಂಧಗಳನ್ನು ಬೆಸೆಯುವ, ಹೊಡೆಯುವ ಮಟ್ಟಕ್ಕೆ ಮುಖ್ಯವಾದವು. ಈಗ ಚುನಾವಣೆ ಸಮಯ ಬೇರೆ! ಸಂಖ್ಯೆಗಳು ಇನ್ನಷ್ಟು ಮಹತ್ವದ ಪಾತ್ರವಹಿಸುತ್ತವೆ. ಈ ಸಂಖ್ಯೆಗಳನ್ನ ಸರಿಯಾಗಿ ಬಳಸಿಕೊಳ್ಳುವ ಸಾಮರ್ಥ್ಯವುಳ್ಳವರು ಜಯಗಳಿಸುತ್ತಾರೆ. ಇದನ್ನು ಡೇಟಾ ಕಲೆಕ್ಷನ್ ಅಂತಲೂ ಕರೆಯುತ್ತೇವೆ. ಕೊನೆಗೂ ಹೀಗೆ ಸಂಗ್ರಹಿಸಿದ ಮಾಹಿತಿಯಿಂದ ಫಲಿತಾಂಶ ಏನಾಯಿತು ಎನ್ನುವುದು ಕೂಡ ಸಂಖ್ಯೆಯಲ್ಲಿ ನಮೂದಿಸಿಸಲ್ಪಡುತ್ತವೆ. ನಾಲ್ಕು ರಾಜ್ಯಗಳಲ್ಲಿ ಚುನಾವಣೆ ಕಾವು ಜೋರಾಗಿದೆ. ದಾವಣಗೆರೆಯಲ್ಲಿ ಉಪಚುನಾವಣೆ ಬಹಳ ಸುದ್ದಿಯಾಗುತ್ತಿದೆ. ಇಲ್ಲಿ ಜಾತಿ, ಧರ್ಮದ ಸಮೀಕರಣಗಳ ಲೆಕ್ಕಾಚಾರ ಜೋರಾಗಿ ನಡೆಯುತ್ತಿದೆ. ಆದರೆ, ಇಲ್ಲೂ ಪ್ರಮುಖ ಪಾತ್ರಧಾರಿ ಸಂಖ್ಯೆ. ನೀವೇ ಗಮನಿಸಿ ನೋಡಿ, ಅಲ್ಲಿ ಅಲ್ಪಸಂಖ್ಯಾತರು ಇಂದಿಗೆ ಅಲ್ಪಸಂಖ್ಯಾತರಾಗಿ ಉಳಿದಿಲ್ಲ. ಹೀಗಾಗಿ ನಮ್ಮವರಿಗೆ ಸೀಟು ಕೊಡಬೇಕು ಎನ್ನುವ ಹಠಕ್ಕೆ ಬಿದ್ದಿದ್ದಾರೆ. ಆದರೆ, ನಮ್ಮ ದೇಶದಲ್ಲಿ ಮನೆತನಕ್ಕೆ ಇರುವ ಗೌರವದ ಬಗ್ಗೆ ವಿಶೇಷವಾಗಿ ಹೇಳಬೇಕಾದ ಅವಶ್ಯಕತೆಯಿಲ್ಲ. ಅಲ್ಲಿ ಸಂಖ್ಯಾಬಲದ ಆಧಾರದ ಮೇಲೆ ವಿಭಜನೆ ಶುರುವಾಗಿದೆ.

ಚುನಾವಣೆಗೆ ಬೇಕಾಗುವ ಅತಿ ಮುಖ್ಯ ಅಂಕಿ ಅಂಶಗಳೇನು ಎನ್ನುವುದನ್ನು ಅವಲೋಕಿಸೋಣ.

1) ಎಲ್ಲಕ್ಕೂ ಮೊದಲು ಎಷ್ಟು ಜನ ವೋಟ್ ಮಾಡುವ ಅಧಿಕಾರ ಪಡೆದಿದ್ದಾರೆ ಎನ್ನುವುದು ಅತಿ ಮುಖ್ಯ ಮಾಹಿತಿಯಾಗುತ್ತದೆ. ಈ ಬಾರಿ ಎಷ್ಟು ಕೋಟಿ ಜನ ಮತ ಚಲಾಯಿಸುವ ಹಕ್ಕು ಪಡೆದಿದ್ದಾರೆ?
2) ಎರಡು ಕೋಟಿ ಮತದಾರರು ಮೊದಲ ಬಾರಿಗೆ ಮತ ಚಲಾಯಿಸಲಿದ್ದಾರೆಯೇ?
3) ಎಷ್ಟು ಜನ ಅನಿವಾಸಿ ಭಾರತೀಯರು ಮತ ಚಲಾಯಿಸಲು ನೋಂದಣಿ ಮಾಡಿಕೊಂಡಿದ್ದಾರೆ?
4) ಮತದಾನ ದಿನಾಂಕ ಯಾವುದು?
5) ಮತ ಎಣಿಕೆ ದಿನಾಂಕ ಯಾವುದು?
6) ಒಟ್ಟು ಎಷ್ಟು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ? ಈ ಸ್ಥಾನಗಳನ್ನು ಪಡೆಯುವ ಆಕಾಂಕ್ಷೆ ಹೊಂದಿರುವ ಉಮೇದುವಾರರ ಸಂಖ್ಯೆ ಯೆಷ್ಟು?
7) ಮತದಾರರಲ್ಲಿ ಹೆಂಗಸರ ಸಂಖ್ಯೆ ಯೆಷ್ಟು? ಗಂಡಸರ ಸಂಖ್ಯೆಯೆಷ್ಟು? ಉಮೇದುವಾರರಲ್ಲಿ ಈ ಅನುಪಾತ ಎಷ್ಟು? ಮೀಸಲಾತಿ ಕ್ಷೇತ್ರಗಳೆಷ್ಟು?
8) ಸೂಕ್ಷ್ಮ ಮತಗಟ್ಟೆಗಳ ಲೆಕ್ಕಾಚಾರ, ಚುನಾವಣೆಯ ಅಧಿಕಾರಿಗಳ ಸಂಖ್ಯೆ, ಒಟ್ಟು ಮತಗಟ್ಟೆಗಳೆಷ್ಟು?

ಮೇಲೆ ಹೇಳಿದ ಅಂಶಗಳು ಅತ್ಯಂತ ಮೂಲಭೂತ ಅಂಶಗಳು. ಇದರೊಂದಿಗೆ ಪ್ರತಿ ಹಂತದಲ್ಲೂ ಅವುಗಳನ್ನು ಮತ್ತಷ್ಟು ಆಳವಾಗಿ ವಿಭಾಗಿಸಲಾಗುತ್ತದೆ. ಉದಾಹರಣೆಗೆ ಕೋಟಿ 18 ಅಥವಾ 19 ವರ್ಷದ ಹೊಸ ಮತದಾರರಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯೆಷ್ಟು? ಗಂಡು ಮಕ್ಕಳ ಸಂಖ್ಯೆಯೆಷ್ಟು? ಇವರಲ್ಲಿ ಎಷ್ಟು ಜನ ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ? ಎಷ್ಟು ಜನ ಹಳ್ಳಿಗಳಲ್ಲಿ? ಅವರ ಎಕನಾಮಿಕ್ ಬ್ಯಾಕ್‌ಗ್ರೌಂಡ್, ಅವರ ಕಲ್ಚರಲ್ ಬ್ಯಾಕ್‌ಗ್ರೌಂಡ್? ಹೀಗೆ ಪ್ರತಿಯೊಂದನ್ನು ಅತ್ಯಂತ ಸೂಕ್ಷ್ಮವಾಗಿ ವಿಭಜಿಸಿ ವಿಶ್ಲೇಷಣೆ ಮಾಡಲಾಗುತ್ತದೆ. ಹೊಸ ತಲೆಮಾರು ಟ್ವಿಟ್ಟರ್(ಎಕ್ಸ್), ಫೇಸ್‌ಬುಕ್ ಮತ್ತು ಇನ್ಸ್ಟಾಗ್ರಾಮ್‌ನಲ್ಲಿ ಸದಾ ಕ್ರಿಯಾಶೀಲ ರಾಗಿರುತ್ತಾರೆ. ಎಷ್ಟು ಕೋಟಿ ಜನ ಇಂಟರ್‌ನೆಟ್ ಬಳಕೆದಾರರಿದ್ದಾರೆ. ಇವರೆಲ್ಲಾ ನಿತ್ಯವೂ ತಮಗೆ ಅರಿವಿಲ್ಲದೆ ತಮ್ಮ ಬದುಕುವ ರೀತಿಯನ್ನ, ತಮ್ಮ ಇಷ್ಟ ಅನಿಷ್ಟಗಳನ್ನ, ಬೇಕು ಬೇಡಗಳನ್ನು ಎಲ್ಲವನ್ನೂ ಬಿಟ್ಟು ಹೋಗುತ್ತಿದ್ದಾರೆ. ಇದನ್ನ ಡಿಜಿಟಲ್ ಫುಟ್‌ಪ್ರಿಂಟ್ ಎನ್ನಲಾಗುತ್ತದೆ. ನಮ್ಮ ಮಾಹಿತಿಗಳನ್ನ ಕಲೆ ಹಾಕಿ ಅವುಗಳನ್ನು ನಮ್ಮ ಪ್ರಚೋದನೆಗೆ ಬಳಸಲಾಗುತ್ತದೆ. ಭಾರತದಲ್ಲಿ ಇಂದು 112 ಕೋಟಿ ಮೊಬೈಲ್ ಫೋನ್‌ಗಳಿವೆ.

ಆದರೆ, ಅವುಗಳಲ್ಲಿ ಸ್ಮಾರ್ಟ್‌ಫೋನ್‌ಗಳ ಸಂಖ್ಯೆ 70ಕೋಟಿ. 2027ರ ವೇಳೆಗೆ ಇದು 120 ಕೋಟಿ ತಲುಪಲಿದೆ ಎನ್ನುತ್ತದೆ ಅಂಕಿಅಂಶ. ಅಂದರೆ ಗಮನಿಸಿ ಇಂಟರ್‌ನೆಟ್ ಮತ್ತು ಸೋಶಿಯಲ್ ಮೀಡಿಯಾಗಳು ಅತ್ಯಂತ ಪ್ರಬಲ ಅಸ್ತ್ರಗಳಾಗುತ್ತವೆ. ಅದು ಚುನಾವಣೆ ಇರಬಹದು ಅಥವಾ ಮತ್ಯಾವುದೇ ಪ್ರಮುಖ ಘಟನೆಯಾಗಿರಬಹದು. ಸೋಶಿಯಲ್ ಮೀಡಿಯಾ ಅಲ್ಲಿನ ಫಲಿತಾಂಶದ ಮೇಲೆ ಬೃಹತ್ ಪರಿಣಾಮ ಬೀರುತ್ತದೆ. ಏಕೆಂದರೆ ಸೋಶಿಯಲ್ ಮೀಡಿಯಾ ಸಹಿತ ಒಟ್ಟಾರೆ ಡಿಜಿಟಲ್ ಲೋಕದಲ್ಲಿ ನಾವು ಉಳಿಸುವ ಕುರುಹುಗಳನ್ನು ಬಳಸಿಕೊಂಡು, ಪ್ರತಿಯೊಬ್ಬ ವ್ಯಕ್ತಿಯ ಪ್ರೊಫೈಲ್ ಬಿಲ್ಡ್ ಮಾಡಲಾಗುತ್ತದೆ. ಅದಕ್ಕೆಂದೆ ನೂರಾರು ಕೋಟಿ ರುಪಾಯಿಗಳನ್ನು ವ್ಯಯಿಸುವ ಜನರಿದ್ದಾರೆ. ನೂರಾರು ಕೋಟಿ ವ್ಯಯಿಸುವುದು ಸಾವಿರಾರು ಕೋಟಿ ಗಳಿಸಲು ಎನ್ನುವ ಸೂಕ್ಷ್ಮ ನಿಮಗೀಗಾಗಲೇ ಅರ್ಥವಾಗಿರುತ್ತದೆ.

ಹಾಗೆ ನೋಡಲು ಹೋದರೆ 2014ರಲ್ಲಿ ಶ್ರೀ ನರೇಂದ್ರ ಮೋದಿಯವರ ಗೆಲುವಿಗೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆಲುವಿಗೆ , ಬ್ರೆಕ್ಸಿಟ್ ಎನ್ನುವ ಹೊಸ ನಾಟಕ ಶುರುವಿಗೆ ಎಲ್ಲಕ್ಕೂ ಸೋಶಿಯಲ್ ಮೀಡಿಯಾದ ಕಾಣಿಕೆ ಬಳಷ್ಟಿದೆ. ಆದರೂ ಭಾರತದ ಬಹಳ ಪ್ರದೇಶಗಳಲ್ಲಿ ಇಂದಿಗೂ ಮನೆ ಮನೆಗೂ ಹೋಗಿ ಜನರನ್ನು ಭೇಟಿ ಮಾಡಿ

ದಕ್ಷಿಣೆ ನೀಡುವ ಸಂಪ್ರದಾಯ ಕೂಡ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಎಲ್ಲಿಯವರೆಗೆ ನಮ್ಮ ಸಮಾಜ ಜಾತಿ, ಧರ್ಮ ಮತ್ತು ಹಣದ ಆಮಿಷದಲ್ಲಿ ವೋಟ್ ಮಾರುವುದು ನಿಲ್ಲಿಸುವುದಿಲ್ಲ ಅಲ್ಲಿಯ ತನಕ ಖರೀದಿದಾರರು ಕಡಿಮೆ ಯಾಗುವುದಿಲ್ಲ.

ತಂತ್ರಜ್ಞಾನದ ಸಹಾಯದಿಂದ ಮಾಹಿತಿ ಜನರನ್ನು ಮಾಹಿತಿ ಅತಿ ವೇಗದಲ್ಲಿ ತಲುಪುತ್ತಿದೆ. ಹೀಗೆ ತಲುಪುವ ಮಾಹಿತಿ ಸರಿಯೋ ತಪ್ಪೋ ಎಂದು ನೋಡುವವರಾರು? ಒಂದು ವಾಟ್ಸ್ಯಾಪ್ ಗ್ರೂಪ್‌ನಲ್ಲಿ 256 ಜನರನ್ನ ಸೇರಿಸಬಹದು. ಮಾಹಿತಿಯನ್ನು ಫಾರ್ವರ್ಡ್ ಮಾಡುವುದನ್ನ ಐದು ಸಂಖ್ಯೆಗೆ ಸೀಮಿತಗೊಳಿಸಲಾಗಿದೆ. ಹೀಗಿದ್ದೂ 1280 ಜನರನ್ನ ಅರೆಗಳಿಗೆಯಲ್ಲಿ ಸುಮ್ಮನೆ ಒಂದು ಸಣ್ಣ ಬಟನ್ ಒತ್ತುವುದರ ಮೂಲಕ ತಲುಪಿ ಬಿಡಬಹದು. ಚುನಾವಣೆ ಬರುತ್ತದೆ ಹೋಗುತ್ತದೆ. ಆ ವಿಷಯ ಹಾಗಿರಲಿ, ಜನಸಂಖ್ಯಾ ಸ್ಫೋಟದೊಂದಿಗೆ ಮಾಹಿತಿ ಸ್ಫೋಟವಾಗುತ್ತಿದೆ. ಸರಿಯೋ ತಪ್ಪೋ ತಿಳಿಯದ ವಯಸ್ಸಿನ ಮಕ್ಕಳ ಕೈಯಲ್ಲಿ ಸ್ಮಾರ್ಟ್ ಫೋನ್ ರಾರಾಜಿಸುತ್ತಿದೆ. ಈ ವಿಸ್ಫೋಟವನ್ನು ತಡೆಯುವರಾರು? ನಮ್ಮಲ್ಲಿ ಚುನಾವಣೆಯನ್ನು ಪ್ರಣಾಳಿಕೆ ಅವಲಂಬಿಸಿ ಮಾಡುವುದೆಂದು? ಯಾವುದೇ ರಾಜಕೀಯ ಪಕ್ಷ ಇಂತಹ ವಿಸ್ಫೋಟವನ್ನು ತಡೆಯುತ್ತೇವೆ ಎನ್ನುವ ಪ್ರಣಾಳಿಕೆಯನ್ನು ಏಕೆ ಬಿಡುಗಡೆ ಮಾಡುವುದಿಲ್ಲ? ಕೈಲಿರುವ ಫೋನ್ ಸ್ಮಾರ್ಟ್ ಆದರೆ ಸಾಕೆ? ನಾವೆಲ್ಲಾ ಧಾವಂತದಿಂದ ಓಡುತ್ತಿದ್ದೇವೆ, ವಿಪರ್ಯಾಸವೆಂದರೆ ಎಲ್ಲಿಗೆ ಎಂದು ಯಾರಿಗೂ ಗೊತ್ತಿಲ್ಲ. ಓಡುವ ಆತುರದಲ್ಲಿ ಎಲ್ಲಿಗೆ ಎಂದು ಕೇಳುವ ಯೋಚನೆಯೂ ನಮಗಿಲ್ಲ.

ಮಗು ಊಟ ಮಾಡುವುದಿಲ್ಲ ಎನ್ನುವ ಕಾರಣಕ್ಕೆ ಮೊಬೈಲ್ ಕೈಲಿಡುವುದರಿಂದ ಇದು ಶುರುವಾಗುತ್ತೆ. ಆಮೇಲೆ ಗಲಾಟೆ ಮಾಡುತ್ತೆ ಎಂದು ಸುಮ್ಮನಿರಿಸಲು ಮೊಬೈಲ್ ನೀಡುತ್ತೇವೆ. ಆಮೇಲೆ ಅದು ಅಡಿಕ್ಷನ್ ಹಂತವನ್ನು ತಲುಪುತ್ತದೆ. ಸ್ಮಾರ್ಟ್‌ಫೋನ್ ಬಳಸುತ್ತ ಬೆಳೆಯುವ ಇಂದಿನ ಯುವ ಜನತೆಗೆ ತಮ್ಮದು ಎನ್ನುವ ಅನುಭವಗಳು ಕಡಿಮೆ. ಯುಟ್ಯೂಬ್ ವಿಡಿಯೋದಲ್ಲಿ ತೋರಿಸಿದ್ದು, ಹೇಳಿದ್ದು, ಇಂಟರ್‌ನೆಟ್‌ನಲ್ಲಿ ಓದಿದ್ದು, ನೋಡಿದ್ದು ಗ್ರಹಿಸಿಕೊಳ್ಳುತ್ತಾ ಮತ್ತು ಅದನ್ನೇ ಸತ್ಯವೆಂದು ನಂಬುತ್ತಾ ಹೋಗುತ್ತವೆ. ಇವತ್ತಿನ ದಿನದಲ್ಲಿ ಒಂದು ವರ್ಗದ ಜನರನ್ನು ಬಹಳ ಸುಲಭವಾಗಿ ಬೇಕಾದ ಕಡೆಗೆ ಎಳೆದುಕೊಂಡು ಬಿಡಬಹುದು. ಇವತ್ತಿನ ಕಾಲಘಟ್ಟದಲ್ಲಿ ವಿದ್ಯಾವಂತರಿಗೆ ಕೆಲಸ ಸಿಗುತ್ತದೆ ಎನ್ನುವ ಗ್ಯಾರಂಟಿ ಇಲ್ಲ. ಒಂದು ದಶಕದ ಹಿಂದೆ ಚನ್ನಾಗಿ ಓದಿದರೆ ಉತ್ತಮ ಭವಿಷ್ಯವಿದೆ ಎಂದು ಮಕ್ಕಳಿಗೆ ಹೇಳುತ್ತಿದ್ದರು. ಹೇಳಬಹುದಾದ ಸನ್ನಿವೇಶವಿತ್ತು. ಇವತ್ತು ಪೋಷಕರು ಕೂಡ ಧೈರ್ಯವಾಗಿ ವಿದ್ಯಾಭ್ಯಾಸ ಮಾಡಿದವರಿಗೆ ಉತ್ತಮ ಭವಿಷ್ಯವಿದೆ ಎಂದು ಹೇಳಲು ಸಾಧ್ಯವಿಲ್ಲ. ಎರಡು ಸಾವಿರ ಇಸವಿಯಿಂದ ಈಚೆಗೆ ಹುಟ್ಟಿದ ಮಕ್ಕಳ ಸಂಖ್ಯೆಯೆಷ್ಟು? ನಮ್ಮ ದೇಶದಲ್ಲಿ ಯಾವ ಸಂಖ್ಯೆಯೂ ನಿಖರವಾಗಿ ಹೇಳಲಾಗುವುದಿಲ್ಲ ಎನ್ನುವುದು ಮಾತ್ರ ತಂತ್ರಜ್ಞಾನ ಇಷ್ಟೊಂದು ಬೆಳೆದಿರುವ ಸಮಯದಲ್ಲಿ ವಿಪರ್ಯಾಸವೇ ಸರಿ. ಅಂದಾಜಿನ ಪ್ರಕಾರ ಆ ಸಂಖ್ಯೆ 35 ಕೋಟಿ ಮೀರುತ್ತದೆ. ಅಂದರೆ ಒಂದು ದೇಶದ 1/4 ಭಾಗ ಮತದಾರರು ಅದೆಷ್ಟು ಸುಲಭದ ತುತ್ತು ಎನ್ನುವುದನ್ನು ಊಹಿಸಿಕೊಳ್ಳಿ. ಹೆಚ್ಚಿನದನ್ನು ಹೇಳುವ, ಬರೆಯುವ ಅವಶ್ಯಕತೆಯಿಲ್ಲ ಎಂದು ಕೊಳ್ಳುವೆ.

ರಾಜಕೀಯದಲ್ಲಿ ಪರ್ಮನೆಂಟ್ ಶತ್ರು ಅಥವಾ ಮಿತ್ರರಿಲ್ಲ ಎಂದು ಹೇಳಿ ನಮ್ಮನ್ನು ನಂಬಿಸಲಾಗಿದೆ. ನಂಬಿಸುವ ಅವಶ್ಯಕತೆಯಿಲ್ಲ, ನಾವು ಸುಲಭಕ್ಕೆ ನಂಬಿ ಬಿಡುತ್ತೇವೆ. ಹೀಗಾಗಿ ಚುನಾವಣೆ ಸಮಯದಲ್ಲಿ ಅಂಕಿ ಸಂಖ್ಯೆಯೆಗಳ ಲೆಕ್ಕಾಚಾರ ಜೋರಾಗುತ್ತದೆ. ಲಾಭ- ನಷ್ಟದ ಆಧಾರದ ಮೇಲೆ ಮಾತುಗಳು, ಭಾಷಣಗಳು, ಕಪ್ಪೆ ಜಿಗಿತಗಳು ಶುರುವಾಗುತ್ತವೆ. ಆದರೆ, ಕಾರ್ಯಕರ್ತನ ಮನಸ್ಥಿತಿ ಮಾತ್ರ ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ, ಮೇಲೆ ಕುಳಿತವರು ಕ್ಷಣ ಮಾತ್ರದಲ್ಲಿ ಅಂಕಿ ಸಂಖ್ಯೆಗಳ ಆಧಾರದ ಮೇಲೆ ನಿರ್ಧಾರ ತೆಗೆದುಕೊಂಡು ಬಿಡುತ್ತಾರೆ. ಆದರೆ ಕಾರ್ಯಕರ್ತ? ಇದು ಇಲ್ಲಿಯವರೆಗಿನ ಕಥೆಯಾದರೆ, ದಾವಣಗೆರೆ ಇದಕ್ಕೂ ಹೊಸ ಭಾಷ್ಯ ಬರೆಯುತ್ತಿದೆ. ಅಲ್ಪ ಸಮುದಾಯದ ನಾಯಕರು ತಮ್ಮ ಸಮುದಾಯದ ಜನರಿಗೆ ತಮ್ಮ ಸಮುದಾಯದ ಉಮೇದುವಾರನಿಗೆ ವೋಟ್ ಮಾಡಬೇಡಿ ಎನ್ನುತ್ತಿದ್ದಾರೆ! ಈಗ ಹೇಳಿ ಬದುಕನ್ನು ಆಳುತ್ತಿರುವುದು ಅಂಕಿ ಸಂಖ್ಯೆಯಲ್ಲದೆ ಬೇರೇನು?

ಅಭಿಮತ

ನಿತ್ಯಾನಂದ ಹೆಗಡೆ, ಮುರೂರು

ಹಿಂದಿ ಭಾಷೆಯ ಅವಜ್ಞೆ ಸರಿಯೇ?

ನಮ್ಮ ಇಡೀ ಭಾರತವನ್ನು ದೃಷ್ಟಿಯಲ್ಲಿಟ್ಟು ಗಮನಿಸಬೇಕು. ದಕ್ಷಿಣದಲ್ಲಿ ತಮಿಳು, ತೆಲುಗು, ಮಲೆಯಾಳಂ, ತುಳು ಹೀಗೆ ಅರ್ಧ ಭಾರತವನ್ನು ಹಲವು ಭಾಷೆಗಳು ಆಕ್ರಮಿಸಿವೆ. ಅದೇ ಉತ್ತರ ಭಾರತದ ಅರ್ಧದಷ್ಟು ದೇಶವನ್ನು ಗುಜರಾತಿ, ಮರಾಠಿಯನ್ನು ಕಿರುಭಾಗದಲ್ಲಿ ಬಿಟ್ಟರೆ ವಿಸ್ತಾರವಾದ ಆಡುಭಾಷೆ ಹಿಂದಿ. ನಮ್ಮ ಕೇಂದ್ರ ಸರಕಾರದ ಆಡಳಿತ ಭಾಷೆ ಹಿಂದಿ. ನಮ್ಮ ದೇಶದ ರಾಜಧಾನಿ ದೆಹಲಿ ಹಿಂದಿ ಭಾಷೆಯನ್ನು ಆಡುಭಾಷೆಯಾಗಿ ಬಳಸುತ್ತಿದೆ. ಹಿಂದೆ ಗಾಂಧೀಜಿಯವರು ಹಿಂದಿ ರಾಷ್ಟ್ರಭಾಷೆಯಾಗಿ ಮಾಡಬೇಕೆಂದು ಹೇಳಿದ್ದು ಅದು ಹಾಗೆಯೇ ನಡೆದುಬಂದಿತ್ತು. ಇಂದಿರಾ ಗಾಂಧಿಯವರು ಇದನ್ನು ಜಾರಿಯಲ್ಲಿಟ್ಟಿದ್ದರು. ನಮ್ಮ ದೇಶಾದ್ಯಂತ ರಾಷ್ಟ್ರಭಾಷಾ ಅಂತ ಹಿಂದಿ ಪರೀಕ್ಷೆ ನಡೆಸಲ್ಪಡುತ್ತಿದ್ದು, ನಮ್ಮ ಕರ್ನಾಟಕದಲ್ಲೇ ಅದನ್ನು ಹಲವರು ಪರೀಕ್ಷೆ ಪಾಸು ಮಾಡಿದ ಪ್ರಮಾಣ ಪತ್ರಗಳಿವೆ. ಇಂತಿಪ್ಪ ಹಿಂದಿಯಲ್ಲಿ ಮಹಾದೇವಿ ವರ್ಮಾ, ಸುಮಿತ್ರಾ ನಂದನ್ ಪಂತ್‌ರಂತಹ ಮಹಾ ಸಾಹಿತಿಗಳು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಹಿಂದಿ ಭಾಷೆ 12 ಸಲ ಜ್ಞಾನಪೀಠ ಪ್ರಶಸ್ತಿಗಳಿಸಿದ ಬೃಹತ್ ಹಾಗೂ ಸಂಪನ್ನ ಭಾಷೆ. ಆಮೇಲೆ ಹಿಂದಿ ಭಾಷೆಯ ಅಸ್ಮಿತೆ ಏನೆಂದರೆ ಹಿಂದಿ ಭಾಷೆಯ ಗಾಂಭೀರ್ಯದ ಉಚ್ಚಾರಣೆ. ಮಹಾಭಾರತ, ರಾಮಾಯಣಗಳನ್ನು 80ರ ದಶಕದಲ್ಲಿ ದೂರದರ್ಶನಗಳ ಮೂಲಕ ಮನೆ ಮನೆಗೆ ತಲುಪಿಸಿದ ಭಾಷೆ. ಮೊಹಮ್ಮದ್ ರಫಿ, ಮನ್ನಾಡೆ, ಕಿಶೋರ್ ಕುಮಾರ್, ಲತಾ ಮಂಗೇಶ್ಕರ್, ಆಶಾ ಬೋಸ್ಲೆ ಇವರೆಲ್ಲರ ರಿಧಮಿಕ್ ಹಾಡುಗಳು ಎಂದೆಂದೂ ಮರೆಯಲಾರದ ಗುಂಗುಗಳು. ನಮ್ಮ ಕನ್ನಡ ಭಾಷೆ ಜತೆ, ಹಿಂದಿ ಭಾಷೆ ತಕರಾರಿಲ್ಲದೆ ಬಾಳ್ವೆ ಮಾಡುತ್ತಾ ಶತಮಾನಗಳೇ ಕಳೆದಿವೆ. ಇಷ್ಟೆಲ್ಲಾ ಇರುವಾಗ ನಮ್ಮ ಕರ್ನಾಟಕದ ಇಂದಿನ ಸರಕಾರಿ ಧೋರಣೆಯಲ್ಲಿ ಹಿಂದಿಯನ್ನು ದೂರೀಕರಿಸುವ ಹುನ್ನಾರ ನಡೆಯುತ್ತಿರುವಂತಿದೆ. ಏಕೆಂದರೆ ಒಂದು ಭಾಷೆ ಅದು ಪಠ್ಯವಾದಾಗ ಬೇಕೋ ಬೇಡವೋ ಸ್ವಲ್ಪವಾದರೂ ಪರಿಚಯ ಆಗಿಯೇ ಆಗುತ್ತದೆ. ಪಠ್ಯದಲ್ಲಿ ಅದು ಪರೀಕ್ಷೆಗೇ ಗಮನಿಸದಂತಿರುವುದಾದರೆ ಯಾವನು ಓದುತ್ತಾನೆ, ಕಲಿಯುತ್ತಾನೆ. ನಮಗೆಲ್ಲಾ ಹತ್ತನೆಯ ತರಗತಿಗೆ ಬರುವಾಗ ಇಂಗ್ಲೀಷ್‌ಗಿಂತಾ ಹೆಚ್ಚು ಚೆನ್ನಾಗಿ ಅರ್ಥವಾಗುತ್ತಾ ವಾಕ್ಯರಚನೆ ಕೂಡ ಸಾಧ್ಯವಾಗುತ್ತಿತ್ತು.

ಯಾಕೋ ರಾಜ್ಯದ ಶಿಕ್ಷಣದ ಮಟ್ಟ ಕುಸಿಯುತ್ತಿರುವಂತೆ

ಕಾಣಿಸುತ್ತದೆ. ಹೆಚ್ಚು ಫಲಿತಾಂಶ ತರಿಸಲು ಹೆಚ್ಚು ಗುಣಾತ್ಮಕ ಪಾಠ ಮಾಡಿಸುವುದು ಬಿಟ್ಟು ಉತ್ತೀರ್ಣ ಆಗಲು 35ಅಂಕದ ಬದಲಿಗೆ 33ಅಂಕಕ್ಕೆ ಇಳಿಸಿದ್ದು, ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ನಾಮ್‌ಕೇವಾಸ್ತೆ ಮಾಡಿದ್ದೂ ಹಿಂದಿ ವಿಷಯಕ್ಕೆ ಉತ್ತೀರ್ಣ ಆಗಲು ಶೂನ್ಯ ಅಂಕ ಸಾಕೆನ್ನುವುದು ಎಸ್‌ಎಸ್‌ಎಲ್‌ಸಿ ಪರೀಕ್ಷೆ 625ರ ಬದಲು 525 ಅಂಕಕ್ಕೆ ಇಳಿಸಲ್ಪಡುವುದು ಇವೆಲ್ಲಾ ಗುಣಮಟ್ಟದ ಇಳಿಕೆಯೆಂದೇ ಅನ್ನಿಸುವುದು.

ಒಮ್ಮೆ ಆಮೂಲಾಗ್ರ, ಚಿಂತನೆ ನಡೆಯಬೇಕು. ಯಾವ ಸೂಚನೆ ಯಾವುದೊಂದು ವೈಜ್ಞಾನಿಕ ಚಿಂತನೆ, ಕಮಿಟಿ ತಜ್ಞರ ಸಲಹೆ ಏನೂ ಇಲ್ಲದೆ ಮನಬಂದಂತೆ ಮಾಡಿದ್ದಾರೆ. ಒಂದು ಕಾಲಕ್ಕೆ ಕರ್ನಾಟಕದ ಶಿಕ್ಷಣ ದೇಶಕ್ಕೇ ಮಾದರಿಯಾದದ್ದು, ಹೇಳ ಹೆಸರಿಲ್ಲದಂತಾಗದೇ. ಒಂದು ಆರೋಗ್ಯಪೂರ್ಣ ಚರ್ಚೆ ಅಗತ್ಯವೆನಿಸುತ್ತದೆ.

ಇರಾನ್-ಇಸ್ರೇಲ್: ಸಹಬಾಳ್ವೆಯಿಂದ ಸಂಘರ್ಷದವರೆಗೆ

ಪ್ರಚಲಿತ
ಡಾ. ಮಂಜುನಾಥ ಜಿ. ಪಾಲವ್ವನಹಳ್ಳಿ
vveditoped@gmail.com

ಈ ಜಗತ್ತು ಅನೇಕ ಯುದ್ಧಗಳನ್ನು ಕಂಡಿದೆ. ಅವುಗಳಲ್ಲಿ ಪ್ರಪಂಚವನ್ನೇ ಬೆಚ್ಚಿ ಬೀಳಿಸಿದ ಎರಡು ಮಹಾಯುದ್ಧಗಳು ನಡೆದಿವೆ. ಎಲ್ಲ ಯುದ್ಧಗಳಲ್ಲಿಯೂ ಸೈನಿಕರು ಮತ್ತು ನಾಗರಿಕರು ಬಲಿಯಾಗಿ ಅಪಾರ ಸಾವು-ನೋವುಗಳನ್ನು ಅನುಭವಿಸಿದ್ದಾರೆ. ಪ್ರಸ್ತುತ ಪರಿಸ್ಥಿತಿಯನ್ನು ಗಮನಿಸಿದರೆ ರಾಷ್ಟ್ರಗಳ ನಡುವಿನ ವೈಮನಸ್ಸು ದಿನೇ ದಿನೆ ಹೆಚ್ಚುತ್ತಿದೆ. ಯಾವ ರಾಷ್ಟ್ರ ಯಾವಾಗ ಶತ್ರುವಾಗುತ್ತದೆ, ಯಾವಾಗ ಮಿತ್ರವಾಗುತ್ತದೆ ಎಂಬುದನ್ನು ಊಹಿಸುವುದೂ ಕಷ್ಟವಾಗಿದೆ. ಇದೇ ಸಂಗತಿ ಇರಾನ್-ಇಸ್ರೇಲ್ ಸಂಬಂಧಗಳಲ್ಲಿಯೂ ಸ್ಪಷ್ಟವಾಗಿ ಕಾಣಿಸುತ್ತದೆ. ಒಂದು ಕಾಲದಲ್ಲಿ ಸ್ನೇಹಿತರಾಗಿದ್ದ ರಾಷ್ಟ್ರಗಳು ಇಂದು ಕಟ್ಟಾ ಶತ್ರುಗಳಾಗಿವೆ.

ಒಂದು ಕಾಲದಲ್ಲಿ ರಾಜತಾಂತ್ರಿಕತೆ ಮತ್ತು ಗುಪ್ತಚರ ವಿಷಯಗಳಲ್ಲಿ ಪರಸ್ಪರ ಬೆಂಬಲ ನೀಡುತ್ತಿದ್ದ ಇರಾನ್ ಮತ್ತು ಇಸ್ರೇಲ್ ಇಂದು ಶತ್ರುಗಳಾಗಿರುವುದು ಇತಿಹಾಸದ ಅತ್ಯಂತ ಅಚ್ಚರಿಯ ತಿರುವುಗಳಲ್ಲಿ ಒಂದಾಗಿದೆ. ಪರ್ಷಿಯನ್ ಮತ್ತು ಯಹೂದಿ ನಾಗರಿಕತೆಗಳ ನಡುವಿನ ಸಂಬಂಧ ಸಾವಿರಾರು ವರ್ಷಗಳ ಹಿಂದಿನದು. ಪ್ರಾಚೀನ ಪರ್ಷಿಯನ್ ಸಾಮ್ರಾಜ್ಯದ ಕಾಲದಲ್ಲಿ ಯಹೂದಿಗಳಿಗೆ ಆಶ್ರಯ ದೊರೆತಿತ್ತು ಮತ್ತು ಇಸ್ಲಾಮಿಕ್ ಆಳ್ವಿಕೆಯ ನಂತರವೂ ಇಸ್ಫಹಾನ್ ಹಾಗೂ ಶಿರಾಝ್ ನಗರಗಳಲ್ಲಿ ಯಹೂದಿ ಸಮುದಾಯಗಳು ನೆಮ್ಮದಿಯಿಂದ ಬದುಕುತ್ತಿದ್ದವು. ಇದು ಕೇವಲ ಸಹಿಷ್ಣುತೆ ಮಾತ್ರವಲ್ಲ, ಎರಡು ಪ್ರಾಚೀನ ನಾಗರಿಕತೆಗಳ ನಡುವಿನ ನಿಜವಾದ ಸಹಬಾಳ್ವೆಯಾಗಿತ್ತು.

ಆಧುನಿಕ ಕಾಲದಲ್ಲಿ 1948ರಲ್ಲಿ ಇಸ್ರೇಲ್ ಯಹೂದಿ ರಾಷ್ಟ್ರವೆಂದು ಘೋಷಿಸಿದಾಗ, ಅದನ್ನು ಮೌನವಾಗಿ ಸಮ್ಮತಿಸಿದ ಕೆಲವೇ ಮುಸ್ಲಿಂ ರಾಷ್ಟ್ರಗಳಲ್ಲಿ ಇರಾನ್ ಕೂಡ ಒಂದಾಗಿತ್ತು. ಮೊಹಮ್ಮದ್ ರೆಜಾ ಪಹ್ಲವಿ ಅವರ ಆಳ್ವಿಕೆಯಲ್ಲಿ (1941–1979) ಈ ಎರಡೂ ದೇಶಗಳ ನಡುವೆ ಗಟ್ಟಿಯಾದ ರಾಜತಾಂತ್ರಿಕ ಮತ್ತು ಆರ್ಥಿಕ ಮೈತ್ರಿ ಬೆಳೆದಿತ್ತು. ಎರಡೂ ದೇಶಗಳು ಅಮೆರಿಕದ ಮಿತ್ರರಾಗಿದ್ದರಿಂದ ಅವರ ಸಹಕಾರ ಇನ್ನಷ್ಟು ಪ್ರಬಲವಾಯಿತು. ಇರಾನ್ ರಹಸ್ಯ ಕೊಳವೆಮಾರ್ಗದ ಮೂಲಕ ಇಸ್ರೇಲ್‌ಗೆ ಶೇ.60ರಷ್ಟು ತೈಲ ಪೂರೈಸುತ್ತಿತ್ತು; ಪ್ರತಿಯಾಗಿ ಇಸ್ರೇಲ್ ಗುಪ್ತಚರ ತರಬೇತಿ, ತಾಂತ್ರಿಕ ಸಹಾಯ ಮತ್ತು ಕೃಷಿಗೆ ನೆರವು ನೀಡುತ್ತಿತ್ತು. ಜತೆಗೆ ಇರಾನಿನ ವಿದ್ಯಾರ್ಥಿಗಳು ಇಸ್ರೇಲ್ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಆದರೆ, ಫೆಬ್ರವರಿ 1979ರಲ್ಲಿ ಅಯಾತೊಲ್ಲಾ ರುಹೊಲ್ಲಾ ಖೊಮೇನಿ ನೇತೃತ್ವದಲ್ಲಿ ನಡೆದ ಇಸ್ಲಾಮಿಕ್ ಕ್ರಾಂತಿ ಈ ಸಂಬಂಧವನ್ನು ಸಂಪೂರ್ಣವಾಗಿ ಬದಲಿಸಿತು. ಮೊಹಮ್ಮದ್ ರೆಜಾ ಪಹ್ಲವಿ ಅವರ ಆಡಳಿತ ಕೊನೆಗೊಳಿಸಿ ಶಿಯಾ ಧರ್ಮ ಮತ್ತು ಸಾಮ್ರಾಜ್ಯವಿರೋಧಿ ತತ್ತ್ವಗಳ ಆಧಾರದ ಮೇಲೆ ಇಸ್ಲಾಮಿಕ್ ಗಣರಾಜ್ಯವನ್ನು ಸ್ಥಾಪಿಸಲಾಯಿತು. ಕೆಲವೇ ದಿನಗಳಲ್ಲಿ ಇರಾನ್-ಇಸ್ರೇಲ್ ನಡುವಿನ ದಶಕಗಳ ಸ್ನೇಹ ಕ್ಷಣಾರ್ಧದಲ್ಲಿ ಮುರಿದುಬಿತ್ತು. ಇರಾನ್ ಇಸ್ರೇಲ್‌ನೊಂದಿಗಿನ ಎಲ್ಲ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿತು. ಟೆಹ್ರಾನ್‌ನಲ್ಲಿದ್ದ ಇಸ್ರೇಲ್ ರಾಯಭಾರಿ ಕಚೇರಿಯನ್ನು ಪ್ಯಾಲೆಸ್ತೀನ್ ವಿಮೋಚನಾ ಸಂಘಟನೆಗೆ ಹಸ್ತಾಂತರಿಸಲಾಯಿತು ಮತ್ತು ವಿಮಾನ ಮಾರ್ಗಗಳನ್ನು ರದ್ದುಪಡಿಸಲಾಯಿತು. ಖೊಮೇನಿ ಅಮೆರಿಕವನ್ನು ದೊಡ್ಡ ಸೈತಾನ ಮತ್ತು ಇಸ್ರೇಲ್ ಅನ್ನು ಚಿಕ್ಕ ಸೈತಾನ ಎಂದು ಕರೆಯುತ್ತಾ, ಇಸ್ರೇಲ್ ಅನ್ನು ಅಕ್ರಮ ರಾಷ್ಟ್ರ ಹಾಗೂ ಪಾಶ್ಚಿಮಾತ್ಯ ದಬ್ಬಾಳಿಕೆಯ ಪ್ರತೀಕವೆಂದು ಘೋಷಿಸಿದ. ಪ್ಯಾಲೆಸ್ತೀನಿಯರ ಹೋರಾಟವನ್ನು ಪವಿತ್ರ ಕಾರ್ಯವೆಂದು ಬಿಂಬಿಸಿದರು.

ಇರಾನ್ ಮತ್ತು ಇಸ್ರೇಲ್ ನಡುವಿನ ವೈಮನಸ್ಸಿಗೆ ನಾಲ್ಕು ಪ್ರಮುಖ ಕಾರಣಗಳಿವೆ: ಮೊದಲನೆಯದಾಗಿ, ಇರಾನ್ ಇಸ್ಲಾಮಿಕ್ ತತ್ತ್ವದ ಮೇಲೆ ನಿಂತ ರಾಷ್ಟ್ರವಾಗಿದ್ದು ಇಸ್ರೇಲ್ ಯಹೂದಿ ರಾಷ್ಟ್ರವಾಗಿರುವ ಧಾರ್ಮಿಕ ಭಿನ್ನತೆ; ಎರಡನೆಯದಾಗಿ, ಇರಾನ್ ಹಮಾಸ್ ಮತ್ತು ಹೆಜ್ಬೊಲ್ಲಾ

ಸಂಘಟನೆಗಳ ಮೂಲಕ ಪ್ಯಾಲೆಸ್ತೀನ್ ಪರ ನಿಂತಿರುವ ನೀತಿ, ಇದನ್ನು ಇಸ್ರೇಲ್ ತನ್ನ ಭದ್ರತೆಗೆ ದೊಡ್ಡ ಅಪಾಯವೆಂದು ಪರಿಗಣಿಸುತ್ತದೆ; ಮೂರನೆಯದಾಗಿ, ಇರಾನ್ ಸಿರಿಯಾ ಮತ್ತು ಲೆಬನಾನ್‌ನಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಯತ್ನಿಸುತ್ತಿರುವ ಭೌಗೋಳಿಕ-ರಾಜಕೀಯ ಸ್ಪರ್ಧೆ; ನಾಲ್ಕನೆಯದಾಗಿ, ಇರಾನ್‌ನ ಪರಮಾಣು ತಯಾರಿಕೆಯ ಚಟುವಟಿಕೆಯು ಇಸ್ರೇಲ್‌ಗೆ ಭದ್ರತಾ ಆತಂಕವನ್ನು ಹುಟ್ಟಿಸಿದೆ.

1979ರ ನಂತರ ಈ ಸಂಘರ್ಷವು 'ನೆರಳಿನ ಯುದ್ಧ'ವಾಗಿ ಮುಂದುವರಿಯಿತು. ಅಂದರೆ, ಎರಡೂ ದೇಶಗಳು ನೇರವಾಗಿ ಯುದ್ಧ ಘೋಷಿಸದೆ, ಗುಪ್ತ ದಾಳಿಗಳ, ಸೈಬರ್ ದಾಳಿಗಳ ಮತ್ತು ಗುಪ್ತಚರ ಚಟುವಟಿಕೆಗಳ ಮೂಲಕ ಪರಸ್ಪರ ಹೋರಾಡುತ್ತ ಬಂದಿವೆ. ಇಸ್ರೇಲ್, ಇರಾನ್‌ನ ನಟಾಂಝ್, ಫೊರ್ಡೋ ಮತ್ತು ಇಸ್ಫಹಾನ್ ಪರಮಾಣು ಕೇಂದ್ರಗಳ ಮೇಲೆ ದಾಳಿ ನಡೆಸಿ, ಅಲ್ಲಿ ನಡೆಯುತ್ತಿದ್ದ ಯುರೇನಿಯಂ ಉತ್ಪಾದನಾ ಕಾರ್ಯವನ್ನು ತಡೆಯಿತು. ಜತೆಗೆ ಮೊಹ್ಸೆನ್ ಫಖ್ರಿಝಾದೆ (2020), ಮಜಿದ್ ಶಾಹ್ರಿಯಾರಿ ಮತ್ತು ಮಸ್ಸೂದ್ ಅಲಿಮೊಹಮ್ಮದಿ (2010) ಸೇರಿದಂತೆ ಪ್ರಮುಖ ಪರಮಾಣು ವಿಜ್ಞಾನಿಗಳ ಹತ್ಯೆಗಳು ಈ ಸಂಘರ್ಷವನ್ನು ಇನ್ನಷ್ಟು ತೀವ್ರಗೊಳಿಸಿತ್ತು.

ಈ ರಹಸ್ಯ ಸಂಘರ್ಷ ಏಪ್ರಿಲ್ 2024ರಲ್ಲಿ ನೇರ ಸಂಘರ್ಷದ ಹಂತಕ್ಕೆ ತಲುಪಿತು. ದಮಾಸ್ಕಸ್‌ನಲ್ಲಿರುವ ಇರಾನಿನ ಕಾನ್ಸುಲೇಟ್ ಮೇಲೆ ನಡೆದ ದಾಳಿಗೆ ಪ್ರತಿಯಾಗಿ ಇರಾನ್ 300ಕ್ಕೂ ಹೆಚ್ಚು ಡ್ರೋನ್ ಮತ್ತು ಕ್ಷಿಪಣಿಗಳನ್ನು ಇಸ್ರೇಲ್ ಮೇಲೆ ಹಾರಿಸಿತು. ಇದು 1979ರ ನಂತರದ ಮೊದಲ ನೇರ ದಾಳಿ ಆಗಿದ್ದು, ಜಾಗತಿಕ ಮಟ್ಟದಲ್ಲಿ ಆತಂಕವನ್ನು ಉಂಟುಮಾಡಿತು. ಜುಲೈ 2024ರಲ್ಲಿ ಟೆಹ್ರಾನ್‌ನಲ್ಲಿ ಹಮಾಸ್ ನಾಯಕ ಇಸ್ಮಾಯಿಲ್ ಹನಿಯೇ ಹಾಗೂ ಬೈರೂತ್‌ನಲ್ಲಿ ಹೆಜ್ಬೊಲ್ಲಾ ನಾಯಕ ಹಸನ್ ನಸ್ರಲ್ಲಾ ಇಸ್ರೇಲ್ ದಾಳಿಗೆ ಬಲಿಯಾದರು. 2025ರ ಜೂನ್‌ನಲ್ಲಿ ಇಸ್ರೇಲ್ ಆಪರೇಶನ್ 'ರೈಜಿಂಗ್ ಲಯನ್' ಎಂಬ ಹೆಸರಿನ ಮಹತ್ವದ ಸೈನಿಕ ಕಾರ್ಯಾಚರಣೆಯನ್ನು ಆರಂಭಿಸಿತು. ಈ ಕಾರ್ಯಾಚರಣೆಯು ಇರಾನ್‌ನ ಪರಮಾಣು ಮೂಲಸೌಕರ್ಯ, ಕ್ಷಿಪಣಿ ನೆಲೆಗಳು ಹಾಗೂ ರೆವಲ್ಯೂಷನರಿ ಗಾರ್ಡ್‌ನ ಕಮಾಂಡರ್ ಹೊಸ್ಸೇನ್ ಸಲಾಮಿ ಸೇರಿದಂತೆ ಹಲವಾರು ಸೈನಿಕ ನಾಯಕರನ್ನು ಗುರಿಯಾಗಿಸಿಕೊಂಡಿತು. ಈ ದಾಳಿಗಳು ಇರಾನ್‌ಗೆ ಗಂಭೀರ ಹಾನಿಯನ್ನುಂಟು ಮಾಡಿದವು.

ಗಮನಾರ್ಹ ಸಂಗತಿ ಏನೆಂದರೆ, ಇರಾನ್ ಮತ್ತು ಇಸ್ರೇಲ್ ನಡುವೆ ಯಾವುದೇ ನೇರ ಗಡಿ ಅಥವಾ ಭೂ ವಿವಾದ ಇಲ್ಲ. ಆದರೂ ಇವರ ನಡುವಿನ ಶತ್ರುತ್ವವು ಸಂಪೂರ್ಣವಾಗಿ ವೈಚಾರಿಕ ಮತ್ತು ಭೌಗೋಳಿಕ-ರಾಜಕೀಯ ಕಾರಣಗಳಿಂದ ಉಂಟಾಗಿದೆ. 1948ರಿಂದ 1979ರವರೆಗೆ ಉತ್ತಮ ಬಾಂಧವ್ಯವನ್ನು ಹಂಚಿಕೊಂಡಿದ್ದ ಈ ಎರಡು ರಾಷ್ಟ್ರಗಳು ಇಂದು ಪರಸ್ಪರರ ಮೇಲೆ ಕ್ಷಿಪಣಿಗಳನ್ನು ಹಾರಿಸುತ್ತಿರುವುದು ಮಧ್ಯಪ್ರಾಚ್ಯದ ಅತ್ಯಂತ ದುಃಖಕರ ಮತ್ತು ಅಪಾಯಕಾರಿ ಬೆಳವಣಿಗೆಯಾಗಿದೆ. ಜಗತ್ತಿನಲ್ಲಿ ಯಾವ ರೀತಿಯ ಆಡಳಿತವಿದ್ದರೂ, ಅದು ಶಾಂತಿ ಮತ್ತು ಸಹಬಾಳ್ವೆಯನ್ನು ಉತ್ತೇಜಿಸುವಂತಿರಬೇಕು. ಯುದ್ಧ, ದ್ವೇಷ ಮತ್ತು ವೈಮನಸ್ಸನ್ನು ಹೆಚ್ಚಿಸುವ ಬದಲು ಮಾನವೀಯ ಮೌಲ್ಯಗಳನ್ನು ಕಾಪಾಡುವ ದಾರಿಯಲ್ಲಿ ಸಾಗುವುದು ಅಗತ್ಯವಾಗಿದೆ.

ಪ್ರಸ್ತುತ ನಡೆಯುತ್ತಿರುವ ಇರಾನ್-ಇಸ್ರೇಲ್ ಯುದ್ಧದಲ್ಲಿ, ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾದ ನಂತರ, ಅವರದೇ ದೇಶದ ಕೆಲವು ನಾಗರಿಕರು ಆ ಸಾವನ್ನು ಸಂಭ್ರಮದಿಂದ ಆಚರಿಸಿದರು ಎಂಬ ಸುದ್ದಿ ಹೊರಬಂದಿದೆ. ಆದ್ದರಿಂದ, ತಮ್ಮದೇ ಜನರು ತಮ್ಮ ನಾಯಕನ ಸಾವನ್ನು ಸಂಭ್ರಮಿಸುವಂತಹ ಆಡಳಿತವನ್ನು ಯಾರೂ ನಡೆಸಬಾರದು. ಮಾನವ ಸಮಾಜದ ಗುರಿ ನಾಶವಲ್ಲ ಉತ್ತಮ ನಾಗರಿಕ ಸಮಾಜದ ನಿರ್ಮಾಣವಾಗಿರಬೇಕು. ಶಾಂತಿ ಮತ್ತು ಸಹಕಾರವೇ ಜಗತ್ತಿನ ಎಲ್ಲ ರಾಷ್ಟ್ರಗಳ ಪ್ರಧಾನ ಗುರಿಯಾಗಿರಬೇಕು ಎಂಬುದನ್ನು ಈ ಇತಿಹಾಸದ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ.

ಭಾರತವು ವಿಶ್ವದ ಮಧುಮೇಹ, ಕ್ಯಾನ್ಸರ್ ರೋಗಗಳ ರಾಜಧಾನಿ

ಪ್ರಸ್ತುತ
ಬಸವರಾಜ ಶಿವಪ್ಪ ಗಿರಗಾಂವಿ

ಏಪ್ರಿಲ್7 ರಂದು ವಿಶ್ವದೆಲ್ಲೆಡೆ ವಿಶ್ವ ಆರೋಗ್ಯ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಆದರೆ, ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರದ ಅರಿವು ಪಾಲನೆಯಾಗದ ಪರಿಣಾಮ ಅನಾರೋಗ್ಯಪೀಡಿತರಾಗಿ ಅಂದಾಜು ಶೇ.60ರಷ್ಟು ಜನತೆಯು ಪ್ರತಿನಿತ್ಯ ಮಾತ್ರೆಗಳನ್ನು ಅವಲಂಬಿಸಿರುವುದು ವಿಪರ್ಯಾಸ. ಮನುಷ್ಯನಿಗೆ ಬದುಕಲು ದಿನನಿತ್ಯ ಆಹಾರಗಳ ಸೇವನೆ ಅನಿವಾರ್ಯ. ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳಿಗೆ ಸೂಕ್ತ ಶಕ್ತಿಯನ್ನು ದೊರಕಿಸುವಲ್ಲಿ ಸಮಯಾನುಸಾರ ಸೇವಿಸುವ ವೈವಿಧ್ಯಮಯ ಆಹಾರಗಳು ಮುಖ್ಯವಾಗಿವೆ. ಪ್ರಸ್ತುತ ದಿನಗಳಲ್ಲಿ ದೈನಂದಿನ ಕಾರ್ಯಗಳಲ್ಲಿನ ಅತಿಯಾದ ಮಾನಸಿಕ ಒತ್ತಡಗಳಿಂದ ಆಹಾರ, ವಿಹಾರ ಮತ್ತು ವಿಶ್ರಾಂತಿಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಜೀವನಶೈಲಿಯು ಬದಲಾಗುತ್ತಿದೆ. ಭಾರತವು ಸಮಶೀತೋಷ್ಣ ವಲಯದಲ್ಲಿರುವುದರಿಂದ ಸಮತೋಲನ ಆಹಾರ ಸೇವನೆ ಬಹಳ ಮುಖ್ಯವಾಗಿದೆ. ಸದ್ಯ ಹವಾಮಾನಕ್ಕೆ ವಿರುದ್ಧವಾಗಿರುವ ಬಾಯಿ ರುಚಿಗೆ ವಿವಿಧ ಆಹಾರಗಳನ್ನು ಸೇವಿಸುವ ಮತ್ತು ದುಶ್ಚಟಗಳ ಪ್ರವೃತ್ತಿಯು ಹೆಚ್ಚಾಗಿದೆ. ಇದರಿಂದಾಗಿ ಭಾರತವು ವಿಶ್ವದ ಮಧುಮೇಹ ಮತ್ತು ಕ್ಯಾನ್ಸರ್ ರೋಗಗಳ ರಾಜಧಾನಿಯಾಗಿದೆ.

ಸಮತೋಲಿತ ಮತ್ತು ಸಮಯೋಚಿತ ಆಹಾರ ಸೇವನೆ ಎನ್ನುವುದು ಇಂದಿನ ಶೇ.90 ರಷ್ಟು ಜನರಲ್ಲಿ ಮಾಯವಾಗಿದೆ. ಪ್ರತಿಯೊಬ್ಬರಲ್ಲಿ ಅತಿಯಾದ ಒತ್ತಡವು ಸರ್ವೆ ಸಾಮಾನ್ಯವಾಗಿದ್ದರೂ ಆಹಾರ ಸೇವನೆಯಲ್ಲಿ ಮುಂಜಾಗ್ರತೆ ವಹಿಸದಿರುವುದು ಮತ್ತಷ್ಟು ಅನಾರೋಗ್ಯಕ್ಕೆ ಕಾರಣವಾಗುತ್ತಿದೆ. ದಿನನಿತ್ಯದ ಸೇವನೆಗಾಗಿ ಒಂದೇ ರುಚಿಯ ಆಹಾರವನ್ನು ಸೇವಿಸಬಾರದೆಂಬ ಭಗವಂತನ ನಿಯಮದ ಹಿಂದೆ ದೊಡ್ಡ ರಹಸ್ಯವಿದೆ. ಒಂದೇ ಬಗೆಯ ಆಹಾರಗಳನ್ನು ತಿನ್ನುವುದರಿಂದ ಶರೀರಕ್ಕೆ ದೊರೆಯಬೇಕಾದ ಪ್ರತಿಯೊಂದು ಪೋಷಕಾಂಶಗಳು ದೊರೆಯುವುದಿಲ್ಲ.

ಇದಕ್ಕೊಂದು ಸೂಕ್ತ ಉದಾಹರಣೆಯೆಂದರೆ, ಜಮೀನಿನಲ್ಲಿ ಪ್ರತಿವರ್ಷ ಒಂದೇ ಬಗೆಯ ಬೆಳೆಗಳನ್ನು ಬೆಳೆಯುವುದರಿಂದ ಭೂಮಿಯು ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಳ್ಳಲು ಭೂಮಿಯಲ್ಲಿ ಬೆಳೆಗಳ ಬದಲಾವಣೆ ಮತ್ತು ಅಂತರ ಬೆಳೆಗಳನ್ನು ಕೈಗೊಳ್ಳುವುದರೊಂದಿಗೆ ಅವಶ್ಯಕ ಲಘುಪೋಷಕಾಂಶಗಳನ್ನು ಒದಗಿಸುತ್ತಿರಬೇಕು. ಹಾಗೆಯೆ ಮನುಷ್ಯನು ಸಹ ಉತ್ತಮ ಆರೋಗ್ಯಕ್ಕಾಗಿ ಪ್ರಮಾಣಕ್ಕನುಗುಣವಾಗಿ ವಿವಿಧ ರುಚಿಯ ಸಮತೋಲಿತ ಶುದ್ಧ ಆಹಾರಗಳನ್ನು ಸೇವಿಸುತ್ತಿರಬೇಕು. ಒಟ್ಟಾರೆ ಜೀವಸಂಕುಲದಲ್ಲಿ ಮನುಕುಲವನ್ನು ಹೊರತುಪಡಿಸಿ ಸ್ವತಂತ್ರವಾಗಿ ಬದುಕುವ ಪ್ರತಿಯೊಂದು ಜೀವಿಗಳು ಬಗೆಬಗೆಯ ಆಹಾರಗಳನ್ನು ಸೇವಿಸುತ್ತ ಆರೋಗ್ಯವಾಗಿರುವುದನ್ನು ಗಮನಿಸಬಹುದು.

ಹಾಗಾದರೆ ಸಮತೋಲಿತ ಆಹಾರಗಳನ್ನು ಅರಿತು ಅವುಗಳನ್ನು ನಿತ್ಯ ಜೀವನದಲ್ಲಿ ಕಡ್ಡಾಯವಾಗಿ ಪಾಲಿಸಬೇಕಾಗಿದೆ. ಸಮತೋಲಿತ ಆಹಾರಗಳೆಂದರೆ, ಕಾರ್ಬೋಹೈಡ್ರೇಟ್ (ಜೋಳ, ಅಕ್ಕಿ, ಗೋಧಿ ಮತ್ತು ರಾಗಿಯಂತಹ ಧಾನ್ಯಗಳು), ಹಣ್ಣುಗಳು (ತಾಜಾ ಮತ್ತು ಒಣಹಣ್ಣುಗಳು), ಪ್ರೊಟೀನ್‌ಗಳು (ಮಾಂಸ, ಮೊಟ್ಟೆ, ಹಾಲು, ಬೀಜ ಮತ್ತು ನಟ್ಸ್) ಹಾಗೂ ತರಕಾರಿಗಳು (ಹಸಿರು, ಕೆಂಪು, ಕೇಸರಿ ಬಣ್ಣದ ಮತ್ತು ತಪ್ಪಲು ತರಕಾರಿಗಳು) ಎಂದು ನಾಲ್ಕು ಪ್ರಕಾರದ ವಿಂಗಡನೆ ಮಾಡಬಹುದಾಗಿದೆ. ಈ ನಾಲ್ಕು ಪ್ರಕಾರದ ಆಹಾರಗಳು ಪ್ರತಿಹೊತ್ತಿನ ಆಹಾರದಲ್ಲಿ ಸಮಪ್ರಮಾಣದಲ್ಲಿದ್ದಾಗ ಖಂಡಿತವಾಗಿಯೂ ಉತ್ತಮ ಆರೋಗ್ಯವು ಪ್ರಾಪ್ತಿಯಾಗಿ ಮನಸ್ಸು ಹತೋಟಿಯಲ್ಲಿರುವುದರಿಂದ ಒತ್ತಡಗಳು ಭಾರವಾಗುವುದಿಲ್ಲ. ಭಾರತದಲ್ಲಿಂದು ಕಾರ್ಬೋಹೈಡ್ರೇಟ್ ಪ್ರಮಾಣವನ್ನು ಹೆಚ್ಚಾಗಿ ಸೇವಿಸುತ್ತಿರುವ ಪರಿಣಾಮ ಆಹಾರದ ಸಮತೋಲನವಾಗಿ ಮಧುಮೇಹ ಹೆಚ್ಚಾಗುತ್ತಿದೆ. ಆದ್ದರಿಂದ ಆರೋಗ್ಯದ ಮೂಲ ಸಮತೋಲಿತ ಆಹಾರವಾಗಿರುವುದರಿಂದ ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಅನುಭವಿಕರ ಮಾತು ಎಷ್ಟೊಂದು ಪರಿಣಾಮಕಾರಿಯಾಗಿದೆಯಲ್ಲವೆ?

ಜಪಾನ್ ದೇಶವಾಸಿಗಳು ಪ್ರತಿಯೊಂದು ಊಟದಲ್ಲಿ ಅವಶ್ಯಕ ತೂಕ ಮತ್ತು ಕ್ಯಾಲೋರಿ ಪ್ರಮಾಣದಲ್ಲಿ ವಿವಿಧ ಬಗೆಯ ಆಹಾರಗಳನ್ನು ಸೇವಿಸುತ್ತಾರೆ. ಬಾಯಿರುಚಿಗೆ ಮತ್ತು ಬಯಕೆಗಳಿಗೆ ಕಟ್ಟುಬಿದ್ದು ಆಹಾರಗಳನ್ನು ಸೇವಿಸುವುದಿಲ್ಲ. ವಿಶ್ವದಲ್ಲಿಯೆ ಶಿಸ್ತುಬದ್ಧ, ಸಮಯೋಚಿತ ಹಾಗೂ ಸಮತೋಲಿತ ಆಹಾರ ಸಂಸ್ಕೃತಿಯು ಜಪಾನಿನಲ್ಲಿರುವುದರಿಂದ ಜಪಾನಿಗರು ಜಗತ್ತಿನಲ್ಲಿ ಅತಿಹೆಚ್ಚು ಸರಾಸರಿ ಆಯುಷ್ಯ, ಖುಷಿ ಮನಸ್ಸು ಹಾಗೂ ಒತ್ತಡ ರಹಿತ ಬದುಕನ್ನು ಹೊಂದಿದ್ದಾರೆ. ಪ್ರಸ್ತುತ ಜಪಾನ್‌ನಲ್ಲಿ ಸರಾಸರಿ 80 ವಯೋಮಾನದವರು ಸಹ ನಿರಂತರ ಚಟುವಟಿಕೆಯಿಂದ ಕೂಡಿರುವುದು ವಿಶೇಷ. ನಿರಂತರ ಚಟುವಟಿಕೆ ಅಥವಾ ಕೈಲಾದಷ್ಟು ದೈಹಿಕ ದುಡಿಮೆಯೆನ್ನುವುದು ಭಗವಂತನು ದಯಪಾಲಿಸಿದ ದಿವ್ಯ ಔಷಧವಾಗಿದೆ. ಭಾರತದಲ್ಲಿ ಶಾರೀರಿಕ ದುಡಿಮೆಯು ಕಡಿಮೆಯಾದ ಪ್ರಯುಕ್ತ ಅನಾರೋಗ್ಯವು ಹೆಚ್ಚಾಗುತ್ತಿದೆ.

ಹಿಂದೊಂದು ಕಾಲದಲ್ಲಿ ಭಾರತೀಯ ಖಾದ್ಯಗಳು ವಿಶ್ವದಲ್ಲಿಯೇ ಆರೋಗ್ಯದ ದೃಷ್ಟಿಯಿಂದ ಅತಿಹೆಚ್ಚು ಜನಪ್ರಿಯತೆಯನ್ನು ಪಡೆದಿದ್ದವು. ಇಂತಹ ಆಹಾರ ಖಾದ್ಯಗಳನ್ನು ಸೇವಿಸುತ್ತಿದ್ದ ಅಂದಿನ ಜನರು ವೈದ್ಯಕೀಯ ಕೊರತೆಯ ದಿನಮಾನಗಳಲ್ಲಿಯೂ ಆರೋಗ್ಯಕರ ಬದುಕನ್ನು ಕಟ್ಟಿಕೊಂಡಿದ್ದರು. ದೇಶದೆಲ್ಲೆಡೆ ವಿವಿಧ ಹವಾಮಾನಗಳಿಗೆ ತಕ್ಕುದಾದ ಬೆಳೆಗಳನ್ನು ಬೆಳೆಯುವುದು, ಶಾರೀರಿಕವಾಗಿ ದುಡಿಮೆಗಳನ್ನು ಕೈಗೊಳ್ಳುವುದು ಮತ್ತು ಹವಾಮಾನಕ್ಕನುಗುಣವಾಗಿ ಬೆಳೆದ ಆಹಾರಗಳನ್ನು ಸೇವಿಸುವುದು ಅಂದಿನ ಜನತೆಯ ಆರೋಗ್ಯದ ಗುಟ್ಟಾಗಿತ್ತು. ಕೃಷಿಯು ಅಂದಿನ ಪ್ರಮುಖ ಕಸುಬಾಗಿತ್ತು, ಕೃಷಿಯಲ್ಲಿ ಮೈಮುರಿದು ದುಡಿಯುವಾಗ ಹೊರಬರುವ ಬೆವರಿನಿಂದ ದೇಹದಲ್ಲಿನ ಹೆಚ್ಚುವರಿ ಕೊಬ್ಬು ನಾಶವಾಗಿ ಗುಣಮಟ್ಟದ ಆರೋಗ್ಯವು ಪ್ರಾಪ್ತವಾಗುತ್ತಿತ್ತು. ಅಂದಿನ ಕಡುಬಡತನದ ದಿನಮಾನಗಳಲ್ಲಿ ಸಮತೋಲಿತ ಆಹಾರ ಸಾಧ್ಯವಾಗದಿದ್ದರೂ ನಮ್ಮ ಪೂರ್ವಜರು ಪ್ರತಿದಿನದ ಶಾರೀರಿಕ ದುಡಿಮೆಯ ಫಲದಿಂದ ಗಟ್ಟಿಮುಟ್ಟಾದ ಆರೋಗ್ಯವನ್ನು ಕಾಪಾಡಿಕೊಂಡಿದ್ದರು. ಆರೋಗ್ಯವೇ ಭಾಗ್ಯ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 81

ಸಮಾಚಾರ ಸಣ್ಣದಲ್ಲ

ಗುಜರಾತ್ ಜನರು ಅನಕ್ಷರಸ್ಥರು: ಖರ್ಗೆ

ಇಡುಕ್ಕಿ: ಗುಜರಾತ್ ಜನರು ಅನಕ್ಷರಸ್ಥರು. ಹಾಗಾಗಿಯೇ ನರೇಂದ್ರ ಮೋದಿ ಅಲ್ಲಿನ ಜನರನ್ನು ಸುಲಭವಾಗಿ ದಾರಿ ತಪ್ಪಿಸಬಹುದಾಗಿದೆ. ಆದರೆ ಕೇರಳದ

ಜನರು ಹೆಚ್ಚು ಸಂವೇದನಾಶೀಲರು ಮತ್ತು ವಿದ್ಯಾವಂತರು. ಆದ್ದರಿಂದ ಯಾರೂ ಅವರನ್ನು ಗೊಂದಲದಲ್ಲಿ ಬೀಳಿಸಲಾಗುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಕೇರಳದ ಇಡುಕ್ಕಿಯಲ್ಲಿ ಚುನಾವಣೆ ರ್‍ಯಾಲಿಯಲ್ಲಿ ಸೋಮವಾರ ಭಾಷಣ ಮಾಡುವಾಗ ಖರ್ಗೆ ಅವರು ನೀಡಿದ ಗುಜರಾತ್ ಜನರ ಕುರಿತ ಈ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ದೆಹಲಿಯಲ್ಲಿ ನರೇಂದ್ರ ಮೋದಿ ಮತ್ತು ಕೇರಳದಲ್ಲಿ ಪಿಣರಾಯಿ ವಿಜಯನ್ ಕಾರ್ಯವೈಖರಿಯೂ ಒಂದೇ ರೀತಿ ಇದೆ. ಮೋದಿ ಮತ್ತು ಪಿಣರಾಯಿ ಇಬ್ಬರೂ ಒಂದೇ ಹಾದಿಯ ಲ್ಲಿದ್ದರೂ ಅವರ ನಡುವೆ ಒಂದು ವ್ಯತ್ಯಾಸವಿದೆ. ವಿಜಯನ್ ಪರೋಕ್ಷವಾಗಿ ಮೋದಿ ನಿಯಂತ್ರಣ ದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಖರ್ಗೆ ಆರೋಪಿಸಿದರು.

ಏರ್ ಏಷ್ಯಾ ವಿಮಾನ ಟಿಕೆಟ್ ದರ ಏರಿಕೆ

ದೆಹಲಿ: ಆಗ್ನೇಯ ಏಷ್ಯಾ ಖಂಡದಲ್ಲೆ ಅತಿದೊಡ್ಡದಾದ, ಅಷ್ಟೇ ಕಡಿಮೆ ವೆಚ್ಚದ ವಿಮಾನಯಾನ ಸೇವಾ ಸಂಸ್ಥೆ ಎನಿಸಿಕೊಂಡಿರುವ 'ಏರ್ ಏಷ್ಯಾ' ಇರಾನ್ ಯುದ್ಧದ ಕಾರಣ ಇಂಧನ ವೆಚ್ಚ ಹೆಚ್ಚಿರುವ ಕಾರಣ ವಿಮಾನ ಪ್ರಯಾಣದ ಟಿಕೆಟ್ ದರದಲ್ಲಿ ಏರಿಕೆ ಮಾಡುವುದು ಅನಿವಾರ್ಯವಾಗಿದೆ. ತಕ್ಷಣದಿಂದಲೇ ವಿಮಾನ ಪ್ರಯಾಣದ ಟಿಕೆಟ್ ದರ ಏರಿಕೆ ಮಾಡಲಾಗುವುದು ಎಂದು ತಿಳಿಸಿದೆ.

ಮಹಾರಾಷ್ಟ್ರ: 2 ಗಂಟೆ ಟಿವಿ-ಫೋನ್ ಬಂದ್

ಮುಂಬೈ: ಮಹಾರಾಷ್ಟ್ರದ ಧಾರಾಶಿವ ಜಿಲ್ಲಾ ಪಂಚಾಯಿತಿ ತನ್ನ ವ್ಯಾಪ್ತಿಯ 712 ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿನಿತ್ಯವೂ 2 ಗಂಟೆಗಳ ಕಾಲ ಮೊಬೈಲ್ ಫೋನ್ ಬಳಕೆ ಕೈಬಿಡಲು, ಟಿವಿ ಸ್ವಿಚ್ ಆಫ್ ಮಾಡುವುದು ಕಡ್ಡಾಯ ಎಂದು ಆದೇಶಿಸಿದೆ. ಶಾಲಾ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಕುಟುಂಬ ಸದಸ್ಯರು ಸತತವಾಗಿ ಟಿವಿ ಮತ್ತು ಮೊಬೈಲ್ ಫೋನ್ ಬಳಸುವುದರಿಂದ ಅಡಚಣೆ ಆಗುತ್ತಿದೆ ಎಂಬ ಕಾರಣಕ್ಕೆ ಜಿಲ್ಲಾ ಪಂಚಾಯಿತಿ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ. 5ನೇ ಶತಮಾನದ ಧಾರಾಶಿವ್ ಗುಹೆಗಳು ಮತ್ತು ಭವಾನಿ ದೇವಸ್ಥಾನ ವಿರುವ ಜಿಲ್ಲೆಯಲ್ಲೀಗ 712 ಗ್ರಾಮ ಪಂಚಾಯಿತಿಗಳಲ್ಲಿ ನಿತ್ಯವೂ ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ 'ನೊ ಟಿವಿ-ನೊ ಮೊಬೈಲ್' ಅಭಿಯಾನ ಶುರುವಾಗಿದೆ. ಎಲ್ಲಾ ಗ್ರಾಮಗಳಲ್ಲಿಯೂ ಸಂಜೆ 7ಕ್ಕೆ ಸೈರನ್ ಮೊಳಗುತ್ತದೆ. ಆಗ ಎಲ್ಲಾ ಮನೆಗಳಲ್ಲಿಯೂ ಟಿವಿ-ಮೊಬೈಲ್ ಫೋನ್ ಬಂದ್ ಆಗುತ್ತದೆ. ಈ ನಿಯಮ ಸರಿಯಾಗಿ ಪಾಲನೆ ಆಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲೆಂದೇ 750 ಸರಕಾರಿ ನೌಕರರನ್ನು ನಿಯೋಜಿಸಲಾಗಿದೆ ಎಂದು ಜಿಪಂ ಅಧ್ಯಕ್ಷೆ ಅರ್ಚನಾ ಪಾಟೀಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇಸ್ರೇಲ್‌ನ ದಾಳಿಗೆ ಲೆಬನಾನಲ್ಲಿ 3 ಬಲಿ

ಬೈರೂತ್: ಲೆಬನಾನ್ ಮೇಲಿನ ಇಸ್ರೇಲ್ ದೇಶದ ವಾಯುದಾಳಿ ಮುಂದುವರಿದಿದೆ. ಇಸ್ರೇಲ್‌ನ ಕ್ಷಿಪಣಿಗಳು ಬೈರೂತ್‌ನ ಪೂರ್ವದ ಪಟ್ಟಣ ಆಯಿನ್ ಸಾದೇಹ್‌ನ ಬೆಟ್ಟದ ಮೇಲಿನ ವಸತಿ ಸಂಕೀರ್ಣ ಕಟ್ಟಡವೊಂದಕ್ಕೆ ಭಾನುವಾರ ಅಪ್ಪಳಿಸಿದ್ದು, ಕಟ್ಟಡದಲ್ಲಿದ್ದ ನಿವಾಸಿಗಳಲ್ಲಿ ಇಬ್ಬರು ಮಹಿಳೆಯರು, ಒಬ್ಬ ಪುರುಷ ದುರ್ಮರಣಕ್ಕೀಡಾಗಿದ್ದು, ಇತರೆ ಮೂವರು ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ರಾಜ್ಯಸಭೆ: ಏ.10ಕ್ಕೆ ನಿತೀಶ್ ಪ್ರಮಾಣ

ಪಟನಾ: ಬಿಹಾರ ಮುಖ್ಯಮಂತ್ರಿ, ಜೆಡಿಯು ಮುಖ್ಯಸ್ಥ ನಿತೀಶ್ ಕುಮಾರ್ ಏ.10ರಂದು ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭ ನಂತರ ಬಿಜೆಪಿ ಮತ್ತು ಜೆಡಿಯು ಹಿರಿಯ ನಾಯಕರು ಒಂದೆಡೆ ಕುಳಿತು ಹೊಸದಾಗಿ ರಾಜ್ಯ ಸಚಿವ ಸಂಪುಟ ರಚನೆ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಬಿಹಾರದ ಬಿಜೆಪಿ ನಾಯಕ ಸಂಜಯ್ ಸರೋಗಿ ಭಾನುವಾರ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಮತ್ತೊಂದು ಹುದ್ದೆಗೆ ಪ್ರಮಾಣ ವಚನ ಸ್ವೀಕರಿಸಿದರೆ ಹಾಲಿ ಹುದ್ದೆಗೆ ರಾಜೀನಾಮೆ ನೀಡಬೇಕಾದ್ದು ನಿಯಮವಾಗಿದೆ ಎಂದು ಬಿಹಾರ ಉಪ ಮುಖ್ಯಮಂತ್ರಿ ವಿಜಯ್ ಸಿನ್ಹಾ ಪ್ರತಿಕ್ರಿಯಿಸಿದ್ದಾರೆ.

{ ಪ್ರಿಯಾಂಕಾ ಗಾಂಧಿ } ಕಾಂಗ್ರೆಸ್ ಸಂಸದೆ

ಕೇರಳದಲ್ಲಿನ ಆಡಳಿತಾರೂಢ ಪಕ್ಷ ಸಿಪಿಐ(ಎಂ) ಮತ್ತು ಕೇಂದ್ರದಲ್ಲಿನ ಆಡಳಿತಾರೂಢ ಪಕ್ಷ ಬಿಜೆಪಿ ನಡುವೆ ರಹಸ್ಯ ಒಪ್ಪಂದವಾಗಿದೆ. ಹಾಗಾಗಿ ಪಿಣರಾಯಿ ವಿಜಯನ್ ವಿರುದ್ಧ ಕೇಂದ್ರ ತನಿಖಾ ಸಂಸ್ಥೆಗಳು ಮೌನವಾಗಿವೆ. ಮತ್ತೆ ಅಧಿಕಾರಕ್ಕೇರಲು ಎಲ್‌ಡಿಎಫ್ ಒಕ್ಕೂಟ ತನ್ನ ಸಿದ್ಧಾಂತಗಳು- ಜನರೆಡೆಗಿನ ಜವಾಬ್ದಾರಿಗಳನ್ನೇ ಗಾಳಿಗೆ ತೂರಿ ಬಿಟ್ಟಿದೆ.

ಗೇಟ್‌ಗೆ ಗುದ್ದಿ ಒಳನುಗ್ಗಿಸಿ ಸ್ಪೀಕರ್ ಕಾರಿಗೆ ಮಸಿ ಎರಚಿ, ಪುಷ್ಪಗುಚ್ಛವಿಟ್ಟ ಚಾಲಕ

ದೆಹಲಿ ವಿಧಾನಸಭೆ: ಆತಂಕ ಮೂಡಿಸಿದ ಕಾರು

ದೆಹಲಿ: ದೆಹಲಿ ವಿಧಾನಸಭೆ ಆವರಣದಲ್ಲಿ ಸೋಮವಾರ ಭದ್ರತಾ ಲೋಪವಾಗಿದೆ. ಮಾಸ್ಕ್ ಧರಿಸಿದ್ದ ಚಾಲಕ ಚಲಾಯಿಸಿಕೊಂಡ ಬಂದ ಬಿಳಿ ಬಣ್ಣದ ಕಾರು ಕೆಲವು ನಿಮಿಷ ಆತಂಕವನ್ನು ಸೃಷ್ಟಿಸಿ ಬಳಿಕ ಕಣ್ಮರೆಯಾಗಿದೆ.

ಮಧ್ಯಾಹ್ನ 2ರ ವೇಳೆ ವೇಗವಾಗಿ ಬಂದು ವಿಧಾನಸಭೆ ಆವರಣದ ಗೇಟ್ ನಂ.2ಕ್ಕೆ ಗುದ್ದಿ ಜಖಂಗೊಳಿಸಿ, ಬ್ಯಾರಿಕೇಡನ್ನೂ ಲೆಕ್ಕಿಸದೇ ನೇರ ಒಳನುಗ್ಗಿದೆ. ಅಲ್ಲದೇ, ಸ್ಪೀಕರ್ ಕಚೇರಿಯಿದ್ದ ದಿಕ್ಕಿನೆಡೆಗೇ ನೇರವಾಗಿ ಕಾರು ವೇಗವಾಗಿ ಚಲಿಸಿರುವುದು ತೀವ್ರ ಆತಂಕವನ್ನು ಸೃಷ್ಟಿಸಿತ್ತು. ಉಗ್ರರ ದಾಳಿ ಭೀತಿ ಎದುರಾಗಿತ್ತು.

ಆ ಬಳಿಕ ಕಾರಿನಲ್ಲಿದ್ದ ಮುಸುಕುಧಾರಿ ಚಾಲಕ ವಿಧಾನಸಭೆಯ ಸ್ಪೀಕರ್ ವಿಜೇಂದರ್ ಗುಪ್ತಾ ಅವರ ಕಾರಿನ ಮೇಲೆ ಮಸಿ ಎರಚಿದ್ದಾನೆ. ಕಚೇರಿಯ ಪೋರ್ಟಿಕ ಬಳಿ ಪುಷ್ಪಗುಚ್ಛವಿರಿಸಿದ್ದಾನೆ. ನಂತರ ಬಂದಷ್ಟೇ ವೇಗದಲ್ಲಿ ಕಾರನ್ನು ಚಲಾಯಿಸಿಕೊಂಡು ಪರಾರಿಯಾಗಿದ್ದಾನೆ. ಗೇಟ್-2ರ ಬಳಿಯಿದ್ದ ಭದ್ರತಾ ಸಿಬ್ಬಂದಿಗಳು ಕಾರನ್ನು ಹಿಂಬಾಲಿಸಿಕೊಂಡು ಬರುವಷ್ಟರಲ್ಲೆ ಕಾರು ಮತ್ತೊಂದು ಗೇಟ್‌ನಿಂದ ಹೊರಹೋಗಿದೆ ಎಂದು ವರದಿಯಾಗಿದೆ.

ಅಘಾತಕಾರಿ ಘಟನೆ ನಂತರ ವಿಧಾನಸಭೆ ಆವರಣದ ಭದ್ರತೆ ಹೆಚ್ಚಿಸಲಾಗಿದೆ. ಬಾಂಬ್ ನಿಷ್ಕ್ರಿಯ ದಳವನ್ನು ಕರೆಸಿ 'ಸ್ಪೀಕರ್ ಕಚೇರಿ ಬಳಿ ಇರಿಸಿದ್ದ ಪುಷ್ಪಗುಚ್ಛವನ್ನು ಪರಿಶೀಲಿಸಲಾಗಿದೆ. ಯಾವುದೇ ಸ್ಫೋಟಕ ಕಂಡುಬಂದಿಲ್ಲ.

ದೆಹಲಿ ವಿಧಾನಸಭೆ ಆವರಣದ ಗೇಟ್ ನಂ.2.

ಸ್ಪೀಕರ್ ಕಚೇರಿ ಬಳಿ ಪೋರ್ಟಿಕದಲ್ಲಿ ಇರಿಸಿದ ಪುಷ್ಪಗುಚ್ಛ

ಕಾರು ಗುದ್ದಿದ ರಭಸಕ್ಕೆ ಗೇಟ್ ನಂ.2 ಬಳಿ ಬಿದ್ದಿರುವ ಕಾರಿನ ಬಾಡಿ ಚೂರುಗಳು.

ಕಾರಿನ ಮಾಲೀಕ ಬಂಧನ

ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದಾಗ ವಿಧಾನಸಭೆ ಆವರಣದಲ್ಲಿ ಆತಂಕಕ್ಕೆ ಕಾರಣ ವಾಗಿದ್ದು, ಯುಪಿ-26 ಎಜೆಡ್ 8090 ಸಂಖ್ಯೆಯ ಟಾಟಾ ಸಿಯೆರಾ ಕಾರು, ಸಿಆರ್‌ಪಿಎಫ್ ಭದ್ರತಾ ಸಿಬ್ಬಂದಿಗಳಿದ್ದ 'ವಿಐಪಿ ಪ್ರವೇಶ ದ್ವಾರ'ಕ್ಕೆ ಗುದ್ದಿ ಗೇಟನ್ನು ಜಖಂಗೊಳಿಸಿ ಒಳನುಗ್ಗಿತು. ಕಾರಿಗೆ ಅಳವಡಿ ಸಿದ್ದ ಉತ್ತರ ಪ್ರದೇಶದ ನೋಂದಣಿ ಸಂಖ್ಯೆ ಯನ್ನು ಆಧರಿಸಿ ಆರ್‌ಟಿಓದಲ್ಲಿ ಮಾಹಿತಿ ಪಡೆದು ಶೋಧ ಆರಂಭಿಸಿದಾಗ ಕಾರಿನ ಮಾಲೀಕ ಉತ್ತರ ಪ್ರದೇಶದ ಫಿಲಿಬಿತ್ ನಗರದ ಸರಬ್ಜೀತ್ ಸಿಂಗ್ ಎಂಬುದು ತಿಳಿದು ಬಂದಿದೆ. ಬಳಿಕ ಸರಬ್ಜೀತ್ ಮತ್ತು ಇತರೆ ಇಬ್ಬರನ್ನು ಉತ್ತರ ಪ್ರದೇಶ ಪೊಲೀಸರ ಸಹಕಾರದಲ್ಲಿ ಸೋಮವಾರ ಸಂಜೆ ವೇಳೆ ಬಂಧಿಸಿ ದೆಹಲಿಗೆ ಕರೆತರಲಾಗಿದೆ. ಕೃತ್ಯಕ್ಕೆ ಬಳಸಿದ ಕಾರನ್ನು ಉತ್ತರ ದೆಹಲಿಯಲ್ಲಿ ವಶಪಡಿಸಿಕೊಳ್ಳಲಾಗಿದೆ. ಕಾರನ್ನು ವಿಧಾನಸಭೆ ಆವರಣಕ್ಕೆ ನುಗ್ಗಿಸಿ ಆತಂಕ ಸೃಷ್ಟಿಸಿದ್ದೇಕೆ ಎಂಬ ಬಗ್ಗೆ ತಿಳಿಯಲು ಸದ್ಯ ಮೂವರನ್ನೂ 'ತೀವ್ರ' ವಿಚಾರಣೆಗೆ ಒಳಪಡಿಸಲಾಗಿದೆ ಎಂದು ದೆಹಲಿ ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರಿಸಿದ್ದಾರೆ.

ಇಟಲಿ: ದೋಣಿ ಮುಳುಗಿ 71 ಜನರು ನೀರುಪಾಲು

ರೋಮ್: ಮೆಡಿಟರೇನಿಯನ್ ಸಮುದ್ರದಲ್ಲಿ 105 ಜನರು ಸಂಚರಿಸುತ್ತಿದ್ದ ದೋಣಿ ತಲೆಕೆಳಗಾಗಿದ್ದರಿಂದ ಸಮುದ್ರ ಮಾರ್ಗದ ಮೂಲಕ ಯುರೋಪ್‌ಗೆ ತೆರಳುತ್ತಿದ್ದ 71 ವಲಸಿಗರು ಇಟಲಿ ಕರಾವಳಿ ಬಳಿ ನೀರು ಪಾಲಾಗಿದ್ದಾರೆ.

ಲಿಬಿಯಾದಿಂದ ಯುರೋಪ್‌ಗೆ ಸಂಚರಿಸುತ್ತಿದ್ದ ಯಾಂತ್ರಿಕ

ದೋಣಿಯಲ್ಲಿ ಒಟ್ಟು 105 ಜನರು ಶನಿವಾರ ಪ್ರಯಾಣಿಸುತ್ತಿದ್ದರು. ಮೆಡಿಟರೇನಿಯನ್ ಸಮುದ್ರದಲ್ಲಿ ದೋಣಿ ಸಾಗಿದ್ದಾಗ ಏಕಾಏಕಿ ಬಿರುಗಾಳಿ, ದೊಡ್ಡ ಅಲೆಗಳು ಸೃಷ್ಟಿಯಾಗಿ ದೋಣಿ ಮುಳುಗಿದೆ. ದುರಂತದಲ್ಲಿ 71 ವಲಸಿಗ ನಾಗರಿಕರು ನಾಪತ್ತೆಯಾಗಿದ್ದಾರೆ. ಈಜು ಗೊತ್ತಿದ್ದ ಕೆಲವರು ಈಜಿ ದಡ ಸೇರಲೆತ್ನಿಸಿದ್ದರೆ, ಕೆಲವರು ತಳೆಕೆಳಗಾದ ದೋಣಿಯ ಮೇಲೆ ಕುಳಿತು ಜೀವ ಉಳಿಸಿಕೊಂಡಿದ್ದಾರೆ. ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸಿ 32 ಜನರನ್ನು ರಕ್ಷಿಸಿವೆ. ಇಬ್ಬರ ಶವಗಳು ಪತ್ತೆಯಾಗಿದ್ದು, ನಾಪತ್ತೆಯಾಗಿರುವ 71 ಜನರ ಪತ್ತೆಗಾಗಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆ. ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಿರುವುದರಿಂದ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದೆ ಎಂದು ಇಟಲಿ ಅಧಿಕಾರಿಗಳು ತಿಳಿಸಿದ್ದಾರೆ.

ಈಸ್ಟರ್ ರಜಾದಿನ ಹಿನ್ನೆಲೆಯಲ್ಲಿ ಕೆಲವರು ಕುಟುಂಬ ಸಮೇತ ರಜಾ ಪ್ರವಾಸದಲ್ಲಿದ್ದರು. ಸಂತೋಷದಿಂದ ರಜೆ ದಿನ ಕಳೆಯುವ ಉದ್ದೇಶದಿಂದ ಪ್ರವಾಸ ಹೊರಟಿದ್ದವರು ಮತ್ತು ಹೊಸ ದೇಶದಲ್ಲಿ ಹೊಸ ಬದುಕು ಕಟ್ಟಿಕೊಳ್ಳಲು ವಲಸೆ ಹೊರಟವರಿಗೂ ದೊಡ್ಡ ಅಘಾತವಾಗಿದೆ.

ಅರುಣಾಚಲ ಪ್ರದೇಶ ಸಿಎಂ ಪೆಮಾ ಕುಟುಂಬಕ್ಕೆ ಸಂಕಷ್ಟ

ದೆಹಲಿ: ಅರುಣಾಚಲ ಪ್ರದೇಶ ಮುಖ್ಯಮಂತ್ರಿ, ಬಿಜೆಪಿ ನಾಯಕ ಪೆಮಾ ಖಂಡು ಅವರ ಕುಟುಂಬದ ಸದಸ್ಯರುಗಳ ಒಡೆತನಕ್ಕೆ ಸೇರಿದ ಸಂಸ್ಥೆಗಳಿಗೇ ರಾಜ್ಯ ಸರಕಾರದ ಕಾಮಗಾರಿಗಳ ಗುತ್ತಿಗೆ ನೀಡಿರುವ ಬಗ್ಗೆ

2 ವಾರಗಳಲ್ಲಿ ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಿಬಿಐಗೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

2015ರ ಜ.1ರಿಂದ 2025ರ ಡಿ.31ರವರೆಗಿನ ಅವಧಿಯಲ್ಲಿ ರಾಜ್ಯದಲ್ಲಿ ಸಾರ್ವಜನಿಕ ಕಾಮಗಾರಿಗಳು, ಗುತ್ತಿಗೆಗಳು ಮತ್ತು ಕೆಲಸದ ಆದೇಶಗಳು ಹಾಗೂ ಕಾರ್ಯಗತಗೊಳಿಸಿದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಿಬಿಐಗೆ ನ್ಯಾಯಮೂರ್ತಿ ವಿಕ್ರಮ್ ನಾಥ್ ನೇತೃತ್ವದ ಪೀಠ ಸೂಚಿಸಿದೆ.

ಅಲ್ಲದೇ, ಪೆಮಾ ಖಂಡು ಕುಟುಂಬದವರ ಒಡೆತನದ ಸಂಸ್ಥೆಗಳ ನಡೆಸಿದ, ನಡೆಸುತ್ತಿರುವ ಎಲ್ಲಾ ಕಾಮಗಾರಿಗಳ ಬಗೆಗೂ 16 ವಾರಗಳಲ್ಲಿ ಸ್ಥಿತಿಗತಿ ವರದಿ ಸಲ್ಲಿಸುವಂತೆಯೂ ಪೀಠ ಆದೇಶಿಸಿದೆ. ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿ 1,270 ಕೋಟಿ ರು. ಮೌಲ್ಯದ ಸರಕಾರಿ ಕಾಮಗಾರಿಗಳ ಹಲವಾರು ಗುತ್ತಿಗೆಗಳನ್ನು ಮುಖ್ಯಮಂತ್ರಿ ಪೆಮಾ ಖಂಡು ಕುಟುಂಬ ಸದಸ್ಯರಿಗೆ ಸೇರಿದ 4 ಸಂಸ್ಥೆಗಳಿಗೇ ನಿಯಮ ಬಾಹಿರವಾಗಿ ನೀಡಲಾಗಿದೆ. ಇದು ಅಕ್ರಮವಾಗಿದ್ದು ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಎನ್‌ಜಿಓಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಿದ್ದವು.

ಹೈಫಾ: ಇರಾನ್ ದಾಳಿಗೆ 4 ಸಾವು

ಹೈಫಾ: ಫೆ.28ರಿಂದಲೂ ಇರಾನ್ ವಿರುದ್ಧ ಅಮೆರಿಕ-ಇಸ್ರೇಲ್ ಜತೆಗೂಡಿ ಯುದ್ಧ ಮಾಡುತ್ತಿದ್ದರೆ, ಪ್ರತಿಯಾಗಿ ಇರಾನ್ ಕೂಡಾ ಇಸ್ರೇಲ್ ಮೇಲೆ ಖಂಡಾಂತರ ಕ್ಷಿಪಣಿಗಳನ್ನು ಸಿಡಿಸಿ ಭಾರೀ ಪ್ರಮಾಣದಲ್ಲಿ ಹಾನಿ ಮಾಡುತ್ತಿದೆ.

ಇಸ್ರೇಲ್‌ನ ಹೈಫಾ ನಗರದ ಮೇಲೆ, ಅದರಲ್ಲೂ ಜನವಸತಿ ಪ್ರದೇಶದ ಮೇಲೆಯೇ ಇರಾನ್ ಭಾನುವಾರ ಖಂಡಾಂತರ ಕ್ಷಿಪಣಿಯಿಂದ ದಾಳಿ ನಡೆಸಿದೆ. ಕ್ಷಿಪಣಿ ಹೊಡೆತಕ್ಕೆ ಹೈಫಾದಲ್ಲಿನ ಬಹುಮಹಡಿ ಕಟ್ಟಡ ಪೂರ್ಣ ನೆಲಸಮವಾಗಿದೆ. ಅದರಲ್ಲಿ ವಾಸವಿದ್ದವರಲ್ಲಿ ನಾಲ್ವರು ಹತರಾಗಿದ್ದು, ಹಲವರು ಗಾಯಗೊಂಡಿದ್ದಾರೆ. ನೆಲಸಮವಾದ ಕಟ್ಟಡದ ಅವಶೇಷಗಳಡಿಯಿಂದ ನಾಲ್ವರ ಮೃತದೇಹಗಳನ್ನು ಹೊರತೆಗೆಯಲಾಗಿದೆ.

ಇದಕ್ಕೆ ಪ್ರತಿದಾಳಿ ಎನ್ನುವಂತೆ ಇರಾನ್‌ನ ರಾಜಧಾನಿ ನಗರ ಟೆಹರಾನ್‌ನ ನೈಋತ್ಯ ಭಾಗದಲ್ಲಿನ ಇಸ್ಲಾಮ್ ಶಹರ್ ಬಳಿಯ 4 ಮಹಡಿಗಳ ವಸತಿ ಕಟ್ಟಡಕ್ಕೆ ಇಸ್ರೇಲ್ ಸೋಮವಾರ ಮುಂಜಾನೆ ಬಾಂಬ್ ದಾಳಿ ನಡೆಸಿದ್ದು, 25 ಜನರು ಸಾವಿಗೀಡಾಗಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಇಸ್ರೇಲ್ ಪ್ರತಿದಾಳಿಗೆ 25 ಜೀವಬಲಿ

ಟೆಹರಾನ್: ಇರಾನ್ ರಾಜಧಾನಿ ಟೆಹರಾನ್ ನಗರದ ನೈಋತ್ಯ ಭಾಗದಲ್ಲಿನ ಇಸ್ಲಾಮ್ ಶಹರ್ ಬಳಿಯಿರುವ 4 ಮಹಡಿಗಳ ವಸತಿ ಕಟ್ಟಡಕ್ಕೆ ಬಾಂಬ್ ದಾಳಿಯಾಗಿದ್ದು, 25 ಜನರು ಸಾವನ್ನಪ್ಪಿದ್ದಾರೆ. ಇಸ್ರೇಲ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಬಾಂಬ್ ದಾಳಿಗೆ ಬಹುಮಹಡಿ ಕಟ್ಟಡದ ಮುಂಭಾಗ ಪೂರ್ಣ ಕುಸಿದು ಬಿದ್ದಿದ್ದು, ಅವಶೇಷಗಳಡಿ ಸಿಲುಕಿದ್ದವರಲ್ಲಿ ಕೆಲವರನ್ನು ರಕ್ಷಿಸಲಾಗಿದೆ. ಹಲವಾರಿ ಜನರು ಗಾಯಗೊಂಡಿದ್ದಾರೆ ಎಂದು ಇರಾನ್ ಮಾಧ್ಯಮ ಸಂಸ್ಥೆಗಳಾದ ಫಾರ್ಸ್ ಸುದ್ದಿ ಸಂಸ್ಥೆ ಮತ್ತು ನೂರ್ ನ್ಯೂಸ್ ವರದಿ ಮಾಡಿವೆ.

ಅಮೆರಿಕ-ಇಸ್ರೇಲ್ ನಡೆಸುತ್ತಿರುವ ಇತ್ತೀಚಿನ ವಾಯುದಾಳಿಗಳು ಇರಾನ್‌ನ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಹೊಂದಿಕೊಂಡಂತಿರುವ ನೈಸರ್ಗಿಕ ಅನಿಲ ವಿತರಣಾ ಘಟಕ ಮತ್ತಿತರ ಕಟ್ಟಡಗಳನ್ನು ಹಾನಿಗೊಳಿಸಿವೆ. ಯುದ್ಧದ ಕಾರಣ ವಿಶ್ವವಿದ್ಯಾನಿಲಯದಲ್ಲಿ ತರಗತಿ ನಡೆಯುತ್ತಿಲ್ಲ ಎಂದು ಇರಾನ್ ಮಾಧ್ಯಮ ವರದಿ ಮಾಡಿದೆ.

ಪ್ರತಿದಾಳಿ: ಜನವಸತಿ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ದಾಳಿ ಮಾಡಲಾರಂಭಿಸಿದರೆ

ಇಸ್ರೇಲ್ ಮೇಲೆ ಮತ್ತಷ್ಟು ಉಗ್ರವಾದ ದಾಳಿ ನಡೆಸುವುದಾಗಿ ಇರಾನ್‌ನ ಸೆಂಟ್ರಲ್ ಮಿಲಿಟರಿ ಕಮಾಂಡ್ ಸೋಮವಾರ ಎಚ್ಚರಿಕೆ ನೀಡಿದೆ.

ಹೊರ್ಮುಜ್ ಜಲಸಂಧಿಯನ್ನು ಎಲ್ಲಾ ದೇಶಗಳ ನೌಕೆಗಳ ಸಂಚಾರಕ್ಕೂ ಇರಾನ್ ತಕ್ಷಣ ತೆರೆದಿಡಬೇಕು. ಇಲ್ಲವಾದರೆ ನರಕ ದರ್ಶನ ಮಾಡಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ ಬೆನ್ನಲ್ಲೇ ಈ ದಾಳಿ ನಡೆದಿರುವುದು ಗಮನಾರ್ಹ.

ಆಟಿಕೆ ಕಾರು ಬಳಸಿ ಸ್ಫೋಟಕ್ಕೆ ಸಂಚು: ಮುಂಬೈನಲ್ಲಿ 2 ಜೆಇಎಂ ಉಗ್ರರ ಸೆರೆ

ಮುಂಬೈ: ರೈಲು ನಿಲ್ದಾಣ ಸೇರಿದಂತೆ ದೇಶದ ಪ್ರಮುಖ ಸ್ಥಳಗಳಲ್ಲಿ ಸ್ಫೋಟಕ್ಕೆ ಸಂಚು ರೂಪಿಸಿದ್ದ ಉಗ್ರರ ಜಾಲವನ್ನು ಉತ್ತರ ಪ್ರದೇಶದಲ್ಲಿ ಭೇದಿಸಿದ ದೆಹಲಿ ಪೊಲೀಸ್ ಸ್ಪೆಷಲ್ ಸೆಲ್(ವಿಶೇಷ ಘಟಕ), ಮುಂಬೈಯಲ್ಲೂ ಜಂಟಿ ಕಾರ್ಯಾಚರಣೆ ನಡೆಸಿ ಇಬ್ಬರು ಭಯೋತ್ಪಾದಕರನ್ನು ಸೆರೆ ಹಿಡಿದಿದೆ. ಆ ಮೂಲಕ ಭಾರಿ ಸ್ಫೋಟದ ಮತ್ತಷ್ಟು ಸಂಚುಗಳು ವಿಫಲವಾಗಿವೆ. ದೇಶ ದೊಡ್ಡ ಗಂಡಾಂತರದಿಂದ ಪಾರಾಗಿದೆ.

ದೆಹಲಿ ಪೊಲೀಸರ ವಿಶೇಷ ಘಟಕ ಮತ್ತು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಮುಂಬೈನಲ್ಲಿ ಜೈಶ್-ಎ-ಮೊಹಮ್ಮದ್(ಜೆಇಎಂ) ಭಯೋತ್ಪಾದಕ ಸಂಘಟನೆಯ ಇಬ್ಬರು ಉಗ್ರರನ್ನು ಭಾನುವಾರ ಬಂಧಿಸಿದೆ. ಈ ಉಗ್ರರಿಬ್ಬರೂ ಆಟಿಕೆ ಕಾರಿನಲ್ಲಿ ಸ್ಫೋಟಕಗಳನ್ನು ಅಳವಡಿಸಿ ದೆಹಲಿಯಲ್ಲಿ ಭಾರಿ ಸ್ಫೋಟ ನಡೆಸಲು ಸಂಚು ರೂಪಿಸಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಬಂಧಿತರನ್ನು ಮುಂಬೈ ನಿವಾಸಿಗಳಾದ ಮೊಸ್ಸಾದ್ ಅಹ್ಮದ್ ಅಲಿಯಾಸ್ ಕಲಂ ಕಲ್ಯಾಣ್ ಮತ್ತು ಮೊಹಮ್ಮದ್ ಹಮದ್ ಕೊಲ್ಲಾರ ಎಂದು ಗುರುತಿಸಲಾಗಿದೆ. ಇಬ್ಬರನ್ನು ವಿಚಾರಣೆಗಾಗಿ ಅಧಿಕಾರಿಗಳು ಮುಂಬೈಗೆ ಕರೆದೊಯ್ದಿದ್ದಾರೆ.

ತನಿಖಾಧಿಕಾರಿಗಳ ಪ್ರಕಾರ, ಇಬ್ಬರೂ ಯುವಕರು ತೀವ್ರ ಸ್ವರೂಪದ ಮೂಲಭೂತವಾದಿಗಳಾಗಿದ್ದಾರೆ. ಜೈಶ್-ಎ-ಮೊಹಮ್ಮದ್ ಮತ್ತು ಇಸ್ಲಾಮಿಕ್ ಸ್ಟೇಟ್(ಐಎಸ್‌ಐಎಸ್) ಸೇರಿ ಹಲವು ಭಯೋತ್ಪಾದಕ ಸಂಘಟನೆಗಳ ಸಂಪರ್ಕ ಹೊಂದಿದ್ದಾರೆ. ಅಲ್ಲದೆ ಮಿಷನ್ ಖಿಲಾಫತ್ (ಎಂಕೆ) ಮತ್ತು ಸೋಲ್ಜರ್ಸ್ ಆಫ್ ಪ್ರೊಫೆಟ್ (ಎಸ್‌ಒಪಿ)ನಂತಹ ಉಗ್ರಗಾಮಿ ಜಾಲಗಳ ಭಾಗವಾಗಿದ್ದಾರೆ.

ಪಾಕ್‌ನಿಂದ ಬ್ರೇನ್‌ವಾಶ್

ಪಾಕಿಸ್ತಾನ ಮೂಲದ ಉಗ್ರರು ಆನ್‌ಲೈನ್ ಮೂಲಕ ಈ ಯುವಕರನ್ನು ಸಂಪರ್ಕಿಸಿ ಬ್ರೇನ್‌ವಾಶ್ ಮಾಡಿದ್ದರು. ಜೈಶ್-ಎ-ಮೊಹಮ್ಮದ್ ಸಂಘಟನೆಯ ಅಬು ಹುಫೇಝ್ ಇವರಿಬ್ಬರ ತಲೆಗೂ ಉಗ್ರವಾದ ತುಂಬಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೊಸ್ಸಾದ್ ಅಹ್ಮದ್ ಮತ್ತು ಮೊಹಮ್ಮದ್ ಹಮದ್ ಕೊಲ್ಲಾರ ಇಬ್ಬರೂ ಸುಧಾರಿತ ಸ್ಫೋಟಕ ವಸ್ತುಗಳನ್ನು ಜೋಡಿಸಿ ಸ್ಫೋಟಿಸುವ ತರಬೇತಿ ಪಡೆದಿದ್ದಾರೆ. ಆಟಿಕೆ ಕಾರಲ್ಲಿ ಸ್ಫೋಟಕಗಳನ್ನು ಇರಿಸಿ ದೆಹಲಿಯಲ್ಲಿ ಭಾರಿ ಪ್ರಮಾಣದ ಸ್ಫೋಟ ನಡೆಸಲು ಸಂಚು ರೂಪಿಸಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಕೈ ನಡೆ ದೇಶದ ಭದ್ರತೆಗೆ ಮಾರಕ: ಅಸ್ಸಾಂನಲ್ಲಿ ಮೋದಿ ವಾಗ್ದಾಳಿ

ಪಾಕ್ ರಾಗಕ್ಕೆ ತಕ್ಕಂತೆ ಕಾಂಗ್ರೆಸ್ ಹಾಡು

ಗುವಾಹಟಿ: ಕಾಂಗ್ರೆಸ್ ಪಕ್ಷದ ನಿಲುವು ಪಾಕಿಸ್ತಾನದ ಧೋರಣೆಗೆ ಹೊಂದಿಕೆಯಾಗುತ್ತಿದೆ. ಇಂತಹ ನಿಲುವು ದೇಶದ ಭದ್ರತೆಗೆ ಹಾನಿ ಉಂಟು ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಿಡಿಕಾರಿದ್ದಾರೆ.

ಅಸ್ಸಾಂನ ಬರ್ಪೇಟಾ ಜಿಲ್ಲೆಯಲ್ಲಿನ ಚುನಾವಣಾ ಪ್ರಚಾರ ಸಭೆಯಲ್ಲಿ ಸೋಮವಾರ ಮಾತನಾಡಿದ ಮೋದಿ, ನಮ್ಮ ಸರಕಾರ ಪಾಕಿಸ್ತಾನದಲ್ಲಿನ ಉಗ್ರ ಶಿಬಿರಗಳನ್ನು ಗುರಿಯಾಗಿಸಿ 'ಆಪರೇಶನ್ ಸಿಂಧೂರ್' ಸೇನಾ ಕಾರ್ಯಾಚರಣೆ ನಡೆಸಿದರೆ, ಪಾಕ್‌ನ ಪ್ರತ್ಯಾರೋಪದ ಮಾತುಗಳಿಗೆ ಕಾಂಗ್ರೆಸ್ ಪಕ್ಷ ಧ್ವನಿಯಾಗುತ್ತಿತ್ತು. ಸೇನಾ ಕಾರ್ಯಾಚರಣೆಯನ್ನೇ ಪ್ರಶ್ನೆ ಮಾಡುತ್ತಿತ್ತು. 2016ರಲ್ಲಿನ ಸರ್ಜಿಕಲ್ ಸ್ಟ್ರೈಕ್ ವೇಳೆ ನಮ್ಮ ಸೈನಿಕರು ಪಾಕ್ ಆಕ್ರಮಿತ ಕಾಶ್ಮೀರಕ್ಕೆ ನುಗ್ಗಿ ಉಗ್ರರನ್ನು ಸದೆ ಬಡಿದಾಗಲೂ ಕಾಂಗ್ರೆಸ್ ಅದನ್ನು ಪ್ರಶ್ನಿಸುವ ಮೂಲಕ ಪಾಕ್ ಪರವಾದ ನಿಲುವು ತಳೆದಿತ್ತು. ಪಾಕ್ ಜತೆಗಿನ ಪ್ರತಿಪಕ್ಷದ ಸಂಪರ್ಕ ದೇಶದ ಹಿತಕ್ಕೆ ವಿರುದ್ಧವಾಗಿದೆ. ಎನ್‌ಡಿಎ ಸರಕಾರ ಎಂದೂ ಇದನ್ನು ಒಪ್ಪುವುದಿಲ್ಲ ಎಂದು ಗುಡುಗಿದರು.

ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ದೃಷ್ಟಿಕೋನ ಸಣ್ಣದಿದೆ. ಬಿಜೆಪಿ ಮಾಡಿದ ಪ್ರಾಮಾಣಿಕ ಪ್ರಯತ್ನಗಳ ಫಲವಾಗಿ ಅಸ್ಸಾಂನಲ್ಲೀಗ ಶಾಂತಿ ಸ್ಥಾಪನೆಯಾಗಿದೆ. ಕಳೆದ 10 ವರ್ಷಗಳಲ್ಲಿ ಸಹಿ ಮಾಡಿದ ಶಾಂತಿ ಒಪ್ಪಂದಗಳ ಜಾರಿ ಕಾರಣದಿಂದಾಗಿ ರಾಜ್ಯದಲ್ಲಿ ಸ್ಥಿರತೆ ಉಂಟಾಗಿದೆ. ಈ ಪರಿಸ್ಥಿತಿ ಶಾಶ್ವತವಾಗಲು ರಾಜ್ಯದಲ್ಲಿ ಕಾಂಗ್ರೆಸ್ಸನ್ನು ಅಧಿಕಾರದಿಂದ ದೂರವಿಡಬೇಕು ಎಂದರು. ಬಿಜೆಪಿ ಎಲ್ಲಾ ವರ್ಗಗಳ ಸಮಗ್ರ ಅಭಿವೃದ್ಧಿಗಾಗಿ ದೂರದೃಷ್ಟಿಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಆದರೆ, ಕಾಂಗ್ರೆಸ್ ಭ್ರಷ್ಟಾಚಾರದಲ್ಲಿ ತೊಡಗಿಕೊಳ್ಳಲು ಯತ್ನಿಸುತ್ತದೆ ಎಂದು ಟೀಕಿಸಿದರು.

ಅಸ್ಸಾಂನ ಬರ್ಪೇಟಾ ಜಿಲ್ಲೆಯಲ್ಲಿ ಸೋಮವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ಮೋದಿಗೆ ಸನ್ಮಾನ.

ಒಂದೇ ದಿನ 3 ಕಡೆ ರ್‍ಯಾಲಿ

ಅಸ್ಸಾಂನ 126 ವಿಧಾನಸಭಾ ಕ್ಷೇತ್ರಗಳಿಗೆ ಏ.9ರಂದು ಮತದಾನ ನಡೆಯಲಿದ್ದು, ಮಂಗಳವಾರ(ಏ.7) ಬಹಿರಂಗ ಪ್ರಚಾರಕ್ಕೆ ತೆರೆಬೀಳಲಿದೆ. ಮೇ 4ರಂದು ಮತ ಎಣಿಕೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಸೋಮವಾರ ಒಂದೇ ದಿನ ಅಸ್ಸಾಂನಲ್ಲಿ 3 ಕಡೆ ರ್‍ಯಾಲಿ ನಡೆಸಿ ಪಕ್ಷದ ಅಭ್ಯರ್ಥಿಗಳ ಪರ ಬಿರುಸಿನಿಂದ ಪ್ರಚಾರ ಕಾರ್ಯ ನಡೆಸಿದರು. ಸಚಿವ ರಂಜೀತ್ ಕುಮಾರ್ ದಾಸ್ ಪರ ಬರ್ಪೇಟಾ ಜಿಲ್ಲೆಯ ಭವಾನಿಪುರ್-ಸೊರ್‌ಭೋಗ್‌ನಲ್ಲಿ, ದಿಬ್ರುಗಢ ಜಿಲ್ಲೆಯಲ್ಲಿ ಸಚಿವ ಪ್ರಶಾಂತ್ ಫುಕಾನ್ ಪರ ಹಾಗೂ ಕೇಂದ್ರ ಅಸ್ಸಾಂನ ಹೊಜೈ ಕ್ಷೇತ್ರದಲ್ಲಿ ಶಿಲಾದಿತ್ಯ ದೇವ್ ಪರ ಪ್ರಚಾರ ಸಭೆಗಳಲ್ಲಿ ಭಾಷಣ ಮಾಡಿ ಮತಯಾಚಿಸಿದರು. ಇದಕ್ಕೆ ಮುನ್ನ ಏ.1ರಂದು ಗೋಗಮುಖ್ ಮತ್ತು ಬೆಹಾಲಿಯಲ್ಲಿ ಚುನಾವಣಾ ಪ್ರಚಾರ ನಡೆಸಿದ್ದರು. ಅಲ್ಲದೇ, ಚಹಾ ತೋಟಕ್ಕೆ ತೆರಳಿ ಮಹಿಳಾ ಕಾರ್ಮಿಕರ ಜತೆ ಸಂವಾದವನ್ನೂ ನಡೆಸಿದ್ದರು.

ದೇಶದಲ್ಲಿ ಎಲ್‌ಪಿಜಿ ಕೊರತೆ ಇಲ್ಲ: ಕೇಂದ್ರ

ದೆಹಲಿ: ಅಮೆರಿಕ ಮತ್ತು ಇಸ್ರೇಲ್ ಜತೆಗೂಡಿ ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧ ಸೋಮವಾರ 38ನೇ ದಿನಕ್ಕೆ ಕಾಲಿಟ್ಟಿದೆ. ಯುದ್ಧದ ಕಾರಣವಾಗಿ ಇರಾನ್

ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿರುವುದರಿಂದ ನೈಸರ್ಗಿಕ ಅನಿಲ ಮತ್ತು ಎಲ್‌ಪಿಜಿ ಪೂರೈಕೆ ವ್ಯವಸ್ಥೆಯಲ್ಲಿ ಭಾರೀ ವ್ಯತ್ಯಯವಾಗಿದೆ.

ಪರಿಣಾಮವಾಗಿ ಭಾರತದಲ್ಲಿ ಮೊದಲಿಗೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಸರಬರಾಜಿನಲ್ಲಿ ಮತ್ತು ಆಟೊಗ್ಯಾಸ್ ಪೂರೈಕೆಯಲ್ಲಿ ಕೊರತೆ ಎದುರಾಗಿದೆ. ಅಡುಗೆ ಅನಿಲ ಸಿಲಿಂಡರ್ ಸರಬರಾಜು ವಿಚಾರವಾಗಿ ಆತಂಕದಲ್ಲಿದ್ದ ಜನಕ್ಕೆ 'ದೇಶದಲ್ಲಿ ಎಲ್ಪಿಜಿ ಕೊರತೆ ಇಲ್ಲ. ಅಡುಗೆ ಅನಿಲ ಸಾಕಷ್ಟು ಲಭ್ಯವಿದೆ. ಜನರು ಆತಂಕಪಡಬೇಕಿಲ್ಲ' ಎಂದು ಕೇಂದ್ರ ಸರಕಾರ ಅಭಯ ನೀಡಿದೆ. ಅಲ್ಲದೇ ತುರ್ತು ಸ್ಥಿತಿಗೆ ಅನುಕೂಲವಾಗಲಿದೆ ಎಂದು 5 ಕೆಜಿ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯನ್ನೂ ಹೆಚ್ಚಿಸಿದೆ. 5 ಕೆಜಿ ಎಲ್‌ಪಿಜಿ ಸಿಲಿಂಡರ್ ಎಲ್ಲಾ ಏಜೆನ್ಸಿಗಳಲ್ಲೂ ಲಭ್ಯವಿವೆ. ಯಾವುದಾದರೊಂದು ಗುರುತಿನ ಚೀಟಿ ತೋರಿಸಿ ಗ್ರಾಹಕರು ಸಿಲಿಂಡರ್ ಖರೀದಿಸಬಹುದು ಎಂದು ಸರಕಾರ ಹೇಳಿದೆ. ಮಾ.23ರಿಂದ 6.60 ಲಕ್ಷದಷ್ಟು 5 ಕೆಜಿ ಸಿಲಿಂಡರ್ ಮಾರಾಟವಾಗಿವೆ.

ಯುದ್ಧ ಭೀತಿ ಕಾರಣ ಹಾರಾಟಕ್ಕೆ ಏರ್ ಇಂಡಿಯ ಹಿಂದೇಟು

ಮೇ 31ರವರೆಗೂ ಇಸ್ರೇಲ್‌ಗೆ ವಿಮಾನ ಸ್ಥಗಿತ

ದೆಹಲಿ: ಪಶ್ಚಿಮ ಏಷ್ಯಾದಲ್ಲಿ ಫೆ.28ರಂದು ಶುರುವಾದ ಯುದ್ಧ, ಸದ್ಯಕ್ಕೆ ಮುಕ್ತಾಯಗೊಳ್ಳುವಂತೆ ಕಾಣುತ್ತಿಲ್ಲ. ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಕಳೆದ 38 ದಿನಗಳಿಂದಲೂ ಸೇನಾ ಕಾರ್ಯಾಚರಣೆ ನಡೆಸುತ್ತಲೇ ಇವೆ. ಇರಾನ್ ಕೂಡಾ ಪ್ರತಿಯಾಗಿ ನೆರೆಯ ಗಲ್ಫ್ ದೇಶಗಳಲ್ಲಿ ಇರುವ ಅಮೆರಿಕದ ಸೇನೆ-ವಾಯು ನೆಲೆಗಳ ಮೇಲೆ ಹಾಗೂ ಇಸ್ರೇಲ್ ದೇಶದ ಮೇಲೆ ಕ್ಷಿಪಣಿ ದಾಳಿ ಮುಂದುವರಿಸಿದೆ. ಪರಿಣಾಮವಾಗಿ ಗಲ್ಫ್ ದೇಶಗಳು, ಇಸ್ರೇಲ್ ಸೇರಿದಂತೆ ಪಶ್ಚಿಮ ಏಷ್ಯಾ ಭಾಗದಲ್ಲಿ ಪ್ರಯಾಣಿಕ ವಿಮಾನಗಳ ಸಂಚಾರ ಅಸಾಧ್ಯವಾಗಿದೆ. ಹಾಗಾಗಿ, ಏರ್ ಇಂಡಿಯ ಮೇ 31ರವರೆಗೂ ಇಸ್ರೇಲ್‌ಗೆ ವಿಮಾನ ಸಂಚಾರವನ್ನು ಸ್ಥಗಿತಗೊಳಿಸಿದೆ

ದೆಹಲಿ-ಟೆಲ್‌ಅವಿವ್ ಮಾರ್ಗದಲ್ಲಿ ಮೇ 31ರವರೆಗೆ ವಿಮಾನ ಸಂಚಾರವಿಲ್ಲ ಎಂದು ಏರ್ ಇಂಡಿಯ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಸೋಮವಾರ ದೃಢಪಡಿಸಿದ್ದಾರೆ. ಇನ್ನೂ ಹಲವು ಪ್ರಮುಖ ವಿಮಾನಯಾನ ಸಂಸ್ಥೆಗಳು ಟೆಲ್‌ಅವಿವ್ ಮಾರ್ಗದ ಕಾರ್ಯಾಚರಣೆ ಸ್ಥಗಿತಗೊಳಿಸಿವೆ. ಆದರೆ, ಇಸ್ರೇಲ್‌ನ ಎಲ್‌ಅಲ್ ಇಸ್ರಾ ಏರ್, ಅರ್‌ಕಿಯಾ ಮತ್ತು ಏರ್ ಹೈಫಾ ವಿಮಾನಯಾನ ಸಂಸ್ಥೆಗಳ ವಿಮಾನಗಳು ಮಾತ್ರ ತೀವ್ರ ನಿರ್ಬಂಧ-ಸವಾಲುಗಳ ಮಧ್ಯೆಯೂ ಕಾರ್ಯನಿರ್ವಹಿಸುತ್ತಿವೆ. ವೈಯಕ್ತಿಕ ಅಥವಾ ವೃತ್ತಿಪರ ಕಾರಣಗಳಿಗಾಗಿ ಇಸ್ರೇಲ್‌ನಲ್ಲಿರುವ ಭಾರತೀಯರು ತವರಿಗೆ ಮರಳಲು ಬಯಸುತ್ತಿದ್ದು, ಏರ್ ಇಂಡಿಯ ವಿಮಾನ ಸ್ಥಗಿತಗೊಂಡಿರುವುದು ಕಷ್ಟಕ್ಕೀಡು ಮಾಡಿದೆ.

ರಾಯಭಾರ ಕಚೇರಿ ನೆರವು

ಇಸ್ರೇಲ್‌ನಲ್ಲಿ ಸದ್ಯ ಭಾರತ ಮೂಲದ 1.20 ಲಕ್ಷ ಜನರಿದ್ದಾರೆ. ಭಾರತದಲ್ಲೇ ಜನಿಸಿದ ಯಹೂದಿಗಳು ಮತ್ತು ಭಾರತದಿಂದ ಉದ್ಯೋಗ ಅರಸಿ ಇಸ್ರೇಲ್‌ಗೆ ತೆರಳಿದವರು ಇವರಲ್ಲಿದ್ದಾರೆ. ಯುದ್ಧ ಕಾರಣ ಇಸ್ರೇಲನ್ನು ತಕ್ಷಣಕ್ಕೆ ತೊರೆಯಲಿಚ್ಛಿಸುವ ಭಾರತೀಯರು ಜೋರ್ಡಾನ್-ಈಜಿಪ್ಟ್‌ಗೆ ರಸ್ತೆ ಮಾರ್ಗ ತೆರಳಿ ಅಲ್ಲಿಂದ ವಿಮಾನವೇರಿ ಭಾರತಕ್ಕೆ ಬರಬೇಕಿದೆ. ಅಂತಹವರಿಗೆ ಇಸ್ರೇಲ್ ರಾಜಧಾನಿ ಟೆಲ್‌ಅವಿವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ನೆರವಾಗುತ್ತಿದೆ. ಕಚೇರಿ ಭಾರತೀಯರ ಜತೆ ಸತತ ಸಂಪರ್ಕದಲ್ಲಿದೆ. 24 ಗಂಟ ವಾರದ 7 ದಿನವೂ ತುರ್ತು ಸಹಾಯವಾಣಿ ಲಭ್ಯ. ಇಸ್ರೇಲ್‌ನ ವಿವಿಧ ನಗರಗಳಲ್ಲಿನ ಭಾರತದ ಉದ್ಯೋಗಿಗಳು-ವಿದ್ಯಾರ್ಥಿಗಳ ಸಮಸ್ಯೆ ಆಲಿಸಿ ಪರಿಹರಿಸಲು ಶನಿವಾರ ವರ್ಚುವಲ್ ಸಭೆ ನಡೆಸಲಾಗಿದೆ ಎಂದು ರಾಯಭಾರಿ ಜೆ.ಪಿ.ಸಿಂಗ್ ಮತ್ತು ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.

ಶ್ವೇತಭವನದ ಎದುರಿನ ಉದ್ಯಾನ: ಗುಂಡಿನ ಸದ್ದು

ವಾಷಿಂಗ್ಟನ್: ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿ.ಸಿ.ಯಲ್ಲಿ ಶ್ವೇತಭವನ ಸಮೀಪವೇ ಭಾನುವಾರ ರಾತ್ರಿ ಗುಂಡಿನ ಚಕಮಕಿ ನಡೆದಿದ್ದು, ಪ್ರದೇಶದಲ್ಲಿ ಕೆಲಕಾಲ ಆತಂಕ ಸೃಷ್ಟಿಸಿತ್ತು.

ಶ್ವೇತಭವನದ ಎದುರಿಗೇ ಇರುವ ಲಫಾಯೆಟ್ ಪಾರ್ಕ್ ಪ್ರದೇಶದಲ್ಲಿ ಗುಂಡಿನ ಶಬ್ಧ ಕೇಳಿ ಬಂದಿತ್ತು. ಅಮೆರಿಕದ ಸೀಕ್ರೆಟ್ ಸರ್ವಿಸ್‌ನ ಅಧಿಕಾರಿಗಳ ತಂಡ ಮತ್ತು ಸ್ಥಳೀಯ ಪೊಲೀಸರು, ಪಾರ್ಕ್ ಕಾವಲು ಸಿಬ್ಬಂದಿ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪ್ರದೇಶವನ್ನು ಸುತ್ತುವರಿದರು.

ನವೀಕರಣ ಕಾಮಗಾರಿ ಕಾರಣ ಲಫಾಯೆಟ್ ಪಾರ್ಕ್ ಅನ್ನು ಹಲವು ವಾರಗಳಿಂದ ಬಂದ್ ಮಾಡಲಾಗಿದೆ. ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಹಾಗಿದ್ದೂ ಪಾಕ್ ಪ್ರದೇಶದಿಂದ ಗುಂಡಿನ ಸದ್ದು ಕೇಳಿಬಂದಿರುವುದು ಅಚ್ಚರಿಗೆ ಕಾರಣವಾಗಿದೆ. ಇಡೀ ಉದ್ಯಾನವನವನ್ನು ಶೋಧಿಸಲಾಗಿದೆ. ಗುಂಡಿನ ದಾಳಿ ನಡೆಸಿದವರಾಗಲೀ, ಗಾಯಗೊಂಡವರಾಗಲೀ ಯಾರೂ ಕಾಣ ಬಂದಿಲ್ಲ. ಸೋಮವಾರ ಮುಂಜಾನೆವರೆಗೂ ಯಾರನ್ನೂ ಬಂಧಿಸಲಾಗಿಲ್ಲ. ಗುಂಡು ಸಿಡಿಸಿದ ವ್ಯಕ್ತಿಗಾಗಿ ಶೋಧ ಮುಂದುವರಿದಿದೆ ಎಂದು ಸೀಕ್ರೆಟ್ ಸರ್ವಿಸ್‌ನ ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಗುಂಡಿನ ಸದ್ದು ಕೇಳಿಬಂದಾಗ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶ್ವೇತಭವನದಲ್ಲೇ ಇದ್ದರು ಎಂದು ತಿಳಿದುಬಂದಿದೆ. ಘಟನೆ ನಂತರ ಶ್ವೇತಭವನದ ಸುತ್ತಲ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಮಾಜಿ ಸಿಎಂ ಪುತ್ರನಿಗೆ ಜೀವಾವಧಿ ಶಿಕ್ಷೆ

ರಾಯ್‌ಪುರ: ಛತ್ತೀಸ್‌ಗಢ ಹೈಕೋರ್ಟ್ ಅಲ್ಲಿನ ಮಾಜಿ ಮುಖ್ಯಮಂತ್ರಿ ಅಜಿತ್ ಜೋಗಿ ಅವರ ಪುತ್ರ ಅಮಿತ್ ಜೋಗಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಭಾರಿ ಸಂಚಲನ ಮೂಡಿಸಿದ್ದ ಜಗ್ಗಿ ಹತ್ಯೆ ಪ್ರಕರಣದಲ್ಲಿ ಈ ತೀರ್ಪು ಹೊರ ಬಿದ್ದಿದೆ. ಈ ಮೂಲಕ ಕೆಳ ಹಂತದ ನ್ಯಾಯಾಲಯದ ತೀರ್ಪನ್ನು ರದ್ದುಗೊಳಿಸಿರುವುದು ರಾಜ್ಯದ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ. ಮುಖ್ಯ ನ್ಯಾಯಮೂರ್ತಿ ರಮೇಶ್ ಸಿನ್ಹಾ ಮತ್ತು ನ್ಯಾಯಮೂರ್ತಿ ಅರವಿಂದ್ ಕುಮಾರ್ ವರ್ಮಾ ಅವರನ್ನೊಳಗೊಂಡ ವಿಭಾಗೀಯ ಪೀಠವು, ಜನತಾ ಕಾಂಗ್ರೆಸ್ ಛತ್ತೀಸ್‌ಗಢ (ಜೆ) ಅಧ್ಯಕ್ಷ ಜೋಗಿ ಅವರಿಗೆ ವಿಚಾರಣಾ ನ್ಯಾಯಾಲಯವು 2007ರಲ್ಲಿ ನೀಡಿದ ಕ್ಲೀನ್ ಚಿಟ್ ಕಾನೂನುಬದ್ಧವಾಗಿ ಸಮಂಜಸವಲ್ಲ ಎಂದು ಮಹತ್ವದ ತೀರ್ಪು ನೀಡಿದೆ. ಪ್ರಕರಣವು 2003ರ ಜೂನ್ 4ರಂದು ನಡೆದಿತ್ತು. ಅಂದು ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ನಾಯಕ ಮತ್ತು ವಿದ್ಯಾಚರಣ್ ಶುಕ್ಲಾ ಅವರ ಆಪ್ತ ಸಹಾಯಕ ರಾಮಾವತಾರ್ ಜಗ್ಗಿ ಅವರನ್ನು ಹಾಡಹಗಲೇ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಇದು ದೊಡ್ಡ ರಾಜಕೀಯ ಕೋಲಾಹಲಕ್ಕೆ ಕಾರಣವಾಗಿತ್ತು. ಪೊಲೀಸರು 31 ವ್ಯಕ್ತಿಗಳನ್ನು ಆರೋಪ ಪಟ್ಟಿಗೆ ಸೇರಿಸಿದ್ದರೂ, 2007ರಲ್ಲಿ ರಾಯ್‌ಪುರ ನ್ಯಾಯಾಲಯವು ಅವರಲ್ಲಿ 28 ಜನರನ್ನು ದೋಷಿಗಳೆಂದು ಘೋಷಿಸಿತ್ತು.

ಪ್ರಮಾಣವಚನ ಸ್ವೀಕರಿಸಿದ 19 ರಾಜ್ಯಸಭಾ ಸದಸ್ಯರು

ದೆಹಲಿ: ಎನ್‌ಸಿಪಿ (ಎಸ್‌ಪಿ) ನಾಯಕ ಶರದ್ ಪವಾರ್ ಮತ್ತು ಕೇಂದ್ರ ಸಚಿವ ರಾಮದಾಸ್ ಅಠಾವಳೆ ಸೇರಿದಂತೆ 19 ರಾಜ್ಯಸಭಾ ಸದಸ್ಯರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಉಪಸಭಾಪತಿ ಹರಿವಂಶ್ ಸಿಂಗ್ ಮತ್ತು ಸಂಸದೀಯ ವ್ಯವಹಾರ, ಸಚಿವ ಕಿರಣ್ ರಿಜುಜು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ತಮಿಳುನಾಡಿನಿಂದ ಆರು ಮಂದಿ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದಿಂದ ತಲಾ ಐವರು ಮತ್ತು ಒಡಿಶಾದಿಂದ ಮೂವರು ಸದಸ್ಯರು ಹೊಸದಾಗಿ ಚುನಾಯಿತರಾಗಿದ್ದಾರೆ.

ಮುಡಾ ಹಗರಣ ಪ್ರಕರಣ: ಹೈಗೆ ಇಡಿ ಮನವಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣ ಪ್ರಕರಣ ಕುರಿತಂತೆ ಕೆಳ ಹಂತದ ನ್ಯಾಯಾಲಯ ನೀಡಿದ್ದ ಬಿ ರಿಪೋರ್ಟ್ ಆದೇಶವನ್ನು ಪ್ರಶ್ನಿಸಿ, ಜಾರಿ ನಿರ್ದೇಶನಾಲಯ ಕರ್ನಾಟಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ನಮ್ಮ ತನಿಖೆ ವೇಳೆ ಸಾಕಷ್ಟು ಮಾಹಿತಿಗಳು ಸೋರಿಕೆಯಾಗಿವೆ. ಮುಡಾದಲ್ಲಿ ಹಗರಣ ನಡೆದಿರುವುದು ನಿಜ. ಅದರಲ್ಲಿ ನಾಲ್ವರ ಆರೋಪಿಗಳ ಪಾತ್ರವಿರುವುದೂ ನಿಜ. ತನಿಖೆಯ ವೇಳೆ ಹಲವಾರು ಸಾಕ್ಷ್ಯಾಧಾರಗಳು ಪತ್ತೆಯಾಗಿವೆ ಎಂದು ಇ.ಡಿ. ತನ್ನ ಅರ್ಜಿಯಲ್ಲಿ ವಾದಿಸಿದೆ. ಮತ್ತೊಂದೆಡೆ, ಸ್ನೇಹಮಯಿ ಕೃಷ್ಣ ಬಳಿಕ ಇ.ಡಿ.ಯಿಂದಲೂ ಪ್ರತ್ಯೇಕವಾಗಿ ಅರ್ಜಿ ಸಲ್ಲಿಕೆಯಾಗಿದೆ.

ಬ್ರಹ್ಮೋಸ್ ಬ್ರಹ್ಮ ಇನ್ನಿಲ್ಲ

ಮಾಸ್ಕೋ: ಭಾರತದ ರಕ್ಷಣಾ ಕವಚ ಅಸ್ತ್ರಗಳಲ್ಲೊಂದಾದ ಬ್ರಹ್ಮೋಸ್ ಕ್ಷಿಪಣಿ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ ರಷ್ಯಾದ ಖ್ಯಾತ ವಿಜ್ಞಾನಿ ಅಲೆಕ್ಸಾಂಡರ್ ಲಿಯೋನೋವ್ (74) ಅವರು ನಿಧನರಾಗಿದ್ದಾರೆ. ಲಿಯೋನೋವ್ ಅವರು ರಷ್ಯಾದ ಪ್ರಮುಖ ರಕ್ಷಣಾ ಸಂಸ್ಥೆಯಾದ ಮಶಿನೋಸ್ಟ್ರೋಯೇನಿಯಾ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಹಾಗೂ ಮುಖ್ಯ ವಿನ್ಯಾಸಕರಾಗಿದ್ದರು. ಈ ಸಂಸ್ಥೆಯು, ಭಾರತ-ರಷ್ಯಾ ರಾಷ್ಟ್ರಗಳು ಜಂಟಿಯಾಗಿ ಕೈಗೊಂಡಿದ್ದ ಬ್ರಹ್ಮೋಸ್ ಕ್ಷಿಪಣಿ ಅಭಿವೃದ್ಧಿಯಲ್ಲಿ ಪ್ರಮುಖ ಪಾಲುದಾರ ಕಂಪನಿಯಾಗಿದೆ. ಅವರು ಬ್ರಹ್ಮೋಸ್ ಮಾತ್ರವಲ್ಲದೆ, ಜಿರ್ಕಾನ್ ಎಂಬ ಅತಿ ವೇಗದ ಹೈಪರ್‌ಸೋನಿಕ್ ಕ್ಷಿಪಣಿ ಅಭಿವೃದ್ಧಿಯಲ್ಲೂ ಪ್ರಮುಖ ಪಾತ್ರವಹಿಸಿದ್ದರು. ಈ ಕ್ಷಿಪಣಿ ಧ್ವನಿಯ ವೇಗಕ್ಕಿಂತ ಹಲವರಡು ಪಟ್ಟು ಹೆಚ್ಚು ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿದೆ ಮತ್ತು ಆಧುನಿಕ ಯುದ್ಧ ತಂತ್ರಜ್ಞಾನದಲ್ಲಿ ಮಹತ್ವದ್ದಾಗಿದೆ.

ಬಾಂಗ್ಲಾ ಗಡಿಯಲ್ಲಿ ಹಾವು-ಮೊಸಳೆ ಕಾವಲು?

ನವದೆಹಲಿ: ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಭದ್ರತೆಯನ್ನು ಬಲಪಡಿಸಲು ಒಂದು ವಿಭಿನ್ನ ಮತ್ತು ಅಪರೂಪದ ಯೋಜನೆಯೊಂದನ್ನ ರೂಪಿಸುತ್ತಿದೆ. ಈ ಯೋಜನೆಯ ಪ್ರಕಾರ, ಕೆಲವು ಗಡಿಭಾಗಗಳಲ್ಲಿ ಹಾವುಗಳು ಮತ್ತು ಮೊಸಳೆಗಳನ್ನು ನೈಸರ್ಗಿಕ ತಡೆಗೋಡೆಗಳಾಗಿ ಬಳಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಭಾರತ-ಬಾಂಗ್ಲಾದೇಶ ಗಡಿ ಸುಮಾರು 4,096 ಕಿಮೀ ಉದ್ದವಿದ್ದು, ಇದರಲ್ಲಿ ಕೆಲವು ಭಾಗಗಳು ನದಿ, ಜೌಗು ಪ್ರದೇಶಗಳು ಮತ್ತು ಕಾಡುಗಳಿಂದ ಕೂಡಿವೆ. ಇಂತಹ ಪ್ರದೇಶಗಳಲ್ಲಿ ತಂತಿ ಬೇಲಿ ಹಾಕುವುದು ಕಷ್ಟವಾಗುತ್ತದೆ. ಈ ಕಾರಣದಿಂದಾಗಿ ಅಕ್ರಮ ನುಸುಳುವಿಕೆ, ಕಳ್ಳಸಾಗಣೆ ಮತ್ತು ಇತರ ಅಪರಾಧಗಳನ್ನು ತಡೆಯುವುದು ಸವಾಲಾಗಿದೆ. ಈ ಹಿನ್ನೆಲೆಯಲ್ಲೇ, ನದಿಯ ಭಾಗಗಳಲ್ಲಿ ಹಾವುಗಳು ಮತ್ತು ಮೊಸಳೆಗಳನ್ನು ಬಳಸಿದರೆ, ಅದು ಸಹಜವಾದ ಭಯವನ್ನು ಉಂಟುಮಾಡಿ ನುಸುಳುವಿಕೆಯನ್ನು ತಡೆಯಬಹುದು ಎಂದು ಆಲೋಚಿಸಲಾಗಿದೆ. ಈ ಯೋಜನೆಯನ್ನು ನೈಸರ್ಗಿಕ ತಡೆಗೋಡೆ ಎಂಬ ರೀತಿಯಲ್ಲಿ ಪರಿಗಣಿಸಲಾಗಿದೆ. ಆದರೆ ಈ ಯೋಜನೆ ಇನ್ನೂ ಆಲೋಚನೆಯ ಹಂತದಲ್ಲಿದ್ದು, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗಿಲ್ಲ.

ಬಿಜೆಪಿಗೆ ದೊಡ್ಡ ಅಂತರದ ಗೆಲುವು ಖಚಿತ

ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಬಿಜೆಪಿಗೆ ದೊಡ್ಡ ಅಂತರದ ಗೆಲುವು ಸಿಗಲಿದೆ. ಕಾಂಗ್ರೆಸ್‌ಗೆ ಎರಡೂ ಕಡೆ ಸಮಸ್ಯೆಗಳಿವೆ. ದಾವಣಗೆರೆಯಲ್ಲಿ ಮುಸ್ಲಿಮರು ಓಟ್ ಹಾಕಲ್ಲ ಅಂತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸೋಲುವ ಸುಳಿವು ಸಿಕ್ಕ ಕೂಡಲೇ ಕೇರಳಕ್ಕೆ ಹೋದ ಮುಖ್ಯಮಂತ್ರಿ ಬಾಗಲಕೋಟೆಗೆ ದೌಡಾಯಿಸಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಭಿವೃದ್ಧಿ ಮಾಡಿದ್ದರೆ, ಗ್ಯಾರಂಟಿಗಳನ್ನು ಸರಿಯಾಗಿ ಕೊಟ್ಟಿದ್ದರೆ ಇಷ್ಟು ಕಷ್ಟ ಯಾಕೆ ಪಡಬೇಕಿತ್ತು. ಇವರು ಅಭಿವೃದ್ಧಿ ಮಾಡಿದ್ದರೆ ಜನರೇ ಹತ್ತಿರ ಬಂದು ನಿಮಗೆ ಓಟ್ ಹಾಕುತ್ತೇವೆ ಅಂತ ಹೇಳುತ್ತಿದ್ದರು. ಆದರೆ ಹಾಗೆ ಇಲ್ಲ, ಮೂರು ವರ್ಷದಿಂದ ರಾಜ್ಯದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಅಭಿವೃದ್ಧಿ ಶೂನ್ಯವಾಗಿದೆ. ಸಾಲಗಾರರ ರಾಜ್ಯವನ್ನಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದರು. ಅಭಿವೃದ್ಧಿ ಹೋಗಲಿ; ಗ್ಯಾರಂಟಿ ಸಹ ಸರಿಯಾಗಿ ಕೊಡಲಿಲ್ಲ, ಅನ್ನಭಾಗ್ಯವನ್ನು ಕನ್ನಭಾಗ್ಯ ಮಾಡಿದ್ದಾರೆ. ಕಾಂಗ್ರೆಸ್ ಅಭಿವೃದ್ಧಿ ವಿರೋಧಿ ಆಗಿರುವುದಿಂದ ಜನರೇ ಪಾಠ ಕಲಿಸಲಿದ್ದಾರೆ ಎಂದರು.

ಎರಡೂ ಕಡೆ ಕಾಂಗ್ರೆಸ್ ನವರೇ ಬಂದು ಒಳಗೊಳಗೆ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದಾರೆ. ದಾವಣಗೆರೆಯಲ್ಲಿ ಬಡವರನ್ನು ಗೆಲ್ಲಿಸಿ ಅಂತ ಸಿದ್ದರಾಮಯ್ಯ ಹೇಳಿದ್ದಾರೆ. ದಾವಣಗೆರೆಯ ಬಿಜೆಪಿ ಅಭ್ಯರ್ಥಿ ಬಡವರು. ಆದ್ದರಿಂದ ಸಿದ್ದರಾಮಯ್ಯ ಸಹ ನಮ್ಮ ಪರ ಪ್ರಚಾರ ಮಾಡಿದ್ದಾರೆ. ಅಡುಗೆ ಅನಿಲ ಸಮಸ್ಯೆ ಇಡೀ ದೇಶಕ್ಕೆ ಆಗಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ, ರಾಹುಲ್ ಗಾಂಧಿ ಅವರು ಮೆಚ್ಚುವ ದೇಶ ಪಾಕಿಸ್ತಾನದಲ್ಲಿ ಪೆಟ್ರೋಲ್ 500 ರು. ಆಗಿದೆ. ಇದೆಲ್ಲ ತಿಳಿಯದ ಡಿ.ಕೆ ಶಿವಕುಮಾರ್ ಗ್ಯಾಸ್ ಸಮಸ್ಯೆಗೆ ಪ್ರಧಾನಿ ಮೋದಿ ಕಾರಣ ಎಂದು ಟೀಕೆ ಮಾಡುತ್ತಾರೆ. ಕೊಲ್ಲಿ ಯುದ್ಧ ಇದ್ದರೂ ಇರಾನ್ ಜೊತೆ ಮಾತನಾಡಿ ಹಡಗುಗಳು ಭಾರತಕ್ಕೆ ಬರುವಂತೆ ಪ್ರಧಾನಿ ಮೋದಿ ಮಾಡಿದ್ದಾರೆ. ಹಾರ್ಮುಜ್ ಜಲಸಂಧಿಯಿಂದ ಸಮಸ್ಯೆಯಾಗಿದೆ. ಬೇರೆ ದೇಶದ ಹಡಗುಗಳಿಗೆ ಬಿಡುತ್ತಿಲ್ಲ. ಆದರೆ ಭಾರತದ ಹಡಗುಗಳಿಗೆ ಅನುಮತಿ ನೀಡಿದ್ದಾರೆ. ಇದು ಕೇಂದ್ರ ಸರಕಾರದ ಪ್ರಯತ್ನದಿಂದ ಸಾಧ್ಯವಾಗಿದೆ. ಹೀಗಿದ್ದರೂ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಬೆಂಕಿ ಹಚ್ಚಲು ಕಾಯತ್ತಿದ್ದಾರೆ ಎಂದರು.

ಮಲ್ಲೇಶ್ವರ ಬಿಜೆಪಿ ಕಾರ್ಯಾಲಯದಲ್ಲಿ ಪಕ್ಷದ ಸಂಸ್ಥಾಪನಾ ದಿನಾಚರಣೆ ನಡೆಸಲಾಯಿತು, ವಿರೋಧ ಪಕ್ಷದ ನಾಯಕ ಆರ್.ಆಶೋಕ್ ಸೇರಿದಂತೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಹಳ್ಳಿಗೆ ನಡೆಯಿರಿ ಕಾರ್ಯಕ್ರಮ

ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಏಪ್ರಿಲ್ 7ರಿಂದ 12 ರವರೆಗೆ 'ಹಳ್ಳಿಗೆ ನಡೆಯಿರಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಆರ್.ಅಶೋಕ ಹೇಳಿದರು. ಬಿಜೆಪಿ ಸಂಸ್ಥಾಪನಾ ದಿನದ ಅಂಗವಾಗಿ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಸಾರ್ವಜನಿಕ ಸ್ಥಳದಲ್ಲಿ ಸ್ವಚ್ಛತೆ ಹಮ್ಮಿಕೊಳ್ಳಲಾಗಿದೆ. ಭಾರತೀಯ ಜನತಾ ಪಕ್ಷಕ್ಕಾಗಿ ದುಡಿದವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮ ನಡೆಸಲಾಗುವುದು. ಇದೇ ವೇಳೆ ಮೋದಿ ಸರಕಾರದ ಯೋಜನೆಗಳನ್ನು ವ್ಯಾಪಕವಾಗಿ ಜನರಿಗೆ ಮುಟ್ಟಿಸಲಾಗುವುದು. ಫಲಾನುಭವಿಗಳ ಸಂಪರ್ಕ ಅಭಿಯಾನ ಮಾಡಲಾಗುವುದು ಎಂದರು. ಅತ್ಯಂತ ಹುರುಪಿನಿಂದ ಇಂದು ಸ್ಥಾಪನಾ ದಿನ ಆಚರಿಸುತ್ತಿದ್ದೇವೆ. ದೇಶದ ಹಲವು ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ದೇಶದಲ್ಲೂ ಆಡಳಿತದಲ್ಲಿದೆ. 1975 ರಲ್ಲಿ ಇಂದಿರಾಗಾಂಧಿ ಅವರ ದುರಾಡಳಿತದಿಂದ, ಸರ್ವಾಧಿಕಾರದಿಂದ ತುರ್ತು ಪರಿಸ್ಥಿತಿ ಬಂತು. ಅದನ್ನು ವಿರೋಧಿಸಿ ಆಗಿನ ಜನಸಂಘ ಜನತಾ ಪಾರ್ಟಿಯಲ್ಲಿ ವಿಲೀನವಾಯಿತು. ವಿ.ಪಿ.ಸಿಂಗ್ ಅವರ ಸರಕಾರದಲ್ಲಿ ಜನಗಳಿಗೆ ಒಳಿತು ಮಾಡಲು ಆಗಲ್ಲ. ಜಾತೀಯತೆ ತರ್ತಾರೆ. ನಮ್ಮ ಸಿದ್ಧಾಂತಕ್ಕೆ ಕೊಡಲಿ ಪೆಟ್ಟು ಬರುತ್ತೆ ಅಂತ ಬಿಜೆಪಿ ಆರಂಭವಾಯಿತು. ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ.ಅಡ್ವಾಣಿ, ಮುರುಳಿ ಮನೋಹರ ಜೋಷಿ ಅವರು ನೇತೃತ್ವ ವಹಿಸಿದ್ದರು. ಇಂತಹ ಪಕ್ಷ ಇಂದು ಆಲದ ಮರದ ರೀತಿ ಇಡೀ ದೇಶದಲ್ಲಿ ವ್ಯಾಪಿಸಿದೆ. ಅತಿದೊಡ್ಡ ಪಕ್ಷದ ಸದಸ್ಯ ಎಂದು ಹೇಳಿಕೊಳ್ಳಲು ಹೆಮ್ಮೆ ಇದೆ ಎಂದರು.

ಏ.23ರಂದು ಬಾರಾಮತಿ ಕ್ಷೇತ್ರದ ಉಪಚುನಾವಣೆ

ಸುನೇತ್ರಾಗೆ ಬೆಂಬಲ ಕಾಂಗ್ರೆಸ್ ಷರತ್ತು

ಮುಂಬೈ: ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ನಿಧನದಿಂದ ತೆರವಾದ ಬಾರಮತಿ ವಿಧಾನಸಭಾ ಉಪಚುನಾವಣೆಗೆ ಸುನೇತ್ರಾ ಪವಾರ್ ಸ್ಪರ್ಧಿಸುತ್ತಿದ್ದು, ಅವರು ಕಾಂಗ್ರೆಸ್ ಬೆಂಬಲವನ್ನೂ ಕೋರಿದ್ದಾರೆ.

ಆದರೆ ಸುನೇತ್ರಾ ಪವಾರ್ ಮನವಿಗೆ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, ಬೆಂಬಲ ನೀಡಲು ಷರತ್ತು ವಿಧಿಸಿದೆ. ಮಾಜಿ ಉಪಮುಖ್ಯಮಂತ್ರಿ ಅಜಿತ್ ಪವಾರ್ ಸಾವನ್ನಪ್ಪಿದ ವಿಮಾನ ಅಪಘಾತದ ಕುರಿತು ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಾದರೆ, ಬರಾಮತಿ ವಿಧಾನಸಭೆ ಉಪಚುನಾವಣೆಯಿಂದ ಹಿಂದೆ ಸರಿಯುವ ವಿಚಾರವನ್ನು ಪರಿಗಣಿಸುವುದಾಗಿ ತಿಳಿಸಿದೆ.

ರಾಜ್ಯ ಕಾಂಗ್ರೆಸ್ ವಕ್ತಾರ ಅತುಲ್ ಲೋಂಧೆ ಪಕ್ಷದ ಹೇಳಿಕೆಯನ್ನು ಪ್ರಕಟಿಸಿದ್ದು, ಏಪ್ರಿಲ್ 23ರ ಉಪಚುನಾವಣೆ ಸರ್ವಾನು ಮತದಿಂದ ನಡೆಯಬೇಕು ಎಂಬ ಹೇಳಿಕೆ ಗಳನ್ನು ತಳ್ಳಿ ಹಾಕಿ, ಬಿಜೆಪಿ ಸೌಕರ್ಯವಾದಿ ರಾಜಕೀಯ ನಿಲುವು ತಾಳಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷವು ಸುನೇತ್ರಾ ಪವಾರ್ ವಿರುದ್ಧ ಬರಾಮತಿ ಉಪಚುನಾವಣೆಗೆ ತನ್ನ ರಾಜ್ಯ ಘಟಕದ ಕಾರ್ಯದರ್ಶಿ ಆಕಾಶ್ ಮೋರೆ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿತ್ತು. ಜನವರಿ 28ರಂದು ನಡೆದ ವಿಮಾನ ಅಪಘಾತದಲ್ಲಿ ಹಾಲಿ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ ಶಾಸಕ ಹಾಗೂ ಆಗಿನ ಉಪಮುಖ್ಯಮಂತ್ರಿ ಅಜಿತ್ ಪವಾರ್ ಮೃತಪಟ್ಟಿದ್ದರಿಂದ ಈ ಉಪಚುನಾವಣೆ ನಡೆಯುತ್ತಿದೆ.

ಪುಣೆ ಜಿಲ್ಲೆಯ ಆ ಸ್ಥಾನವನ್ನು ಅಜಿತ್ ಪವಾರ್ ಎಂಟು ಬಾರಿ ಪ್ರತಿನಿಧಿಸಿ, ಹಲವು ಗೆಲುವುಗಳನ್ನು ದಾಖಲೆ ಬಹುಮತದ ಅಂತರದಿಂದ ಗೆದ್ದಿದ್ದರು. ವಿರೋಧ ಪಕ್ಷವಾದ ಎನ್‌ಸಿಪಿ (ಎಸ್‌ಪಿ) ಮತ್ತು ಶಿವಸೇನೆ (ಯುಬಿ) ಉಪಚುನಾವಣೆ ಸರ್ವಾನುಮತದಿಂದ ನಡೆಯಲು ಬೆಂಬಲ ಸೂಚಿಸಿದರೂ, ಕಾಂಗ್ರೆಸ್ ಮಾತ್ರ ಸ್ಪರ್ಧೆಯ ನಿಲುವು ತಾಳಿದೆ.

ಮುಡಾ ಹಗರಣ: ಇ.ಡಿ ಮೇಲ್ಮನವಿ ಅರ್ಜಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ ಅಕ್ರಮವಾಗಿ ಬದಲಿ ನಿವೇಶನ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಬಿ ರಿಪೋರ್ಟ್ ಅಂಗೀಕರಿಸಿದ್ದ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ, ಜಾರಿ ನಿರ್ದೇಶನಾಲಯ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಇಡಿ ಸೋಮವಾರವಷ್ಟೇ ಅರ್ಜಿ ಸಲ್ಲಿಸಿದ್ದು, ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಾಗಿದೆ.

ಇದೇ ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಸುನೀಲ್ ದತ್ತ ಯಾದವ್ ಅವರಿದ್ದ ನ್ಯಾಯಪೀಠ, ಲೋಕಾಯುಕ್ತ ಪೊಲೀಸರು, ಜಾರಿ ನಿರ್ದೇಶನಾಲಯ(ಇ.ಡಿ), ಜಮೀನಿನ ಮೂಲ ಮಾಲೀಕ ದೇವರಾಜು, ಮುಖ್ಯಮಂತ್ರಿ ಅವರ ಬಾಮೈದ ಮಲ್ಲಿಕಾರ್ಜುನ ಸ್ವಾಮಿ, ಮುಡಾದ ಮಾಜಿ ಆಯುಕ್ತ ಜಿ. ಟಿ. ದಿನೇಶ್ ಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಪ್ರಕರಣದ ಹಿನ್ನೆಲೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ. ಎಂ. ಪಾರ್ವತಿ ಅವರಿಗೆ ಸೇರಿದ ಮೈಸೂರಿನ ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು, ಅದರ ಬದಲಿಗೆ ಸುಮಾರು 56 ಕೋಟಿ ಮೌಲ್ಯದ 14 ನಿವೇಶನಗಳನ್ನು ಮುಡಾ ಅಕ್ರಮವಾಗಿ ಹಂಚಿಕೆ ಮಾಡಿದೆ. ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಅಧಿಕಾರಿಗಳ ಮೇಲೆ ಪ್ರಭಾವ ಬೀರಿದ್ದಾರೆ.

ಹೀಗಾಗಿ, ಪ್ರಕರಣದ ಕುರಿತು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕು ಎಂದು ಕೋರಿ ಮೈಸೂರಿನ ಲೋಕಾಯುಕ್ತ ಪೊಲೀಸರಿಗೆ 2024ರ ಜುಲೈ 3ರಂದು ಸ್ನೇಹಮಯಿ ಕೃಷ್ಣ ದೂರು ದಾಖಲಿಸಿದ್ದರು. ನಂತರ ಪ್ರಕರಣದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಕೋರಿ ಸ್ನೇಹಮಯಿ ಕೃಷ್ಣ, 2024ರ ಜೂನ್ – ಜುಲೈನಲ್ಲಿ ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದರು.

ಕರ್ನಾಟಕ ಸೇರಿದಂತೆ ಹಲವೆಡೆ ಮಳೆ ಸಾಧ್ಯತೆ

ದೆಹಲಿ: ಕರ್ನಾಟಕ ಸೇರಿದಂತೆ ದೇಶದ ನಾಲ್ಕು ರಾಜ್ಯಗಳಲ್ಲಿ ಮುಂದಿನ ನಲ್ವತ್ತೆಂಟು ಗಂಟೆಗಳಲ್ಲಿ ಗಂಟೆಗೆ 70 ಕಿ.ಮೀ.ವೇಗದಲ್ಲಿ ಭೀಕರ ಬಿರುಗಾಳಿ ಅಪ್ಪಳಿಸಲಿದ್ದು, ಇದರ ಬೆನ್ನಲ್ಲೇ ಗುಡುಗು ಸಹಿತ ಭಾರೀ ಮಳೆಯಾಗುವ ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ಏಪ್ರಿಲ್ 10ರವರೆಗೆ ದೇಶದ ಅನೇಕ ಭಾಗಗಳಲ್ಲಿ ಹಗುರದಿಂದ ಮಧ್ಯಮ ಮಳೆಯ ಜೊತೆಗೆ ಬಲವಾದ ಗಾಳಿಯೂ ಬೀಸುವ ಸಾಧ್ಯತೆಯಿದೆ. ಉತ್ತರ ಭಾರತದಿಂದ ದಕ್ಷಿಣ ಭಾರತವರೆಗೆ ಈ ಹವಾಮಾನ ಬದಲಾವಣೆ ಸ್ಪಷ್ಟವಾಗಿ ಕಾಣಿಸುತ್ತಿದೆ. ದೆಹಲಿ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಶಾ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ಪುದುಚೇರಿ ಸೇರಿದಂತೆ ಹಲವು ರಾಜ್ಯಗಳಲ್ಲಿ ಮಳೆಯ ಮುನ್ಸೂಚನೆ ನೀಡಲಾಗಿದೆ. ಕೆಲವು ಪ್ರದೇಶಗಳಲ್ಲಿ ಗಂಟೆಗೆ 30ರಿಂದ 50 ಕಿ.ಮೀ.ವೇಗದಲ್ಲಿ ಗಾಳಿ ಬೀಸುವ ನಿರೀಕ್ಷೆಯಿದ್ದು, ಪಶ್ಚಿಮ ಬಂಗಾಳದಂತಹ ಪ್ರದೇಶಗಳಲ್ಲಿ ಈ ವೇಗ 70 ಕಿ.ಮೀ. ವರೆಗೆ ಏರಬಹುದು ಎಂದು ಅಂದಾಜಿಸಲಾಗಿದೆ.

ಪುದುಚೇರಿ ಸರಕಾರದ ನಿಯಂತ್ರಣ ದೆಹಲಿಯಲ್ಲಿದೆ: ರಾಹುಲ್

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪುದುಚೇರಿಗೆ ರಾಜ್ಯ ಸ್ಥಾನಮಾನ

ಪುದುಚೇರಿ: ಮುಂಬರಲಿರುವ ವಿಧಾನ ಸಭಾ ಚುನಾವಣೆಯಲ್ಲಿ ಗೆದ್ದು ಪಕ್ಷ ಅಧಿಕಾರಕ್ಕೆ ಬಂದರೆ ಪುದುಚೇರಿಗೆ ಪೂರ್ಣ ರಾಜ್ಯ ಸ್ಥಾನಮಾನ ನೀಡುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಕೇಂದ್ರಾಡಳಿತ ಪ್ರದೇಶದ ಮತದಾರರಿಗೆ ಭರವಸೆ ನೀಡಿದ್ದಾರೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಗಾಂಧಿ, ಪುದುಚೇರಿ ಸರಕಾರದ ನಿಯಂತ್ರಣ ದೆಹಲಿಯಿಂದ ನಡೆಯುತ್ತಿದೆ ಎಂದು ಕೇಂದ್ರದಲ್ಲಿರುವ ಮೋದಿ ಸರಕಾರವನ್ನು ಉಲ್ಲೇಖಿಸಿ ಹೇಳಿದ್ದಾರೆ.

ಲಾಸ್ಪೆಟ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ರಾಹುಲ್, ಭಾರತೀಯ ಜನತಾ ಪಕ್ಷ (ಬಿಜೆಪಿ) ಕೇಂದ್ರಾಡಳಿತ ಪ್ರದೇಶವನ್ನು ರಿಮೋಟ್ ಕಂಟ್ರೋಲ್ ಮೂಲಕ ನಡೆಸುತ್ತಿದೆ ಮತ್ತು ರಾಜ್ಯದ ಪ್ರಾದೇಶಿಕ ನಾಯಕರನ್ನು ಬದಿಗಿಡಲಾಗಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಅಧಿಕಾರಕ್ಕೆ ಮರಳಿದರೆ ಆರು ತಿಂಗಳೊಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವುದಾಗಿ ಗಾಂಧಿ ಭರವಸೆ ನೀಡಿದರು.

ಪುದುಚೇರಿಯ ಕೈಗಾರಿಕಾ ಮತ್ತು ಜವಳಿ ವಲಯಗಳು ಕುಸಿತದ ಹಾದಿಯಲ್ಲಿವೆ ಎಂದು ಆರೋಪಿಸಿದರಲ್ಲದೆ, 100 ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಪುದುಚೇರಿಯಲ್ಲಿ ನಕಲಿ ಔಷಧ ತಯಾರಿಕಾ ಜಾಲ ನಡೆಯುತ್ತಿದ್ದು, ಕೇಂದ್ರಾಡಳಿತ ಪ್ರದೇಶವು ನಕಲಿ ಔಷಧಗಳಲ್ಲಿ ಮುಂಚೂಣಿಯಲ್ಲಿದೆ ಎಂದು ಅವರು ಆರೋಪಿಸಿದರು. ಎಲ್ಲಾ ಒಪ್ಪಂದಗಳ ಮೇಲೆ ಶೇ. 30ರಷ್ಟು ಕಮಿಷನ್ ತೆಗೆದುಕೊಳ್ಳಲಾಗುತ್ತದೆ ಎಂದು ಎಲ್ಲರಿಗೂ ತಿಳಿದಿದೆ. ಸ್ಮಾರ್ಟ್ ಸಿಟಿಗಳು, ರಸ್ತೆಗಳು, ಚರಂಡಿಗಳು ಮತ್ತು ಶಾಲೆಗಳಿಗೆ ಕಮಿಷನ್ ತೆಗೆದುಕೊಳ್ಳಲಾಗುತ್ತಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಯುವಕರಿಗೆ ಮಾಸಿಕ ನೆರವು: ಪುದುಚೇರಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿರುದ್ಯೋಗಿ ಯುವಕರಿಗೆ ಮಾಸಿಕ 2,000 ರು. ಆರ್ಥಿಕ ನೆರವು ನೀಡಲಿದೆ ಮತ್ತು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ 30,000 ಹೊಸ ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂದು ಹಲವಾರು ಭರವಸೆಗಳನ್ನು ರಾಹುಲ್ ಗಾಂಧಿ ನೀಡಿದರು. ಹೆಚ್ಚುವರಿಯಾಗಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಭರವಸೆ ನೀಡಿದರು. ನಾವು 40 ವರ್ಷ ವಯಸ್ಸಿನವರೆಗೆ ಸರಕಾರಿ ಉದ್ಯೋಗಗಳಿಗೆ ಪ್ರವೇಶವನ್ನು ಸಡಿಲಿಸಲಿದ್ದೇವೆ, ಪುದುಚೇರಿಯ ಪ್ರತಿಯೊಂದು ಕುಟುಂಬಕ್ಕೂ 20 ಲಕ್ಷ ರು.ಗಳ ಆರೋಗ್ಯ ವಿಮೆ ಲಭ್ಯವಿರುತ್ತದೆ ಎಂದು ರಾಹುಲ್ ಹೇಳಿದ್ದಾರೆ.

ಕಳೆದ ವರ್ಷ ಪ್ರಯಾಗ್‌ರಾಜ್ ಮಹಾಕುಂಭದಲ್ಲಿ ಪ್ರಚಾರ ಗಿಟ್ಟಿಸಿದ್ದ ಐಐಟಿ ವಾಲೆ ಬಾಬಾ

ಬೆಂಗಳೂರು ಹುಡುಗಿ ಜತೆ ಐಐಟಿ ಬಾಬಾ ಮದುವೆ

ಚಂಡೀಗಢ: ಕಳೆದ ವರ್ಷ ಪ್ರಯಾಗ್‌ರಾಜ್ ಮಹಾಕುಂಭದಲ್ಲಿ ಪ್ರಚಾರ ಗಿಟ್ಟಿಸಿದ್ದ ಐಐಟಿ ವಾಲೆ ಬಾಬಾ ವಿವಾಹವಾಗಿದ್ದಾರೆ. ಬೆಂಗಳೂರಿನ ಹುಡುಗಿ ಜೊತೆ ಅವರು ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದಾರೆ.

ಐಐಟಿ ವಾಲೆ ಬಾಬಾರ ನಿಜವಾದ ಹೆಸರು ಅಭಯ್ ಸಿಂಗ್, ಹರಿಯಾಣದ ಜಜ್ಜರ್ ಜಿಲ್ಲೆಯವರು. ಬೆಂಗಳೂರಿನ ಎಂಜಿನಿಯರ್ ಪ್ರತೀಕಾ ಎಂಬವರನ್ನು ಅವರು ವರಿಸಿದ್ದಾರೆ. ವಕೀಲರಾಗಿರುವ ತಮ್ಮ ತಂದೆಯನ್ನು ಭೇಟಿ ಮಾಡಲು ತಹಸಿಲ್ ಸಂಕೀರ್ಣಕ್ಕೆ ತೆರಳಿದ್ದರು. ಈ ವೇಳೆ ಪತ್ನಿ ಪ್ರತೀಕಾ ಕೂಡ ಜೊತೆಗಿದ್ದರು

ಯಾರೀ ಐಐಟಿ ವಾಲೆ ಬಾಬಾ: ಕಳೆದ ವರ್ಷ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭಮೇಳದ ಸಂದರ್ಭದಲ್ಲಿ ಐಐಟಿ ವಾಲೆ ಬಾಬಾ ಸಾಮಾಜಿಕ ಮಾಧ್ಯಮ ದಲ್ಲಿ ಸಂಚಲನ ಮೂಡಿಸಿದ್ದರು. ಅವರು ತಪಸ್ವಿಯಂತೆ ವೇಷ ಧರಿಸಿ ಮೇಳದಲ್ಲಿ ಸುತ್ತಾಡಿದ್ದರು. 'ನಾನು ಐಐಟಿ'ಯ ಪದವೀ ಧರ ಎಂದು ಹೇಳಿಕೊಂಡು ಸೋಷಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದ್ದರು.

ಐಐಟಿ ಬಾಂಬೆಯ ಹಿರಿಯ ವಿದ್ಯಾರ್ಥಿ ಮತ್ತು ಮಾಜಿ ಏರೋಸ್ಪೇಸ್ ಎಂಜಿನಿಯರ್ ಆಗಿದ್ದ ಅವರು, 'ನಾನು ಹರಿಯಾಣದಿಂದ ಬಂದಿದ್ದೇನೆ. ಐಐಟಿಗೆ ಹೋಗಿದ್ದೆ, ನಂತರ ಎಂಜಿನಿಯರಿಂಗ್‌ನಿಂದ ಆರ್ಟ್ಸ್‌ಗೆ ಬದಲಾದೆ. ಅದನ್ನು ಮುಂದುವರಿಸಲಾಗಲಿಲ್ಲ, ಆದ್ದರಿಂದ ನಾನು ಬದಲಾಗುತ್ತಲೇ ಇದ್ದೆ. ನಂತರ ನಾನು ಅಂತಿಮ ಸತ್ಯವನ್ನು ತಲುಪಿದೆ' ಎಂದು ಹೇಳಿಕೊಂಡಿದ್ದರು.

ಬಾಬಾ ಕೈಹಿಡಿದ ಬೆಂಗಳೂರಿನ ಹುಡುಗಿ: ಐಐಟಿ ವಾಲೆ ಬಾಬಾ ಫೆಬ್ರವರಿ 15ರಂದು ಮಹಾಶಿವರಾತ್ರಿಯ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ಅಂಜೋರ್ ಮಹಾದೇವ್ ದೇವಸ್ಥಾನದಲ್ಲಿ ಕರ್ನಾಟಕದ ಬೆಂಗಳೂರಿನಲ್ಲಿ ಎಂಜಿನಿಯರ್ ಆಗಿರುವ ಪ್ರತೀಕಾ ಅವರನ್ನು ವಿವಾಹವಾಗಿದ್ದಾರೆ. ಪ್ರತೀಕಾ ಅವರು ಮಾತನಾಡಿ, 'ನಾನು ಮತ್ತು ನನ್ನ ಪತಿ ಇಬ್ಬರೂ ಸನಾತನ ಧರ್ಮದ ಉದ್ದೇಶಕ್ಕಾಗಿ ಜೀವನವನ್ನು ಮುಡಿಪಾಗಿಡುತ್ತೇವೆ' ಎಂದು ಹೇಳಿಕೊಂಡಿದ್ದಾರೆ.

ಗಾಂಜಾ ಕೇಸಲ್ಲಿ ಬಂಧನ: ಐಐಟಿ ಬಾಬಾರನ್ನು ಗಾಂಜಾ ಕೇಸಲ್ಲಿ ಜೈಪುರ ಪೊಲೀಸರು ಬಂಧಿಸಿದ್ದರು. ಬಾಬಾ ಬಳಿ 1.50 ಗ್ರಾಂ ತೂಕದ ಗಾಂಜಾ ಪ್ಯಾಕೆಟ್ ಪತ್ತೆಯಾಗಿತ್ತು. ಅದನ್ನು ಎನ್‌ಡಿಪಿಎಸ್ ಕಾಯ್ದೆಯಡಿ ಸ್ಥಳದಲ್ಲೇ ವಶಪಡಿಸಿಕೊಳ್ಳಲಾಗಿತ್ತು. ಗಾಂಜಾ ಪ್ರಮಾಣ ಕಡಿಮೆ ಇದ್ದ ಕಾರಣ ಜಾಮೀನು ನೀಡಿ ಬಿಡುಗಡೆ ಮಾಡಲಾಯಿತು.

ನಿಂಬೆಹಣ್ಣು ಇಳುವರಿ ಕುಸಿತ | ಒಂದು ಎಳನೀರಿನ ಬೆಲೆ ರು.65ಕ್ಕೆ ಏರಿಕೆ | ಕಲ್ಲಂಗಡಿ ಹಣ್ಣಿಗೂ ಬೇಡಿಕೆ

ಹೆಚ್ಚಿದ ಬಿಸಿಲಿನ ಕಾವು: ಹಣ್ಣುಗಳ ದರ ಭಾರೀ ಏರಿಕೆ

ಹೂವಪ್ಪ ಐ ಹೆಚ್ ಬೆಂಗಳೂರು

ಬಿಸಿಲ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ದಣಿವಾರಿಸಿಕೊಳ್ಳಲು ನಾಗರಿಕರು ತಂಪು ಪಾನೀಯಗಳತ್ತ ಮುಖ ಮಾಡಿದ್ದಾರೆ. ಇದರಿಂದ ಎಳನೀರು, ಕಲ್ಲಂಗಡಿ, ನಿಂಬೆಹಣ್ಣು ಸೌತೆಕಾಯಿಗಳಿಗೆ ಭಾರಿ ಬೇಡಿಕೆ ಬಂದಿದೆ. ಒಂದು ಎಳನೀರಿಗೆ ಗ್ರಾಹಕರು 60ರಿಂದ 65 ರು. ನೀಡಬೇಕಿದ್ದು, ಒಂದು ನಿಂಬೆಹಣ್ಣು ಚಿಲ್ಲರೆ ದರ ಸಣ್ಣ ಗಾತ್ರ 7-8 ರು. ಆಗಿದ್ದರೆ, ದಪ್ಪ 10 ರು.ರಿಂದ 12 ರು. ಆಗಿದೆ.

ಈ ಬೆಲೆ ಗ್ರಾಹಕರಿಗೆ ಕೇಳಿ ಗ್ರಾಹಕರಲ್ಲಿ ಆತಂಕ ತುಂಬಿದೆ, ಇದರ ಜತೆಗೆ ರಸಭರಿತ ಹಣ್ಣುಗಳಾದ ಕಲ್ಲಂಗಡಿ, ಕರಬುಜ, ಸೌತೆಕಾಯಿ ಬೆಲೆ ಕೂಡಾ ಹಿಂದಿಗಿಂತ ಕೆ.ಜಿಗೆ 10-15 ರು. ಏರಿಕೆಯಾಗಿವೆ. ಕಲ್ಲಂಗಡಿ ಹಣ್ಣು ಫೆಬ್ರವರಿಯಲ್ಲಿ 20 ರು.ರಿಂದ 25 ಇದ್ದು, ಈಗ ಬೆಲೆ 30-40 ರು., ಕರುಬುಜ 30 ರು. ಇದ್ದ ಬೆಲೆ 40 ರು., ಸೌತೆಕಾಯಿ 20 ರು. ಇದ್ದ ಬೆಲೆ 30 ರು.ಗೆ ಏರಿಕೆಯಾಗಿದೆ.

ಒಂದು ದೊಡ್ಡ ಗಾತ್ರದ ಎಳನೀರಿಗೆ 45ರಿಂದ 50 ರು. ಇದ್ದ ಬೆಲೆ ಇದೀಗ 60ರಿಂದ 65 ರು.ಬಂದು ತಲುಪಿದ್ದು, ದಾಹ ತೀರಿಸುತ್ತಿದ್ದ ನೈಸರ್ಗಿಕ ಪಾನೀಯದ ಬೆಲೆ ಏಕಾಏಕಿ ಏರಿರುವುದು ಜನರಿಗೆ ಹೊರೆಯಾಗುತ್ತಿದೆ. ಬಿಸಿಲಿನ ಝಳ ಹೆಚ್ಚುತ್ತಿರುವುದರಿಂದ ಬೇಡಿಕೆ ಹೆಚ್ಚಾಗಿದ್ದು, ಬೆಲೆ ಕೂಡ ಹೆಚ್ಚಿದೆ.

ಸಣ್ಣ ಗಾತ್ರದ ಎಳನೀರು 30ರಿಂದ 35 ರು.ಇತ್ತು. ಈಗ ಅದರ ಬೆಲೆ 40-45 ರು. ಆಗಿದೆ. ಅಗ್ಗದ ದರದ ಎಳನೀರನ್ನು ಆಯ್ಕೆ ಮಾಡುವ ಗ್ರಾಹಕರು, 'ಒಂದು ಬಾಯಿಗೆ ಸಿಗುವಷ್ಟು ನೀರು ಇಲ್ಲ, ಕಾಯಿ ಕೂಡ ಸಿಗುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಎಳನೀರಿನ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಜನಸಾಮಾನ್ಯರು ಮಜ್ಜಿಗೆ, ಹಣ್ಣಿನ ಜ್ಯೂಸ್ ಹಾಗೂ ಕತ್ತರಿಸಿದ ಹಣ್ಣುಗಳ ಸೇವನೆಯತ್ತ ಮುಖ ಮಾಡುತ್ತಿರುವುದು ಕಂಡುಬಂದಿದೆ. ಬೇಸಿಗೆಯಲ್ಲಿ ಹಣ್ಣಿನ ಬೆಲೆಗಳು ಏರುವುದು, ಮಳೆಗಾಲದಲ್ಲಿ ಇಳಿಕೆಯಾಗುವುದು ಸಾಮಾನ್ಯ. ಆದರೆ ಈ ವರ್ಷ ಏಳ ನೀರಿನ ಬೇಡಿಕೆ ಬಹಳ ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಸಿಗುವ ಹೆಚ್ಚಿನ ಎಳನೀರು ಮದ್ದೂರು, ಮಳವಳ್ಳಿ, ರಾಮನಗರ, ಮಂಡ್ಯ, ಹಾಸನ ಮತ್ತು ತುಮಕೂರಿನಿಂದ ಬರುತ್ತವೆ. ತಮಿಳುನಾಡಿನ ಕೆಲವು ಭಾಗಗಳಿಂದಲೂ ಬರುತ್ತವೆ, ಆದರೆ ಬೆಂಗಳೂರಿನಲ್ಲಿ ಅವುಗಳ ಪೂರೈಕೆ ಕಡಿಮೆಯಾಗಿದೆ.

ಇಳುವರಿ ಕಡಿಮೆಯಾಗಿರುವುದು ಕೂಡಾ ಬೆಲೆ ಏರಿಕೆಗೆ ಮತ್ತೊಂದು ಕಾರಣವಾಗಿದೆ. ಬೆಂಗಳೂರಿನ ಮಾರುಕಟ್ಟೆಯ ಕೊರತೆಗೆ ಉತ್ತರ ಭಾರತದ ಕೆಲವು ಭಾಗಗಳಿಗೆ ಸರಬರಾಜು ಮಾಡುತ್ತಿರುವುದು ಕೂಡಾ ಕಾರಣವಾಗಿದೆ ಎಂದು ಎಳನೀರು ಮಾರಾಟಗಾರ ಮರಿಸ್ವಾಮಿ ಹೇಳುತ್ತಾರೆ

ನಿಂಬೆಹಣ್ಣು ದುಬಾರಿ: ಆಂಧ್ರ, ವಿಜಯಪುರ ಪ್ರಮುಖ ಲಿಂಬೆ ಬೆಳೆಯುವ ಪ್ರದೇಶಗಳಾಗಿದ್ದು, ತೀವ್ರ ಶಾಖದ ಅಲೆಗಳು ಮತ್ತು ಅತಿವೃಷ್ಟಿ ಮಳೆಯಿಂದಾಗಿ ಶೇ.50ರಷ್ಟು ಇಳುವರಿ ಕುಸಿತವಾಗಿರುವ ಕಾರಣ ಪೂರೈಕೆ ಕಡಿಮೆಯಾಗಿದೆ. ಜತೆಗೆ ಹೆಚ್ಚಿನ ಸಾರಿಗೆ ಶುಲ್ಕ ಹೆಚ್ಚಳ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿವೆ ಎಂದು ವ್ಯಾಪಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಲಿಂಬೆ ಜ್ಯೂಸ್ ದರ ಏರಿಕೆ: ದೊಡ್ಡ ಗಾತ್ರದ, ಹೆಚ್ಚು ರಸವಿರುವ ನಿಂಬೆಹಣ್ಣು ಮಾರುಕಟ್ಟೆಯಲ್ಲಿ ಸಿಗುವುದು ಕಡಿಮೆಯಾಗಿದೆ ನಿಂಬೆ ಹಣ್ಣಿಗೂ ದರ ಹೆಚ್ಚಳವಾಗಿದೆ. ನಿಂಬೆಹಣ್ಣಿನ ತಂಪು ಪಾನೀಯಕ್ಕೆ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ. 15 ರು. ಇದ್ದ ಒಂದು ನಿಂಬೆಜ್ಯೂಸ್ 25 ರು. ಆಗಿದೆ ಎಂದು ನಿಂಬು ಸೋಡಾ ವ್ಯಾಪಾರಿ ನಾರಾಯಣ ಗೌಡ ಹೇಳಿದರು.

ಕಳೆದೆರಡು ವರ್ಷದಿಂದ ಹವಾಮಾನ ವ್ಯತ್ಯಾಸ ಆಗಿದ್ದು, ಈ ವರ್ಷ ನಿಂಬೆ ಹಣ್ಣಿನ ಇಳುವರಿ ಬಂದಿಲ್ಲ. ಬೇಸಿಗೆಗೆ ನಿಂಬೆಹಣ್ಣು ಪಾನಕ ಜ್ಯೂಸ್ ಬೇಡಿಕೆ ಹೆಚ್ಚಾಗಿದೆ, ಜತೆಗೆ ಧಾರ್ಮಿಕ ಪೂಜೆಗಳಿಗೂ ಬೇಕು. ಹೀಗಾಗಿ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಯಾಗಿದೆ

-ರಮೇಶ ಕುಮಾರ, ನಿಂಬೆಹಣ್ಣು ವ್ಯಾಪಾರಿ, ಎಪಿಎಂಸಿ, ಬೆಂಗಳೂರು

ಕಳೆದ 3 ವರ್ಷದ ಅವಧಿಯಲ್ಲಿ ತೆಂಗಿನ ಮರಗಳು ಒಣಗಿ ಹೋಗಿವೆ. ಇಳುವರಿ ಶೇ.60ರಷ್ಟು ಕಡಿಮೆಯಾಗಿದೆ. ಇದರಲ್ಲಿ ಒಣ ಕೊಬ್ಬರಿಗೆ, ಅಡುಗೆಗೆ ಹೋಗುತ್ತದೆ. ಎಳನೀರು ಸಿಗುತ್ತಿಲ್ಲ. ಎಳನೀರಿಗೆ ಬೇಡಿಕೆ ಇದೆ, ಅಲ್ಲದೇ ಇಲ್ಲಿನ ಎಳನೀರು ನೆರೆಯ ರಾಜ್ಯಕ್ಕೆ ಪೂರೈಕೆಯಾಗುತ್ತವೆ, ಹೀಗಾಗಿ ಎಳನೀರಿನ ಬೆಲೆ ದುಬಾರಿಯಾಗಿದೆ.

-ಮಹದೇವ ಗೌಡ, ಎಳನೀರು ವ್ಯಾಪಾರಿ, ಬೆಂಗಳೂರು

ನವಿ ಮುಂಬೈ ನೆಕ್ಸಸ್ ಸೀವುಡ್ಸ್ ಮಾಲ್‌ನಲ್ಲಿ ಹೊಸ ಸೌಲಭ್ಯ

ಟೆಸ್ಲಾ ಇನ್ ಮಾಲ್ ಚಾರ್ಜಿಂಗ್ ಸ್ಟೇಷನ್



ಮುಂಬೈ: ಟೆಸ್ಲಾ ತನ್ನ ಮೊದಲ ಇನ್-ಮಾಲ್ ಚಾರ್ಜಿಂಗ್ ಸ್ಟೇಷನ್ ಅನ್ನು ನವಿ ಮುಂಬೈನ ನೆಕ್ಸಸ್ ಸೀವುಡ್ಸ್ ಮಾಲ್‌ನಲ್ಲಿ ಉದ್ಘಾಟಿಸಿದೆ. ಹೊಸ ಸೌಲಭ್ಯವು ಟೆಸ್ಲಾ ಮಾಲೀಕರಿಗೆ ಎಂಟು ಚಾರ್ಜಿಂಗ್ ಪಾಯಿಂಟ್‌ಗಳನ್ನು ಕಲ್ಪಿಸಿದೆ. ಇದರಲ್ಲಿ ನಾಲ್ಕು ವಿ4 ಸೂಪರ್‌ಚಾರ್ಜರ್‌ಗಳು ಮತ್ತು ನಾಲ್ಕು ಡೆಸ್ಟಿನೇಷನ್ ಚಾರ್ಜರ್‌ಗಳೂ ಸೇರಿವೆ ನೆಕ್ಸಸ್ ಸೀವುಡ್ಸ್‌ನ ಬಿ1 ಪಾರ್ಕಿಂಗ್ ಪ್ರದೇಶದಲ್ಲಿ ಚಾರ್ಜಿಂಗ್ ಪಾಯಿಂಟ್ ಇದೆ. 250 ಕಿಲೋ ವಾಟ್ ವರೆಗಿನ ಗರಿಷ್ಠ ಡಿ.ಸಿ ವೇಗದ ಚಾರ್ಜಿಂಗ್ ವೇಗವನ್ನು ತಲುಪಿಸುವ ಸಾಮರ್ಥ್ಯವಿರುವ ನಾಲ್ಕು ವಿ4 ಸೂಪರ್‌ಚಾರ್ಜರ್‌ಗಳನ್ನು ಹೊಂದಿದೆ. ಇವುಗಳ ಜೊತೆಗೆ, 11 ಕಿಲೋ ವಾಟ್ ಔಟ್‌ಪುಟ್‌ನೊಂದಿಗೆ ನಾಲ್ಕು ಎ.ಸಿ. ಡೆಸ್ಟಿನೇಶನ್ ಚಾರ್ಜರ್‌ಗಳನ್ನೂ ಸಹ ಸ್ಥಾಪಿಸಲಾಗಿದೆ. ಗ್ರಾಹಕರಿಗೆ ಅವರ ಅಗತ್ಯತೆ ಮತ್ತು ಸಮಯವನ್ನು ಅವಲಂಬಿಸಿ ಬಹು ಚಾರ್ಜಿಂಗ್ ಆಯ್ಕೆಗಳನ್ನು ನೀಡುತ್ತದೆ. ಗ್ರಾಹಕರು ಸ್ವಾಭಾವಿಕವಾಗಿ ಸಮಯ ಕಳೆಯುವ ಶಾಪಿಂಗ್ ಮಾಲ್‌ಗಳು, ಹೆದ್ದಾರಿ ನಿಲ್ದಾಣಗಳು ಮತ್ತು ಫುಡ್‌ಕೋರ್ಟ್‌ಗಳಂತಹ ಸ್ಥಳಗಳಲ್ಲಿ ಚಾರ್ಜಿಂಗ್ ಪಾಯಿಂಟ್‌ಗಳನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಟೆಸ್ಲಾ ಹೇಳಿದೆ. ಗುರುಗ್ರಾಮ್, ದೆಹಲಿ ಮತ್ತು ಮುಂಬೈನಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಯಶಸ್ವಿಯಾಗಿ ಪರಿಚಯಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ವಿ4 ಸೂಪರ್ ಚಾರ್ಜರ್‌ಗಳಿಂದ ಕೇವಲ 15 ನಿಮಿಷ ಚಾರ್ಜ್ ಮಾಡಿದರೆ, ಟೆಸ್ಲಾ ಮಾಡೆಲ್ ವೈ 275 ಕಿ.ಮೀ ಸಂಚರಿಸಬಹುದು.

ಕಾರ್ಯಯೋಜನೆ ಹೀಗಿರಲಿದೆ..!

ಅಪ್ಲಿಕೇಶನ್ ಮೂಲಕ ಮಾಲೀಕರು ಚಾರ್ಜಿಂಗ್ ಸೈಟ್ ಅನ್ನು ಪತ್ತೆ ಮಾಡಬಹುದು. ನೈಜ ಸಮಯದ ಸ್ಟಾಲ್ ಲಭ್ಯತೆಯನ್ನು ಪರಿಶೀಲಿಸಬಹುದು. ಅತ್ಯುತ್ತಮ ಚಾರ್ಜಿಂಗ್ ಕಾರ್ಯಕ್ಷಮತೆಗಾಗಿ ಬ್ಯಾಟರಿಯನ್ನು ಪೂರ್ವಭಾವಿಯಾಗಿ ಹೊಂದಿಸಬಹುದು. ದೂರದಿಂದಲೇ ಚಾರ್ಜಿಂಗ್ ಎಷ್ಟಿದೆ ಎಂದು ತಿಳಿದುಕೊಂಡು, ಚಾರ್ಜಿಂಗ್ ಪೂರ್ಣವಾದಾಗ ಸಿಗ್ನಲ್ ಪಡೆಯುವಂತೆ ಸೆಟ್ ಮಾಡಿಕೊಳ್ಳಬಹುದು.

ಪಂಚರಾಜ್ಯ ಪವರ್ ವಾರ್

ಮೆಲುಕು

ಚಳವಳಿಯೇ ಚಿಮ್ಮುಹಲಗೆ

ತಮ್ಮ ನಾಯಕತ್ವದ 'ಅಸ್ಸಾಂ ಚಳವಳಿ'ಯನ್ನೇ ಚಿಮ್ಮುಹಲಗೆಯಾಗಿಸಿ ರಾಜಕಾರಣಕ್ಕಿಳಿದು, 2 ಅವಧಿಗೆ ಅಸ್ಸಾಂನ ಮುಖ್ಯಮಂತ್ರಿಯಾದವರು ಪ್ರಫುಲ್ಲ

ಕುಮಾರ್ ಮಹಂತ. 1979ರಲ್ಲಿ, 'ಆಲ್ ಅಸ್ಸಾಂ ಸ್ಟೂಡೆಂಟ್ಸ್ ಯೂನಿಯನ್' ಎಂಬ ಸಂಘಟನೆಗೆ ಅಧ್ಯಕ್ಷರಾದ ಪ್ರಫುಲ್ಲ, ಬಾಂಗ್ಲಾದ ಅಕ್ರಮ ವಲಸಿಗರ ವಿರುದ್ಧ ಆಂದೋಲನ ಹಮ್ಮಿಕೊಂಡು 1985ರ ವರೆಗೂ ಮುಂದುವರಿಸಿ ದರು. ಇದು ಅವರಿಗೆ ಜನಪ್ರಿಯತೆಯನ್ನೂ, 'ಅಸ್ಸಾಂ ಗಣ ಪರಿಷತ್' (ಎಜಿಪಿ) ಎಂಬ ರಾಜಕೀಯ ಪಕ್ಷದ ಸಹ-ಸಂಸ್ಥಾಪಕ ಹಾಗೂ ಮೊದಲ ಅಧ್ಯಕ್ಷ ಎಂಬ ಮಾನ್ಯತೆಗಳನ್ನೂ ತಂದುಕೊಟ್ಟಿತು. 1985ರ ವಿಧಾನ ಸಭಾ ಚುನಾವಣೆಯಲ್ಲಿ 'ಎಜಿಪಿ' ಗೆದ್ದು, ಪ್ರಫುಲ್ಲ ಮುಖ್ಯಮಂತ್ರಿಯಾಗಿ ಆ ಕಾಲಘಟ್ಟದ ಅತಿ ಕಿರಿಯ ಸಿಎಂ ಎನಿಸಿಕೊಂಡರು. ಆದರೆ, 'ಯುನೈಟೆಡ್ ಲಿಬರೇ ಶನ್ ಫ್ರಂಟ್ ಆಫ್ ಅಸ್ಸಾಂ' ಎಂಬ ನಿಷೇಧಿತ ಪ್ರತ್ಯೇಕತಾವಾದಿ ಗುಂಪಿನ ಹಿಂಸಾಚಾರದ ಚಟು ವಟಿಕೆಗಳು ಉಲ್ಬಣಗೊಂಡು ಆಂತರಿಕ ಭದ್ರತೆಗೆ ಬೆದರಿಕೆಯಾಗಿ ಪರಿಣಮಿಸಿತು. ಹೀಗಾಗಿ ಬಹುಮತ ವಿದ್ದುದರ ಹೊರತಾಗಿಯೂ ಪ್ರಫುಲ್ಲರ ಸರಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಯಿತು. ನಂತರ ಪಕ್ಷ ಹೋಳಾಯಿತು. ಸಾಲದೆಂಬಂತೆ ಪ್ರಫುಲ್ಲರ ಸರಕಾರವನ್ನು ಸುತ್ತುವರಿದ ಭ್ರಷ್ಟಾಚಾರದ ಆರೋಪ ಗಳಿಂದ ಭ್ರಮನಿರಸನಗೊಂಡ ಮತದಾರರು 1991ರ ಚುನಾವಣೆಯಲ್ಲಿ ಪಕ್ಷವನ್ನು ಸೋಲಿಸಿದರು. 1996ರಲ್ಲಿ ಪಕ್ಷ ಮೈಕೊಡವಿಕೊಂಡು ಎದ್ದ ಕಾರಣ ಪ್ರಫುಲ್ಲ ಮತ್ತೊಮ್ಮೆ ಮುಖ್ಯಮಂತ್ರಿಯಾದರು.

ಚುನಾವಣಾ ಚುರುಮುರಿ

ಅಂಧಾಭಿಮಾನವಲ್ಲವೇ?

ತಮಿಳುನಾಡಿನಲ್ಲಿ ಚಿತ್ರನಟರೆಂದರೆ ಎಲ್ಲಿಲ್ಲದ ಕ್ರೇಜ್; ಅದರಲ್ಲೂ ಅವರು ರಾಜಕೀಯಕ್ಕೆ ಇಳಿದುಬಿಟ್ಟರಂತೂ ಕೇಳೋದೇ ಬೇಡ- ಬೆಲ್ಲಕ್ಕೆ ಇರುವೆಗಳು ಮುತ್ತುವಂತೆ

ಅಭಿಮಾನಿಗಳು ಎಲ್ಲೆಂದರಲ್ಲಿ ಅಮರಿಕೊಂಡುಬಿಡ್ತಾರೆ! 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಎಂಬ ಪಕ್ಷವನ್ನು ಹುಟ್ಟುಹಾಕಿ, ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿರುವ ನಟ ವಿಜಯ್ ಅವರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ವಿಜಯ್‌ರ ಕಾರು ಮನೆಯಿಂದ ರಸ್ತೆಗೆ ಇಳಿದಾಕ್ಷಣ, ಅಭಿಮಾನಿಗಳು ಅದರ ಬೆನ್ನತ್ತುವುದು ತಮಿಳುನಾಡಿ ನಲ್ಲೀಗ ಸಾಮಾನ್ಯ ದೃಶ್ಯವಾಗಿಬಿಟ್ಟಿದೆ. ಇತ್ತೀಚೆಗೆ, ತಿರುಚಿ ರಾಪಳ್ಳಿ (ಪೂರ್ವ) ಕ್ಷೇತ್ರದಿಂದ ನಾಮಪತ್ರ ಸಲ್ಲಿಸಲು ತೆರಳುವಾಗ ವಿಜಯ್ 'ರೋಡ್ ಶೋ'ನಲ್ಲಿ ಪಾಲ್ಗೊಳ್ಳ ಬೇಕಾಗಿ ಬಂತು. ಈ ವೇಳೆ ಅವರಿಗೆ ಮುಗಿಬಿದ್ದ ಅಭಿಮಾನಿ ಗಳ ಪೈಕಿ, ದ್ವಿಚಕ್ರ ವಾಹನದಲ್ಲಿ ಬಂದಿದ್ದ ದಂಪತಿಯೂ ಸೇರಿದ್ದರು. ಆದರೆ ತಳ್ಳಾಟದಲ್ಲಿ ಅವರು ವಾಹನದಿಂದ ಕೆಳಗೆ ಬಿದ್ದುಬಿಟ್ಟರು. ತಕ್ಷಣ ವಾಹನವನ್ನು ನಿಲ್ಲಿಸುವಂತೆ ತಮ್ಮ ಚಾಲಕನಿಗೆ ಸೂಚಿಸಿದ ವಿಜಯ್, ಆ ದಂಪತಿಗೆ ಏನಾಯಿತೆಂದು ನೋಡಲು ರಸ್ತೆಗಿಳಿದರಂತೆ ಹಾಗೂ ಅವರೊಂದಿಗೆ ಒಂದಿಷ್ಟು ಹೊತ್ತು ಮಾತಾಡಿ ನಂತರ ಕಾರು ಹತ್ತಿದರಂತೆ. ಇದು ನಟ ಡಿವಿಜಯ್ ಅವರ ಸಂವೇದನಾ ಶೀಲತೆ, ಕಾಳಜಿ ಮತ್ತು ವಿನಯಪೂರ್ವಕ ವರ್ತನೆಯ ದ್ಯೋತಕವೇನೋ ಹೌದು; ಆದರೆ ಅಭಿಮಾನಿಗಳೆನಿಸಿ ಕೊಂಡವರು ನಮ್ಮ ಮೆಚ್ಚಿನ ನಟರ ವಾಹನವನ್ನು ಹೀಗೆ ಬೆನ್ನತ್ತುವುದು ತರವಲ್ಲ ಅಲ್ಲವೇ? ಅಭಿಮಾನ ಎಂಬುದು ಕೊಂಚವೇ ಹೆಚ್ಚಾದರೂ ಅಂಧಾಭಿಮಾನ ಆಗಿಬಿಡುತ್ತದೆ, ಅಲ್ಲವೇ?

ಮೌನ ತಂತ್ರಗಾರ!

ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಅಳಿಯ ವಿ.ಶಬರೀಶನ್ ಅವರು, ಡಿಎಂಕೆ ಪಕ್ಷದ ಪ್ರಮುಖ ತಂತ್ರಗಾರರಲ್ಲಿ ಒಬ್ಬರು. ಬಹಳ ಹಿಂದಿ

ನಿಂದಲೂ ಸಾರ್ವಜನಿಕರ ಗಮನದಿಂದ ದೂರವಿದ್ದುಕೊಂಡೇ, ಎಲೆಮರೆಯ ಕಾಯಿಯಂತೆಯೇ ಕಾರ್ಯನಿರ್ವಹಿಸುತ್ತಿದ್ದ ಇವರು ಈ ಬಾರಿಯ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತಿರುವುದು ಹಲವರ ಹುಬ್ಬೇರಿಸಿದೆ. ಪಕ್ಷದ ಸಭೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವ ಶಬರೀಶನ್, ಏಪ್ರಿಲ್ 2ರಂದು ವಿಲ್ಲಿವಕ್ಕಂನಲ್ಲಿ ನಡೆದ ಚುನಾವಣಾ ಕಾರ್ಯತಂತ್ರದ ವಿಚಾರ ವಿನಿಮಯ ಗೋಷ್ಠಿಯಲ್ಲಿ ಪಾಲ್ಗೊಂಡ ನಂತರ ಮಾಧ್ಯಮಗಳ ಜತೆ ಮಾತನಾಡುವ ಮೂಲಕ ಹಲವರನ್ನು ಅಚ್ಚರಿಗೊಳಿಸಿದ್ದೇ ಇದಕ್ಕೆ ಸಾಕ್ಷಿ (ಈ ಮೊದಲು ಗೆಳೆಯನಾಗಿದ್ದು ಈಗ ರಾಜಕೀಯ ಎದುರಾಳಿಯಾಗಿ ಬದಲಾಗಿ 'ಟಿವಿಕೆ' ಪಕ್ಷದಿಂದ ಸ್ಪರ್ಧಿಸುತ್ತಿರುವ ಆಧವ್ ಅರ್ಜುನ ಅವರ ವಿರುದ್ಧ ಶಬರೀಶನ್ ಅವರ ಆಪ್ತಮಿತ್ರ ಕಾರ್ತಿಕ್ ಮೋಹನ್ ಸ್ಪರ್ಧಿಸಿದ್ದಾರೆ ಎಂಬುದು ನಿಮ್ಮ ಗಮನಕ್ಕೆ!). ಈ ಬೆಳವಣಿಗೆಯನ್ನು ಕಂಡವರು, 'ಶಬರೀಶನ್ ನಿಧಾನವಾಗಿ ಕಪ್ಪೆಚಿಪ್ಪಿನಿಂದ ಹೊರಬಂದು ಸಾರ್ವಜನಿಕ ವಲಯದಲ್ಲಿ ಗುರುತಿಸಿಕೊಳ್ಳುವ, ತನ್ಮೂಲಕ ಜನಾನುರಾಗಿ ಎನಿಸಿಕೊಳ್ಳುವ ಕಸರತ್ತಿನಲ್ಲಿ ತೊಡಗಿದ್ದಾರೆಯೇ?' ಎಂದು ಪ್ರಶ್ನಿಸುತ್ತಿದ್ದಾರಂತೆ!

ಕೋಟ್ ಆಫ್ ದ ಡೇ

ನಮ್ಮ ಸರಕಾರವು ಪಾಕಿಸ್ತಾನದಲ್ಲಿನ ಉಗ್ರರ ಶಿಬಿರಗಳನ್ನು ಗುರಿಯಾಗಿಸಿಕೊಂಡು 'ಆಪರೇಷನ್ ಸಿಂದೂರ್' ಕಾರ್ಯಾಚರಣೆ ನಡೆಸಿದರೆ, ಕಾಂಗ್ರೆಸ್ ಪಕ್ಷ ಮಾತ್ರ ಪಾಕ್‌ನ ನಿಲುವಿನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ. ರಾಷ್ಟ್ರದ ಭದ್ರತೆಗೆ ಧಕ್ಕೆ ತರುವ ಇಂಥ ಧೋರಣೆಗೆ ನಾವೆಂದಿಗೂ ಸಮ್ಮತಿಸುವುದಿಲ್ಲ.

-ನರೇಂದ್ರ ಮೋದಿ, ಪ್ರಧಾನಮಂತ್ರಿ



ಎಳೆಯನ ವಿರುದ್ಧ ತೊಡೆತಟ್ಟಿರುವ ಅನುಭವಿ ಹಿಮಂತ | ಜನಮನ ಗೆಲ್ಲುವರೇ ಗೌರವ್ ಗೊಗೊಯ್?

ಅಕ್ಷರಶಃ ಅಗ್ನಿಷ್ಟಿಕೆಯಾಗಿರುವ ಅಸ್ಸಾಂ ಅಖಾಡ

ಗುವಾಹಟಿ: 126 ಸದಸ್ಯಬಲದ ಅಸ್ಸಾಂ ವಿಧಾನ ಸಭೆಗೆ ಏಪ್ರಿಲ್ 9ರಂದು ಚುನಾವಣೆ ನಡೆಯಲಿದೆ. ಬಿಜೆಪಿ ನೇತೃತ್ವದ 4 ಪಕ್ಷಗಳ ಒಕ್ಕೂಟದ ಮೂರನೇ ಬಾರಿಯ ಗೆಲುವಿನ ನಿರೀಕ್ಷೆಯಲ್ಲಿರುವ ಮುಖ್ಯ ಮಂತ್ರಿ ಹಿಮಂತ ಬಿಸ್ವ ಶರ್ಮಾ ಹಾಗೂ 6 ಪಕ್ಷಗಳ ವಿಪಕ್ಷ ಮೈತ್ರಿಕೂಟವನ್ನು ಮುನ್ನಡೆಸುತ್ತಿರುವ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್ ಅವರ ಮೇಲೆ ಎಲ್ಲರ ದೃಷ್ಟಿಯೂ ನೆಟ್ಟಿದೆ.

ಈ ಪೈಕಿ, 57ರ ಹರೆಯದ ಶರ್ಮಾರಿಗೆ 3 ದಶಕಗಳ ಚುನಾವಣಾ ಅನುಭವವಿದೆ. ಮೊದಲಿಗೆ ಕಾಂಗ್ರೆಸ್ಸಿಗರೆನಿಸಿಕೊಂಡಿದ್ದು ನಂತರ 2015ರಲ್ಲಿ ಬಿಜೆಪಿ ಪಾಳಯಕ್ಕೆ ಜಿಗಿದಿರುವ ಇವರಿಗೆ ಅನೇಕ ಚುನಾವಣಾ ಪ್ರಚಾರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಅನುಭವವಿದೆ. ಆದರೆ 'ಹಾಲಿ ಸಿಎಂ' ಆಗಿದ್ದುಕೊಂಡು ಅವರು ಚುನಾವಣಾ ಅಖಾಡಕ್ಕೆ ಇಳಿಯುತ್ತಿರುವುದು ಇದೇ ಮೊದಲು. ಮತ್ತೊಂದೆಡೆ, ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯ್ ಅವರ ಮಗನಾಗಿರುವ 43ರ ಹರೆಯದ ಗೌರವ್ ಗೊಗೊಯ್, 2014ರಲ್ಲಿ ರಾಜಕೀಯಕ್ಕೆ ಪದಾರ್ಪಣ ಮಾಡಿದಾಗಿನಿಂದ ಲೋಕಸಭಾ ಚುನಾವಣೆಯಲ್ಲಿ ಸತತ 3 ಬಾರಿ ಗೆದ್ದಿರುವುದೇನೋ ಖರೆ. ಆದರೆ ಇದು ಅವರ ಚೊಚ್ಚಲ ವಿಧಾನಸಭಾ ಚುನಾವಣೆಯಾಗಿದ್ದು, ಹಲವಾರು ಚುನಾವಣಾ ಸೋಲುಗಳು ಮತ್ತು ನಾಯಕರೆನಿಸಿಕೊಂಡವರ ನಿರ್ಲಕ್ಷ್ಯದಿಂದಾಗಿ ಘಾಸಿಗೊಳಗಾಗಿ ಚೇತರಿಸಿಕೊಳ್ಳಲು ಹರಸಾಹಸ ಪಡುತ್ತಿರುವ ರಾಜ್ಯ ಕಾಂಗ್ರೆಸ್‌ನ ನೇತೃತ್ವವನ್ನು ಗೌರವ್ ಗೊಗೊಯ್ ವಹಿಸಿಕೊಂಡಿದ್ದಾರೆ ಎಂಬುದನ್ನಿಲ್ಲಿ ಗಮನಿಸಬೇಕು.

ಮನಗೆಲ್ಲುವ ಕಸರತ್ತು: ಮತದಾರರ ಮನಗೆಲ್ಲುವ ಕಸರತ್ತೆಂಬುದು ಈ ಇಬ್ಬರಿಗೂ ವೈಯಕ್ತಿಕ ನೆಲೆಯಲ್ಲಿ ಸವಾಲಿನದ್ದೇ ಆಗಿದೆ. ಗೌರವ್ ಗೊಗೊಯ್ ಅವರು 2014ರಲ್ಲಿ ಸಕ್ರಿಯ ರಾಜಕಾರಣಕ್ಕಿಳಿದ ಬೆಳವಣಿಗೆಯು, ಅಂದು ತರುಣ್ ಗೊಗೊಯ್ ಸಂಪುಟದಲ್ಲಿ ಪ್ರಭಾವಿ ಸಚಿವರಾಗಿದ್ದುಕೊಂಡು ಉನ್ನತ ಹುದ್ದೆಗೇರಲು ಹವಣಿಸುತ್ತಿದ್ದ ಹಿಮಂತ್ ಶರ್ಮಾರನ್ನು ವಿಚಲಿತಗೊಳಿಸಿತೆನ್ನಬೇಕು; ಹೀಗಾಗಿ 2015ರಲ್ಲಿ, ವಿಧಾನಸಭಾ ಚುನಾವಣೆಗೂ ಕೆಲ ತಿಂಗಳು ಮೊದಲೇ ಅವರು ಬಿಜೆಪಿ ಪಾಳಯಕ್ಕೆ ಜಿಗಿಯುವಂತಾಯಿತು!

ಈ ಮಧ್ಯೆ, ಗೌರವ್ ಗೊಗೊಯ್ ಅವರು ಶರ್ಮಾರ ಕುರಿತಾಗಿ ಸಾರ್ವಜನಿಕವಾಗಿ ಸಾಕಷ್ಟು

ಹೇಳಿಕೆಗಳನ್ನು ನೀಡಿದ್ದಿದೆ; ''2001ರಿಂದ ಮೂರು ಅವಧಿಯ ಕಾಂಗ್ರೆಸ್ ಸರಕಾರಗಳಲ್ಲಿ ಪ್ರಮುಖ ಹೊಣೆಗಾರಿಕೆಗಳು ಮತ್ತು ಸಚಿವಾಲಯಗಳನ್ನು ಹೊಂದಿದ್ದ ಶರ್ಮಾ ಅವರು, ನಮ್ಮ ತಂದೆ ತರುಣ್ ಗೊಗೊಯ್ ಅವರ ಸಾಂಗತ್ಯವನ್ನು ತೊರೆದು ಬಿಜೆಪಿಗೆ ಸೇರಿಕೊಂಡರು, ಹೀಗೆ ತೊರೆಯುವಾಗ 9 ಶಾಸಕರನ್ನು ತಮ್ಮೊಂದಿಗೆ ಕರೆದೊಯ್ದರು'' ಎಂಬ ಹೇಳಿಕೆ ಅವುಗಳಲ್ಲೊಂದು. ಹೀಗಾಗಿ, ಈ ಬಾರಿಯ ಚುನಾವಣೆಯನ್ನು ಮತದಾರರು ಯಾವ ನೆಲೆಯಲ್ಲಿ ಗ್ರಹಿಸುತ್ತಾರೆ? ಯಾರ 'ವೈಯಕ್ತಿಕ ಚರಿಷ್ಮಾ' ಇಲ್ಲಿ ಕೆಲಸ ಮಾಡುತ್ತದೆ? ಎಂಬ ಪ್ರಶ್ನೆಗಳು ರಾಜಕೀಯ ಪಂಡಿತರನ್ನು ಕಾಡುತ್ತಿವೆ.

ಶರ್ಮಾರ ತಂತ್ರಗಾರಿಕೆ: ಹಾಗೆ ನೋಡಿದರೆ, ಶರ್ಮಾ ಸಾಕಷ್ಟು ಕಸರತ್ತುಗಳನ್ನು ಮಾಡಿದ್ದಾರೆ. 2021ರಲ್ಲಿ ಮುಖ್ಯಮಂತ್ರಿಯಾದ ನಂತರದ 5 ವರ್ಷಗಳಲ್ಲಿ, ಬಂಗಾಳಿ ಭಾಷಿಕ ಮುಸ್ಲಿಮರು ಹಾಗೂ ಅಕ್ರಮ ಬಾಂಗ್ಲಾದೇಶೀಯರನ್ನು ಹೊರಹಾಕುವಂಥ ಉಪಕ್ರಮಗಳ ಮೂಲಕ ಶರ್ಮಾ ಅವರು ಸ್ಥಳೀಯ ಅಸ್ಸಾಮಿಗಳ ಹಿತಾಸಕ್ತಿಯ ರಕ್ಷಣೆಗೆ ಮುಂದಾಗಿದ್ದಾರೆ. ಜತೆಗೆ 'ಜನಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆಗಳನ್ನು ನೀಡಬಲ್ಲ ಪ್ರಬಲ ನಾಯಕ' ಎಂಬ ಇಮೇಜನ್ನು ಸೃಷ್ಟಿಸಿಕೊಂಡಿದ್ದಾರೆ. ದಿಬ್ರುಗಢ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ಕೌಸ್ತುಭ್ ಡೇಕಾ ಅವರು ಈ ಕುರಿತು ಮಾತನಾಡುತ್ತಾ, ''ಶರ್ಮಾ ಅವರು ಅಸ್ಸಾಂನಾದ್ಯಂತ ಜನಬೆಂಬಲ ಗಳಿಸಲು 'ಭಯ' ಮತ್ತು 'ಅಭಿವೃದ್ಧಿ' ಎಂಬ ಮಾನದಂಡಗಳನ್ನು ಬಳಸಿದ್ದಾರೆ. ಇದನ್ನು 'ದ್ವಿಮುಖ ತಂತ್ರ' ಎನ್ನಲಡ್ಡಿಯಿಲ್ಲ. ಅಂದರೆ, ಅಸ್ಸಾಮಿಗಳಲ್ಲಿ ಮಡುಗಟ್ಟಿರುವ, ಹೊರಗಿನವರಿಂದ ಒದಗುವ 'ಬೆದರಿಕೆಯ ಗ್ರಹಿಕೆ'ಯ ಮೇಲೆ ಅವರು ಒಂದೆಡೆ ಆಟವಾಡುತ್ತಿದ್ದರೆ, ಮತ್ತೊಂದೆಡೆ ರಸ್ತೆಗಳು, ಫ್ಲೈಓವರ್‌ಗಳು, ಸೇತುವೆಗಳು, ಹೂಡಿಕೆ ಮತ್ತು ಜನಕಲ್ಯಾಣ ಯೋಜನೆಗಳನ್ನೂ ಹಮ್ಮಿಕೊಂಡಿದ್ದಾರೆ. 'ಬಿಜೆಪಿ ಮಾತ್ರವೇ ಅಭಿವೃದ್ಧಿಯನ್ನು ತರಬಲ್ಲದು ಹಾಗೂ ಸಾಂಸ್ಕೃತಿಕ ಆಕ್ರಮಣದಿಂದ ಜನರನ್ನು ರಕ್ಷಿಸ ಬಲ್ಲದು' ಎಂದು ಶರ್ಮಾ ಪ್ರತಿಪಾದಿಸುತ್ತಿದ್ದಾರೆ'' ಎಂದಿದ್ದಾರೆ.

ಕಾಲೆಳೆಯುವಲ್ಲಿ ಪಂಟರ್!: ಬಹುತೇಕರಿಗೆ ಗೊತ್ತಿರುವಂತೆ, ಕಾಂಗ್ರೆಸ್‌ನ ಹಲವಾರು ಶಾಸಕರು ಮತ್ತು ನಾಯಕರನ್ನು ಬಿಜೆಪಿ ಪಾಳಯಕ್ಕೆ ಕರೆತರುವ ಮೂಲಕ ಅಸ್ಸಾಂನಲ್ಲಿನ ಕಾಂಗ್ರೆಸ್ ನೆಲೆಯನ್ನು ಅಸ್ಥಿರಗೊಳಿಸುವಲ್ಲಿ ಶರ್ಮಾ ಯಶಸ್ವಿಯಾಗಿದ್ದಾರೆ; ಸಂಸದ ಪ್ರದ್ಯುತ್ ಬೋರ್ಡೊಲೊಯ್ ಮತ್ತು ರಾಜ್ಯ ಕಾಂಗ್ರೆಸ್‌ನ ಮಾಜಿ ಮುಖ್ಯಸ್ಥ ಭೂಪೇನ್ ಕುಮಾರ್ ಬೋರಾ ಈ ಪೈಕಿ ಇತ್ತೀಚಿನವರು. ಗೌರವ್ ಗೊಗೊಯ್ ಅವರನ್ನು 'ಪಾಕಿಸ್ತಾನಿ ಏಜೆಂಟ್' ಎಂದು ಆರೋಪಿಸಿ, ಅವರ ಪತ್ನಿ ಹಾಗೂ ಮಕ್ಕಳ ಬ್ರಿಟಿಷ್ ಪೌರತ್ವವನ್ನು ಪ್ರಶ್ನಿಸುವ ಮೂಲಕ ಶರ್ಮಾ ಅವರು ತಮ್ಮ ರಾಜಕೀಯ ಎದುರಾಳಿಯನ್ನು ವಾಗ್ದಾಳಿಗೆ ಗುರಿಯಾಗಿಸಿಕೊಂಡಿದ್ದಾರೆ. ಗುವಾಹಟಿ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರದ ಪ್ರಾಧ್ಯಾಪಕ ಅಖಿಲ್ ರಂಜನ್ ದತ್ತಾ ಅವರು ಈ ಕುರಿತು ಮಾತನಾಡುತ್ತಾ, ''ಶರ್ಮಾ ಅವರು ಮಾತ್ರವೇ ಭರವಸೆಗಳನ್ನು ನೆರವೇರಿಸಬಲ್ಲ ನಾಯಕ ಎಂಬ ಗ್ರಹಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಯಗತಗೊಳಿಸಲಾಗಿದೆ. ಅಸ್ಸಾಂ ರಾಜ್ಯದ ಅಸ್ಮಿತೆಯನ್ನು, ಮೂಲಭೂತ ಸಾರವನ್ನು ಹಾಗೂ ಪ್ರಜಾಪ್ರಭುತ್ವದ ಅರ್ಥವನ್ನು ವೈಯಕ್ತಿಕ ರಾಜಕೀಯದ ಮಟ್ಟಕ್ಕೆ ಇಳಿಸಲಾಗಿದೆ. ಅಸ್ಸಾಂನಲ್ಲಿ ನೀವೀಗ ನೋಡುತ್ತಿರುವುದು ಕೇಂದ್ರದಲ್ಲಿರುವ ಪ್ರಧಾನಿ ಮೋದಿಯವರ ಒಂದು 'ಮಿನಿಯೇಚರ್' ಅಥವಾ 'ಚಿಕಣಿ' ಸ್ವರೂಪವನ್ನು'' ಎಂದಿದ್ದಾರೆ.

ಶ್ರೀಸಾಮಾನ್ಯರ ಆತ್ಮಬಂಧು!: ಶರ್ಮಾ ಅವರು ತಮ್ಮನ್ನು 'ಜನಸಾಮಾನ್ಯರ ಆತ್ಮಬಂಧು' ಎಂಬಂತೆ ಬಿಂಬಿಸಿಕೊಂಡಿದ್ದಾರೆ. ಇತರ ರಾಜಕಾರಣಿಗಳು ಸಾಮಾನ್ಯವಾಗಿ ನೀಡದ ಹೇಳಿಕೆಗಳನ್ನು ತಾವು ನೀಡಿಯೂ ದಕ್ಕಿಸಿಕೊಳ್ಳುವುದಕ್ಕೆ, ತಪ್ಪಿಸಿಕೊಳ್ಳುವುದಕ್ಕೆ ಈ 'ಚಿತ್ರಣ'ವು ಅವರಿಗೆ ಅನುವುಮಾಡಿಕೊಡುತ್ತದೆ ಎನ್ನುತ್ತಾರೆ ಬಲ್ಲವರು. ಈ ಬಗ್ಗೆ ಅಖಿಲ್ ರಂಜನ್ ದತ್ತಾ ಮಾತನಾಡುತ್ತಾ, ''ವಿಪಕ್ಷಗಳ ಮೈತ್ರಿಕೂಟದ ಒಂದು ಭಾಗವಾಗಿರುವ 'ಅಸ್ಸಾಂ ಜಾತೀಯ ಪರಿಷತ್'ನ ಅಧ್ಯಕ್ಷ ಲುರಿನ್ ಜ್ಯೋತಿ ಗೊಗೊಯ್ ಅವರ ವೈವಾಹಿಕ ಸ್ಥಿತಿಗತಿಯ ಬಗ್ಗೆ ಶರ್ಮಾ ಅವರು ಇತ್ತೀಚೆಗೆ ಕಮೆಂಟ್ ಮಾಡಿ, 'ಲುರಿನ್‌ರಿಗೆ ಸೂಕ್ತ ವಧುವೊಬ್ಬಳನ್ನು ನಾನು ಹುಡುಕುವೆ' ಎಂದು ಭರವಸೆ ನೀಡಿದರು. ಮುಖ್ಯಮಂತ್ರಿಯಂಥ ಉನ್ನತ ಸ್ಥಾನಗಳಲ್ಲಿರುವ ಇತರರು ಇಂಥ ಮಾತುಗಳನ್ನು ಹೇಳುವುದಿಲ್ಲ'' ಎಂದಿದ್ದಾರೆ.

ರಂಜನ್ ದತ್ತಾ ಮಾತು ಮುಂದುವರಿಸಿ, ''ಕಾಂಗ್ರೆಸ್‌ನ ಗೌರವ್ ಗೊಗೊಯ್ ಇಂಥ ಎಲ್ಲ ಕಾಲೆಳೆಯುವಿಕೆಗಳನ್ನು ಮೀರಿ ನಿಂತಿರುವಂತೆ ಹಾಗೂ ಶರ್ಮಾರು ಬೀಸುವ ಬಲೆಗೆ ಬೀಳದೆ ಜಾಗ್ರತರಾಗಿರುವಂತೆ ತೋರುತ್ತದೆ; ಮಾತ್ರವಲ್ಲದೆ ಓರ್ವ ಶುದ್ಧ ಚಾರಿತ್ರ್ಯದ ಮತ್ತು ಸಜ್ಜನ ನಾಯಕನ ಇಮೇಜನ್ನು ಗೊಗೊಯ್ ಅವರು ಬಿಂಬಿಸಿಕೊಂಡಿರುವಂತೆ ತೋರುತ್ತದೆ. ಬೇರೆ ಯಾರಾದರೂ ಆಗಿದ್ದಿದ್ದರೆ, ಹಿಮಂತ ಬಿಸ್ವ ಶರ್ಮಾರ ತಂತ್ರಕ್ಕೆ ಬಲಿಯಾಗುತ್ತಿದ್ದರು'' ಎಂದಿದ್ದಾರೆ.

ಅಸ್ಸಾಂ ಅಖಾಡವು ಅದ್ಯಾವ ಪರಿಯಲ್ಲಿ ಅಕ್ಷರಶಃ ಅಗ್ನಿಷ್ಟಿಕೆಯೇ ಆಗಿಬಿಟ್ಟಿದೆ ಎಂಬುದನ್ನು ಪುಷ್ಟೀಕರಿಸಲು ಇಷ್ಟು ಸಾಕಲ್ಲವೇ?!

ತ್ರಿಭಾಷಾ ಸೂತ್ರ ಒಪ್ಪಲ್ಲ

ತಂಜಾವೂರು: ಹಿಂದಿ ಹೇರಿಕೆಯ ಉದ್ದೇಶವನ್ನು ಒಳಗೊಂಡಿರುವ 'ತ್ರಿಭಾಷಾ ಸೂತ್ರ'ವನ್ನು ತಾವೆಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂದು

ತಮಿಳುನಾಡು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಒತ್ತಿಹೇಳಿದ್ದಾರೆ. ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ತಿರು ವೈಯಾರು ಕ್ಷೇತ್ರದಲ್ಲಿ ಡಿಎಂಕೆ ಅಭ್ಯರ್ಥಿ ದುರೈ ಚಂದ್ರಶೇಖರನ್ ಪರ ಪ್ರಚಾರ ಮಾಡುತ್ತಿದ್ದ ಅವರು, ''ರಾಷ್ಟ್ರೀಯ ಶಿಕ್ಷಣ ನೀತಿ ಯನ್ನು (ಎನ್‌ಇಪಿ) ಅಳವಡಿಸಿಕೊಳ್ಳುವಂತೆ ಕೇಂದ್ರ ಸರಕಾರವು ತಮಿಳುನಾಡಿನ ಮೇಲೆ ಒತ್ತಡ ಹೇರುತ್ತಿದೆ. ಆದರೆ ಹೀಗೆ ಮಾಡುವುದರಿಂದ ರಾಜ್ಯದಲ್ಲಿ ಹಿಂದಿ ಹೇರಿಕೆಗೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಹಾಗಾಗಿ ನಾವು ತಮಿಳು ಮತ್ತು ಇಂಗ್ಲಿಷ್ ಅನ್ನು ಒಳಗೊಂಡಿರುವ ದ್ವಿಭಾಷಾ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತೇವೆ'' ಎಂದು ಹೇಳಿದ್ದರ ಜತೆಗೆ, ''ದುರೈ ಚಂದ್ರಶೇಖರನ್ ಅವರು 50 ಸಾವಿರಕ್ಕೂ ಅಧಿಕ ಮತಗಳಿಂದ ಗೆದ್ದರೆ ತಂದೆ ಸ್ಟಾಲಿನ್‌ರಿಗೆ ಹೇಳಿ ಮಂತ್ರಿಗಿರಿ ಕೊಡಿಸುತ್ತೇನೆ'' ಎಂದೂ ಆಶ್ವಾಸನೆ ನೀಡಿ ದರು. ತಮಿಳುನಾಡಿನ ದ್ವಿಭಾಷಾ ಶಿಕ್ಷಣ ಪದ್ಧತಿ ಕುರಿತು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೀಡಿದ್ದ ಹೇಳಿಕೆಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಇತ್ತೀಚೆಗೆ ಟೀಕಿಸಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು.

ಖೇರಾ ಮೇಲೆ ಖಾರ

ಗುವಾಹಟಿ: ತಮ್ಮ ಪತ್ನಿ ಹಾಗೂ ಉದ್ಯಮಿ ರಿನಿಕಿ ಭುಯಾನ್

ಪವನ್ ಖೇರಾ

ಶರ್ಮಾ ವಿರುದ್ಧ ಆರೋಪ ಮಾಡಿದ್ದ ಕಾಂಗ್ರೆಸ್ಸಿಗ ಪವನ್ ಖೇರಾ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವು ದಾಗಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅಬ್ಬರಿಸಿದ್ದಾರೆ. ರಿನಿಕಿ ಅವರ ಬಳಿ ಈಜಿಪ್ಟ್, ಯುಎಇ, ಆಂಟಿಗುವಾ ಮತ್ತು ಬರ್ಬುಡಾ ದೇಶಗಳ ಪಾಸ್‌ಪೋರ್ಟ್‌ಗಳಿವೆ ಎಂದು ಪವನ್ ಖೇರಾ ಆರೋಪಿಸಿ ದ್ದರು. ಇದರಿಂದ ಕೆರಳಿರುವ ಹಿಮಂತ ಶರ್ಮಾ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್' (ಟ್ವಿಟರ್)ನಲ್ಲಿ, ''ಪವನ್ ಖೇರಾ ನಡೆಸಿದ ಪತ್ರಿಕಾಗೋಷ್ಠಿಯು ಕಾಂಗ್ರೆಸ್ ಪಕ್ಷದ ನಿರಾಶೆಯ ಪರಮಾವಧಿಯನ್ನು ತೋರಿಸುತ್ತದೆ. ಅವರ ಪ್ರತಿಯೊಂದು ಆರೋಪವೂ ದುರುದ್ದೇಶಪೂರಿತ, ಕಲ್ಪಿತ ಮತ್ತು ರಾಜಕೀಯ ಪ್ರೇರಿತವಾಗಿದ್ದು, ಅವನ್ನು ನಾನು ಸ್ಪಷ್ಟವಾಗಿ ತಳ್ಳಿಹಾಕುತ್ತೇನೆ. ಅಸ್ಸಾಮಿಗರನ್ನು ಹಾದಿತಪ್ಪಿಸುವ ಉದ್ದೇಶದ ಸುಳ್ಳುಗಳಿವು. ಇಂಥ ತಪ್ಪು ಮಾಹಿತಿಯನ್ನು ಹಂಚಿಕೊಳ್ಳುವವರು ಅದರ ಹೊಣೆಯನ್ನೂ ಹೊರಬೇಕಾಗುತ್ತದೆ. ಪವನ್ ಖೇರಾ ಅವರ ಸುಳ್ಳು ಆರೋಪಗಳು ಅಂತಿಮ ಹಂತಕ್ಕೆ ಬಂದಿವೆ, ಅವರು ಜೈಲಿಗೆ ಹೋಗಲಿದ್ದಾರೆ. ಅವರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಹೂಡುತ್ತೇನೆ'' ಎಂದು ಬರೆದುಕೊಂಡಿದ್ದಾರೆ.

ಮೋದಿ, ಪಿಣರಾಯಿ ಅಹಂಕಾರಿಗಳು

ತ್ರಿಶೂರ್: ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿಯವರು

ಕೆರಳಿ ಕೆಂಡವಾಗಿದ್ದಾರೆ. ಇಲ್ಲಿ ಚುನಾವಣಾ ಸಮಾವೇಶವನ್ನು ಉದ್ದೇ ಶಿಸಿ ಮಾತನಾಡುತ್ತಿದ್ದ ಅವರು, ''ಪ್ರಧಾನಿ ಮೋದಿ ಹಾಗೂ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇಬ್ಬರೂ ಅಹಂಕಾ ರಿಗಳು. ಜನರೊಂದಿಗೆ ಬೆರೆತು ಕೆಲಸ ಮಾಡುವುದರ ಬದಲಾಗಿ, ಜನರನ್ನು ತುಳಿದು ರಾಜನಂತೆ ದರ್ಬಾರು ನಡೆಸುವ ಚಿತ್ತಸ್ಥಿತಿಯನ್ನು ಇವರಿಬ್ಬರೂ ಹೊಂದಿದ್ದಾರೆ. ಕೇರಳದಲ್ಲಿ ಎಲ್‌ಡಿಎಫ್ ಮತ್ತು ಬಿಜೆಪಿಯ ಸಂಯೋಜಿತ ಶಕ್ತಿಯನ್ನು ಯುಡಿಎಫ್ ಮೈತ್ರಿಕೂಟ ಎದುರಿಸುತ್ತಿದೆ'' ಎಂದರು.

ಪಾಕ್‌ನಿಂದ ಬೆಂಬಲ: ಆರೋಪ

ಗುವಾಹಟಿ: ಕಾಂಗ್ರೆಸ್ ನಾಯಕರಾದ ಪವನ್ ಖೇರಾ ಮತ್ತು ಗೌರವ್ ಗೊಗೊಯ್ ಅವರು ನಡೆಸಿದ ಇತ್ತೀಚಿನ (ದೆಹಲಿ ಮತ್ತು ಗುವಾಹಟಿ) ಪತ್ರಿಕಾಗೋಷ್ಠಿಗಳಲ್ಲಿ ಬಳಸಿದ 'ವಸ್ತು-ವಿಷಯ'ಕ್ಕೆ ಪಾಕಿಸ್ತಾನದ ಸಾಮಾಜಿಕ ಮಾಧ್ಯಮಗಳ ಸಂಪರ್ಕವಿದೆ; ಅವು ಕಾಂಗ್ರೆಸ್‌ಗೆ ಬೆಂಬಲ ವ್ಯಕ್ತಪಡಿಸುತ್ತಿವೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಆರೋಪಿಸಿದ್ದಾರೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ಕಳೆದ 10 ದಿನಗಳಲ್ಲಿ ಪಾಕಿಸ್ತಾನದ ಚಾನೆಲ್‌ಗಳು ಅಸ್ಸಾಂ ಚುನಾವಣೆ ಕುರಿತಾಗಿ ಕನಿಷ್ಠ 11 ಟಾಕ್ ಶೋಗಳನ್ನು ನಡೆಸಿದ್ದು, 'ಕಾಂಗ್ರೆಸ್ ಗೆಲ್ಲಬೇಕು' ಎಂಬ ನಿರ್ಣಯವೇ ಪ್ರತಿ ಚರ್ಚೆಯಲ್ಲೂ ಹೊಮ್ಮಿದೆ. ಇದಕ್ಕೆ ಕಾನೂನು ಕ್ರಮ ಕೈಗೊಳ್ಳುತ್ತೇವೆ'' ಎಂದರು.

ಪೋಲ್ ಟ್ರ್ಯಾಕರ್ ಸಮೀಕ್ಷೆ

ಎಡರಂಗ ಸರಕಾರ ಬೀಳುತ್ತಂತೆ

ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಗೆ ಏಪ್ರಿಲ್ 9ರಂದು ಮತದಾನ ನಡೆಯಲಿದ್ದು, ಮೇ 4ಕ್ಕೆ ಫಲಿತಾಂಶ ಹೊರಬೀಳಲಿದೆ. ಈ ಚುನಾವಣೆಗೆ ಸಂಬಂಧಿಸಿ 'ಪೋಲ್ ಟ್ರ್ಯಾಕರ್' ಸಂಸ್ಥೆ ನಡೆಸಿದ ಸಮೀಕ್ಷೆಯ ಪ್ರಕಾರ, ಆಡಳಿತಾರೂಢ 'ಎಲ್‌ಡಿಎಫ್' ಅಧಿಕಾರದಿಂದ ಕೆಳಗಿಳಿಯಲಿದ್ದು, ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಮೈತ್ರಿಕೂಟ ಸ್ಪಷ್ಟ ಬಹುಮತವನ್ನು ಪಡೆಯಲಿದೆ.

ಹೀಗೊಂದು ಲೆಕ್ಕಾಚಾರ

140 ಒಟ್ಟು ಸ್ಥಾನಗಳು | 71 ಬಹುಮತಕ್ಕೆ ಬೇಕಿರುವ ಸ್ಥಾನಗಳು

ಮೈತ್ರಿಕೂಟ/ಪಕ್ಷ	ಸ್ಥಾನಗಳ ಅಂದಾಜು	ಮತಗಳ ಪ್ರಮಾಣ (ಶೇಕಡಾವಾರು)
ಯುಡಿಎಫ್	76-85	42.8-44.2
ಎಲ್‌ಡಿಎಫ್	55-60	37.5-39.5
ಎನ್‌ಡಿಎ	1-3	13.5-14.8
ಇತರರು	0	2.0-2.5

ಅಲೆ-ಅಭಿಮತಕ್ಕೆ ಕಾರಣ

ಯುಡಿಎಫ್ ಪರವಾದ ಅಲೆಗೆ ಪ್ರಮುಖ ಕಾರಣಗಳೇನು ಎಂಬುದನ್ನು ವಿಶ್ಲೇಷಿಸಿದಾಗ, ಸತತ 10 ವರ್ಷಗಳಿಂದ ಗದ್ದುಗೆಯಲ್ಲಿರುವ ಎಲ್‌ಡಿಎಫ್ ಕುರಿತಾಗಿ ಮತದಾರರಲ್ಲಿ ಬೇಸರ ಮೂಡಿ ಅವರು ಬದಲಾವಣೆಯನ್ನು ಬಯಸಿರುವುದು ಎದ್ದು ಕಾಣುತ್ತದೆ. ಸಿಪಿಎಂ ಹಾಗೂ ಬಿಜೆಪಿ ನಡುವೆ ಒಳ-ಒಪ್ಪಂದ ಏರ್ಪಟ್ಟಿದೆ ಎಂಬ 'ಗುಸು ಗುಸು' ಅಲ್ಪಸಂಖ್ಯಾತರಲ್ಲಿ ಕದಲಿಕೆಯನ್ನು ಉಂಟುಮಾಡಿದ್ದು, ಮುಸ್ಲಿಮರು ಮತ್ತು ಕ್ರೈಸ್ತರು ಯುಡಿಎಫ್ ಪರವಾಗಿ ದೊಡ್ಡಮಟ್ಟ ದಲ್ಲಿ ಧ್ರುವೀಕರಣಗೊಳ್ಳುವುದಕ್ಕೆ ಅದು ಕಾರಣವಾಗಿದೆ. ಇನ್ನು, ಶಬರಿಮಲೆ ದೇಗುಲ ವಿವಾದದ ಕುರಿತಾದ ಅಸಮಾಧಾನ, ಸರಕಾರ ವನ್ನು ಆವರಿಸಿರುವ ಭ್ರಷ್ಟಾಚಾರದ ಆರೋಪ ಹಾಗೂ ಹದಗೆಟ್ಟಿರುವ ಆರೋಗ್ಯ ಮೂಲಸೌಕರ್ಯ ಮುಂತಾದ ಅಂಶಗಳು ಯುಡಿಎಫ್ ಪಾಲಿಗೆ ವರವಾಗಿವೆ. ಬದಲಾವಣೆಯ ಗಾಳಿಯು ಈ ಸಲ ಜಾತಿ-ಸಮುದಾಯ ಹಾಗೂ ಭೌಗೋಳಿಕ ಎಲ್ಲೆಗಳನ್ನೂ ಮೀರಿ ಬೀಸುತ್ತಿರುವುದು ಯುಡಿಎಫ್ ಒಕ್ಕೂಟದ ತಳಹದಿಯನ್ನು ಭದ್ರವಾಗಿಸಿದೆ.

ನಗರಿಗರಿಗೆ ಶಶಿ ತರೂರ್ ಇಷ್ಟ

ಮುಂದಿನ ಮುಖ್ಯಮಂತ್ರಿ ಯಾರಾಗಬೇಕೆಂಬ ವಿಷಯದಲ್ಲಿ ಶಶಿ ತರೂರ್ ಅವರು ಶೇ.14.7ರಷ್ಟು ಮತಗಳೊಂದಿಗೆ ಕೊನೆಯ ಸ್ಥಾನದಲ್ಲಿದ್ದರೂ, ತಿರುವನಂತಪುರಂ ಸೇರಿದಂತೆ ನಗರ ಪ್ರದೇಶಗಳ ಸುಶಿಕ್ಷಿತರು ಹಾಗೂ ಅನಿವಾಸಿ ಭಾರತೀಯರು ಶಶಿ ತರೂರರ ನಾಯಕತ್ವವನ್ನು ಅಪೇಕ್ಷಿಸಿದ್ದಾರೆ ಎಂಬುದು ಗಮನಿಸಬೇಕಾದ ಸಂಗತಿ.

ಇವ ನಮ್ಮವ, ಇವ ನಮ್ಮವ..

ನಿಮ್ಮ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು? ಎಂಬ ಪ್ರಶ್ನೆಗೆ ಮನಬಿಚ್ಚಿಕೊಂಡ ಜನರ ಪ್ರಮಾಣ ಹೀಗಿದೆ:

- ರಮೇಶ್ ಚೆನ್ನಿತ್ತಲ (ಯುಡಿಎಫ್) : ಶೇ. 24.0
- ಪಿಣರಾಯಿ ವಿಜಯನ್ (ಎಲ್‌ಡಿಎಫ್) : ಶೇ. 22.3
- ವಿ.ಡಿ. ಸತೀಶನ್ (ಯುಡಿಎಫ್) : ಶೇ. 21.6
- ಕೆ.ಕೆ. ಶೈಲಜಾ (ಎಲ್‌ಡಿಎಫ್) : ಶೇ. 17.4
- ಶಶಿ ತರೂರ್ (ಯುಡಿಎಫ್) : ಶೇ. 14.7

ತ್ರಿಕೋನ ಸ್ಪರ್ಧೆಗೆ ತಿರುವನಂತಪುರಂ ಸಜ್ಜು

ಗುರುವಾರ ನಡೆಯಲಿರುವ ಕೇರಳಂ ವಿಧಾನಸಭಾ ಚುನಾವಣಾ ಕ್ಷೇತ್ರಗಳ ಪೈಕಿ ರಾಜಧಾನಿ ತಿರುವನಂತಪುರಂ ಜಿಲ್ಲೆ ತ್ರಿಕೋನ ಸ್ಪರ್ಧೆಗೆ ಸಜ್ಜಾಗಿದೆ. ರಾಜ್ಯದ ಹೆಚ್ಚಿನ ಕ್ಷೇತ್ರಗಳಲ್ಲಿ ಎಲ್‌ಡಿಎಫ್ -ಯುಡಿಎಫ್ ಮಧ್ಯೆಯೇ ನೇರ ಸ್ಪರ್ಧೆ ಇದ್ದರೂ, ರಾಜಧಾನಿಯಲ್ಲಿ ಹಲವಾರು ಕಡೆ ಈ ಸಲ ಕಾಣಸಿಗುತ್ತಿರುವುದು ಮೂರು ಒಕ್ಕೂಟಗಳ ನಡುವಿನ ಪ್ರಬಲ ಪೈಪೋಟಿಯ ಸ್ಪರ್ಧೆ.

ನರೇಂದ್ರ ಪಾರೆಕಟ್

ಸುಮಾರು 30 ಲಕ್ಷ ಮತದಾರರನ್ನು ಹೊಂದಿರುವ ಕೇರಳದ ದಕ್ಷಿಣ ತುದಿಯ ತಿರುವನಂತಪುರಂ ಜಿಲ್ಲೆಯ ಬಹುತೇಕ ವಿಧಾನಸಭಾ ಕ್ಷೇತ್ರಗಳು ಅಭಿವೃದ್ಧಿ ವಿಷಯದಲ್ಲಿ ಕಡೆಗಣನೆಯಾಗಿಲ್ಲ. ರಾಜ್ಯದ ಸೆಕ್ರೆಟೇರಿಯೇಟ್ (ವಿಧಾನ ಸೌಧ) ಅಲ್ಲಿರುವುದರಿಂದ ಬಹುತೇಕ ಎಲ್ಲಾ ಸೌಲಭ್ಯಗಳನ್ನೂ ಜಿಲ್ಲೆ ಹೊಂದಿದೆ. ವಿಶ್ವವಿಖ್ಯಾತ ಅನಂತ ಪದ್ಮನಾಭ ದೇಗುಲ, ಐ.ಟಿ ಪಾರ್ಕ್ ಮುಂತಾದೆಡೆಗೆ ಸಾಗಲು ಉತ್ತಮ ಸಾರಿಗೆ ವ್ಯವಸ್ಥೆಯೂ ಅಲ್ಲಿದೆ.

ತಿರುವನಂತಪುರಂ ಜಿಲ್ಲೆಯಲ್ಲಿರುವ ಒಟ್ಟು ಹದಿನಾಲ್ಕು ವಿಧಾನಸಭಾ ಕ್ಷೇತ್ರಗಳೆಂದರೆ ಅರುವಿಕ್ಕರ, ಆಟ್ಟಿಂಗಲ್, ಚಿರಯಂಗೀಲ್, ಕಾಟ್ಟಾಕಡ, ಕಝುಕ್ಕೂಟ್ಟಂ, ಕೋವಳಂ, ನೆಡುಮಂಙಾಡ್, ನೇಮಮ್, ನೆಯ್ಯಾಟಿಂಗೆರ, ಪಾರಶ್ಶಾಲ, ತಿರುವನಂತಪುರಂ, ವಾಮನಪುರಂ, ವರ್ಕಲ ಮತ್ತು ವಟ್ಟಿಯೂರ್‌ಕಾವ್.

ರಂಗೇರಿರುವ ಕಝುಕ್ಕೂಟ್ಟಂ ಕ್ಷೇತ್ರ: ಕಝುಕ್ಕೂಟಂ ವಿಧಾನಸಭಾ ಕ್ಷೇತ್ರದಲ್ಲಿ ಕೇರಳ ಎಲ್‌ಡಿಎಫ್ ಸರಕಾರದಲ್ಲಿ ಸಚಿವರಾಗಿದ್ದ ಕಡನಂಪಳ್ಳಿ ಸುರೇಂದ್ರನ್ ಈ ಸಲ ಸ್ಪರ್ಧಿಸುತ್ತಿದ್ದಾರೆ. 2021ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಈ ಕ್ಷೇತ್ರದಲ್ಲಿ 2ನೇ ಸ್ಥಾನ ಗಳಿಸಿದ್ದು, ಈ ಬಾರಿ ಕಡನಂಪಳ್ಳಿ ವಿರುದ್ಧ ಬಿಜೆಪಿಯಿಂದ ಮಾಜಿ ಕೇಂದ್ರ ಸಚಿವ ವಿ. ಮುರಳೀಧರನ್ ಕಣದಲ್ಲಿದ್ದಾರೆ. ಶರತ್‌ಚಂದ್ರ ಪ್ರಸಾದ್ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ.

ಅನಂತಪದ್ಮನಾಭ ದೇವಾಲಯ.

2016ರಲ್ಲಿ ಬಿಜೆಪಿ ಕೇರಳದಲ್ಲಿ ಗೆದ್ದಿದ್ದ ಏಕೈಕ ವಿಧಾನಸಭಾ ಕ್ಷೇತ್ರವಾದ ನೇಮಮ್‌ನಲ್ಲಿ ಈ ಬಾರಿ ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಸ್ಪರ್ಧೆ ಮಾಡುತ್ತಿದ್ದಾರೆ. ಎಡರಂಗದ ಅಭ್ಯರ್ಥಿಯಾಗಿ ಸಚಿವ ಶಿವನ್ ಕುಟ್ಟಿ ಇದೇ ಕ್ಷೇತ್ರದಿಂದ ಮತ್ತೆ ಪುನರಾಯ್ಕೆ ಬಯಸಿದ್ದು, ಯುಡಿಎಫ್‌ನಿಂದ ಕೆ.ಎಸ್. ಶಬರಿನಾಥನ್ ಅಲ್ಲಿ ಅಭ್ಯರ್ಥಿಯಾಗಿ ಚುನಾವಣಾ ಕಣವನ್ನು ರಂಗೇರಿಸಿದ್ದಾರೆ.

ವಟ್ಟಿಯೂರ್‌ಕಾವ್‌ನಲ್ಲಿ ಪ್ರಬಲ ಸ್ಪರ್ಧೆ: ತಿರುವನಂತಪುರಂ ಜಿಲ್ಲೆಯ ಮತ್ತೊಂದು ಜಿದ್ದಾಜಿದ್ದಿನ ಕ್ಷೇತ್ರ ಎಂದೆನಿಸಿದೆ ವಟ್ಟಿಯೂರ್‌ಕಾವ್. ಅಲ್ಲಿ ಕಳೆದ ಸಲ ಬಿಜೆಪಿ 2ನೇ ಸ್ಥಾನ ಪಡೆದಿದ್ದು, ಈ ಸಲ ಆ ಪಕ್ಷದಿಂದ ರಾಜ್ಯದ ಮಾಜಿ ಡಿ.ಜಿ.ಪಿ ಆರ್. ಶ್ರೀಲೇಖಾ ಕಣದಲ್ಲಿದ್ದರೆ, ಯುಡಿಎಫ್‌ನಿಂದ ಮಾಜಿ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರ ಮಗ, ಹಿರಿಯ ಕಾಂಗ್ರೆಸ್ ನಾಯಕ ಕೆ. ಮುರಳೀಧರನ್ ಸ್ಪರ್ಧಿಸಿದ್ದಾರೆ. ಎಡರಂಗವು ವಿ.ಕೆ. ಪ್ರಶಾಂತ್ ಅವರನ್ನು ಈ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ.

ಅದೇ ರೀತಿ ತಿರುವನಂತಪುರಂ ವಿಧಾಸಭಾ ಕ್ಷೇತ್ರದಲ್ಲೂ ಈ ಬಾರಿ ಜಿದ್ದಾಜಿದ್ದಿನ ಸ್ಪರ್ಧೆ ಇದೆ. ಕಳೆದ 6 ತಿಂಗಳ ಹಿಂದೆಯಷ್ಟೇ ತಿರುವನಂತಪುರಂ ಮಹಾನಗರಪಾಲಿಕೆಯನ್ನು ಪ್ರಪ್ರಥಮ ಬಾರಿಗೆ ವಶಪಡಿಸಿಕೊಂಡಿದ್ದ ಬಿಜೆಪಿ ಈ ಬಾರಿ ವಿಧಾನಸಭಾ ಕ್ಷೇತ್ರ ಗೆಲ್ಲಲು ಶತಪ್ರಯತ್ನ ಮುಂದುವರಿಸುತ್ತಿದೆ. ಇಲ್ಲಿ ಸಿ.ಪಿ. ಜಾನ್ ಯುಡಿಎಫ್ ಅಭ್ಯರ್ಥಿಯಾಗಿದ್ದು, ಸುಧೀರ್ ಕರಮನ ಎಲ್‌ಡಿಎಫ್ ಒಕ್ಕೂಟದಿಂದಲೂ, ಕರಮನ ಜಯನ್ ಬಿಜೆಪಿಯಿಂದಲೂ ಕಣಕ್ಕಿಳಿದಿದ್ದಾರೆ.

ತಿರುವನಂತಪುರಂನಲ್ಲಿರುವ ಕೋವಳಂ ಒಂದು ಉತ್ತಮ ಪ್ರವಾಸೋದ್ಯಮ ಕೇಂದ್ರ. ಅಲ್ಲಿನ ಸಮುದ್ರ ಕಿನಾರೆ ಕೇರಳದಲ್ಲೇ ಅತ್ಯಂತ ಪ್ರಖ್ಯಾತಿ ಪಡೆದಿದೆ. ಹಾಗಾಗಿ ದಕ್ಷಿಣ ಕೇರಳಕ್ಕೆ ಯಾರೇ ಪ್ರವಾಸ ಹೋಗಲಿ, ಕೋವಳಂ ಬೀಚ್ ನೋಡಿ ಬರದವರು ಯಾರೂ ಇಲ್ಲ. ಜಿಲ್ಲೆಯ ಉತ್ತಮ ಒಂದು ಆದಾಯದ ಮೂಲವೂ ಅದಾಗಿದೆ. ರಾಜ್ಯ ಸರಕಾರವು ಕೋವಳಂ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತಮ ಕೊಡುಗೆ ನೀಡಿದ್ದು, ಅಲ್ಲಿ ಈ ಸಲ ಕಾಂಗ್ರೆಸ್‌ನ ವಿನ್ಸೆಂಟ್ ಮತ್ತು ಎಡರಂಗದ ಭಗತ್ ರಫುಸ್ ಮಧ್ಯೆ ನೇರ ಸ್ಪರ್ಧೆ ಇದೆ.

ಆಟ್ಟಿಂಗಲ್ ವಿಧಾನಸಭಾ ಕ್ಷೇತ್ರದಲ್ಲಿ ಯುಡಿಎಫ್-ಎಲ್‌ಡಿಎಫ್ ಮತ್ತು ಬಿಜೆಪಿಯ ಮಧ್ಯೆ ಈ ಬಾರಿ ತುರುಸಿನ ಸ್ಪರ್ಧೆ ಇದೆ. ಸಂತೋಷ್ ಭದ್ರನ್ ಕಾಂಗ್ರೆಸ್ ಅಭ್ಯರ್ಥಿ ಯಾಗಿ ಅಲ್ಲಿ ಸ್ಪರ್ಧಾಕಣದಲ್ಲಿದ್ದರೆ, ಎಲ್‌ಡಿಎಫ್ ಒ.ಎಸ್. ಅಂಬಿಕಾ ಅವರನ್ನು ಮತ್ತು ಬಿಜೆಪಿಯು ಪಿ. ಸುಧೀರ್ ಅವರನ್ನು ಕಣಕ್ಕಿಳಿಸಿದೆ.

ಕೇರಳದ ಅತ್ಯಂತ ದಕ್ಷಿಣ ತುತ್ತತುದಿಯ ನೆಯ್ಯಾಟಿಂಙರ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಸನಲ್ ಅವರು ಯುಡಿಎಫ್ ಅಭ್ಯರ್ಥಿಯಾಗಿದ್ದು, ಸಿ.ಕೆ ಹರಿದಾಸನ್ ಎಡರಂಗದಿಂದ ಮತ್ತು ಗಿರೀಶ್ ನೆಯ್ಯರ್ ಬಿಜೆಪಿಯಿಂದ ಸ್ಪರ್ಧಿಸುತ್ತಿದ್ದಾರೆ.

3 ಪಕ್ಷಗಳಿಗೂ ರಾಜಧಾನಿ ಗೆಲುವು ಪ್ರತಿಷ್ಠೆಯ ಕಣ

ಪ್ರತೀಸಲದಂತೆ ಕೇರಳಂನ ಮೂರೂ ಪಕ್ಷಗಳೂ ಈ ಸಲವೂ ರಾಜ್ಯ ರಾಜಧಾನಿ ತಿರುವನಂತಪುರ ಜಿಲ್ಲೆಯಲ್ಲಿರುವ ಎಲ್ಲಾ ವಿಧಾನಸಭಾ ಕ್ಷೇತ್ರಗಳನ್ನು ಪ್ರತಿಷ್ಠೆಯ ಕಣಗಳೆಂದೇ ತಿಳಿದಿವೆ. ಅಲ್ಲಿ ಇರುವ ಒಟ್ಟು ಹದಿನಾಲ್ಕು ವಿಧಾನಸಭಾ ಕ್ಷೇತ್ರಗಳ ಪೈಕಿ ಆಡಳಿತರೂಢ ಎಲ್‌ಡಿಎಫ್-7, ಯುಡಿಎಫ್-5 ಮತ್ತು ಬಿಜೆಪಿ-2 ಸ್ಥಾನಗಳನ್ನು ಗೆಲ್ಲಲಿವೆ ಎಂದು ಹೆಚ್ಚಿನ ಸಮೀಕ್ಷೆಗಳು ಬಹಿರಂಗಪಡಿಸಿವೆ.

ಪ್ರಧಾನಿ ಮೋದಿ ಬಾಯಿ ಬಿಡಲಿಲ್ಲ: ದೀದಿ ಕಿಡಿ

ಚೆತುವಾದಹರಿ: ಭಾರತವು ಭವಿಷ್ಯದಲ್ಲಿ ಪಾಕಿಸ್ತಾನದ ನೆಲದಲ್ಲಿ

ಕಾರ್ಯಾಚರಣೆ ನಡೆಸಲು ಮುಂದಾದರೆ, ಕೋಲ್ಕತ್ತಾದ ಮೇಲೆ ತಮ್ಮ ಕಡೆಯಿಂದ ದಾಳಿಯಾಗುತ್ತದೆ ಎಂಬುದಾಗಿ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಬೆದರಿಕೆ ಹಾಕಿದ್ದರೂ, ಪ್ರಧಾನಿ ನರೇಂದ್ರ ಮೋದಿ ಈ ಕುರಿತು ಮಾತನಾಡುತ್ತಿಲ್ಲ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೆಂಡ ಕಾರಿದ್ದಾರೆ. ಮಮತಾ ಮುಂದುವರಿದು, ''ಪ್ರಧಾನಿ ಮೋದಿಯವರು ಚುನಾ ವಣೆಗಾಗಿ ಬಂಗಾಳವನ್ನು ಗುರಿಯಾಗಿಸಿಕೊಂಡು ಪ್ರಚಾರ ಮಾಡು ತ್ತಿದ್ದಾರೆ; ಆದರೆ ಇಂಥ ಬೆದರಿಕೆ ಹಾಕಿರುವ ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಅವರೇಕೆ ಹೇಳುತ್ತಿಲ್ಲ'' ಎಂದು ಪ್ರಶ್ನಿಸಿ, ''ದೇಶದ ಮೇಲಿನ ಬೆದರಿಕೆಯನ್ನು ವಿರೋಧಿಸುವಂತೆಯೇ ಕೋಲ್ಕತ್ತದ ಮೇಲಿನ ದಾಳಿಯ ಹೇಳಿಕೆಯನ್ನೂ ನಾವು ಖಂಡಿಸು ತ್ತೇವೆ'' ಎಂದರು.

ದಾರಿ ತಪ್ಪಿಸುತ್ತಿದ್ದಾರೆ: ಖರ್ಗೆ

ಇಡುಕ್ಕಿ: ಪ್ರಧಾನಿ ಮೋದಿ ಹಾಗೂ ಪಿಣರಾಯಿ ವಿಜಯನ್ ಇಬ್ಬರೂ

ಒಂದೇ ಹಾದಿಯಲ್ಲಿದ್ದು, ಕೇರಳದ ಜನರ ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ. ವಿಧಾನಸಭಾ ಚುನಾವಣೆ ನಿಮಿತ್ತ ಇಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ''ಹೆಚ್ಚು ಸಂವೇದನಾಶೀಲರೂ ವಿದ್ಯಾವಂತರೂ ಆಗಿರುವ ಕೇರಳದ ಜನರನ್ನು ಯಾರೂ ಗೊಂದಲಗೊಳಿಸಲಾಗುವುದಿಲ್ಲ. ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರಕಾರವು ಕಳೆದ 10 ವರ್ಷಗಳಿಂದ ಭರವಸೆಗಳನ್ನು ನೀಡುತ್ತಿದೆಯಷ್ಟೇ, ಆದರೆ ಅವು ಜನರಿಗೆ ತಲುಪಿಲ್ಲ. ತೀವ್ರ ಸಂಕಷ್ಟದಲ್ಲಿ ಸಿಲುಕಿರುವ ಚಹಾ ಮತ್ತು ಏಲಕ್ಕಿ ತೋಟಗಳ ಕಾರ್ಮಿಕರಿಗೆ ಆರ್ಥಿಕ ನೆರವು ನೀಡುವ ಸರಕಾರದ ಭರವಸೆ ನೆರವೇರಿಲ್ಲ'' ಎಂದು ಕಿಡಿ ಕಾರಿದರು.

ವಿಶ್ವವಾಣಿ 07-04-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ದುಃಖದ ನಂತರವೇ ಸುಖ

• ಅರವಿಂದ ಜಿ. ಜೋಷಿ, ಮೈಸೂರು

ಯಾರು ತಾನೇ ಬದುಕಿನಲ್ಲಿ
ಸುಖಕ್ಕಾಗಿ ಹಂಬಲಿಸಲ್ಲ?
ಆದರೆ ಬಯಸಿದ ಸುಖ
ಅಷ್ಟು ಸುಲಭದಲಿ
ದೊರೆಯಲ್ಲ ಎಂಬುದು
ಯಾಕೆ ಗೊತ್ತಿಲ್ಲ?...

ಇರುವ ದುಃಖ ಅದಕೆ
ದಾರಿ ಮಾಡಿಕೊಟ್ಟಾಗಲೇ
ಸುಖ ಸಲೀಸಾಗಿ ಬರುವುದೆಂದು
ಯಾಕೆ ಅರಿತಿಲ್ಲ?...

ನೆರಳನು ಆನಂದಿಸುವ ನಾವು
ಮಳೆಗೇಕೆ ಹೆದರುವೆವು
ಎಂಬುದು ತಿಳಿದಿಲ್ಲವಲ್ಲ?...

ಆದರೆ ಮಣ್ಣಲ್ಲೇ ಬೆಳೆದು,
ಎಲ್ಲವನೂ ಸಹಿಸುವ
ಹೂಗಳು ಅರಳಿ ನಗುತಿರುತ್ತವೆ
ಎಂಬುದು ಯಾಕೆ ಗೊತ್ತಿಲ್ಲ?...

ಎತ್ತರದ ಶಿಖರ ಏರಿ
ಸಾಹಸ ಮಾಡುವಾಗ
ಅಗಣಿತ ನೋವು ಸಹಿಸದೇ
ಇರಲಾಗುವುದಿಲ್ಲ...

ನಿಜವಾದ ಸುಖವನ್ನು
ಅನುಭವಿಸುವ ಮುನ್ನ
ಸಾಕಷ್ಟು ಕಂಬನಿ ಹರಿಸಬೇಕು
ಎಂಬುದು ಏಕೆ ಗೊತ್ತಿಲ್ಲ?...

ಎಂಥ ಕರಾಳ ರಾತ್ರಿಯಾದರೂ
ತನ್ನ ಅವಧಿಯ ನಂತರ
ನಿಚ್ಚಟ ಬೆಳಕನ್ನು ನೀಡದಿರಲ್ಲ...

ಅಂತೆಯೇ ನೋವು ಹೆಚ್ಚಿದಾಗ
ಅವು ಮುಂದಿನ ಸುಖದ ಸಂಕೇತ
ಎಂದು ಬಿಡಿಸಿ ಹೇಳಬೇಕಿಲ್ಲ....

ಹೀಗಾಗಿ ಪ್ರತಿ ದುಃಖದ ನಂತರ
ಸುಖ ತಾನಾಗಿಯೇ ಬರುವುದು
ಎಂಬ ಮಾತು ಸುಳ್ಳಾಗುವುದಿಲ್ಲ...

ಅಕ್ರಮ-ಪರಾಕ್ರಮ!

• ಎಚ್. ಪ್ರಹ್ಲಾದ ರಾವ್, ಬೆಂಗಳೂರು

ಮಧ್ಯಪ್ರಾಚ್ಯದಲ್ಲಿ
ಆಕಾಶ ತುಂಬಿದೆ
ಕ್ಷಿಪಣಿಗಳು ಡ್ರೋನ್‌ಗಳು...

ನೆಲದಲ್ಲಿ ಬದುಕುಳಿದವರ
ನಿರಂತರ ಗೋಳು...

ದಶಕಗಳ ಅಭಿವೃದ್ಧಿಯ
ನೆಲಸಮ ಮಾಡುವ ಕೃತ್ಯ...

ಬೇರೊಂದೆಡೆ- ಅದೇ ಆಕಾಶದಲ್ಲಿ
ನಾಸಾದ ಆರ್ಟೆಮಿಸ್-2 ಚಂದ್ರನೆಡೆ
ಸೀದಾ ದೌಡಾಯಿಸಿದೆ,
ಇಲ್ಲದೆ ಯಾವುದೇ ಅಡೆತಡೆ
ಬಾಹ್ಯಾಕಾಶ ವಿಜ್ಞಾನದ ಪರಾಕಾಷ್ಠೆ
ಇಲ್ಲಿಲ್ಲ ಯಾವುದೇ ಕುತಂತ್ರ ಕುಚೇಷ್ಟೆ...

ಮನದ ಡೊಂಕು: ಲೋಕದ ಸಂಕಟ

• ಲಕ್ಷ್ಮೀಕಾಂತ್ ಎಲ್.ವಿ., ತುಮಕೂರು

ಇಂದಿನ ಜಗತ್ತು ತಾಂತ್ರಿಕವಾಗಿ ಅತ್ಯುನ್ನತ ಶಿಖರದಲ್ಲಿದ್ದರೂ, ಮಾನವೀಯತೆಯ ದೃಷ್ಟಿಯಿಂದ ಅಧೋಗತಿಗೆ ಇಳಿಯುತ್ತಿದೆ. ರಷ್ಯಾ-ಉಕ್ರೇನ್ ಯುದ್ಧದಿಂದ ಹಿಡಿದು ಇಸ್ರೇಲ್-ಪ್ಯಾಲೆಸ್ತೀನ್ ಸಂಘರ್ಷದವರೆಗೆ, ಗಡಿಗಳ ಮೇಲಿನ ಹಕ್ಕಿನ ಚಲಾವಣೆಯಿಂದ ಹಿಡಿದು ಧರ್ಮದ ಹೆಸರಿನಲ್ಲಿ ನಡೆಯುವ ದ್ವೇಷದವರೆಗೆ ಎಲ್ಲೆಡೆ ಅಶಾಂತಿಯ ಕಾರ್ಮೋಡ ಕವಿದಿದೆ. ಈ ಸಂಘರ್ಷಗಳಿಗೆ ಮೂಲ ಕಾರಣ ಭೌಗೋಳಿಕ ಅಂತರವಲ್ಲ, ಬದಲಿಗೆ ಮನುಷ್ಯನ ಮನಸ್ಸಿನೊಳಗಿನ ಕಲ್ಮಶ. 12ನೇ ಶತಮಾನದ ಬಸವಾದಿ ಶರಣರು ಅಂದೇ ಸಾರಿದ 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ' ಎಂಬ ವಾಣಿಯು ಇಂದಿನ ಜಾಗತಿಕ ಬಿಕ್ಕಟ್ಟಿಗೆ ಏಕೈಕ ಮದ್ದಾಗಿದೆ. ಲೋಕವನ್ನು ಸರಿಪಡಿಸಲು ಮುಂದಾಗುವ ಮೊದಲು ವ್ಯಕ್ತಿಯು ತನ್ನ ಅಂತರಂಗದ ಡೊಂಕನ್ನು ಸರಿಪಡಿಸಿಕೊಳ್ಳಬೇಕೆಂಬ ಆಶಯವೇ ಇಂದಿನ ಜಗತ್ತಿಗೆ ಅತ್ಯಗತ್ಯವಾದ ಸಂಜೀವಿನಿ.

ಸಂಘರ್ಷದ ಮೂಲ

ಜಾಗತಿಕ ಸಂಘರ್ಷಗಳ ಮೂಲವನ್ನು ಕೆದಕುತ್ತಾ ಹೋದರೆ ಅಲ್ಲಿ ನಮಗೆ ಕಾಣುವುದು ಮನುಷ್ಯನ ಅತಿಯಾದ ಅಹಂಕಾರ, ಅಧಿಕಾರ ಲಾಲಸೆ ಮತ್ತು 'ನಾನು-ನನ್ನದು' ಎಂಬ ಮಮಕಾರ. ಶರಣರ ಸಾಹಿತ್ಯವು ಸದಾ ಒತ್ತಿಹೇಳುವುದು ಅರಿವಿನ ಬಗ್ಗೆ. ಅರಿವು ಎಂದರೆ ಕೇವಲ ಅಕ್ಷರ ಜ್ಞಾನವಲ್ಲ, ಅದು ತನ್ನನ್ನು ತಾನು ಅರಿಯುವ ಪ್ರಕ್ರಿಯೆ. ಇಂದು ದೇಶ ದೇಶಗಳ ನಡುವೆ ಭುಗಿಲೆದ್ದಿರುವ ಯುದ್ಧಗಳು ಕೇವಲ ಭೂಮಿಗಾಗಿ ನಡೆಯುತ್ತಿಲ್ಲ, ಅವುಗಳ ಹಿಂದೆ ಅಹಂನ ಪ್ರದರ್ಶನವಿದೆ. ಶರಣರು ಹೇಳುವಂತೆ, ಅಂತರಂಗ ಶುದ್ಧಿ ಇಲ್ಲದವನಿಗೆ ಬಹಿರಂಗದ ಆಚಾರವೇಕೆ? ಒಬ್ಬ ವ್ಯಕ್ತಿ ಅಥವಾ ರಾಷ್ಟ್ರದ ನಾಯಕ ತನ್ನೊಳಗಿನ ದ್ವೇಷ, ಅಸೂಯೆ ಮತ್ತು ಸ್ವಾರ್ಥವನ್ನು ಗೆಲ್ಲದ ಹೊರತು, ಶಾಂತಿ ಸ್ಥಾಪನೆಯ ಮಾತುಗಳೆಲ್ಲವೂ ಕೇವಲ ತೋರಿಕೆಯ ಪ್ರಹಸನಗಳಾಗುತ್ತವೆ.

ವರ್ತಮಾನದ ಜಗತ್ತಿನಲ್ಲಿ ನಾವು ಶಾಂತಿ ಮಾತುಕತೆಗಳಿಗಾಗಿ ಕೋಟ್ಯಂತರ ರುಪಾಯಿ ವೆಚ್ಚ ಮಾಡುತ್ತೇವೆ, ವಿಶ್ವಸಂಸ್ಥೆಯಂಥ ಸಂಸ್ಥೆಗಳಲ್ಲಿ ಚರ್ಚೆ ನಡೆಸುತ್ತೇವೆ. ಆದರೆ, ಈ ಚರ್ಚೆಗಳಲ್ಲಿ ಭಾಗವಹಿಸುವ ವ್ಯಕ್ತಿಗಳ ಮನಸ್ಸಿನಲ್ಲಿ ಪ್ರಾಮಾಣಿಕತೆ ಮತ್ತು ಪರಸ್ಪರ ಗೌರವ ಇಲ್ಲದಿದ್ದರೆ ಆ ಮಾತುಕತೆಗಳು ವ್ಯರ್ಥ. 'ತನ್ನ ತಾನರಿಯುವುದು' ಎಂಬ ಶರಣರ ಪರಿಕಲ್ಪನೆಯು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವ ಮತ್ತು ತಿದ್ದಿಕೊಳ್ಳುವ ವಿನಯವನ್ನು ಕಲಿಸುತ್ತದೆ. ಈ ವಿನಯವೇ ಜಾಗತಿಕ ಸಂಘರ್ಷಗಳನ್ನು ತಡೆಯಬಲ್ಲ ಮೊದಲ ಆಯುಧ.

ನೈತಿಕ ಹೊಣೆಗಾರಿಕೆ

ಸಾಮಾಜಿಕ ಮಾಧ್ಯಮಗಳು ವಿಜೃಂಭಿಸುತ್ತಿರುವ ಇಂದಿನ ಯುಗದಲ್ಲಿ ನಾವೆಲ್ಲರೂ ಲೋಕದ ಡೊಂಕನ್ನು ತಿದ್ದುವ ವಿಮರ್ಶಕರಾಗಿದ್ದೇವೆ. ಪಕ್ಕದ ಮನೆಯವರ ತಪ್ಪು ಹುಡುಕುವುದು ಅಥವಾ ದೂರದ ದೇಶದ ರಾಜಕೀಯವನ್ನು ಟೀಕಿಸುವುದು ನಮಗೆ ಸುಲಭವಾದ ಕೆಲಸ. ಆದರೆ, ನಮ್ಮೊಳಗಿರುವ ಕೋಪ, ಲಂಚಗುಳಿತನ, ಜಾತಿವಾದ ಅಥವಾ ದ್ವೇಷದ ಬಗ್ಗೆ ನಾವು ಮೌನ ವಹಿಸುತ್ತೇವೆ. ಶರಣರು ಬೋಧಿಸಿದ 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ' ಎಂಬ ಶೀಲಗಳು ಕೇವಲ ವೈಯಕ್ತಿಕ ನೈತಿಕತೆಯಲ್ಲ, ಅವು ಜಾಗತಿಕ ಶಾಂತಿಯ ಸಂವಿಧಾನಗಳು. ಜಾಗತಿಕ ಮಟ್ಟದಲ್ಲಿ ನಡೆಯುವ ಶಸ್ತ್ರಾಸ್ತ್ರ ಪೈಪೋಟಿ, ಪರಿಸರ ವಿನಾಶ ಮತ್ತು ಆರ್ಥಿಕ ಶೋಷಣೆಗಳೆಲ್ಲವೂ ಮಾನವನ ಅತೃಪ್ತ ಮನಸ್ಸಿನ ಪ್ರತಿಫಲನಗಳೇ ಆಗಿವೆ. ಬಸವಣ್ಣನವರು ಹೇಳಿದಂತೆ, ಇಡೀ ಜಗತ್ತು ಒಂದು ಕಾಯಕಶಾಲೆ. ಇಲ್ಲಿ ಪ್ರತಿಯೊಬ್ಬರೂ ತಮ್ಮ ಪಾಲಿನ ಕೆಲಸವನ್ನು ಪ್ರಾಮಾಣಿಕ ’ ವಾಗಿ ಮಾಡುತ್ತಾ, ಇತರರನ್ನು ಗೌರವಿಸಬೇಕು. 'ಇವ ನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ' ಎಂಬ ಭಾವನೆ ಮೂಡಿದಾಗ ಮಾತ್ರ ಗಡಿರೇಖೆಗಳ ನಡುವಿನ ಸಂಘರ್ಷ ತಗ್ಗಲು ಸಾಧ್ಯ. ಅನ್ಯರನ್ನು ಶತ್ರುಗಳೆಂದು ಭಾವಿಸುವ ಮೊದಲು, ನಮ್ಮೊಳಗಿನ ಅರಿಷಡ್ವರ್ಗಗಳನ್ನು ಶತ್ರುಗಳೆಂದು ಗುರುತಿಸಿ ಅವುಗಳನ್ನು ತಿದ್ದಿಕೊಳ್ಳುವುದೇ ಶರಣರ ದರ್ಶನದ ಸಾರ.

ವರ್ತಮಾನದಲ್ಲಿ ಬೇಕಿರುವುದೇನು?

ವರ್ತಮಾನದ ಜಗತ್ತಿಗೆ ಬೇಕಿರುವುದು ಕೇವಲ ಆರ್ಥಿಕ ಸುಧಾರಣೆಗಳಲ್ಲ, ಬದಲಿಗೆ ಆಧ್ಯಾತ್ಮಿಕ ಮತ್ತು ನೈತಿಕ ಕ್ರಾಂತಿ. ಶರಣರ ಅನುಭವ ಮಂಟಪವು ಪ್ರಜಾಪ್ರಭುತ್ವದ ಆದ್ಯ ರೂಪವಾಗಿತ್ತು. ಅಲ್ಲಿ ಚರ್ಚೆಗಳಿದ್ದವು, ಭಿನ್ನಾಭಿಪ್ರಾಯಗಳಿದ್ದವು, ಆದರೆ ದ್ವೇಷವಿರಲಿಲ್ಲ. ಇಂದಿನ ರಾಜತಾಂತ್ರಿಕ ಸಂಬಂಧಗಳಲ್ಲಿ ಅತೃಪ್ತಿ ಮೂಡಲು ಕಾರಣವೆಂದರೆ ಪಾರದರ್ಶಕತೆಯ ಕೊರತೆ. 'ನುಡಿದಂತೆ ನಡೆ' ಎಂಬ ಶರಣರ ತತ್ವವನ್ನು ನಾಯಕರು ಅಳವಡಿಸಿಕೊಂಡರೆ, ಎಲ್ಲಾ ಒಪ್ಪಂದಗಳು ಕೇವಲ ಕಾಗದದ ಮೇಲೆ ಉಳಿಯದೆ ಜಾರಿಗೆ ಬರುತ್ತವೆ.

ಸಂಘರ್ಷಗಳ ಪಾಲಿನ ಮದ್ದಾಗಿ ನಾವು ನೋಡಬೇಕಿರುವುದು ದಾಸೋಹ ಮನೋಭಾವವನ್ನು. ಸಂಗ್ರಹಬುದ್ಧಿಯೇ ಸಂಘರ್ಷಕ್ಕೆ ನಾಂದಿ. ಅಧಿಕಾರವನ್ನೋ ಅಥವಾ ಸಂಪತ್ತನ್ನೋ ತನಗೊಬ್ಬನಿಗೇ ಬೇಕೆಂದು ಬಯಸುವ ಮನಸ್ಥಿತಿ ಯುದ್ಧಕ್ಕೆ ಕಾರಣವಾಗುತ್ತದೆ. 'ನಾನು ಮತ್ತು ನನ್ನದು' ಎಂಬುದನ್ನು ಬಿಟ್ಟು 'ನಾವು ಮತ್ತು ನಮ್ಮದು' ಎಂಬ ಸಮಷ್ಟಿ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದೇ ಮನದ ಡೊಂಕನ್ನು ತಿದ್ದಿಕೊಳ್ಳುವ ಮಾರ್ಗ. ಇಂದಿನ ಯುವಪೀಳಿಗೆಯು ಈ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಮುಂದಿನ ಜಗತ್ತು ಯುದ್ಧಮುಕ್ತವಾಗಲು ಸಾಧ್ಯ.

ನಮ್ಮೊಳಗಿನ ಬೆಳಕು ಜಗತ್ತನ್ನು ಬೆಳಗಲಿ

ಕೊನೆಯದಾಗಿ, ಲೋಕದ ಡೊಂಕನ್ನು ತಿದ್ದುವ ಉಸಾಬರಿಗಿಂತ ಮೊದಲು ನಮ್ಮ ಮನಸ್ಸಿನ ಅಂಗಳವನ್ನು ಸ್ವಚ್ಛಗೊಳಿಸಿಕೊಳ್ಳುವುದು ಆಗಬೇಕಿರುವ ತುರ್ತುಕಾರ್ಯವಾಗಿದೆ. ಶರಣರು ನಮಗೆ ತೋರಿದ ಮಾರ್ಗವು ಅತ್ಯಂತ ಸರಳವಾದುದು ಹಾಗೂ ಅಷ್ಟೇ ಕಠಿಣವಾದುದು. ಅದು ಆತ್ಮವಿಮರ್ಶೆಯ ಮಾರ್ಗ. ನಾವು ಬದಲಾದರೆ ಜಗತ್ತು ಬದಲಾಗುತ್ತದೆ ಎಂಬ ಸತ್ಯವನ್ನು ಅರಿತು, ದ್ವೇಷದ ಜಾಗದಲ್ಲಿ ಪ್ರೀತಿಯನ್ನು, ಅಹಂನ ಜಾಗದಲ್ಲಿ ವಿನಯವನ್ನು ಪ್ರತಿಷ್ಠಾಪಿಸಬೇಕಿದೆ.

ಶರಣರ ಆಶಯದಂತೆ ಪ್ರತಿಯೊಬ್ಬರೂ ತಮ್ಮ ಮನದ ಡೊಂಕನ್ನು ತಿದ್ದಿಕೊಂಡರೆ, ಜಾಗತಿಕ ಸಂಘರ್ಷಗಳು ತಾವಾಗಿಯೇ ಬಗೆಹರಿಯುತ್ತವೆ. ಶಾಂತಿ ಎಂಬುದು ಹೊರಗಿನಿಂದ ಬರುವುದಲ್ಲ, ಅದು ನಮ್ಮ ಅಂತರಾತ್ಮದ ಒಳಗಿನಿಂದ ಚಿಮ್ಮುವ ಬೆಳಕು. ಆ ಬೆಳಕು ನಮ್ಮ ಮನದ ಡೊಂಕನ್ನು ಹೋಗಲಾಡಿಸಿದರೆ, ಇಡೀ ಲೋಕವೇ ಸುಂದರವಾದ, ಶಾಂತಿಯುತವಾದ ನಂದನವನವಾಗುವುದರಲ್ಲಿ ಸಂಶಯವಿಲ್ಲ. ಅದೇ ಶರಣರು ಕಂಡ 'ಕಲ್ಯಾಣದ ಕನಸು' ಮತ್ತು ಇಂದಿನ ಜಗತ್ತಿಗೆ ಅತ್ಯಗತ್ಯವಾದ ಚಿಕಿತ್ಸೆ...

ಗುರುವಿನಲ್ಲಿಡುವ ಭಕ್ತಿಯೇ ನಮ್ಮ ಗೆಲುವಿನ ಶಕ್ತಿ...

• ರಂಗನಾಥ್ ಗುಡಿಮನಿ, ಸಿದ್ದಾಪುರ

ಗೆಲುವು ಅನ್ನೋದು ಒಂದು ಮಾಯಾವಿ ಇದ್ದಂತೆ. ಎಲ್ಲರೂ ಇದನ್ನು ಅಪೇಕ್ಷಿಸುವವರೇ. ಇದು ಯಾರಿಗೆ ಬೇಕಾಗಿಲ್ಲ? ಸದ್ಯಕ್ಕೆ ಸರ್ವರಿಗೂ ಅವಶ್ಯವಾಗಿ ಬೇಕೇ ಬೇಕು. ಇಂಥ ಗೆಲುವನ್ನು ಗಳಿಸಿಕೊಳ್ಳಲು ಹಗಲಿರುಳೆನ್ನದೆ ಹಾತೊರೆಯುತ್ತೇವೆ. ನಮಗೆ ಗೆಲುವು ಬೇಕೆಂದರೆ ಒಬ್ಬ ಸಮರ್ಥ 'ಗುರು' ಇರಲೇಬೇಕು. ಇಲ್ಲವಾದಲ್ಲಿ ಗೆಲುವಿನ ಕನಸು ಕನಸಾಗಿಯೇ ಉಳಿಯುವುದು, ಗಗನಕುಸುಮವೇ ಆಗುವುದು. ನಮ್ಮ ಭವ್ಯ ಬದುಕಿನಲ್ಲಿ ತಂದೆ-ತಾಯಿಯ ನಂತರದ ಮಹತ್ವದ ಸ್ಥಾನವನ್ನು ಗುರುವಿಗೆ ನೀಡಿದ್ದೇವೆ. ಇದು ಗುರುವಿನ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತದೆ. ಅಕಸ್ಮಾತ್ ಇವರಲ್ಲಿ ಒಬ್ಬರ ಅನುಪಸ್ಥಿತಿ ತಲೆದೋರಿದರೆ ಇಡೀ ಬದುಕೇ ಅಪೂರ್ಣ ಎನ್ನಿಸಿ, ಅಸ್ತವ್ಯಸ್ತವಾಗುವುದು.

ಗುರು ಎಂದರೆ ಯಾರು? 'ಗು' ಅಂದರೆ ಕತ್ತಲೆ, 'ರು' ಅಂದರೆ ಅದನ್ನು ಕಳೆಯುವವನು. ನಮ್ಮೊಳಗಿನ ಅಜ್ಞಾನದ ಕತ್ತಲೆಯನ್ನು ಕಳೆದು, ಸುಜ್ಞಾನದ ಬೆಳಕಿನತ್ತ ಕಳುಹಿಸುವವನೇ ಗುರು. ಜಗತ್ತಿನಲ್ಲಿ ಗುರುವಿನ ಭಕ್ತಿಯು ತುಂಬಾ ಶಕ್ತಿಯುತ. ಗುರು ಗುರುವೇ, ಯಾವತ್ತೂ ಅವರನ್ನು ಲಘುವಾಗಿ ಕಾಣಬಾರದು. ಗುರು ನಮ್ಮ ಹಿತಚಿಂತಕ, ಮೇಲಾಗಿ ಬದುಕಿನ ದಿಗ್ದರ್ಶಕ. ಒಂದಕ್ಷರ, ಒಂದು ಸರಿಯಾದ ದಾರಿ, ಸೂಕ್ತ ಸಲಹೆ, ಸ್ಪಷ್ಟ ಗುರಿಗಳನ್ನು ಹೆಮ್ಮರದಂತೆ ನಮ್ಮೊಳಗೆ ಬೆಳೆಸುವವನೇ ನಿಜವಾದ ಗುರು. ನಾವು ತಲೆಯೆತ್ತಿ ನಿಲ್ಲಬೇಕೆಂದರೆ, ಮೊದಲು ಗುರುವಿಗೆ ತಲೆಬಾಗುವ ವಿನಮ್ರತೆ ನಮ್ಮಲ್ಲಿರಬೇಕು. ಗುರು ನಮಗೆ ಕೇವಲ ಜ್ಞಾನ ಕೊಡುವವನಲ್ಲ, ನಮ್ಮ ಬದುಕಿನ ದಾರಿ ತೋರಿಸುವ ಬೆಳಕು. ಗುರುವನ್ನು ಇಂದು ಯಾರು ಗೌರವಿಸುತ್ತಾರೋ, ಮುಂದೊಂದು ದಿನ ಇಡೀ ಜಗತ್ತೇ ಅವರನ್ನು ಗೌರವಿಸುವುದು.

ಪ್ರತಿಯೊಬ್ಬರ ಬದುಕು ಒಂದು ಮಧುರಗಾನವಿದ್ದಂತೆ, ಅದು ರಮಣೀಯವಾಗಿ ರೂಪುಗೊಳ್ಳುವುದೇ 'ಗುರು' ಎನ್ನುವ ನಿಷ್ಕಾಮ ವ್ಯಕ್ತಿಯ ಮಾರ್ಗದರ್ಶನದಿಂದ. ಗುರುವಿನ ಮೇಲೆ ಯಾರಲ್ಲಿ ಅನನ್ಯ ಭಕ್ತಿ ಇರುವುದೋ ಅವರು ಒಂದಲ್ಲಾ ಒಂದು ದಿನ ಗೆದ್ದೇ ಗೆಲ್ಲುವರು. ಭಕ್ತಿ ಯಾರ ಮೇಲೆಯೇ ಇರಲಿ, ಯಾವುದರ ಮೇಲಾದರೂ ಇರಲಿ ಅದು ನೈಜ, ಪ್ರಾಮಾಣಿಕವಾಗಿರಲಿ. ಕಾಟಾಚಾರದ ಭಕ್ತಿಯಾದರೆ ಅದರ ಪ್ರತಿಫಲವು ತುಂಬಾ ಕೆಟ್ಟದ್ದಾಗಿರುತ್ತದೆ. ಅದಕ್ಕೆ ಹೇಳೋದು 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಅಂತ. ಈ ಉಕ್ತಿಯು ನೂರಕ್ಕೆ ನೂರರಷ್ಟು ಸತ್ಯವಾದದ್ದು. ಭಕ್ತಿಯು ಪರಿಶುದ್ಧ ಹಾಲಿನಂತೆ, ಗೆಲುವು ಹಾಲ ಮೇಲಿನ ಕೆನೆಯಂತೆ. ಗೆಲುವು ಎಲ್ಲರಿಗೂ ಕಾಣಸಿಗುವ ಬಹಿರಂಗದ ಬಹುದೊಡ್ಡ ಆಸ್ತಿಯಾದರೆ, ಭಕ್ತಿಯು ಯಾರಿಗೂ ಕಾಣಸಿಗದ ಅಂತರಂಗದ ಶಕ್ತಿ. ನಾವು ನೀವೆಲ್ಲ ಗುರುವಿಗೆ ಸೂಕ್ತ ಸ್ಥಾನಮಾನಗಳ ನೀಡಿ, ಮನಃಪೂರ್ವಕವಾಗಿ ಗೌರವಿಸೋಣ. ಗುರುವಿನ ಭಕ್ತಿಯಿಂದಲೇ ಶಕ್ತಿ ಗಳಿಸಿ ಎಲ್ಲವನ್ನೂ ಗೆಲ್ಲೋಣ...

ಹಾಸ್ಯ-ಲಾಸ್ಯ

ಖುಷಿಯಲ್ಲಿ ಕನ್‌ಫ್ಯೂಸ್!

ಏದುಸಿರು ಬಿಟ್ಟುಕೊಂಡು, ಜೋರಾಗಿ ತೇಕುತ್ತಾ ಓಡಿಬಂದ ತಿಮ್ಮ, ''ಸರ್... ಸರ್..., ನಿನ್ನೆ ರಾತ್ರಿಯಿಂದ ನನ್ ಹೆಂಡ್ತಿ ಕಾಣ್ತಾಯಿಲ್ಲ ಸರ್...'' ಎಂದ.

ಆದರೆ ಈ ಮಾತನ್ನು ಕೇಳಿಸಿಕೊಂಡ 'ಸರ್' ಒಬ್ಬ ಪೋಸ್ಟ್ ಮಾಸ್ಟರ್ ಆಗಿದ್ದರು! ಅವರು ತಿಮ್ಮನನ್ನು ಉದ್ದೇಶಿಸಿ, ''ಯೋವ್, ನಿನ್ ಹೆಂಡತಿ ಕಳೆದುಹೋದ್ರೆ ಪೊಲೀಸ್ ಸ್ಟೇಷನ್‌ಗೆ ಹೋಗಿ ಸಬ್‌ಇನ್‌ಸ್ಪೆಕ್ಟರ್‌ನ ಭೇಟಿಯಾಗಿ ಕಂಪ್ಲೇಂಟ್ ಕೊಡು. ಹೀಗೆ ಪೋಸ್ಟ್ ಆಫೀಸಿಗೆ ಬಂದು ನನ್ನಂಥ ಪೋಸ್ಟ್ ಮಾಸ್ಟರ್‌ನ ಗೋಳುಹೊಯ್ಕೊಂಡ್ರೆ ಹೇಗೆ?'' ಎಂದರು.

ಅದಕ್ಕೆ ತಿಮ್ಮ, ''ಸಾರಿ ಸರ್, ಸಾರಿ ಸರ್... ಬಡ್ಡೀಮಗಂದು ಖುಷೀಲಿ ಎಲ್ಲಿಗೆ ಹೋಗ್ಬೇಕು, ಏನ್ ಮಾಡ್ಬೇಕು ಅಂತಲೇ ಗೊತ್ತಾಗ್ಲಿಲ್ಲ'' ಎನ್ನುತ್ತಾ ಅಲ್ಲಿಂದ ಜಾಗ ಖಾಲಿಮಾಡಿದ.

ಈ ಮಾತು ಕೇಳಿ ಅಪ್ರತಿಭರಾದ ಪೋಸ್ಟ್ ಮಾಸ್ಟರ್, ತಮ್ಮ ಹಸ್ತವನ್ನು ಮುಷ್ಟಿ ಮಾಡಿ ಟೇಬಲ್‌ನ ಮೇಲೆ ಸೀಲಿನಂತೆ ಒತ್ತುತ್ತಾ, ''ಅಯ್ಯೋ ಮುಂಡೇದೇ.... ನಿನಗಿರೋ ಭಾಗ್ಯ ನಂಗೆ ಇಲ್ವಲ್ಲೋ...?'' ಎಂದು ಅಲವತ್ತುಕೊಂಡರು...!!

ಪಕ್ಕಾ ಪ್ಲಾನು...!!

ಗಂಡ: ಲೇ, ಏನೇ ಬಂದಿದೆ ನಿಂಗೆ ದೊಡ್ ರೋಗಾ? ಬೆಳಗ್ಗೆ 11 ಗಂಟೆಯಾದ್ರೂ ಇನ್ನೂ ತಿಂಡಿ ಮಾಡಿಲ್ವಲ್ಲೇ? ಸಿಕ್ಕಾಪಟ್ಟೆ ಹಸಿವಾಗಿ, ಹೊಟ್ಟೇಲಿ ಇಲಿ ಓಡಾಡಿದಂತೆ ಆಗ್ತಾ ಇದೆ, ನಾನು ಹೋಟೆಲ್‌ಗೆ ಹೋಗಿ ಏನಾದ್ರೂ ತಿಂದ್ಕೊಂಡು ಬರ್ತೀನಿ...

ಹೆಂಡತಿ: ಅಯ್ಯೋ ಹೌದಾ? ಛೇ ಛೇ! 5 ನಿಮಿಷ ತಡ್ಕೊಳ್ರೀ...

ಗಂಡ: ನಿನ್ ತಲೆ! ಏನು 5 ನಿಮಿಷದಲ್ಲಿ ನೀನು ತಿಂಡಿ ರೆಡಿಮಾಡಿಬಿಡ್ತೀಯಾ? ಹಾಗಂತ ನೀನು ಹೇಳಿದರೆ ನಾನು ನಂಬಿಕೊಂಡು ಕೂರಬೇಕಾ?

ಹೆಂಡತಿ: ಅಯ್ಯೋ ಹಾಗಲ್ಲರೀ.... ನೀವು 5 ನಿಮಿಷ ತಡಕೊಂಡ್ರೆ, ನಾನೂ ರೆಡಿಯಾಗಿಬಿಡ್ತೀನಿ. ಇಬ್ಬರೂ ಹೋಟೆಲ್‌ನಲ್ಲೇ ತಿಂಡಿ ತಿನ್ಕೊಂಡು ಬರಬಹುದು ಅಂತ ಹೇಳಿದ್ದು...!!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಕ್ಷಮಿಸು ಅಥವಾ ಗೌರವಿಸು ಎಂದರ್ಥ (3)
5. ಬಾಗಿಲಿನ ಚೌಕಟ್ಟು (3)
6. ಅತ್ತಿತ್ತ ತೂಗಾಡುವ ವಸ್ತು (3)
7. ನಯಗೊಳಿಸುವ ಸಾಧನ (2)
8. ರಾಜ ಒರೆಸಿದ ಧೂಳು (2)
10. ಸವಾರಿ ಹೋದಾಗ ಸಿಕ್ಕಿದ ನೀರು (2)
11. ಎರಡಕ್ಷರದ ಒಡವೆ (2)
13. ವಾರದ ರಜಾದಿನ ಸಿಕ್ಕಿದ ಸೂರ್ಯ (2)
15. ಎರಡಕ್ಷರದ ಕಣ್ಣು (2)
16. ಬೇಡವಾದ ವಸ್ತು (2)
18. ಪಾಂಡವರ ತಾಯಿ (2)
19. ಮಾರಿಯ ನಡುವೆ ಸಿಲುಕಿದ ನಮೂನೆ (3)
20. ಮಸುಕಾಗಿದೆ ಬೆಳಗಿನ ಜಾವ (3)
21. ಒಳ್ಳೆಯ ಬುದ್ಧಿಯಿದು (3)

ಮೇಲಿಂದ ಕೆಳಕ್ಕೆ

1. ಧಾರಾಳ ಸ್ವಭಾವ (3)
2. ಮತ್ತೇರಿದ ಆನೆ (4)
3. ಸುಂದರವಾದ ಕಣ್ಣು (4)
4. ಕರದೊಂದಿಗೆ ಬಂದಿರುವ ಶಿವ (3)
7. ಕೆಲಸಕ್ಕೆ ಬಾರದ ಎಂದರ್ಥ (5)
9. ದೇಶದ ಪ್ರಜೆಗಳ ಸಂಖ್ಯೆಯನ್ನು ಲೆಕ್ಕಹಾಕುವ ಪ್ರಕ್ರಿಯೆ (5)
10. ಸಪ್ತಾಹದ ನಡುವೆ ಇರುವ ಕಪಿ (3)
12. ಗಾಳಿ, ಬೆಳಕು ಬರಲು ಮಾಡಿಕೊಂಡಿರುವ ವ್ಯವಸ್ಥೆ (3)
14. ಜನರಿಗೆ ಹಂಚು (4)
15. ಅವನ ಕೀಳುದೆಸೆ (4)
17. ಸತ್ತವರನ್ನು ಹೂಳುವ ಸ್ಥಳ (3)
18. ಹಣೆಗಿಟ್ಟುಕೊಳ್ಳುವ ಕೆಂಬಣ್ಣದ ಹುಡಿ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2.ಮನ್ನಿಸು 5.ದಾರಂದ 6.ಲೋಲಕ 7.ಅರ 8.ರಜ 10.ವಾರಿ 11.ನಗ 13.ರವಿ 15.ಅಕ್ಷಿ 16.ಕಸ 18.ಕುಂತಿ 19.ಮಾದರಿ 20.ನಸುಕು 21.ಸುಮತಿ

ಮೇಲಿಂದ ಕೆಳಕ್ಕೆ
1.ಉದಾರ 2.ಮದಕರಿ 3.ಸುಲೋಚನ 4.ಶಂಕರ 7.ಅಪ್ರಯೋಜಕ 9.ಜನಗಣತಿ 10.ವಾನರ 12.ಗವಾಕ್ಷಿ 14.ವಿತರಿಸು 15.ಅವನತಿ 17.ಸಮಾಧಿ 18.ಕುಂಕುಮ

ಕ್ರಿಕೆಟ್ ಕ್ರೀಡೆಯಷ್ಟೇ, ರಕ್ತರಂಜಿತ ಕಾಳಗವಲ್ಲ

• ಡಾ. ರವಿಶಂಕರ್ ಎ.ಕೆ.

ಒಂದು ಕಾಲದಲ್ಲಿ ಎಲ್ಲ ಆಟಗಳಂತೆ ಪ್ರಭಾವಿಸಿದ್ದ ಕ್ರಿಕೆಟ್ ಆಟವು ಇಂದು ಉದ್ಯಮದ ಆಟವಾಗಿದೆ. ಇದು ಭಾವನೆಗಳ ಮಹಾಪೂರ, ಬೃಹತ್ ವಹಿವಾಟು ಮತ್ತು ಜಾಗತಿಕ ಮಟ್ಟದ ಪ್ರತಿಷ್ಠೆಯ ಒಂದು ಸಂಕೇತವಾಗಿದೆ. ಆದರೆ, ಈ ಸಂಭ್ರಮದ ನಡುವೆ ನಾವು ಮರೆಯಬಾರದ ಸತ್ಯವೆಂದರೆ ಕ್ರಿಕೆಟ್ ಒಂದು ಕ್ರೀಡೆಯಷ್ಟೇ, ಅದೊಂದು ಕಾಳಗವಲ್ಲ. ಆದರೆ, ಕೌಶಲದ ಪ್ರದರ್ಶನವಾಗಿರಬೇಕಿದ್ದ ಈ ಆಟವು, ದ್ವೇಷ, ಲಾಭ-ನಷ್ಟಗಳ ಪ್ರತೀಕವಾಗುತ್ತಿರುವುದು ನಮ್ಮ ನಡುವಿನ ದುರಂತ. ಅದಕ್ಕಾಗಿ ಸಮಯ ಹಾಗೂ ಪ್ರಾಣ ಬಿಡುವಷ್ಟು ಅಭಿಮಾನವು ಹೊಮ್ಮುತ್ತಿರುವುದು ನಮ್ಮ ಅಜ್ಞಾನದ ಸೂಚಕವಾಗಿದೆ.

ಪ್ರಭಾವ ಮತ್ತು ಪರಿಣಾಮ

ಇಂದಿನ ದಿನಗಳಲ್ಲಿ ಮಾಧ್ಯಮಗಳು ಕ್ರಿಕೆಟ್ ಪಂದ್ಯಗಳನ್ನು ವಿವರಿಸುವಾಗ 'ಯುದ್ಧ', 'ಸೇಡು', 'ರಣಕಹಳೆ ಎಂಬ ಪದಗಳನ್ನು ಅತಿಯಾಗಿ ಬಳಸುತ್ತಿವೆ. ಈ ಬಳಕೆಯು ಜನಸಾಮಾನ್ಯರಲ್ಲಿ ಮೊದಲ ವೈರುಧ್ಯವನ್ನು ಸೃಷ್ಟಿಸುತ್ತವೆ. ಕ್ರೀಡೆಯನ್ನು ದೇಶಪ್ರೇಮದ ಅಳತೆಗೋಲಿನಂತೆ ನೋಡುವುದು ಅಪಾಯಕಾರಿ. ಆಟಗಾರರು ಮೈದಾನದಲ್ಲಿ ಸೋತಾಗ ಅವರನ್ನು ದ್ರೋಹಿಗಳಂತೆ ನೋಡುವುದು ಅಥವಾ ಗೆದ್ದಾಗ ಅತಿಯಾಗಿ ಹೊಗಳಿ ಆಕಾಶಕ್ಕೇರಿಸುವುದು ಕ್ರೀಡಾಸ್ಫೂರ್ತಿಗೆ ವಿರುದ್ಧವಾದುದು. ಅಭಿಮಾನಿಗಳ ಈ 'ಕಾಳಗ'ದ ಮನಸ್ಥಿತಿಯು ಆಟಗಾರರ ಮೇಲೆ ಅನಗತ್ಯ ಮಾನಸಿಕ ಒತ್ತಡವನ್ನು ಹೇರುತ್ತದೆ ಮತ್ತು ಅದು ಅವರ ಸಹಜ ಪ್ರದರ್ಶನದ ಮೇಲೆ ಪರಿಣಾಮ ಬೀರುತ್ತದೆ.

ವಾಣಿಜ್ಯೀಕರಣ

ಇಂದಿನ ಕ್ರಿಕೆಟ್ ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿದೆ. ಐಪಿಎಲ್‌ನಂಥ ಲೀಗ್‌ಗಳು ಕ್ರಿಕೆಟನ್ನು ಕೇವಲ ಒಂದು ಆಟವಾಗಿ ಪ್ರವರ್ತಿಸದೆ, 'ಪ್ಯಾಕೇಜ್ಡ್ ಎಂಟರ್‌ಟೈನ್‌ಮೆಂಟ್' ಆಗಿ ಬದಲಿಸಿವೆ. ಕೋಟ್ಯಂತರ ರುಪಾಯಿಗಳ ಜಾಹೀರಾತು, ಬೆಟ್ಟಿಂಗ್ ಮಾಫಿಯಾ ಮತ್ತು ಟಿಆರ್‌ಪಿ ಹಪಾಹಪಿಯು ಆಟದ ನೈಜತೆಯನ್ನು ನುಂಗಿಹಾಕುತ್ತಿದೆ. ನಗರ, ಗ್ರಾಮಗಳ ಅಂತರವಿಲ್ಲದೆ ಹಣದ ವ್ಯವಹಾರ ನಡೆಯುತ್ತಿದೆ. ಆಶ್ಚರ್ಯ ವೆಂದರೆ, ಮೈದಾನದ ಹೊರಗೆ ಆಟಗಾರರು ಪರಸ್ಪರ ಸ್ನೇಹಿತ ರಾಗಿರುತ್ತಾರೆ, ಒಟ್ಟಿಗೆ ಊಟ ಮಾಡುತ್ತಾರೆ. ಆದರೆ ಸಾಮಾ ಜಿಕ ಜಾಲತಾಣಗಳಲ್ಲಿ ಅಭಿಮಾನಿಗಳು ಮಾತ್ರ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿರುತ್ತಾರೆ. ಇದು ನಾವು 'ಬುದ್ಧಿವಂತ ಮೂರ್ಖರಾಗುತ್ತಿದ್ದೇವೆ' ಎಂಬುದಕ್ಕೆ ಇದು ಉದಾಹರಣೆಯಷ್ಟೆ. ಇದು ನಮ್ಮ ರಾಜಕೀಯಕ್ಕೂ ಅನ್ವಯಿಸುತ್ತದೆ. ಗೆಲ್ಲಲು ನಮ್ಮ ಭಾವನೆಗಳನ್ನು ಬಲಿಕೊಡುವುದು ಯಾವ ರೀತಿಯ ಆಲೋಚನೆ ಎಂಬುದನ್ನು ಸರಿಯಾಗಿ ಗ್ರಹಿಸಬೇಕಿದೆ.

ಒಗ್ಗೂಡಿಸುವ ಶಕ್ತಿ

ವಿಶ್ವದ ದೃಷ್ಟಿಯಲ್ಲಿ ಕ್ರಿಕೆಟ್ ವಿವಿಧ ಸಂಸ್ಕೃತಿಗಳನ್ನು ಬೆಸೆಯುವ ಒಂದು ಅದ್ಭುತ ಮಾಧ್ಯಮವಾಗಬಲ್ಲದು. ಅಫ್ಘಾನಿಸ್ತಾನದಂಥ ದೇಶಗಳು ಯುದ್ಧದ ಭೀತಿಯ ನಡುವೆಯೂ ಕ್ರಿಕೆಟ್ ಮೂಲಕ ಜಗತ್ತಿನ ಗಮನ ಸೆಳೆಯುತ್ತಿರುವುದು ಈ ಆಟಕ್ಕಿರುವ ಧನಾತ್ಮಕ ಶಕ್ತಿ ಎಂದೇ ಹೇಳಬೇಕು. ದಕ್ಷಿಣ ಆಫ್ರಿಕಾ ಅಥವಾ ವೆಸ್ಟ್ ಇಂಡೀಸ್ ತಂಡಗಳ ಇತಿಹಾಸವನ್ನು ನೋಡಿದಾಗ, ವರ್ಣಭೇದ ನೀತಿಯ ವಿರುದ್ಧ ಕ್ರಿಕೆಟ್ ಹೇಗೆ ಹೋರಾಡಿದೆ ಎಂಬುದು ತಿಳಿಯುತ್ತದೆ. ಕ್ರಿಕೆಟ್ ಎಂಬುದು ಮನುಷ್ಯರನ್ನು ಹತ್ತಿರ ತಂದಿರುವುದು ಹಾಗೂ ವಿಶ್ವದ ಪ್ರವಾಸಿಗರನ್ನು ಎಲ್ಲಾ ಕೋನಗಳಲ್ಲೂ ಸಮ್ಮಿಶ್ರಣ ಮಾಡಿರುವುದು ವಿಶೇಷವಾಗಿದೆ.

ಲಿಂಗ ತಾರತಮ್ಯ

ನಮ್ಮ ಆರ್‌ಸಿಬಿ ಕುರಿತು ಸರಿಯಾದ ಆಲೋಚನೆಗಳಿಲ್ಲ. ನಮ್ಮ ತಂಡ, ಕನ್ನಡಿಗರ ಹಿರಿಮೆಯ ಪ್ರಶ್ನೆ ಇವೆಲ್ಲವೂ ಸರಿ ಇರಬಹುದು. ಆದರೆ, ಅಭಿಮಾನಿಗಳಲ್ಲಿ ಲಿಂಗ ತಾರತಮ್ಯವು ಮೂಡಿರುವುದು ಸರಿಯಲ್ಲ. ಹದಿನೆಂಟು ವರ್ಷಗಳ ನಂತರ ಗೆಲುವು ಸಾಧಿಸಿದ ಪುರುಷ ತಂಡಕ್ಕೆ ಸಿಕ್ಕ ಸಂಭ್ರಮವನ್ನು ವರ್ಣಿಸಲಾಗದು. ಹನ್ನೊಂದು ಜನರ ಬಲಿಯು, ಅವರಿಗಾಗಿ ಪೀಠವಿಟ್ಟು ಗೌರವ ಸಲ್ಲಿಸುವ ದುರಂತ ಚರಿತ್ರೆಯು ನಮ್ಮ ಅಂಧಾಭಿಮಾನವನ್ನು ಸೂಚಿಸುತ್ತದೆ. ಆಟದ ಮೊದಲ ವರ್ಷ ಹಾಗೂ ಎರಡನೇ ವರ್ಷವೂ ನಮ್ಮ ಮಹಿಳಾ ತಂಡವು ವಿಜಯ ಸಾಧಿಸಿದರೂ ಅದರ ಸಂಭ್ರಮ ಹೇಗಿತ್ತು ಎಂಬುದನ್ನು ನೀವೇ ಆಲೋಚಿಸಿ. ಪುರುಷ ತಂಡದ ಸಂಭ್ರಮದಲ್ಲಿ ಮಹಿಳೆಯರೂ ಪ್ರಾಣಕಳೆದುಕೊಂಡಿದ್ದಾರೆ. ಆದರೆ, ಮಹಿಳೆಯರ ಗೆಲುವು ಎಷ್ಟೋ ಜನಕ್ಕೆ ತಿಳಿದೇ ಇಲ್ಲ. ಈ ತಾರತಮ್ಯವನ್ನು ಅಳಿಸಬೇಕಿದೆ. ಎರಡೂ ನಮ್ಮ ತಂಡಗಳೇ; ಹೀಗಾಗಿ ಅತಿರೇಕದ ಅಭಿಮಾನವನ್ನು ತೋರಿಸುವ ಬದಲು ಸಮಾನ ಪ್ರೀತಿ ಹಾಗೂ ಅಭಿಮಾನವನ್ನು ತೋರಿಸಬೇಕಿದೆ.

ನೆನಪು ಮಾಡಿಕೊಳ್ಳೋಣ..

ಈ ಯಾವ ಸಮೂಹ ಮಾಧ್ಯಮವೂ ಇಲ್ಲದ ಕಾಲವದು. ನಮಗೆ ಕ್ರಿಕೆಟ್ ಎಂಬುದು ಅಪಾರ ಪ್ರೀತಿ, ಬಾಂಧವ್ಯಗಳ ಮೂಲಕ ಬಾಲ್ಯ ಮತ್ತು ಯೌವನವನ್ನು ಸ್ಫೂರ್ತಿಗೊಳಿಸಿತ್ತು. ದೂರದರ್ಶನ ಇದ್ದವರು ಹಾಗೂ ರೇಡಿಯೋ ಇದ್ದವರು ಅದನ್ನು ಆಸಕ್ತಿಯಿಂದ ನೋಡುತ್ತಾ, ಕೇಳುತ್ತಿದ್ದರು. ಆದರೆ, ಯಾರಿಗೂ ಅದು ಭಾವನೆಗಳ ಮೇಲೆ ಯುದ್ಧದಂತೆ ಪರಿಣಾಮ ಬೀರಿರಲಿಲ್ಲ. ತೆಂಗಿನಗರಿಯ ದಿಂಡನ್ನು ಕತ್ತರಿಸಿ, ಅಂಗಡಿಯಿಂದ ಒಂದು ರಬ್ಬರ್ ಬಾಲ್ ತಂದು ಸ್ನೇಹಿತರೆಲ್ಲಾ ಖುಷಿಯಿಂದ ಆಡುತ್ತಿದ್ದೆವು. ಈಗ ಹಳ್ಳಿ ಹಳ್ಳಿಗೂ ಪಂದ್ಯಾವಳಿಗಳು ಹಬ್ಬಿವೆ, ರಾಷ್ಟ್ರ ಮಟ್ಟದ ಸ್ಪರ್ಧೆಯಂತೆ ರಾಜಕೀಯ ವ್ಯಕ್ತಿಗಳ ಅಥವಾ ಶ್ರೀಮಂತರ ಹಣದ ನೆರವನ್ನು ಪಡೆದು ಸಂಘಟನೆಗೊಳ್ಳುತ್ತಿವೆ. ಇಲ್ಲದವರಿಗೂ ನೀಡುತ್ತಿದ್ದ ಆನಂದವು ಇದ್ದವರಿಗೆ ಮಾತ್ರ ಎಂಬಂತೆ ಕಳೆದುಹೋಗುವುದು ಸಾಮಾಜಿಕ ದೌರ್ಬಲ್ಯವೇ ಆಗಿದೆ.

ರಾಮಚರಿತ ಮಾನಸ ವಿವರಿಸುವ ಕಾಕಭುಶುಂಡಿ-ಗರುಡ ಸಂವಾದ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನಮ್ಮ ಬದುಕಿನಲ್ಲಿ ಜ್ಞಾನ ಮತ್ತು ಬುದ್ಧಿವಂತಿಕೆ ಎಷ್ಟೇ ಇದ್ದರೂ, ಅಹಂಕಾರ ಪ್ರವೇಶಿಸಿದಾಗ ಆ ಜ್ಞಾನವು ಮಸುಕಾಗುತ್ತದೆ. ರಾಮಚರಿತಮಾನಸದ ಉತ್ತರಕಾಂಡದಲ್ಲಿ ಬರುವ ಗರುಡ ಮತ್ತು ಕಾಕಭುಶುಂಡಿಯ ಸಂವಾದವು ನಮಗೆ ಇದನ್ನೇ ಎಚ್ಚರಿಸುತ್ತದೆ.

ಮೂಲ ಶ್ಲೋಕ (ಚೌಪಾಯಿ):

ರಾಮ ಹಿತೂ ನಿಜ ಗುರುವಹಿ ಬಿಚಾರಿ ।
ಬಂದಉಂ ಚರಣ ಹರಷು ಉರ ಧಾರಿ ॥
ಬಿಹಗರಾಜ ಸುನು ಉಮಾ ಪ್ರೀತಿ ಅತಿ । ಭಕ್ತಿ ಪ್ರತಾಪ ಜಾನ ಬಕಪತಿ ॥

ಅಂದರೆ, ರಾಮನ ಹಿತೈಷಿಯಾದ ನಿಜ ಗುರುವಿನ ಚರಣಗಳಿಗೆ ನಾನು ಹರ್ಷದಿಂದ ನಮಸ್ಕರಿಸುತ್ತೇನೆ. ಹೇ ಉಮೆಯೇ ಕೇಳು, ಪಕ್ಷಿರಾಜನಾದ ಗರುಡನಿಗೆ ಪರಮ ಭಕ್ತನಾದ ಕಾಕಭುಶುಂಡಿಯು ಭಕ್ತಿಯ ಪ್ರತಾಪವನ್ನು ವಿವರಿಸಿದನು.

ಪಕ್ಷಿರಾಜನಾದ ಗರುಡನು ಶ್ರೀಮನ್ನಾರಾಯಣನ ವಾಹನ. ರಾಮ-ರಾವಣರ ಯುದ್ಧದ ಸಮಯದಲ್ಲಿ ಮೇಘನಾದನು ಶ್ರೀರಾಮನ ಮೇಲೆ ನಾಗಪಾಶವನ್ನು ಪ್ರಯೋಗಿಸುತ್ತಾನೆ. ಆಗ ರಾಮನನ್ನು ಬಂಧನದಿಂದ ಮುಕ್ತಗೊಳಿಸಲು ಪಕ್ಷಿರಾಜನಾದ ಗರುಡನು ಬರುತ್ತಾನೆ. ಗರುಡನು ಹಾವುಗಳನ್ನು ಭಕ್ಷಿಸಿ ರಾಮನನ್ನು ಬಿಡಿಸುತ್ತಾನೆ. ಆದರೆ ಆ ಕ್ಷಣದಲ್ಲಿ ಗರುಡನಿಗೆ ಒಂದು ಸಂಶಯ ಮೂಡುತ್ತದೆ- 'ನನ್ನ ಪ್ರಭುವಾದ ಮಹಾವಿಷ್ಣುವೇ ಈ ರಾಮನಾಗಿದ್ದರೆ, ಸಾಮಾನ್ಯ ಹಾವಿನ ಪಾಶಕ್ಕೆ ಅವನು ಸಿಲುಕುವುದಾದರೂ ಹೇಗೆ? ತನ್ನನ್ನು ತಾನು ಬಿಡಿಸಿಕೊಳ್ಳಲಾಗದ ಇವನು ಜಗತ್ತನ್ನು ಹೇಗೆ ರಕ್ಷಿಸುತ್ತಾನೆ?'.

ಈ ಅಹಂಕಾರ ಮಿಶ್ರಿತ ಸಂಶಯವು ಗರುಡನನ್ನು ಕಾಡುತ್ತದೆ. ಅವನು ಬ್ರಹ್ಮದೇವ ಮತ್ತು ಶಿವನ ಬಳಿ ಹೋದರೂ ಸಮಾಧಾನ ಸಿಗುವುದಿಲ್ಲ. ಅಂತಿಮವಾಗಿ ಶಿವನು ಅವನನ್ನು ನೀಲಗಿರಿ ಪರ್ವತದಲ್ಲಿದ್ದ ಕಾಕಭುಶುಂಡಿ ಎಂಬ ಕಾಗೆಯ ಬಳಿ ಕಳುಹಿಸುತ್ತಾನೆ. ಒಬ್ಬ ಮಹಾನ್ ಗರುಡನು ಕೇವಲ ಕಾಗೆಯ ಮುಂದೆ ಶಿಷ್ಯನಾಗಿ ಕುಳಿತುಕೊಳ್ಳಬೇಕಾಗುತ್ತದೆ. ಕಾಕಭುಶುಂಡಿಯು ಗರುಡನಿಗೆ ರಾಮನ ಅನಂತ ಲೀಲೆಗಳನ್ನು ವಿವರಿಸಿ, ಬುದ್ಧಿವಂತಿಕೆಯನ್ನು ಮೀರಿದ 'ಭಕ್ತಿ'ಯ ರಹಸ್ಯವನ್ನು ತಿಳಿಸಿಕೊಡುತ್ತಾನೆ. ಆಗ ಗರುಡನ ಮೋಹದ ಪರದೆ ಸರಿಯುತ್ತದೆ.

ಗರುಡನು ತಾನು ಭಗವಂತನ ವಾಹನ ಎಂಬ ಅಹಂಕಾರದಲ್ಲಿದ್ದಾಗ ಅವನಿಗೆ ಸತ್ಯ ಗೋಚರಿಸಲಿಲ್ಲ. ನಾವು ಕೂಡ ಕೆಲವೊಮ್ಮೆ ನಮ್ಮ ಪದವಿ, ಅಂತಸ್ತು ಅಥವಾ ಬುದ್ಧಿವಂತಿಕೆಯ ಅಮಲಿನಲ್ಲಿ ಸತ್ಯವನ್ನು ನೋಡಲು ವಿಫಲರಾಗುತ್ತೇವೆ. ಜ್ಞಾನಕ್ಕೆ ರೂಪವಿಲ್ಲ. ಕಾಗೆಯಂಥ ಸಾಮಾನ್ಯ ಜೀವಿಯಿಂದಲೂ ಜಗತ್ತಿನ ಶ್ರೇಷ್ಠ ಸತ್ಯವನ್ನು ಕಲಿಯಬಹುದು. ನಮಗಿಂತ ಕಿರಿಯರಿಂದ ಅಥವಾ ಸಾಮಾನ್ಯರಿಂದಲೂ ಕಲಿಯುವ ವಿನಯ ನಮ್ಮಲ್ಲಿರಬೇಕು. ತರ್ಕಕ್ಕೆ



ನಿಲುಕದ್ದು ನಂಬಿಕೆಗೆ ನಿಲುಕುತ್ತದೆ. ಗರುಡನು ತರ್ಕ ಮಾಡಲು ಹೋದಾಗ ಸೋತನು, ಆದರೆ ಶರಣಾದಾಗ ಅವನಿಗೆ ದರ್ಶನವಾಯಿತು.

ಅಂತೆಯೇ ಬದುಕಿನಲ್ಲಿ ನಮಗೆ ಸಂಶಯಗಳು ಕಾಡುವುದು ಸಹಜ. ಆದರೆ ಆ ಸಂಶಯಗಳು ನಮ್ಮನ್ನು ದಾರಿತಪ್ಪಿಸಬಾರದು. ನಾವು ಯಾರ ಮುಂದೆ ತಲೆಬಾಗುತ್ತೇವೆ ಎನ್ನುವುದಕ್ಕಿಂತ, ಎಷ್ಟು ವಿನಯದಿಂದ ಕಲಿಯುತ್ತೇವೆ ಎನ್ನುವುದು ಮುಖ್ಯ. ಅಹಂಕಾರವನ್ನು ಬಿಟ್ಟು ನೋಡಿದರೆ, ಪ್ರಕೃತಿಯ ಪ್ರತಿಯೊಂದು ಕಣದಲ್ಲೂ ನಮಗೆ ಗುರುವಿನ ದರ್ಶನವಾಗುತ್ತದೆ. ನಂಬಿಕೆಯ ದಾರಿಯಲ್ಲಿ ನಡೆದಾಗ ಮಾತ್ರ ಅತೀಂದ್ರಿಯ ಸತ್ಯಗಳು ನಮಗೆ ಅರ್ಥವಾಗುತ್ತವೆ. ನಮಗೆ ಎದುರಾಗುವ ಕಷ್ಟಗಳನ್ನು ಕೇವಲ ಬುದ್ಧಿಯಿಂದ ಎದುರಿಸಲು ಹೋದಾಗ ನಾವು ಸೋಲಬಹುದು. ಆದರೆ, ಆ ಕಷ್ಟಗಳ ನಡುವೆಯೂ ಒಂದು ದಿವ್ಯಶಕ್ತಿಯ ಮೇಲೆ ನಂಬಿಕೆಯಿಟ್ಟರೆ, ನಮಗೆ ಅನಿರೀಕ್ಷಿತವಾದ ದಾರಿಗಳು ತೆರೆದುಕೊಳ್ಳುತ್ತವೆ. ಬುದ್ಧಿಯು ನಮಗೆ ದಾರಿಯನ್ನು ತೋರಿಸಬಹುದು, ಆದರೆ ಆ ದಾರಿಯಲ್ಲಿ ನಡೆಸುವ ಶಕ್ತಿ ಇರುವುದು ನಂಬಿಕೆಯಲ್ಲಿ ಮಾತ್ರ. ಜ್ಞಾನಿಯಾಗುವುದಕ್ಕಿಂತ ಮೊದಲು ಒಬ್ಬ ನಂಬಿಕಸ್ತ ಮನುಷ್ಯರಾಗೋಣ. ಸಮರ್ಪಣಾ ಭಾವದಲ್ಲಿ, ವಿನಯದಲ್ಲಿ ಜ್ಞಾನದಷ್ಟೇ ದೊಡ್ಡ ಶಕ್ತಿ ಇದೆ. ಅದನ್ನು ನಾವು ಅರಿತಾಗ ಮಾತ್ರ ನಮಗೆ ಅದರ ಸಂಪೂರ್ಣ ಪರಿಣಾಮದ ಅರಿವಾಗುತ್ತದೆ...

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಐಪಿಎಲ್ 200 ವಿಕೆಟ್: ಭುವಿ ಮೊದಲ ವೇಗಿ

ಬೆಂಗಳೂರು: ಐಪಿಎಲ್ ಇತಿಹಾಸದಲ್ಲೇ 200 ವಿಕೆಟ್ ಕಬಳಿಸಿದ ಮೊದಲ ವೇಗದ ಬೌಲರ್ ಎಂಬ ದಾಖಲೆಯನ್ನು ಭುವನೇಶ್ವರ್ ಕುಮಾರ್ ಬರೆದಿದ್ದಾರೆ.

ಚಿನ್ನಸ್ವಾಮಿ ಮೈದಾನದಲ್ಲಿ ಭಾನುವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ಆಯುಷ್ ವಿಕೆಟ್ ಕಬಳಿಸುವ ಮೂಲಕ ಆರ್‌ಸಿಬಿಯ ಭುವನೇಶ್ವರ್ ಕುಮಾರ್ ಈ ದಾಖಲೆಗೆ ಪಾತ್ರರಾದರು. ಟೂರ್ನಿ ಇತಿಹಾಸದಲ್ಲೇ 200 ವಿಕೆಟ್ ಮೈಲುಗಲ್ಲು ತಲುಪಿದ 2ನೇ ಬೌಲರ್ ಎಂಬ ದಾಖಲೆಯೂ ಭುವಿ ಪಾಲಾಗಿದೆ. ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ಸ್ಟಾರ್ ಸ್ಪಿನ್ನರ್ ಯುಜ್ವೇಂದ್ರ ಚಹಲ್ 224 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ಭುವನೇಶ್ವರ್ ಕುಮಾರ್ ಈಗ 200 ವಿಕೆಟ್‌ಗಳೊಂದಿಗೆ ಈ ಕ್ಲಬ್‌ಗೆ ಸೇರಿದ್ದಾರೆ. 2011ರಿಂದ ಐಪಿಎಲ್‌ನಲ್ಲಿ ಆಡುತ್ತಿರುವ ಅವರು ಒಟ್ಟು 3 ತಂಡಗಳನ್ನು ಪ್ರತಿನಿಧಿಸಿದ್ದಾರೆ. 2011ರಿಂದ ಪುಣೆ ತಂಡದ ಪರ 3 ವರ್ಷ ಆಡಿದ್ದ ಭುವಿ, 2014ರಿಂದ 2024ರವರೆಗೂ ಹೈದರಾಬಾದ್ ತಂಡದಲ್ಲಿದ್ದರು. 2025ರಲ್ಲಿ ಆರ್‌ಸಿಬಿ ತಂಡಕ್ಕೆ ಸೇರ್ಪಡೆಗೊಂಡಿದ್ದಾರೆ.

ಭವಿಷ್ಯದಲ್ಲಿ ಶ್ರೇಯಸ್ ಭಾರತದ ನಾಯಕ

ದೆಹಲಿ: ಶ್ರೇಯಸ್ ಅಯ್ಯರ್ ಅವರ ಪಂಜಾಬ್ ಕಿಂಗ್ಸ್ ತಂಡದ ನಾಯಕತ್ವವನ್ನು ಮೆಚ್ಚಿಕೊಂಡ ವೇಗದ ಬೌಲರ್, ಕನ್ನಡಿಗ ವೈಶಾಖ್ ವಿಜಯಕುಮಾರ್, ಭವಿಷ್ಯದಲ್ಲಿ ಅವರು ಭಾರತ ತಂಡದ ನಾಯಕನಾಗುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಒತ್ತಡದ ಸಂದರ್ಭಗಳಲ್ಲಿ ಅಯ್ಯರ್ ತೋರಿಸುವ ಸ್ಥಿತಪ್ರಜ್ಞೆ ಮತ್ತು ಐಪಿಎಲ್‌ನಲ್ಲಿ ಬೆಳೆಯುತ್ತಿರುವ ನಾಯಕತ್ವ ಗುಣಗಳನ್ನು ಅವರು ಗುಣಗಾನ ಮಾಡಿದ್ದಾರೆ.

ಪಂಜಾಬ್-ಕೆಕೆಆರ್ ಪಂದ್ಯ ರದ್ದು | 2 ತಂಡಗಳಿಗೂ ತಲಾ 1ಅಂಕ

ಕೋಲ್ಕತ್ತಾದಲ್ಲಿ ಮಳೆಯದ್ದೇ ಆಟ

ಕೋಲ್ಕತ್ತಾ: ಈಡನ್ ಗಾರ್ಡನ್ಸ್ ಸ್ಟೇಡಿಯಂನಲ್ಲಿ ಸೋಮವಾರ ಪಂಜಾಬ್ ಕಿಂಗ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವಿನ ಐಪಿಎಲ್ ಪಂದ್ಯದ ವೇಳೆ ಸುರಿದ ಭಾರೀ ಮಳೆಯ ಕಾರಣದಿಂದ ಪಂದ್ಯ ರದ್ದಾಗಿದೆ.

ಪಂಜಾಬ್ ವಿರುದ್ಧ ಟಾಸ್ ಗೆದ್ದ ಕೋಲ್ಕತ್ತಾ ತಂಡವು ಮೊದಲು ಬ್ಯಾಟಿಂಗ್ ಆಯ್ದುಕೊಂಡಿತ್ತು.

ನಾಯಕ ಅಜಿಂಕ್ಯಾ ರಹಾನೆ ಮತ್ತು ಫಿನ್ ಅಲೆನ್ ಕೆಕೆಆರ್ ಪರ ಇನ್ನಿಂಗ್ಸ್ ಆರಂಭಿಸಿದ್ದರು. ಆದರೆ ಫಿನ್ ಅಲೆನ್ 6 ರನ್ ಗಳಿಸಿದ್ದ ವೇಳೆ ಬಾರ್ಟ್ಲೆಟ್ ಅವರ ಬೌಲಿಂಗ್‌ನಲ್ಲಿ ಪ್ರಭ್ ಸಿಮ್ರಾನ್ ಅವರಿಗೆ ಕ್ಯಾಚ್ ನೀಡಿ ವಿಕೆಟ್ ಒಪ್ಪಿಸಿದರು. ಆಗ ತಂಡದ ಸ್ಕೋರ್ 12 ರನ್ ಆಗಿತ್ತು. ಬಳಿಕ ಸ್ಕೋರ್ 16 ಆಗುತ್ತಿದ್ದಂತೆ 2 ಬಾಲ್‌ಗಳಲ್ಲಿ 4 ರನ್ ಗಳಿಸಿದ್ದ ಕ್ಯಾಮರೂನ್ ಗ್ರೀನ್ (4) ಬಾರ್ಟ್ಲೆಟ್ ಬೌಲಿಂಗ್‌ನಲ್ಲೇ ಪ್ರಭ್‌ಸಿಮ್ರಾನ್ ಅವರಿಗೆ ಕ್ಯಾಚ್ ನೀಡಿ ಔಟಾದರು.

ಆ ಬಳಿಕ ಆರಂಭಿಕ ಅಜಿಂಕ್ಯಾ ರಹಾನೆ ಮತ್ತು ಆ್ಯಂಕ್ರಿಶ್ ರಘುವಂಶಿ ಆಟವನ್ನು ಮುಂದುವರಿಸಿದರು. ಆದರೆ ಕೆಕೆಆರ್ ತಂಡವು 2 ವಿಕೆಟ್ ನಷ್ಟಕ್ಕೆ 3.4 ಓವರ್‌ಗಳಲ್ಲಿ 25 ರನ್ ಗಳಿಸಿದ್ದ ವೇಳೆ ಮಳೆ ಧಾರಾಕಾರವಾಗಿ ಸುರಿಯಿತು. ತಕ್ಷಣವೇ

ಈಡನ್ ಗಾರ್ಡನ್ಸ್‌ನಲ್ಲಿ ಸೋಮವಾರ ನಡೆದ ಕೆಕೆಆರ್-ಪಂಜಾಬ್ ಪಂದ್ಯಕ್ಕೆ ಅಡ್ಡಿಯಾದ ಮಳೆ

ಪಂದ್ಯವನ್ನು ನಿಲ್ಲಿಸಲಾಯಿತು. ನಂತರ ಒಂದೆರಡು ಬಾರಿ ಅಂಪೈರ್‌ಗಳು ಓವರ್‌ಗಳನ್ನು ಕಡಿತಗೊಳಿಸಿ ಪಂದ್ಯ ನಡೆಸಲು ಸಾಧ್ಯವೇ ಎಂದು ಪ್ರಯತ್ನಿಸಿದರು. ಆದರೆ ಕೊನೆಗೂ ಮಳೆ ನಿಲ್ಲದ ಕಾರಣ ಪಂದ್ಯವನ್ನು ರದ್ದುಪಡಿಸುವ ನಿರ್ಧಾರವನ್ನು ಅಂಪೈರ್‌ಗಳು ಘೋಷಿಸಿದರು. ಕೋಲ್ಕತ್ತಾ ಮತ್ತು ಪಂಜಾಬ್ ತಂಡಗಳಿಗೆ ತಲಾ ಒಂದು ಅಂಕ ಹಂಚಲಾಯಿತು.

ಐಪಿಎಲ್ ನಿವೃತ್ತಿಗೆ ಕಾರಣ ತಿಳಿಸಿದ ಆರ್. ಅಶ್ವಿನ್

ಬೆಂಗಳೂರು: ಭಾನುವಾರ ಆರ್‌ಸಿಬಿ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸೋಲಿನ ಬಳಿಕ ಸ್ಪಿನ್ ದಿಗ್ಗಜ ರವಿಚಂದ್ರನ್ ಅಶ್ವಿನ್ ಬೇಸರ ವ್ಯಕ್ತಪಡಿಸಿದ್ದಾರೆ. ಚೆನ್ನೈ ಪರ ಆಡುತ್ತಿದ್ದ ಹಳೆಯ ಕಹಿ ನೆನಪುಗಳನ್ನು ಅವರು ಮೆಲುಕು ಹಾಕಿದ್ದಾರೆ. ಕಳೆದ ಆವೃತ್ತಿಯಲ್ಲಿ ಚೆನ್ನೈ ಪರ ಆಡಿದ ಬಳಿಕ ಐಪಿಎಲ್ ವೃತ್ತಿ ಜೀವನಕ್ಕೆ ಹಠಾತ್ ವಿದಾಯ ಹೇಳಲು ಕಾರಣವೇನೆಂದು ಅವರು ಬಹಿರಂಗ ಪಡಿಸಿದ್ದಾರೆ. ಋತುರಾಜ್ ಗಾಯಕ್ವಾಡ್ ನಾಯಕತ್ವದ ತಂಡವು ಇದೀಗ 2026ರ ಐಪಿಎಲ್ ಟೂರ್ನಿಯಲ್ಲೂ ಹ್ಯಾಟ್ರಿಕ್ ಸೋಲು ಅನುಭವಿಸಿದೆ.

ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಚೆನ್ನೈ ಸೋಲಿನ ಕುರಿತು ಪ್ರತಿಕ್ರಿಯಿಸಿದ ಅಶ್ವಿನ್, ತಾನೂ ಕೂಡ ಸಿಎಸ್‌ಕೆ

ಪರ ಆಡಿದ್ದ ವೇಳೆ ಒಂದು ನಿರಾಶಾದಾಯಕ ಆವೃತ್ತಿಯನ್ನು ಅನುಭವಿಸಿರುವುದಾಗಿ ನೆನಪಿಸಿಕೊಂಡರು. ಆ ಅನುಭವದ ಬಳಿಕ ತನ್ನನ್ನು ಭಾರತೀಯ ಕ್ರಿಕೆಟ್‌ನಿಂದ ದೂರ ಸರಿಯುವಂತೆ ಮಾಡಿತು ಎಂದು ಹೇಳಿದ್ದಾರೆ.

'ಚೆನ್ನೈ ಸೂಪರ್ ಕಿಂಗ್ಸ್‌ಗೆ ಹಾಗೂ ಭಾರತೀಯ ಕ್ರಿಕೆಟ್‌ಗೆ ಇನ್ನೂ ಕೊಡುಗೆ ನೀಡಲು ಸಾಕಷ್ಟು ಸಾಮರ್ಥ್ಯ ಹೊಂದಿದ್ದೇನೆ ಎಂಬ ಭಾವನೆ ನನಗಿದೆ, ಆದರೆ 2025ರ ಐಪಿಎಲ್ ಟೂರ್ನಿಯ ಬಳಿಕ ತಾವು ಮಾನಸಿಕವಾಗಿ ಬಹಳ ಕುಗ್ಗಿದ್ದೆ' ಎಂದು ಅವರು ಹೇಳಿಕೊಂಡಿದ್ದಾರೆ.

'ಕಳೆದ ವರ್ಷ ನಾನು ಚೆನ್ನೈ ಜತೆಗೆ ಒಂದು ನಿರಾಶಾದಾಯಕ ಆವೃತ್ತಿಯನ್ನು ಕಳೆದಿದ್ದೇನೆ, ಅದು ವೈಯಕ್ತಿಕವಾಗಿ ನೋವಿನ ವಿಷಯವಾಗಿತ್ತು. ಭಾವನಾತ್ಮಕವಾಗಿ ಆಡಲು ನನಗೆ ಸಾಮರ್ಥ್ಯ ಇರಲಿಲ್ಲ' ಎಂದು ಅಶ್ವಿನ್ ತಿಳಿಸಿದ್ದಾರೆ.

ಆಡಲು ಇನ್ನೂ ಮನಸ್ಸಿತ್ತು: 'ಐಪಿಎಲ್ ಆಡಲು ತಾನು ಮತ್ತೆ ಸಿಎಸ್‌ಕೆಗೆ ಹೋಗಲು ಇಚ್ಛಿಸುವುದಿಲ್ಲ, ಕಳೆದ ವರ್ಷದ ಆವೃತ್ತಿ ಮಾನಸಿಕವಾಗಿ ಕಷ್ಟದಾಯಕವಾಗಿತ್ತು, ನನಗೆ ಅದರಿಂದ ತುಂಬಾ ನೋವು ಕಾಡಿದೆ. ನನ್ನ ತವರು ನೆಲದಲ್ಲಿಯೇ ಕ್ರಿಕೆಟ್ ಮುಗಿಸಿದ್ದೇನೆ, ಅದು ಸಾಕು, ಹಾಗಾಗಿ ನಾನು ಸ್ವತಃ ನಿವೃತ್ತಿ ಪಡೆಯಲು ನಿರ್ಧರಿಸಿದೆ' ಎಂದಿದ್ದಾರೆ ಸ್ಪಿನ್ ದಿಗ್ಗಜ ಆರ್.ಅಶ್ವಿನ್.

2 ಪಂದ್ಯಗಳನ್ನು ಗೆದ್ದಿರುವ ರಿಯಾನ್ ಪರಾಗ್ ಪಡೆ
ಒಂದೇ ಪಂದ್ಯ ಜಯಿಸಿದ ಹಾರ್ದಿಕ್ ಪಾಂಡ್ಯ ತಂಡ

ಮುಂಬೈಗೆ ಇಂದು ರಾಜಸ್ಥಾನ ಸವಾಲು

ಗುವಾಹಟಿ: ಇಲ್ಲಿ ಇಂದು ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ.

ಈ ಆವೃತ್ತಿಯಲ್ಲಿ ರಿಯಾನ್ ಪರಾಗ್ ನಾಯಕತ್ವದ ರಾಜಸ್ಥಾನ ತಂಡವು 2 ಪಂದ್ಯಗಳನ್ನು ಇದುವರೆಗೆ ಆಡಿದ್ದು, ಅವೆರಡರಲ್ಲೂ ಗೆದ್ದು 4 ಅಂಕಗಳನ್ನು ಪಡೆದಿದೆ. ಆದರೆ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡ ಆಡಿದ 2 ಪಂದ್ಯಗಳ ಪೈಕಿ 1 ಪಂದ್ಯದಲ್ಲಿ ಮಾತ್ರ ಗೆಲುವನ್ನು ಪಡೆದು ಕೇವಲ 2 ಅಂಕಗಳನ್ನಷ್ಟೇ ಪಡೆಯುವಲ್ಲಿ ಶಕ್ತವಾಗಿದೆ. ಕಳೆದ ವಾರ ನಡೆದಿದ್ದ ತನ್ನ ಮೊದಲ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಗಳಿಸಿತ್ತು. 2ನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು 6 ರನ್‌ಗಳ ರೋಚಕ ಅಂತರದಲ್ಲಿ ರಾಜಸ್ಥಾನ್ ಸೋಲಿಸಿತ್ತು.

ಮುಂಬೈ ತಂಡವು ತನ್ನ ಪ್ರಥಮ ತಂಡದಲ್ಲಿ ಕೋಲ್ಕತ್ತಾವನ್ನು 6 ವಿಕೆಟ್‌ಗಳಿಂದ ಭರ್ಜರಿಯಾಗಿ ಸೋಲಿಸಿತ್ತು. ಆದರೆ ತನ್ನ 2ನೇ ಪಂದ್ಯದಲ್ಲಿ ಡೆಲ್ಲಿ ವಿರುದ್ಧ ಸೋಲನ್ನನುಭವಿಸಿತ್ತು.

ಗುವಹಾಟಿಯಲ್ಲಿ ಮಂಗಳವಾರ ನಡೆಯುವ ಪಂದ್ಯವು 2 ತಂಡಗಳಿಗೂ ಮಹತ್ವದ್ದಾಗಿದೆ. ಕಳೆದ ಪಂದ್ಯವನ್ನು ಗಾಯದ ಕಾರಣದಿಂದಾಗಿ ತಪ್ಪಿಸಿಕೊಂಡಿದ್ದ ಮುಂಬೈ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಈ ಮಹತ್ವದ ಪಂದ್ಯದಲ್ಲಿ ರಾಜಸ್ಥಾನದ ವಿರುದ್ಧ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ರಾಜಸ್ಥಾನ ತಂಡದಲ್ಲಿ ವೈಭವ್ ಸೂರ್ಯವಂಶಿ ಸೇರಿದಂತೆ ಉತ್ತಮ ಸಾಮರ್ಥ್ಯದ ಹಲವು ಬ್ಯಾಟ್ಸ್‌ಮ್ಯಾನ್‌ಗಳಿದ್ದಾರೆ. ಹಾಗಾಗಿ ಈ ಪಂದ್ಯವು ಜಿದ್ದಾಜಿದ್ದಿನಿಂದ ಕೂಡಿರುವ ಸಾಧ್ಯತೆಗಳು ಬಹುತೇಕ ಖಚಿತ.

ಐಪಿಎಲ್ ಮುಖಾಮುಖಿ ವಿವರ
ಒಟ್ಟು ಪಂದ್ಯಗಳು: 31
ಮುಂಬೈಗೆ ಗೆಲುವು: 16
ರಾಜಸ್ಥಾನಕ್ಕೆ ಗೆಲುವು: 14
ಫಲಿತಾಂಶ ರಹಿತ: 1

ಇಂದಿನ ಪಂದ್ಯ
ರಾಜಸ್ಥಾನ-ಮುಂಬೈ
ತಾಣ: ಗುವಾಹಟಿ
ಸಮಯ: ರಾ.7 ಗಂಟೆ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ತಂಡದಲ್ಲಿ ಅನುಭವಿ ಆಟಗಾರರ ಕೊರತೆಯಿಂದ ಸಿಎಸ್‌ಕೆಗೆ ಹ್ಯಾಟ್ರಿಕ್ ಸೋಲಿನ ಹಿನ್ನಡೆ

ಚೆನ್ನೈಗೆ ಬ್ರೆವಿಸ್ ಸೇರ್ಪಡೆ ಸಾಧ್ಯತೆ

ಬೆಂಗಳೂರು: ಸತತ ಮೂರು ಪಂದ್ಯಗಳಲ್ಲಿ ಸೋಲು ಕಂಡಿರುವ ಚೆನ್ನೈ ಸೂಪರ್ ಕಿಂಗ್ಸ್‌ಗೆ ಮುಂದಿನ ಪಂದ್ಯದಲ್ಲಿ ಸ್ಟಾರ್ ಆಟಗಾರ ಸೇರ್ಪಡೆಗೊಳ್ಳುವ ಸಾಧ್ಯತೆಯಿದೆ. ಸ್ನಾಯು ಸೆಳೆತದಿಂದ ಆರಂಭಿಕ ಮೂರು ಪಂದ್ಯಗಳಿಂದ ಹೊರಗುಳಿದ್ದ ಸ್ಫೋಟಕ ಬ್ಯಾಟರ್ ಡೆವಾಲ್ಡ್ ಬ್ರೇವಿಸ್ ತಂಡ ಸೇರುವ ಬಗ್ಗೆ ಕೋಚ್ ಸ್ಟೀಫನ್ ಫ್ಲೆಮಿಂಗ್ ಸುಳಿವು ನೀಡಿದ್ದಾರೆ.

ಭಾನುವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ವಿರುದ್ಧ ಚೆನ್ನೈ 43 ರನ್‌ಗಳಿಂದ ಸೋಲು ಕಂಡಿತ್ತು. ಈ ಪಂದ್ಯದ ಬಳಿಕ ಮಾತನಾಡಿದ ಫ್ಲೆಮಿಂಗ್, ಏಪ್ರಿಲ್ 11ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದಲ್ಲಿ ಬ್ರೆವಿಸ್ ಆಡುವ ಸಾಧ್ಯತೆ ಇದೆ ಎಂದರು.

'ಮುಂದಿನ ಪಂದ್ಯಕ್ಕೆ ಬ್ರೆವಿಸ್ ಫಿಟ್ ಆಗಿ ತಂಡವನ್ನು ಸೇರಿ ಸರಿಯಾಗಿ ಆಡುತ್ತಾರೆಂದು ನಾವು ಭಾವಿಸುತ್ತೇವೆ.

ವಿಶ್ವಕಪ್ ಫುಟ್ಬಾಲ್ ಫೈನಲ್ ಪಂದ್ಯದ ಟಿಕೆಟ್‌ಗೆ 10.2 ಲಕ್ಷ | ಪಾರ್ಕಿಂಗ್ ಶುಲ್ಕವೇ ರು. 64,000

ಫಿಫಾ ವಿಶ್ವಕಪ್: ಟಿಕೆಟ್ ಭಾರೀ ದುಬಾರಿ

ನ್ಯೂಯಾರ್ಕ್: ಇದೇ ಜೂನ್-ಜುಲೈನಲ್ಲಿ ಅಮೆರಿಕ, ಮೆಕ್ಸಿಕೋ, ಕೆನಡಾದಲ್ಲಿ ನಡೆಯಲಿರುವ ಫಿಫಾ ಫುಟ್ಬಾಲ್ ವಿಶ್ವಕಪ್‌ನ ಟಿಕೆಟ್, ವಾಹನ ಪಾರ್ಕಿಂಗ್ ಪಾಸ್ ಬೆಲೆ ನೋಡಿ ಫುಟ್ಬಾಲ್‌ಪ್ರೇಮಿಗಳು ದಂಗಾಗಿದ್ದಾರೆ. ಬಹುತೇಕ ಪಂದ್ಯಗಳ ಟಿಕೆಟ್ ಬೆಲೆ ಲಕ್ಷ ದಾಟುತ್ತಿದ್ದು, ಪಾರ್ಕಿಂಗ್ ಪಾಸ್ ಬೆಲೆ ಕೂಡಾ ಗಗನಕ್ಕೇರಿದೆ.

ಜೂ.11ರ ವಿಶ್ವಕಪ್ ಉದ್ಘಾಟನಾ ಪಂದ್ಯದ ಕೆಟಗರಿ-1 ಟಿಕೆಟ್ ಬೆಲೆ 2.76 ಲಕ್ಷ ಇದೆ.

ನ್ಯೂಜೆರ್ಸಿಯಲ್ಲಿ ನಡೆಯಲಿರುವ ಫೈನಲ್ ಪಂದ್ಯಕ್ಕೆ ಕೆಟಗರಿ-1 ಟಿಕೆಟ್ ಮೌಲ್ಯ ಸುಮಾರು 10.18 ಲಕ್ಷ ರು. (10,999 ಅಮೆರಿಕನ್ ಡಾಲರ್) ಇದೆ. ಇದೇ ಪಂದ್ಯದ ಕೆಟಗರಿ-2 ಟಿಕೆಟ್‌ಗೆ 4.88 ಲಕ್ಷ, ಕೆಟಗರಿ-3 ಟಿಕೆಟ್‌ಗೆ 5.35 ಲಕ್ಷ ಬೆಲೆ ನಿಗದಿಪಡಿಸಲಾಗಿದೆ.

ಪಾರ್ಕಿಂಗ್ ದುಬಾರಿ: ಅಮೆರಿಕದ ಕ್ರೀಡಾಂಗಣದಲ್ಲಿ ವಾಹನ ಪಾರ್ಕಿಂಗ್ ವೆಚ್ಚ ದುಬಾರಿಯಾಗಿದೆ. ಕ್ಯಾಲಿಫೋರ್ನಿಯಾ ಕ್ರೀಡಾಂಗಣದ ಪಾರ್ಕಿಂಗ್ ಪಾಸ್ ದರ ರು. 27,821 ಇದೆ. ನ್ಯೂಜೆರ್ಸಿ ಕ್ರೀಡಾಂಗಣದಲ್ಲಿ ಇದರ ಬೆಲೆ 20,866, ಹಾಸ್ಟನ್ ಕ್ರೀಡಾಂಗಣದಲ್ಲಿ ದೊಡ್ಡ ವಾಹನ ಪಾರ್ಕಿಂಗ್ ಮಾಡಬೇಕಿದ್ದರೆ 64,917 ಪಾವತಿಸಬೇಕಾಗುತ್ತದೆ. ಬಹುತೇಕ ಕ್ರೀಡಾಂಗಣಗಳ ಪಾರ್ಕಿಂಗ್ ದರ, ಭಾರತದ ಅಹಮದಾಬಾದ್‌ನಲ್ಲಿ ಐಪಿಎಲ್ ಫೈನಲ್ ಪಂದ್ಯದ 9 ಸಾಮಾನ್ಯ ಟಿಕೆಟ್‌ಗಳಿಗಿಂತಲೂ ಹೆಚ್ಚಿರುವುದು ಗಮನಾರ್ಹವಾಗಿದೆ.

ಕೆಲ ವಿದೇಶಿಗರಿಗೆ ತೇವಣಿಯೂ ಅಗತ್ಯ: ಅಮೆರಿಕದಲ್ಲಿ ಈ ಬಾರಿ ವಿಶ್ವಕಪ್ ಪಂದ್ಯ ವೀಕ್ಷಿಸಬೇಕಿದ್ದರೆ ಕೆಲ ವಿದೇಶಿಗರು ಹೆಚ್ಚುವರಿ ಖರ್ಚು ಮಾಡಬೇಕಾಗುತ್ತದೆ.

ವಿಟಾಕೀಸ್

ಹಸೆಮಣೆ ಏರಿದ ನಟ ಸುಮುಖ

ರಂಗಭೂಮಿಯಿಂದ ಚಂದನವನಕ್ಕೆ ಬಂದು ಯಾನ ಆರಂಭಿಸಿದ ನಟ ಸುಮುಖ, ಸ್ಯಾಂಡಲ್‌ವುಡ್‌ನಲ್ಲಿ ಫಿಸಿಕ್ಸ್ ಟೀಚರ್ ಅಂತಲೇ ಪ್ರಸಿದ್ಧಿ ಪಡೆದಿದ್ದಾರೆ. ಮೊದಲ ಚಿತ್ರ ಅಷ್ಟಾಗಿ ಪ್ರಸಿದ್ಧಿ ತಂದುಕೊಡದಿದ್ದರೂ, ಯೋಗರಾಜ್ ಭಟ್ ನಿರ್ದೇಶನದ ಮನದ ಕಡಲು ಚಿತ್ರದ ಮೂಲಕ ಭರವಸೆಯ ನಾಯಕ ನಟನಾಗಿಯೂ ಹೊರ ಹೊಮ್ಮಿದರು. ಈ ನಡುವೆ ಸುಮುಖ ಮತ್ತೊಂದು ಹೊಸ ಚಿತ್ರದಲ್ಲಿ ಅಭಿನಯಿಸುತ್ತಿದ್ದು ಸದ್ಯ ಆ ಚಿತ್ರದ ಫಸ್ಟ್ ಲುಕ್ ರಿಲೀಸ್ ಮಾಡಿದ್ದಾರೆ. ಈ ನಡುವೆಯೇ ಅದೇ ಸುಮುಖ ಸದ್ದಿಲ್ಲದೆ ಹಸೆಮಣೆ ಏರಿದ್ದಾರೆ. ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದ ಹುಡುಗಿಯ ಕೈ ಹಿಡಿದಿದ್ದಾರೆ. ಮೈತ್ರಿ ಉಕಾ ಅವರ ಜತೆಗೆ ದಾಂಪತ್ಯಕ್ಕೆ ಕಾಲಿಟ್ಟಿದ್ದಾರೆ. ಸುಮುಖ ಹಾಗೂ ಮೈತ್ರಿ ಏಳು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆ ಪ್ರೀತಿಗೀಗ ದಾಂಪತ್ಯದ ಮುದ್ರೆಯೊತ್ತಿದ್ದಾರೆ. ಈ ಇಬ್ಬರ ವಿವಾಹ ಗಂಗಾ ತಟದಲ್ಲಿ ನೆರವೇರಿದೆ. ಕುಟುಂಬದವರ ಸಮ್ಮುಖದಲ್ಲಿ ಸರಳವಾಗಿ ವಿವಾಹ ನೆರವೇರಿದೆ. ಮೈತ್ರಿ ಉಕಾ ಮೂಲತಃ ಮುಂಬೈನವರು. ವೃತ್ತಿಯಲ್ಲಿ ಆರ್ಕಿಟೆಕ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದ್ಯ ಸುಮುಖ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ಮರೆಗುಳಿ ಕಥೆಯ ಸೆಪ್ಟೆಂಬರ್ 21



ಕನ್ನಡ ಹಾಗೂ ಹಿಂದಿ ಭಾಷೆಯಲ್ಲಿ ನಿರ್ಮಾಣವಾಗಿರುವ ಸೆಪ್ಟೆಂಬರ್ 21 ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದೆ. ಮರೆಗುಳಿತನದ ಸುತ್ತ ಸಿನಿಮಾದ ಕಥೆ ಸಾಗುತ್ತದೆ. ಅದನ್ನು ಅತ್ಯಂತ ಮೃದುವಾಗಿ ಮತ್ತು ಪರಿಣಾಮಕಾರಿಯಾಗಿ ತೆರೆಗೆ ತರಲಾಗಿದೆ. ಅಲ್ಝೈಮರ್ಸ್ ಖಾಯಿಲೆಗೆ ತುತ್ತಾದವರ ಮತ್ತು ಅವರನ್ನು ಹಗಲಿರುಳು ಆರೈಕೆ ಮಾಡುವವರ ಒಳಗಿನ ತಳಮಳವನ್ನು ಈ ಚಿತ್ರದಲ್ಲಿ ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ. ಜತೆಗೆ ಕಳೆದು ಹೋಗುತ್ತಿರುವ ನೆನಪುಗಳ ನೋವನ್ನು ಮೌನವಾಗಿ ಅನುಭವಿಸುವಂತೆ ಮಾಡುತ್ತದೆ. ಇದು ಕೇವಲ ಸಿನಿಮಾವಲ್ಲ, ಒಂದು ಭಾವನಾತ್ಮಕ ಪಯಣ ಎಂಬ ಭರವಸೆಯೂ ಟೀಸರ್‌ನಲ್ಲಿ ವ್ಯಕ್ತವಾಗುತ್ತದೆ. ಕರೆನ್ ಕ್ಷಿತಿ ಸುವರ್ಣ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. ಕರೆನ್ ಕ್ಷಿತಿ ಸುವರ್ಣ ಅನಗತ್ಯ ಅಬ್ಬರಕ್ಕೆ ಮೊರೆಹೋಗದೆ ಕಥೆಯ ಭಾವಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ.

ಪ್ರವೀಣ್ ಸಿಂಗ್ ಸಿಸೋಡಿಯಾ ಮರೆಗುಳಿತನದಿಂದ ತನ್ನ ಅಸ್ತಿತ್ವವನ್ನೇ ಮರೆಯುತ್ತಿರುವ ವ್ಯಕ್ತಿಯ ಪಾತ್ರದಲ್ಲಿ ನಟಿಸಿದ್ದು, ಅವರಿಗೆ ಆಸರೆಯಾಗಿ ನಿಲ್ಲುವ ಪಾಲಕಿಯಾಗಿ ಪ್ರಿಯಾಂಕಾ ಉಪೇಂದ್ರ ಅಭಿನಯಿಸಿದ್ದಾರೆ. ಹಿರಿಯ ನಟಿ ಜರೀನಾ ವಹಾಬ್, ಅಮಿತ್ ಬೆಹ್ಲ್, ಅಜಿತ್ ಶಿಧಾಯೆ, ಸಚಿನ್ ಪಟೇಕರ್ ಮತ್ತು ರಿಕಿ ರುದ್ರ ಮುಂತಾದ ಕಲಾವಿದರು ತಾರಾಗಣದಲ್ಲಿದ್ದಾರೆ. ವಿಸಿಕಾ ಫಿಲಂಸ್ ಮತ್ತು ಎಫ್.ಎಂ.ಡಿ ಪ್ರೊಡಕ್ಷನ್ಸ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ.

ಮೇನಲ್ಲಿ ದೃಶ್ಯಂ 3 ದರ್ಶನ

ಮಲೆಯಾಳಂನಲ್ಲಿ ನಿರ್ಮಾಣವಾದ ದೃಶ್ಯಂ ಭಾಗ 1 ಮತ್ತು ದೃಶ್ಯಂ ಭಾಗ 2 ಅದ್ಭುತ ಯಶಸ್ಸು ಗಳಿಸಿದವು. ಬಾಕ್ಸ್ ಆಫೀಸ್‌ನಲ್ಲಿಯೂ ಉತ್ತಮ ಗಳಿಕೆ ಕಂಡವು. ದೃಶ್ಯಂ ಕನ್ನಡದ ಜತೆಗೆ ತೆಲುಗು, ಹಿಂದಿಯಲ್ಲಿಯೂ ರಿಮೇಕ್ ಆಗಿ ಆ ಭಾಷೆಗಳಲ್ಲಿಯೂ ಪ್ರೇಕ್ಷಕರನ್ನು ರಂಜಿಸಿತು. ಈಗ ದೃಶ್ಯಂ 3 ಚಿತ್ರೀಕರಣ ಮುಗಿಸಿ ಬಿಡುಗಡೆಗೂ ಸಿದ್ಧವಾಗಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಇಷ್ಟೊತ್ತಿಗೆ ಚಿತ್ರ ತೆರೆಗೆ ಬರಬೇಕಿತ್ತು. ಆದರೆ ಕಾರಣಾಂತರಗಳಿಂದ ಚಿತ್ರದ ಬಿಡುಗಡೆಯನ್ನು ಮುಂದೂಡಲಾಯಿತು. ಈಗ ಮೇ 21 ರಂದು ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ನಿರ್ಧರಿಸಿದೆ. ಮೇ ಅಂತ್ಯದಲ್ಲಿ ಕೇರಳದಲ್ಲಿ ವಿಷು ಹಬ್ಬದ ಸಂಭ್ರಮ, ಜತೆಗೆ ಬೇಸಿಗೆ ರಜೆ ಹೀಗಾಗಿ ಆ ಹೊತ್ತಿನಲ್ಲಿಯೇ ಚಿತ್ರ ತೆರೆಗೆ ಬರುತ್ತಿರುವುದು ಸಿನಿಪ್ರಿಯರಲ್ಲಿ ಸಂತಸ ಹೆಚ್ಚಿಸಿದೆ. ಇನ್ನೂ ವಿಶೇಷ ಎಂದರೆ ಮೇ 21 ರಂದು ಮೋಹನ್ ಲಾಲ್ ಅವರ ಹುಟ್ಟುಹಬ್ಬ. ಅಂದೇ ಸಿನಿಮಾ ಬಿಡುಗಡೆಯಾಗುತ್ತಿರುವುದು ಸಂತಸವನ್ನು ಇಮ್ಮಡಿಗೊಳಿಸಿದೆ. ದೃಶ್ಯಂ ಮೊದಲ ಮತ್ತು ದ್ವಿತೀಯಾ ಭಾಗದಂತೆ ಮೂರನೇ ಭಾಗವೂ ಭರ್ಜರಿ ಯಶಸ್ಸು ಕಂಡು ಉತ್ತಮ ಗಳಿಕೆ ಕಾಣಲಿದೆ ಎಂಬ ನಿರೀಕ್ಷೆಯೂ ಇದೆ. ಈ ಭಾಗದಲ್ಲಿಯೂ ಮತ್ತೊಂದು ಕೊಲೆ ಕೇಸ್ ತೆರೆದುಕೊಳ್ಳಲಿದ್ದು, ಅದು ತೆರೆಯಲ್ಲಿ ರೋಚಕವಾಗಿ ಸಾಗಲಿದೆ. ಮೋಹನ್ ಲಾಲ್ ಜಾರ್ಜ್ ಕುಟ್ಟಿಯಾಗಿ ಚಾಣಾಕ್ಷತನ ತೋರಲಿದ್ದಾರೆ. ಉಳಿದಂತೆ ಮೀನಾ, ಅನ್ಸಿಬಾ ಹಾಸನ್ ಹೀಗೆ ಮುಂತಾದ ಪಾತ್ರಗಳು ಈ ಭಾಗದಲ್ಲಿಯೂ ಮುಂದುವರಿಯಲಿವೆ.

ದಿಲ್‌ದಾರ್ ಟೀಸರ್ ರಿಲೀಸ್

ಪಡ್ಡೆಹುಲಿಯಾಗಿ ಸ್ಯಾಂಡಲ್‌ವುಡ್ ಅಂಗಳಕ್ಕೆ ಬಂದು ಅಬ್ಬರಿಸಿದ ನಟ ಶ್ರೇಯಸ್ ಮಂಜು, ಮಾರುತದಲ್ಲಿಯೂ ಮಿಂಚಿದರು. ಈಗ ದಿಲ್‌ದಾರ್ ಆಗಿ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಹೌದು ಶ್ರೇಯಸ್, ದಿಲ್‌ದಾರ್ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಶ್ರೇಯಸ್ ಮಂಜು ಹುಟ್ಟುಹಬ್ಬದ ಪ್ರಯುಕ್ತ ದಿಲ್‌ದಾರ್ ಚಿತ್ರದ ಟೀಸರ್ ರಿಲೀಸ್ ಆಗಿದ್ದು ಆ ಮೂಲಕ ಚಿತ್ರತಂಡ ಹುಟ್ಟುಹಬ್ಬಕ್ಕೆ ಉಡುಗೊರೆ ನೀಡಿದೆ. ಈ ಹಿಂದಿನ ಸಿನಿಮಾಗಳಲ್ಲಿ ಆ್ಯಕ್ಷನ್‌ನಲ್ಲಿ ಮಿಂಚಿದ ಶ್ರೇಯಸ್ ಈ ಚಿತ್ರದಲ್ಲಿಯೂ ಆ್ಯಕ್ಷನ್‌ನಲ್ಲಿಯೇ ವಿಜೃಂಭಿಸಿದ್ದು, ಹೊಸ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಈ ಟೀಸರ್‌ಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಮಧುಗೌಡ ಗಂಗೂರ್, ದಿಲ್‌ದಾರ್ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಅದಾಗಲೇ ಶೂಟಿಂಗ್ ಮುಗಿಸಿರುವ ಚಿತ್ರತಂಡ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿದ್ದು ಬಿಡುಗಡೆಗೂ ಸಿದ್ಧತೆ ನಡೆಸಿದೆ. ದಿಲ್‌ದಾರ್ ಇಂದಿನ ಟ್ರೆಂಡ್‌ಗೆ ಹೊಂದುವ ಕಥೆಯಾಗಿದೆ. ಆ್ಯಕ್ಷನ್ ಜತೆಗೆ ಕೌಟುಂಬಿಕ ಕಥೆಯನ್ನು ಒಳಗೊಂಡಿರುವ ಈ ಚಿತ್ರವನ್ನು ಮನೆಮಂದಿಯೆಲ್ಲಾ ಕುಳಿತು ನೋಡಬಹುದಾಗಿದೆ ಎನ್ನುತ್ತಾರೆ ನಿರ್ದೇಶಕರು.

ನಟ ಶರಣ್ ಅವರ ತಂಗಿ ಮಗಳು ಕೀರ್ತಿ ಕೃಷ್ಣ ಈ ಚಿತ್ರದಲ್ಲಿ ನಾಯಕಿ ಅಭಿನಯಿಸಿದ್ದು, ಈ ಚಿತ್ರದ ಮೂಲಕ ನಾಯಕಿ ನಟಿಯಾಗಿ ಪರಿಚಿತರಾಗುತ್ತಿದ್ದಾರೆ. ಉಳಿದಂತೆ ಸಾಧು ಕೋಕಿಲಾ, ಚಂದ್ರಪ್ರಭ, ಕಾರ್ತಿಕ್, ಚಿಲ್ಲರ್ ಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ. ಕೆಜಿಎಫ್ ಖ್ಯಾತಿಯ ಆಂಡ್ರೋ ಅವಿನಾಶ್, ಭಜರಂಗಿ ಲೋಕಿ, ಅರ್ಪಿತ್ ಖಳ ನಟರಾಗಿ ಅಬ್ಬರಿಸಿದ್ದಾರೆ. ಏನ್ಸಿಯೆಂಟ್ ಮೂವೀಸ್ ಬ್ಯಾನರ್‌ನಲ್ಲಿ ಡಾ.ಆರ್. ಸಂತೋಷ್ ಕುಮಾರ್ ದಿಲ್‌ದಾರ್ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಈಗಾಲೇ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳನ್ನು ಮುಗಿಸಿರುವ ಚಿತ್ರತಂಡ, ಶೀಘ್ರದಲ್ಲಿಯೇ ಬಿಡುಗಡೆ ದಿನಾಂಕವನ್ನು ಘೋಷಿಸಲಿದೆ.

ಸೀತಾ ರಾಮ ರಾಜುವಿನ ಕಥೆ ಹೊತ್ತುಬಂದ ಕೀರ್ತಿ

ಸೀತಾ ರಾಮ ರಾಜು ಎಲ್ಲರಿಗೂ ಹಿಡಿಸುವ ಸ್ಟೋರಿಯಾಗಿದೆ. ಸಿನಿಮಾದ ಕಥೆ ಎಲ್ಲರಿಗೂ ಬಹುಬೇಗ ಕನೆಕ್ಟ್ ಆಗಲಿದೆ. ಮೇನಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ಡಿಸೆಂಬರ್ ವೇಳೆಗೆ ಸಿನಿಮಾವನ್ನು ತೆರೆಗೆ ತರುವ ಯೋಜನೆಯಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು. ರಾಘವೇಂದ್ರ ಸಂಗೀತ ಸಂಯೋಜಿಸಿದ್ದಾರೆ. ಸಿದ್ ಶ್ರೀರಾಮ್ ಸೇರಿದಂತೆ ಖ್ಯಾತ ಗಾಯಕರು ಹಾಡುಗಳಿಗೆ ದನಿಯಾಗಿದ್ದಾರೆ.

ಅಂದೊಂದಿತ್ತು ಕಾಲ ಚಿತ್ರದ ಮೂಲಕ ಹೊಸತನದ ಪ್ರೇಮಕಥೆ ಹೇಳಿದ ನಿರ್ದೇಶಕ ಕೀರ್ತಿ ಕೃಷ್ಣಪ್ಪ, ಈಗ ಮತ್ತೊಂದು ಹೊಸತನದ ಕಥೆಯನ್ನು ಹೊತ್ತು ಬರುತ್ತಿದ್ದಾರೆ. ಸೀತಾ ರಾಮ ರಾಜು ಶೀರ್ಷಿಕೆಯಲ್ಲಿ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದ ಮುಹೂರ್ತ ನೆರವೇರಿದ್ದು ಇನ್ನೇನು ಚಿತ್ರತಂಡ ಚಿತ್ರೀಕರಣಕ್ಕೆ ತೆರಳಲಿದೆ.

ಭಾವನೆಗಳ ಸೆಳೆತ: ಸೀತಾ ರಾಮ ರಾಜು ಟೈಟಲ್‌ನಲ್ಲಿಯೇ ಮನಗೆದ್ದಿದೆ. ಶೀರ್ಷಿಕೆ ಕೇಳಿದಾಕ್ಷಣ ಇದು ತ್ರಿಕೋನಾ ಪ್ರೇಮಕಥೆಯ ಸಿನಿಮಾ ಅಂದುಕೊಳ್ಳಬಹುದು. ಖಂಡಿತಾ ಇಲ್ಲ, ಇಲ್ಲಿ ಸೀತಾ ರಾಮ ಪ್ರಮುಖ ಪಾತ್ರವಾಗಿದ್ದು, ರಾಜು ಈ ಇಬ್ಬರ ನಡುವೆ ಸಾಗುವ ವಿಶೇಷ ಪಾತ್ರವಾಗಿದೆ. ಇಲ್ಲಿ ಲವ್ ಇದೆ, ಎಮೋಷನ್ ಇದೆ, ಕಾಮಿಡಿ ಕೂಡ ಬೆರೆತಿದೆ. ಇದು ಸಂಪೂರ್ಣ ಕೌಟುಂಬಿಕ ಕಥಾಹಂದರದ ಸಿನಿಮಾ ಎಂದು ನಿರ್ದೇಶಕ ಕೀರ್ತಿ ಕೃಷ್ಣಪ್ಪ ಹೇಳುತ್ತಾರೆ.

ಹೊಸ ಅವತಾರದಲ್ಲಿ ಕಾರ್ತಿಕ್

ಬಿಗ್‌ಬಾಸ್ ಖ್ಯಾತಿಯ ಮಹೇಶ್ ಕಾರ್ತಿಕ್ ರಾಮನ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ವಿಭಿನ್ನ ಲುಕ್‌ನಲ್ಲಿ ಕಂಗೊಳಿಸಲಿದ್ದಾರೆ. ಈಗಾಗಲೇ ಚಿತ್ರದ ಫಸ್ಟ್ ಲುಕ್ ರಿಲೀಸ್ ಆಗಿದ್ದು ಕಾರ್ತಿಕ್, ಬಸ್ಸಿನ ಮೇಲೆ ಮಲಗಿ ಹಾಡು ಕೇಳುತ್ತಾ ಹಾಯಾಗಿ ಸಾಗುತ್ತಿರುವ ದೃಶ್ಯ ಗಮನಸೆಳೆಯುತ್ತಿದೆ. ಇದನ್ನು ಗಮನಿಸಿದರೆ ಸೀತಾ ರಾಮ ರಾಜು ತೊಂಬತ್ತರ ದಶಕದಲ್ಲಿ ಸಾಗುವ ಕಥೆ ಎಂಬುದು ತಿಳಿಯುತ್ತದೆ. ಇನ್ನೂ ಸೀತಾ ಪಾತ್ರದಲ್ಲಿ ಪ್ರಿಯಾಂಕಾ ಕುಮಾರ್ ಕಂಗೊಳಿಸಲಿದ್ದಾರೆ. ಪ್ರಿಯಾಂಕಾ ಪಾತ್ರವೂ ಕೂಡ ಹೊಸತನದಿಂದ ಕೂಡಿರಲಿದೆ. ಉಳಿದಂತೆ ಯಶ್ ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ಜಹಾಂಗೀರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮೇನಲ್ಲಿ ಶೂಟಿಂಗ್ ಶುರು

ಮುಹೂರ್ತ ನೆರವೇರಿಸಿರುವ ಚಿತ್ರತಂಡ ಚಿತ್ರೀಕರಣದ ಪೂರ್ವ ಕೆಲಸಗಳನ್ನು ಮುಗಿಸಿದ್ದು, ಮೇ ತಿಂಗಳಿನಿಂದ ಶೂಟಿಂಗ್ ಆರಂಭಿಸಲಿದೆ. ಗ್ರಾಮೀಣ ಭಾಗದ ಜತೆಗೆ ನಗರ ಪ್ರದೇಶದಲ್ಲಿಯೂ ಸಿನಿಮಾದ ಕಥೆ ಸಾಗಲಿದ್ದು, ಬೆಂಗಳೂರು ಹಾಗೂ ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದೆ.